
ಸಮಗ್ರ ದಾಸ ಸಾಹಿತ್ಯ

ಸಂಪುಟ : ೪



ಪುರಂದರದಾಸರ ಉಗಾಭೋಗಗಳು ಮತ್ತು ಸುಳಾದಿಗಳು

ಸಮಗ್ರ ದಾಸ ಸಾಹಿತ್ಯ
ಸಂಪುಟ : ೪

ಪುರಂದರ ದಾಸರ ಉಗಾಭೋಗಗಳು ಮತ್ತು ಸುಳಾದಿಗಳು

ಸಂಪಾದಕರು
ಪ್ರೊ. ವಸಂತ ಕುಷ್ಟಗಿ

ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಬೆಂಗಳೂರು

SAMAGRA DASA SAHITYA VOLUME - 4

Purandaradasara Ugabhogagalu Mattu Suladigalu. Edited by Prof. Vasantha Kushtagi. Published by Sri.Y. K.Muddukrishna, Director, Directorate of Kannada and Culture, Kannada Bhavana, J.C. Road, Bangalore - 560 002.

ಪುಟಗಳು : 53+೨೯೬

ಪ್ರಥಮ ಮುದ್ರಣ : ೨೦೦೩
ಪ್ರತಿ : ೧೨೫೦

ಬಿಡಿ ಪ್ರತಿ ಬೆಲೆ : ರೂ. ೬೦=೦೦
ಸಮಗ್ರ ಸಂಪುಟಗಳ ಬೆಲೆ : ರೂ. ೨೪೦೦=೦೦

ಮುದ್ರಣ ನಿರ್ವಹಣೆ :

ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
೩೬, ಕನ್ನಿಂಗ್‌ಹ್ಯಾಮ್ ರಸ್ತೆ
ಬೆಂಗಳೂರು – ೫೬೦ ೦೫೨.

ಮುದ್ರಕರು :

ಮೆ. ಡಾಟ್ಸ್
೧೨೪, ಸುಲ್ತಾನ್‌ಪೇಟೆ
ಬೆಂಗಳೂರು – ೫೬೦ ೦೫೩.

ಸಮಗ್ರ ದಾಸಸಾಹಿತ್ಯ ಪ್ರಕಟಣ ಯೋಜನೆ

ಸಂಪಾದಕ ಮಂಡಳಿ

ಕಾರ್ಯನಿರ್ವಾಹಕ ಸಂಪಾದಕರು

ಡಾ. ಶ್ರೀನಿವಾಸ ಹಾವನೂರ

ಡಾ. ಟಿ. ಎನ್. ನಾಗರತ್ನ

ಪ್ರೊ. ವಸಂತ ಕುಷ್ಟಗಿ

ಸದಸ್ಯರು

ಡಾ. ಎಂ. ಎಂ. ಕಲಬುರ್ಗಿ

ಪ್ರೊ. ಎಂ. ರಾಜಗೋಪಾಲಾಚಾರ್ಯ (ಫೆಬ್ರವರಿ '೯೮ ರವರೆಗೆ)

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಡಾ. ಮಂದಾಕಿನಿ

ಪ್ರೊ. ಸುಧಾಕರ

ಡಾ. ಬಸವರಾಜ ಸಬರದ

ಸದಸ್ಯ ಕಾರ್ಯದರ್ಶಿ

ನಿರ್ದೇಶಕರು

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಮುನ್ನುಡಿ

ಹರಿದಾಸ ಸಾಹಿತ್ಯ ಕನ್ನಡ ಸಂಸ್ಕೃತಿ ಪರಂಪರೆಯ ಮಹತ್ವಪೂರ್ಣ ಭಾಗವಾಗಿದೆ. ದೇಶೀಯತೆ ಹಾಗೂ ಗೇಯತೆಗಳೆರಡನ್ನೂ ಮೇಳವಿಸಿಕೊಂಡು, ಕನ್ನಡ ಸಾಹಿತ್ಯವಾಹಿನಿಗೆ ಇದು ಹೊಸತನವನ್ನು ನೀಡಿದೆ. ಮನುಜಮತ, ಸಾಹಿತ್ಯಪಥ ಹಾಗೂ ಭಕ್ತಿಸಿದ್ಧಾಂತದ ತ್ರಿವೇಣಿಯಾಗಿರುವ ಈ ಪ್ರಜಾಸಾಹಿತ್ಯವನ್ನು ಪ್ರಜೆಗಳಿಗೆ ಮುಟ್ಟಿಸುವುದು ಪ್ರಜಾಸತ್ತಾತ್ಮಕ ಸರಕಾರದ ಆದ್ಯ ಕರ್ತವ್ಯವಾಗಿದೆ.

ಕನ್ನಡ ಭಾಷಿಕಶಕ್ತಿಯ ವಿವಿಧ ಆಯಾಮಗಳನ್ನು ಸೆಳೆದು ತೋರಿರುವ, ಸಾಹಿತ್ಯ-ಸಂಗೀತಗಳ ಸಾಮರಸ್ಯವನ್ನು ಮೆರೆದಿರುವ ಈ ಸಾಹಿತ್ಯ ಕನ್ನಡ ಸಾಹಿತ್ಯಕ್ಕೆ ಜಾಗತಿಕ ಮಹತ್ವವನ್ನು ತಂದುಕೊಟ್ಟಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಮಾನವಾನುಕಂಪ, ಸಮಾಜಸುಧಾರಣೆ, ಲೋಕದ ಡೊಂಕುಗಳನ್ನು ನಗೆ ವಿಡಂಬನೆಗಳ ಮೂಲಕ ತಿದ್ದುವ ಕೌಶಲ ದಾಸಸಾಹಿತ್ಯದ ಪ್ರಮುಖ ಲಕ್ಷಣವಾಗಿದೆ.

ಆಧ್ಯಾತ್ಮಿಕ ಸಾಧನೆ, ಅನುಭವ – ಅನುಭಾವಗಳು ದಾಸಸಾಹಿತ್ಯದ ಪ್ರಮುಖ ಅಂಶವಾದರೂ, ಸುತ್ತಮುತ್ತಲಿರುವ ಜೀವನದ ಕಡೆಗೆ, ಮಾನವ ಸ್ವಭಾವದ ಕಡೆಗೆ ಕಣ್ಣು ಹರಿಸಿದ ಹರಿದಾಸರು ಸಾತ್ತ್ವಿಕ ಜೀವನ ನಿರ್ವಹಣೆಗೆ, ಮಾನವನ ಮೇಲ್ಮೆಗೆ, ನೈತಿಕ ಆಚರಣೆಗೆ ಒತ್ತು ನೀಡಿದವರು.

ಹರಿದಾಸ ಸಾಹಿತ್ಯ ಅಪಾರವಾದುದು ಹಾಗೂ ವೈವಿಧ್ಯವಾದುದು. ಈ ವಿಪುಲ ಸಾಹಿತ್ಯರಾಶಿಯನ್ನು ಒಂದೆಡೆ ಕ್ರೋಡೀಕರಿಸಿ, ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯವನ್ನು ಕನ್ನಡ ಜನತೆಗೆ ನೀಡುತ್ತಿದೆ.

ಈ ಯೋಜನೆಗೆ ದುಡಿದ ಸಂಪಾದಕ ಮಂಡಳಿಯ ಶ್ರದ್ಧೆ ಹಾಗೂ ಮಾರ್ಗದರ್ಶನವನ್ನು, ವಿವಿಧ ಸಂಪುಟಗಳ ಸಂಪಾದಕರಾಗಿ ನಾಡಿನ ಅನೇಕ ವಿದ್ವಾಂಸರು ತೋರಿರುವ ಆಸಕ್ತಿ ಹಾಗೂ ನೆರವನ್ನು ಮತ್ತು ಈ ಸಂಪುಟದ ಸಂಪಾದಕರ ಶ್ರಮವನ್ನು ಸ್ಮರಿಸುತ್ತ ಕನ್ನಡ ಜನತೆಯ ಕೈಗೆ ಈ ಮೌಲಿಕ ಪ್ರಕಟಣೆಗಳನ್ನು ಸಂತೋಷದಿಂದ ಅರ್ಪಿಸುತ್ತೇನೆ.

ಎಸ್. ಎಂ. ಕೃಷ್ಣ
ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಎರಡು ಮಾತು

ಕನ್ನಡ ಸಾಹಿತ್ಯದ ತವನಿಧಿಗಳಲ್ಲಿ ದಾಸಸಾಹಿತ್ಯವೂ ಒಂದು. ಕರ್ನಾಟಕದ ಸಾಹಿತ್ಯ, ಸಂಗೀತ, ಸಂಸ್ಕೃತಿಗಳನ್ನು ಪ್ರಭಾವಪೂರ್ಣವಾಗಿ ಸಮೃದ್ಧಿಗೊಳಿಸಿದವರು ಹರಿದಾಸರು. ಬದುಕಿನಲ್ಲಿ ನಿಷ್ಠೆ, ಸಾಹಿತ್ಯದಲ್ಲಿ ಬದುಕಿನ ತತ್ತ್ವಗಳನ್ನು ಅಡಗಿಸಿ ಜನಸಾಮಾನ್ಯರನ್ನು ಉನ್ನತ ಜೀವನದತ್ತ ಉದ್ದೀಪಿಸುವ ಮಹಾಕಾಯಕದಲ್ಲಿ ತೊಡಗಿದವರು ಹರಿದಾಸರು. ಕನ್ನಡ ಸಾಹಿತ್ಯಕ್ಕೆ ಅಪೂರ್ವ ಕೊಡುಗೆಯಾಗಿರುವ ಹರಿದಾಸ ಸಾಹಿತ್ಯ ಸಮಾಜದ ಮೌಢ್ಯವನ್ನು ಬಯಲಿಗೆಳೆದು, ಜಾತಿ, ಮತ, ಪಂಥಗಳನ್ನು ಮೀರಿ ನಿಂತ ಮಾನವೀಯ ಮೌಲ್ಯಗಳನ್ನು ಸಾಹಿತ್ಯದ ಮೂಲಕ ಅಭಿವ್ಯಕ್ತಿಸಿತು.

ಹರಿದಾಸ ಸಾಹಿತ್ಯಕ್ಕೆ ಪ್ರೇರಣೆ ಭಕ್ತಿಯಾದರೂ, ಕರ್ನಾಟಕ ಸಂಗೀತಕ್ಕೆ ಸಮೃದ್ಧಿಯನ್ನು ನೀಡಿದವರು ಹರಿದಾಸರು. ಗ್ರಾಮ್ಯ ಮತ್ತು ದೇಶ್ಯ ಶಬ್ದಗಳಿಗೆ ಸಾಹಿತ್ಯದ ಮುದ್ರೆಯನ್ನು ಒತ್ತಿ, ಭಾಷೆಗೊಂದು ಪರಿಪಕ್ವತೆಯನ್ನೂ ತಂದುಕೊಟ್ಟರು. ಇಂಥ ಸಾಹಿತ್ಯ ಸಂಪತ್ತನ್ನು ರಕ್ಷಿಸುವುದು ಮತ್ತು ಪ್ರಸಾರ ಮಾಡುವುದು ನಮ್ಮ ಕರ್ತವ್ಯ. ಈ ದೃಷ್ಟಿಯಿಂದ ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯ ಪ್ರಕಟಣ ಯೋಜನೆಗೆ ಸಮಿತಿಯೊಂದನ್ನು ರಚಿಸಿದ್ದು, ಇದರಲ್ಲಿ ನಾಡಿನ ಅನೇಕ ವಿದ್ವಾಂಸರು ಸಂಪುಟ ಸಂಪಾದಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಸಂಪುಟಗಳು ಹೊರಬರಲು ಕಾರಣರಾದ ಸಂಪಾದಕ ಮಂಡಳಿಯ ಸದಸ್ಯರಿಗೆ ಹಾಗೂ ಈ ಸಂಪುಟದ ಸಂಪಾದಕರಿಗೆ ನನ್ನ ಕೃತಜ್ಞತೆಗಳು.

ದಾಸರು ತಮ್ಮ ಸಾಹಿತ್ಯದಲ್ಲಿ ಸಾರ್ವಕಾಲಿಕ ಮೌಲ್ಯಗಳನ್ನು ಉಳಿಸಿ ಹೋಗಿದ್ದಾರೆ. ನಮ್ಮ ಸಾಮಾಜಿಕ ಜೀವನವನ್ನು ರೂಪಿಸುವಲ್ಲಿ ಈ ಕೀರ್ತನೆಗಳು ಮೌಲಿಕವಾದುವು. ಕನ್ನಡ ಜನತೆ ಈ ಕೃತಿಯ ಪ್ರಯೋಜನವನ್ನು ಪಡೆದರೆ ಪಟ್ಟ ಶ್ರಮ ಸಾರ್ಥಕವಾಗುತ್ತದೆ.

ರಾಣಿ ಸತೀಶ್

ಕನ್ನಡ ಮತ್ತು ಸಂಸ್ಕೃತಿ ಸಚಿವರು

ಯೋಜನೆಯನ್ನು ಕುರಿತು

ಕನ್ನಡ ಸಾಹಿತ್ಯ ಚರಿತ್ರೆಯ ಸಿರಿವಂತಿಕೆಯಲ್ಲಿ ಕೀರ್ತನ ಸಾಹಿತ್ಯದ ಕೊಡುಗೆ ವಿಪುಲವಾದುದು; ವೈಶಿಷ್ಟ್ಯಪೂರ್ಣವಾದುದು. ಈ ಸಮಗ್ರ ಸಾಹಿತ್ಯದ ಸಂಗ್ರಹ ಮತ್ತು ಪ್ರಕಾಶನದ ಕಾರ್ಯ ಪೂರ್ಣವಾಗಿ ಆಗಿರಲಿಲ್ಲ. ಇದನ್ನು ಮನಗಂಡ ಸರ್ಕಾರ ಸಮಗ್ರ ದಾಸ ಸಾಹಿತ್ಯ ಪ್ರಕಟಣೆಯ ಕಾರ್ಯವನ್ನು ಕೈಗೆತ್ತಿಕೊಂಡಿತು.

ಸುಮಾರು ಒಂದು ನೂರ ಮೂವತ್ತೊಂಬತ್ತು ಜನ ದಾಸರ ಸುಮಾರು ಹದಿನಾರು ಸಾವಿರ ಕೀರ್ತನೆಗಳ ಬೃಹತ್ ಸಾಹಿತ್ಯ ಸಾಮಗ್ರಿ ದೊರಕಿತು. ಹೀಗೆ ಸಾಂಪ್ರದಾಯಿಕ ರೀತಿಯಲ್ಲಿ ಸಂಗ್ರಹಿಸಿ, ಸಂಪಾದಿಸಿದ ಕೀರ್ತನ ಸಾಹಿತ್ಯವನ್ನು ಸಂಪುಟಗಳಲ್ಲಿ ಮುದ್ರಿಸುವುದು ಕಷ್ಟವೇನಾಗಿರಲಿಲ್ಲ. ಆದರೆ, ಅದನ್ನು ಮಾಹಿತಿ ತಂತ್ರಜ್ಞಾನದ ಇವತ್ತಿನ ಸಂದರ್ಭದಲ್ಲಿ ಬಹು ಉಪಯೋಗಿ ನೆಲೆಯಲ್ಲಿ ಬಹುಮಾಧ್ಯಮದಲ್ಲಿ ಹೊರತರಬೇಕೆಂಬ ಕನಸು ರೋಮಾಂಚಕಾರಿ ಅನುಭವವೇ ಸರಿ. ಇದನ್ನು ಕೃತಿ ರೂಪಕ್ಕಿಳಿಸುವ ಹಾದಿಯಲ್ಲಿ ಎದುರಾದ ತಾಂತ್ರಿಕ ಸವಾಲು ಬಹು ಕ್ಲಿಷ್ಟಕರವಾಗಿಯೇ ಕಂಡಿತು.

ದಿಟ, ಈ ಸಮಗ್ರ ಸಾಹಿತ್ಯವನ್ನು ಕೇವಲ ಮುದ್ರಣದಲ್ಲಷ್ಟೇ ಅಲ್ಲ, ಆಯ್ದ ಕೀರ್ತನೆಗಳನ್ನು ಗಾಯನಕ್ಕೆ ಅಳವಡಿಸಿ, ಸಿ.ಡಿ. ಮತ್ತು ಅಂತರ್ಜಾಲದಲ್ಲಿ ಹೊರತರ ಬೇಕೆಂದಾಗ ಬಳಕೆದಾರರ ಆವಶ್ಯಕತೆಯನ್ನು ಆಧರಿಸಿ ತಯಾರಿಸುವ ಅಗತ್ಯ ಇತ್ತು. ಆದರೆ ಇವುಗಳಲ್ಲಿ ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಸರ್ಚ್ ಎಂಜಿನ್ (ಹುಡುಕುವಿಕೆ) ಇಲ್ಲದಿರುವುದು ಒಂದು ತಾಂತ್ರಿಕ ಸಮಸ್ಯೆಯೇ ಆಯಿತು.

ಈ ರೀತಿಯ ಪ್ರಯತ್ನ ಕನ್ನಡ ಭಾಷೆಯಲ್ಲಿ ಹಿಂದೆಂದೂ ಆಗದಿದ್ದುದರಿಂದ ತಂತ್ರಾಂಶವನ್ನು ಹೊಸದಾಗಿಯೇ ಅಭಿವೃದ್ಧಿ ಪಡಿಸಬೇಕಾದ ಸವಾಲನ್ನು ಕೈಗೆತ್ತಿ ಕೊಳ್ಳಲಾಯಿತು. ಇದಕ್ಕಾಗಿ ಕನ್ನಡ ಗಣಕ ಪರಿಷತ್ತು, ರಾಷ್ಟ್ರೀಯ ಮಾಹಿತಿ ಕೇಂದ್ರ (ಎನ್ಐಸಿ), ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆ, ಮಹಾಭಾರತ ಸಂಶೋಧನಾ ಪ್ರತಿಷ್ಠಾನ ಮುಂತಾದ ಹಲವಾರು ತಂತ್ರಾಂಶ ಸಂಸ್ಥೆಗಳೊಂದಿಗೆ ನಿರಂತರ ಸಮಾಲೋಚನೆ, ಚಿಂತನೆಗಳನ್ನು ನಡೆಸಲಾಯಿತು.

ಹೀಗೆ ಸಾಹಿತ್ಯ ಸಂಗ್ರಹ, ಸಂಪಾದನೆ, ಸಂಗೀತ ಸಂಯೋಜನೆ, ಧ್ವನಿಮುದ್ರಣ, ಬಹುಮಾಧ್ಯಮಕ್ಕೆ ಅಳವಡಿಸುವ ತಾಂತ್ರಿಕ ಕುಶಲತೆಯ ನಿರಂತರ ಕಾರ್ಯಾನುಷ್ಠಾನಕ್ಕೆ ಸಂಪಾದಕ ಮಂಡಳಿ ಸದಸ್ಯರು, ಸಂಪುಟ ಸಂಪಾದಕರು, ಇಲಾಖಾ ಅಧಿಕಾರಿಗಳು, ತಂತ್ರಜ್ಞರು, ಕೋರ್ ಸಮಿತಿ ಸದಸ್ಯರು, ಸಂಗೀತ ನಿರ್ದೇಶಕರು, ಗಾಯಕರು – ಈ ಎಲ್ಲರ ಪರಿಶ್ರಮ ಅಗಾಧವಾಗಿ ದೊರಕಿದೆ. ಈ ಶ್ರಮದ ಫಲವಾಗಿ ಬಹುಮಾಧ್ಯಮದಲ್ಲಿ ಸಮಗ್ರ ದಾಸ ಸಾಹಿತ್ಯ ಯೋಜನೆಯ ಬೃಹತ್ ಕಾರ್ಯ ಸಾಕಾರಗೊಂಡಿದೆ.

ಈ ವಿಪುಲ ಸಾಹಿತ್ಯವನ್ನು ಕನ್ನಡ ಅಕ್ಷರಜ್ಞಾನಿಗಳು ಪುಸ್ತಕ ರೂಪದಲ್ಲಿಯೂ ಬಹುಗಾತ್ರದ ಸಾಹಿತ್ಯವನ್ನು ಕೈ ಅಳತೆಯ ಸಿ.ಡಿ. ರೂಪದಲ್ಲಿಯೂ ಈಗ ಪಡೆಯಬಹುದಾಗಿದೆ. ಅಲ್ಲದೆ, ಅಂತರ್ಜಾಲದ ಮೂಲಕ ವಿಶ್ವದ ಯಾವುದೇ ಮೂಲೆಯಲ್ಲಿರುವ ಆಸಕ್ತ ಜನತೆ ಕುಳಿತಲ್ಲಿಯೇ ಆರಾಮವಾಗಿ ವೀಕ್ಷಿಸುವ, ಕೇಳುವ ಹಾಗೂ ಕನ್ನಡ ಅಕ್ಷರ ಜ್ಞಾನವಿರದ ಭಾಷಿಕರು ಸಹಿತ ಸಂಗೀತವನ್ನು ಕೇಳಿ ಆಸ್ವಾದಿಸುವ ಅವಕಾಶವನ್ನು ಏಕಕಾಲದಲ್ಲಿ ಕಲ್ಪಿಸಲಾಗಿದೆ. ಪ್ರಕಾಶನದ ಇತಿಹಾಸದಲ್ಲಿಯೇ ದಾಖಲನೀಯವಾದ ಈ ಕಾರ್ಯ ಮುಂದೆ ಸರ್ಕಾರಿ ಸಂಸ್ಥೆಗಳಿಗಾಗಲಿ, ಖಾಸಗಿ ಸಂಸ್ಥೆಗಳಿಗಾಗಲಿ ಮಾದರಿಯಾಗಬಹುದೆಂದು ನಂಬಲಾಗಿದೆ.

ನಮ್ಮ ಸಂಸ್ಕೃತಿಯನ್ನು ಬಿತ್ತರಿಸಲು ನಾಲ್ಕು ಗೋಡೆಗಳೊಳಗಿನ ರಂಗ ಮಂದಿರಗಳು, ವೇದಿಕೆಗಳು ಅಗತ್ಯವಿದೆ ದಿಟ. ಆದರೆ ಭವಿತವ್ಯದಲ್ಲಿ ವಿಶ್ವದ ಜನರನ್ನು ತಲಪಲು ಮತ್ತು ಮುಖ್ಯವಾಗಿ ಯುವಜನಾಂಗಕ್ಕೆ ನಮ್ಮ ಸಾಂಸ್ಕೃತಿಕ ಕ್ಷಿತಿಜದ ವಿಸ್ತಾರವನ್ನು ಪರಿಚಯಿಸಲು ಸೂಕ್ಷ್ಮ ಸಂವೇದನಾಶೀಲವಾದ ಸಾಹಿತ್ಯವನ್ನು ಬಹುಮಾಧ್ಯಮದಲ್ಲಿ ಅಳವಡಿಸುವುದು ಅತ್ಯಾವಶ್ಯಕ. ಈ ನಿಟ್ಟಿನಲ್ಲಿ ಇದೊಂದು ವಿನೂತನ ಪ್ರಯೋಗ; ಈ ಪ್ರಯೋಗದ ಫಲ ಎಲ್ಲರಿಗೂ ಲಭ್ಯವಾಗಲೆಂಬುದು ನಮ್ಮ ಆಶಯ.

ಸಿ. ಎಸ್. ಕೇದಾರ್

ಸರ್ಕಾರದ ಕಾರ್ಯದರ್ಶಿ

ಪ್ರಕಾಶಕರ ಮಾತು

ಕರ್ನಾಟಕದ ಧಾರ್ಮಿಕ, ಸಾಂಸ್ಕೃತಿಕ ಇತಿಹಾಸದಲ್ಲಿ ಹರಿದಾಸರ ಸ್ಥಾನ ವಿಶಿಷ್ಟವಾದದ್ದು. ಸಾವಿರಾರು ವರ್ಷಗಳಿಂದ ಭಾರತದಲ್ಲಿ ಅವಿರತವಾಗಿ ಹರಿದುಬಂದ ಜೀವನಮೌಲ್ಯಗಳನ್ನು ಜನಸಾಮಾನ್ಯರ ಆಡುಭಾಷೆಯಲ್ಲಿ ಮುಟ್ಟಿಸಿ, ಲೌಕಿಕ ವಿಡಂಬನೆಯ ಮೂಲಕ ಅವರ ಮಾನಸಿಕ ವಿಕಾಸವನ್ನು ಯಶಸ್ವಿಯಾಗಿ ಸಾಧಿಸಿದವರು ಹರಿದಾಸರು. ಪಾಂಡಿತ್ಯ, ಲೋಕಾನುಭವಗಳ ಹಿನ್ನೆಲೆಯಿಂದಾಗಿ, ಆಡುಭಾಷೆಯ ಸೊಗಡಿನಿಂದಾಗಿ ಇವರು ಹಾಡಿದ್ದೆಲ್ಲ ಸಾಹಿತ್ಯವಾಯಿತು, ಕಾವ್ಯವಾಯಿತು, ಕೇಳುಗರನ್ನು ಸೆರೆಹಿಡಿಯಿತು. ಗೇಯಗುಣವುಳ್ಳ, ನೃತ್ಯಕ್ಕೆ ಅಳವಡುವ, ಛಂದೋಬದ್ಧವಾದ, ಜನತೆಯ ಮಧ್ಯದಲ್ಲಿಯೇ ಸಂದರ್ಭಾನುಸಾರ ಹುಟ್ಟಿದ ಹರಿದಾಸ ಸಾಹಿತ್ಯ ವೈಶಿಷ್ಟ್ಯಪೂರ್ಣವೆನಿಸಿತು. ಕನ್ನಡ ವಾಙ್ಮಯದಲ್ಲಿ ದಾಸಸಾಹಿತ್ಯ ಒಂದು ವಿಶೇಷ ಸ್ಥಾನ ಪಡೆಯಿತು. ಹೀಗೆ ಸಾಹಿತ್ಯ, ಸಂಗೀತ ಮತ್ತು ಸಾಮಾಜಿಕ ಕ್ಷೇತ್ರಕ್ಕೆ ದಾಸಸಾಹಿತ್ಯದ ಕೊಡುಗೆ ಗಣನೀಯವಾದುದು.

ಸುಮಾರು ನೂರಮೂವತ್ತೊಂಬತ್ತು ಜನ ದಾಸರು ಆಗಿಹೋಗಿದ್ದು, ಅವರ ಕೀರ್ತನೆಗಳ ಸಂಖ್ಯೆ ಸುಮಾರು ಹದಿನಾರು ಸಾವಿರಕ್ಕೂ ಅಧಿಕ. ಈವರೆಗೆ ಕೆಲವು ದಾಸರ ಕೀರ್ತನೆಗಳು ಬಿಡಿ ಬಿಡಿಯಾಗಿ ಪ್ರಕಟವಾಗಿವೆಯಾದರೂ, ಇನ್ನೂ ಅನೇಕ ದಾಸವರೇಣ್ಯರ ಕೀರ್ತನೆಗಳು ಹಸ್ತಪ್ರತಿ ರೂಪದಲ್ಲಿಯೇ ಉಳಿದುಕೊಂಡಿವೆ. ಅವುಗಳನ್ನು ಸಂಗ್ರಹಿಸಿ, ಸಂಪಾದಿಸಿ, ಪ್ರಕಟಿಸಿ, ಸಮಗ್ರ ದಾಸಸಾಹಿತ್ಯವು ಕನ್ನಡಿಗರಿಗೆ ಒಂದೆಡೆ ಲಭ್ಯವಾಗುವಂತೆ ಮಾಡುವ ಉದ್ದೇಶದಿಂದ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ಸಮಗ್ರ ದಾಸಸಾಹಿತ್ಯ ಪ್ರಕಟಣೆಯ ಬೃಹತ್ ಯೋಜನೆಯನ್ನು ಹಾಕಿಕೊಂಡಿದೆ. ಈ ಉದ್ದೇಶಕ್ಕಾಗಿ ಕಾರ್ಯನಿರ್ವಾಹಕ ಸಂಪಾದಕರಾದ ಡಾ. ಶ್ರೀನಿವಾಸ ಹಾವನೂರ, ಡಾ. ಟಿ. ಎನ್. ನಾಗರತ್ನ, ಪ್ರೊ. ವಸಂತ ಕುಷ್ಟಗಿ, ಸದಸ್ಯರಾದ ಡಾ. ಎಂ. ಎಂ. ಕಲಬುರ್ಗಿ, ಡಾ. ಬಸವರಾಜ ಸಬರದ, ಪ್ರೊ. ಸುಧಾಕರ, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ಡಾ. ಮಂದಾಕಿನಿ (ಈಗ ದಿವಂಗತರು) ಹಾಗೂ ಪ್ರೊ. ಎಂ. ರಾಜಗೋಪಾಲಾಚಾರ್ಯ (ಈಗ ದಿವಂಗತರು) ಅವರನ್ನೊಳಗೊಂಡಂತೆ ಸಂಪಾದಕ ಸಮಿತಿಯನ್ನು ರಚಿಸಲಾಯಿತು. ಇಲಾಖಾ ನಿರ್ದೇಶಕರು ಸಮಿತಿಯ ಸದಸ್ಯ-ಕಾರ್ಯದರ್ಶಿಗಳಾಗಿರುತ್ತಾರೆ. ಇದರಲ್ಲಿ ನಾಡಿನ ಅನೇಕ ವಿದ್ವಾಂಸರ ನೆರವನ್ನು ಬಳಸಿಕೊಳ್ಳಲಾಗುತ್ತಿದೆ.

ಈ ಯೋಜನೆಯನ್ವಯ 'ಸಮಗ್ರ'ವಾಗಿ ದಾಸರ ಕೀರ್ತನೆಗಳನ್ನು ಸಂಗ್ರಹಿಸಿ ಪ್ರಕಟಿಸುವುದಿದ್ದರೂ ಕೆಲವು ಹರಿದಾಸರ ರಚನೆಗಳು ಬಿಟ್ಟು ಹೋಗಿರುವ ಸಾಧ್ಯತೆ ಇರುತ್ತದೆ. ಅಂಥ ಹರಿದಾಸರ ಕೀರ್ತನೆಗಳು ದೊರೆತಲ್ಲಿ ಮುಂದೆ ಪರಿಷ್ಕರಣ ಸಂದರ್ಭದಲ್ಲಿ ಪ್ರಕಟಿಸಲು ಕ್ರಮಕೈಗೊಳ್ಳಲಾಗುವುದು.

ಸಮಗ್ರ ದಾಸಸಾಹಿತ್ಯ ಯೋಜನೆಯಡಿ ಪ್ರಕಟವಾಗುತ್ತಿರುವ ಆಯಾ ಸಂಪುಟಗಳ ಸಂಪಾದಕರಿಗೆ ಹಾಗೂ ಈ ಕಾರ್ಯದಲ್ಲಿ ನಮ್ಮೊಡನೆ ಸಹಕರಿಸಿದ ಸಂಪಾದಕ ಮಂಡಳಿಯವರಿಗೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಹಿಂದಿನ ನಿರ್ದೇಶಕರಾದ ಶ್ರೀ ಕೆ. ಸಿ. ರಾಮಮೂರ್ತಿ, ಶ್ರೀ ಸಿ. ಸೋಮಶೇಖರ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಕಾ. ತ. ಚಿಕ್ಕಣ್ಣ ಅವರಿಗೆ, ಸಹಾಯಕ ನಿರ್ದೇಶಕರಾದ ಶ್ರೀಮತಿ ವೈ. ಎಸ್. ವಿಜಯಲಕ್ಷ್ಮಿ ಹಾಗೂ ಡಾ. ಮಂಜುಳ ಅವರಿಗೆ ಕೃತಜ್ಞತೆಗಳು.

ಹರಿದಾಸರ ಕೀರ್ತನೆಗಳನ್ನು ಆಯ್ದು ಸಂಗೀತಕ್ಕೆ ಆಯ್ಕೆ ಮಾಡಲು ನೆರವಾದ ಶ್ರೀ ವಿನಾಯಕ ತೊರವಿ, ಶ್ರೀ ಮೈಸೂರು ವಿ. ಸುಬ್ರಹ್ಮಣ್ಯ, ಶ್ರೀ ಆರ್. ಕೆ. ಪದ್ಮನಾಭ, ಶ್ರೀ ಬಾನಂದೂರು ಕೆಂಪಯ್ಯ ಹಾಗು ಶ್ರೀಮತಿ ಮಾಲತಿ ಶರ್ಮರವರಿಗೆ, ಮತ್ತು ಈ ಯೋಜನೆಯಲ್ಲಿ ಪಾಲ್ಗೊಂಡ ಎಲ್ಲ ಸಂಗೀತ ನಿರ್ದೇಶಕರಿಗೆ ಹಾಗೂ ಗಾಯಕರಿಗೆ ಕೃತಜ್ಞತೆಗಳು.

ಸಂಪುಟಗಳನ್ನು ಮುದ್ರಣಕ್ಕೆ ಅನುಗೊಳಿಸುವ ಕಾರ್ಯ ನಿರ್ವಹಿಸಿದ ಪ್ರೊ. ಜಿ. ಅಶ್ವತ್ಥನಾರಾಯಣ, ಡಾ. ಅನಂತ ಪದ್ಮನಾಭರಾವ್ ಮತ್ತು ಪ್ರೊ. ನಾ. ಗೀತಾಚಾರ್ಯ ಇವರಿಗೂ ಸಹ ಕೃತಜ್ಞತೆಗಳು.

ಈ ಸಮಗ್ರ ದಾಸಸಾಹಿತ್ಯ ಸಂಪುಟಗಳ ಮುದ್ರಣ ಕಾರ್ಯವನ್ನು ನಿರ್ವಹಿಸಿದ ಎಂ.ಎಸ್.ಐ.ಎಲ್. ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಅಶೋಕ್ ವಿ. ಡೇವಿಡ್ ಹಾಗೂ ವಿಶೇಷಾಧಿಕಾರಿಗಳಾದ ಶ್ರೀ ಎಂ. ರವಿಶಂಕರ್ ಅವರಿಗೆ ನನ್ನ ಕೃತಜ್ಞತೆಗಳು. ಸಮಗ್ರ ದಾಸಸಾಹಿತ್ಯವನ್ನು ಪ್ರಕಟಿಸುವುದು ಹರಿದಾಸರಿಗೂ ಕನ್ನಡ ಜನತೆಗೂ ನಾವು ಸಲ್ಲಿಸಬೇಕಾದ ಸೇವೆಯೆಂದು ಭಾವಿಸಿದ್ದೇನೆ. ಪಂಡಿತ-ಪಾಮರರನ್ನು ಏಕಕಾಲಕ್ಕೆ ಆಕರ್ಷಿಸಬಲ್ಲ ವಿಶಿಷ್ಟ ಸಾಮರ್ಥ್ಯ ದಾಸಸಾಹಿತ್ಯದ್ದು ಎಂದರೆ ತಪ್ಪಾಗಲಾರದು. ಕನ್ನಡ ಜನತೆಯು ಈ ಪ್ರಕಟಣೆಯ ಸದುಪಯೋಗ ಪಡೆದುಕೊಂಡೀತು ಎಂದು ಆಶಿಸಿದ್ದೇನೆ.

ವೈ. ಕೆ. ಮುದ್ದುಕೃಷ್ಣ

ನಿರ್ದೇಶಕರು

ಸಂಪಾದಕ ಮಂಡಳಿಯ ನುಡಿ

ಕನ್ನಡ ಸಾಹಿತ್ಯದ ತವನಿಧಿಗಳಲ್ಲಿ ದಾಸಸಾಹಿತ್ಯವೂ ಒಂದು. ಕನ್ನಡಜನಕ್ಕೆ ಪಂಪನಂತಹ ಪ್ರೌಢಕವಿಗಳು ಗೊತ್ತಿರಲಿ ಬಿಡಲಿ, ದಾಸರ ಹಾಡುಗಳು ಗೊತ್ತಿಲ್ಲದವರು ಮಾತ್ರ ಅಪರೂಪ. ಜನರ ಮೇಲೆ ನಿರಂತರ ಪ್ರಭಾವವನ್ನು ಬೀರುವ ಜನಸಮ್ಮುಖತೆ ದಾಸಸಾಹಿತ್ಯದ ಪ್ರಮುಖ ಲಕ್ಷಣಗಳಲ್ಲಿ ಒಂದು. ಇಂತಹ ದಾಸರ ಹಾಡುಗಳು ಜ್ಞಾನಸಂಪದ ಹಾಗೂ ಭಕ್ತಿಸಂಪದಗಳ ಸಾರ್ವತ್ರಿಕ ಹಬ್ಬುಗೆಗೆ ಸಾಧನವಾಗಿ ಪರಿಣಮಿಸಿವೆ.

ಕನ್ನಡ ನಾಡಿನಾದ್ಯಂತ ಎಲ್ಲ ಸ್ತರಗಳಲ್ಲಿ ವರ್ಗ-ವರ್ಣಗಳ ಭೇದವಿಲ್ಲದೆ, ಜನರ ಬಾಯಲ್ಲಿ ಉಳಿದುಕೊಂಡು ಬಂದ ಈ ಸಾಹಿತ್ಯವನ್ನು ಮೊಟ್ಟಮೊದಲಿಗೆ ಪ್ರಕಟಿಸಿದ ಶ್ರೇಯಸ್ಸು ಬಾಸೆಲ್ ಮಿಶನ್ನಿನ ರೆ. ಹರ್ಮನ್ ಮೊಗ್ಲಿಂಗ್‌ರಿಗೆ ಸೇರುತ್ತದೆ. ಇವರು ತಮ್ಮ ಇಲ್ಲಿಯ ವಾಸ್ತವ್ಯದಲ್ಲಿ (೧೮೩೬ರಿಂದ) ನಾಲ್ಕುನೂರಕ್ಕೂ ಮೀರಿದ ದಾಸರಪದಗಳನ್ನು ಸಂಗ್ರಹಿಸಿದ್ದರು. ಅವುಗಳಲ್ಲಿಯ ಒಂದು ನೂರು ಪದಗಳ ಸಂಗ್ರಹವನ್ನು 'ದಾಸರ ಪದಗಳು' ಎಂಬ ಹೆಸರಿನಿಂದ ಕ್ರಿ. ಶ. ೧೮೫೦ರಲ್ಲಿ, ಮತ್ತೆ ಕ್ರಿ.ಶ. ೧೮೫೨ರಲ್ಲಿ ೧೭೪ ಪದಗಳುಳ್ಳ ಸಂಕಲನವನ್ನು ಮಂಗಳೂರಿನಲ್ಲಿ ಕಲ್ಲಚ್ಚಿನಲ್ಲಿ ಛಾಪಿಸಿ ಪ್ರಕಟಿಸಿದರು. ಈ ವಿಷಯವನ್ನು ೧೮೭೩ರಲ್ಲಿ ಪ್ರಕಟವಾದ ಇಂಡಿಯನ್ ಎಂಟಿಕ್ವೆರಿಯ 'On the Karnataka Vaishnava Dasas' - ಎಂಬ ತಮ್ಮ ಲೇಖನದಲ್ಲಿ ರೆ. ಕಿಟೆಲ್ಲರು ಕಾಣಿಸಿದ್ದಾರೆ. ಇದರಿಂದ ಕಿಟೆಲ್‌ರಂಥವರು ಕೂಡ ದಾಸರ ಪದಗಳ ಮಹತ್ವವನ್ನು ಮತ್ತು ಜನಪ್ರಿಯತೆಯನ್ನು ಗುರುತಿಸಿದ್ದರು ಎಂಬುದು ಗೊತ್ತಾಗುತ್ತದೆ. ಪ್ರಾಸಂಗಿಕವಾಗಿ ಇದುವೇ ದಾಸಸಾಹಿತ್ಯದ ಕುರಿತಾದ ಮೊದಲ ಲೇಖನವೂ ಆಗಿದೆ.

ಆ ನಂತರದ ದಿನಗಳಲ್ಲಿ ಈ ಕ್ಷೇತ್ರದಲ್ಲಿ ಹಲವಾರು ಜನರು ಕೆಲಸವನ್ನು ಮುಂದುವರಿಸಿದರು. ರೆ. ಮೊಗ್ಲಿಂಗರ 'ದಾಸರ ಪದಗಳು' ಇದರ ದ್ವಿತೀಯ ಆವೃತ್ತಿಯನ್ನು ೧೮೭೧ರಲ್ಲಿ ಜಾನ್ ಗ್ಯಾರೆಟರ ಸೂಚನೆಯ ಮೇರೆಗೆ ಹೊಳಕಲ್ಲು ನರಸಿಂಹಯ್ಯನವರು ಬೆಂಗಳೂರಿನಿಂದ ಪ್ರಕಟಿಸಿದರು. ೧೮೭೩ರಲ್ಲಿ ಹಿಂದೂ ಭಾಷಾ ಸಂಜೀವಿನೀ ಮುದ್ರಣ ಶಾಲೆಯಲ್ಲಿ 'ಹರಿಭಜನೆ, ಕೀರ್ತನೆ' ಎಂಬ ಸಂಗ್ರಹ ಪ್ರಕಟವಾಯಿತು. ೧೯೦ನೆಯ ದಶಕದಲ್ಲಿ ಬೆಳಗಾವಿಯ ಆಬಾಜಿ ರಾಮಚಂದ್ರ ಸಾವಂತ ಇವರು ದೇವನಾಗರಿ ಲಿಪಿಯಲ್ಲಿ "ದಾಸರ ಪದಗಳ ಸಂಗ್ರಹವು" ಎಂಬುದಾಗಿ ಎರಡು ಭಾಗಗಳಲ್ಲಿ ಪ್ರಕಟಿಸಿದರು. ಆ ದಶಕದಲ್ಲಿಯೇ ಮಡಕಶಿರಾದ ಬಾಲಕೃಷ್ಣರಾಯರು ೧೯೦೪ರಲ್ಲಿ 'ಪುರಂದರ ದಾಸರು ಮೊದಲಾದ ಅಪರೋಕ್ಷ ಜ್ಞಾನಿಗಳ ಪದಗಳು' ಎಂಬ ಪುಸ್ತಕವನ್ನು ತೆಲುಗು ಲಿಪಿಯಲ್ಲಿ ಮುದ್ರಿಸಿದ್ದು ಗಮನಾರ್ಹವಾಗಿದೆ. ಮತ್ತೆ ೧೯೦೮ರಲ್ಲಿ ಅವರೇ ಇನ್ನೊಂದು ಸಂಕಲನವನ್ನೂ ಪ್ರಕಟಿಸಿದ್ದಾರೆ.

ಹೀಗೆ ೧೮೫೦ರಷ್ಟು ಹಿಂದೆಯೇ ಪ್ರಾರಂಭವಾದ ದಾಸರ ಪದಗಳ ಸಂಗ್ರಹ ಹಾಗೂ ಪ್ರಕಟಣೆಯ ಕಾರ್ಯಕ್ಕೆ ಒಂದು ವ್ಯವಸ್ಥಿತ ರೂಪವನ್ನು ಕೊಟ್ಟು, ನಾಡಿನಾದ್ಯಂತ ಹರಿದು ಹಂಚಿಹೋದ, ಜನರ ಬಾಯಲ್ಲಿ ಉಳಿದುಕೊಂಡು ಬಂದ ವಿವಿಧ ದಾಸರ ಪದಗಳನ್ನು ಸಂಗ್ರಹಿಸಿ ಪ್ರಕಟಿಸಲು ಪ್ರಾರಂಭಿಸಿದವರು ಉಡುಪಿಯ ಪಾವಂಜೆ ಗುರುರಾಯರು. ಅವರು ೧೯೧೪ರಲ್ಲಿ ಪ್ರಕಟಿಸಿದ ಮೊದಲ ಸಂಕಲನದ ಹೆಸರು 'ಉದಯರಾಗವು' ಎಂಬುದು. ಅನಂತರದ ದಿನಗಳಲ್ಲಿ ಪುರಂದರದಾಸರ ಕೀರ್ತನೆಗಳನ್ನು ಐದು ಸಂಪುಟಗಳಲ್ಲಿ ಮತ್ತು ಉಳಿದ ದಾಸರ ಕೃತಿಗಳನ್ನು ಬಿಡಿಬಿಡಿಯಾಗಿ ಪ್ರಕಟಿಸಿದರು. ಹೀಗೆ ನಾಡಿನ ದಕ್ಷಿಣದ ಅಂಚಿನ ಉಡುಪಿಯಲ್ಲಿ ಪ್ರಾರಂಭವಾದ ಕೆಲಸವನ್ನು ಉತ್ತರದ ಅಂಚಿನ ಲಿಂಗಸುಗೂರಿನಲ್ಲಿ ಗೊರಾಬಾಳ ಹಣಮಂತರಾಯರು 'ವರದೇಂದ್ರ ಸಾಹಿತ್ಯ ಮಾಲೆ'ಯನ್ನು ಪ್ರಾರಂಭಿಸಿ ತಮ್ಮ ಇಡೀ ಜೀವನವನ್ನೇ ಹರಿದಾಸ ಸಾಹಿತ್ಯದ ಸಂಗ್ರಹ ಮತ್ತು ಪ್ರಕಟಣೆಗೆ ಮೀಸಲಾಗಿರಿಸಿದರು. ಇತ್ತ ಮೈಸೂರು ಭಾಗದಲ್ಲಿ ಸುಪ್ರಸಿದ್ಧ ದಾಸರ ಹಾಡುಗಳನ್ನು ತಕ್ಕಮಟ್ಟಿಗೆ ಶಾಸ್ತ್ರಶುದ್ಧವಾಗಿ ಪ್ರಕಟಿಸಲು

ಸುಬೋಧ ರಾಮರಾಯರು ಮುಂದಾದರು. ಇದೇ ಬಗೆಯ ಕೆಲಸವನ್ನು ಧಾರವಾಡ ಪ್ರದೇಶದಲ್ಲಿ ನಾರಾಯಣರಾವ ಕಲಮದಾನಿ, ಹುಚ್ಚರಾವ ಬೆಂಗೇರಿ ಹಾಗೂ ಬೆಟಗೇರಿ ಕೃಷ್ಣಶರ್ಮರು ಮಾಡಿದರು. ಇದರೊಂದಿಗೆ, ಭಜನೆಯ ದೃಷ್ಟಿಯಿಂದ ಅನುಕೂಲವಾಗುವಂತೆ ನಾಡಿನ ವಿವಿಧ ಭಾಗಗಳಲ್ಲಿ ದಾಸಸಾಹಿತ್ಯಾಸಕ್ತರು ತಮತಮಗೆ ಬೇಕಾದ ಪದಗಳ ಸಂಗ್ರಹವನ್ನು ಪ್ರಕಟಿಸತೊಡಗಿದರು. ಇದರಿಂದಾಗಿ ನಾಡಿನ ಬಹುತೇಕ ಭಾಗಗಳಲ್ಲಿ ಬೇರೆ ಬೇರೆ ದಾಸರು ಇದ್ದುದು ಮತ್ತು ಅವರು ಹಾಡುಗಳನ್ನು ಬರೆದಿದ್ದಾರೆ ಎಂಬುದು ಗಮನಕ್ಕೆ ಬಂದಿತು. ಅದು 'ದಾಸ-ಪೀಳಿಗೆ'ಯನ್ನು ಗುರುತಿಸಲು ಸಹಾಯವಾಯಿತು.

ಶ್ರೀಪಾದರಾಜರಿಂದ ಪ್ರಾರಂಭವಾದ ಕೀರ್ತನೆಗಳ ರಚನೆಯ ಸಂಪ್ರದಾಯದಲ್ಲಿ ಈ ಐದುನೂರು ವರ್ಷಗಳಲ್ಲಿ ಸುಮಾರು ಮುನ್ನೂರು ಜನ ಹರಿದಾಸರು ಹುಟ್ಟಿ ಮೂವತ್ತು ಸಾವಿರಕ್ಕೂ ಮಿಕ್ಕ ಕೀರ್ತನೆಗಳನ್ನು ರಚಿಸಿದ್ದಾರೆಂದರೆ ಅವುಗಳ ಮಹತ್ವ ಗೊತ್ತಾಗದೇ ಇರದು.

ಇಡಿಯಾಗಿ-ಬಿಡಿಬಿಡಿಯಾಗಿ ವ್ಯಕ್ತಿಗಳಿಂದ, ಸಂಘ ಸಂಸ್ಥೆಗಳಿಂದ ದಾಸರ ಪದಗಳು ಪ್ರಕಟವಾಗುತ್ತ ಬರುತ್ತಿರುವಾಗಲೇ ಪುರಂದರ ಕನಕದಾಸರ ಚತುಃಶತಮಾನೋತ್ಸವ ಸಂದರ್ಭಗಳಲ್ಲಿ ಅವರ ಸಮಗ್ರ ಕೃತಿಗಳು ಸರ್ಕಾರದಿಂದ ಹಾಗೂ ವಿವಿಧ ಸಂಘ ಸಂಸ್ಥೆಗಳಿಂದ ಪ್ರಕಟವಾದವು. ಆದರೆ ಸಮಗ್ರ ದಾಸಸಾಹಿತ್ಯದ ಪ್ರಕಟಣೆ ಈವರೆಗೆ ಆಗಲೇ ಇಲ್ಲವೆಂದು ಹೇಳಬಹುದು. ಇಂಥದೊಂದು ಪ್ರಯತ್ನವನ್ನು ಮೂರು ದಶಕಗಳ ಹಿಂದೆ ಮೈಸೂರು ವಿಶ್ವವಿದ್ಯಾನಿಲಯವು ಕೈಗೊಂಡಿತು. ವೈಜ್ಞಾನಿಕ ರೀತಿಯಲ್ಲಿ ಶಾಸ್ತ್ರಶುದ್ಧವಾಗಿ ದಾಸಸಾಹಿತ್ಯವನ್ನು ಪ್ರಕಟಿಸುವುದರ ಅಡಿಗಲ್ಲನ್ನು ಹಾಕಿದ ಶ್ರೇಯಸ್ಸು ಆ ಮಾಲೆಯ ಸಂಪಾದಕರಾಗಿದ್ದ ಡಾ. ಜಿ. ವರದರಾಜರಾವ್ ಅವರಿಗೆ ಸಲ್ಲಬೇಕು. ಇದುವರೆಗೆ ಕೆಲವು ಸಂಪುಟಗಳು ಮಾತ್ರ ಬಂದಿವೆ. ಆದರೆ ಹಸ್ತಪ್ರತಿಗಳಲ್ಲಿ ವಿಪುಲ ದಾಸಸಾಹಿತ್ಯವನ್ನು ಸಂಗ್ರಹಿಸಲಾಗಿದೆ. ಅದೇ ರೀತಿಯಲ್ಲಿ ಲಿಂಗಸುಗೂರಿನಲ್ಲಿ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಹಾಗೂ ತಿರುಪತಿಯ ದಾಸಸಾಹಿತ್ಯ ಪ್ರೊಜೆಕ್ಟದಲ್ಲಿ ಕೂಡ ವಿಪುಲ ಹಸ್ತಪ್ರತಿಗಳ ಸಂಗ್ರಹವಿದೆ. ಇವರೆಲ್ಲರ ಸಹಕಾರದಿಂದ ಈಗ ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯವನ್ನು ಒಂದೆಡೆ ಸಂಗ್ರಹಿಸಿ ಪ್ರಕಟಿಸುವ ಸಾಹಸದ ಕಾರ್ಯವನ್ನು ಮಾಡುತ್ತಿದೆ.

ಸಂಪುಟ ಯೋಜನೆ

ದಾಸಸಾಹಿತ್ಯದ ಪರಿಷ್ಕರಣ ಕಾರ್ಯ ತುಂಬ ಜಟಿಲವಾದುದೆಂಬುದು ಸಂಪಾದಕ ಮಂಡಳಿಯ ಪ್ರಥಮ ಸಭೆಯಲ್ಲಿಯೇ ಅನುಭವಕ್ಕೆ ಬಂದಿತು. ಕಳೆದ ಐದು ಶತಮಾನಗಳಿಂದ ನಿರಂತರ ಹರಿದುಬಂದ ದಾಸಸಾಹಿತ್ಯ ರಚನೆಯಲ್ಲಿಯ ದಾಸರ ಹಾಗೂ ದಾಸರ ಪದಗಳ ಸಂಖ್ಯಾಬಾಹುಳ್ಯವನ್ನು ಗಮನಿಸಿ ಅದಕ್ಕೊಂದು ಕಾಲಮಿತಿಯನ್ನು ಹಾಕಿಕೊಳ್ಳುವುದು ಅನಿವಾರ್ಯವಾಯಿತು. ಹಾಗೆ ದಾಸಸಾಹಿತ್ಯದ ಪ್ರಾರಂಭ ಕಾಲದಿಂದ ೧೯ನೆಯ ಶತಮಾನದ ಅಂತ್ಯದವರೆಗೆ ರಚಿತಗೊಂಡ ವೈದಿಕ ಪರಂಪರೆಯ ದಾಸರ ಪದಗಳನ್ನು ಸಂಗ್ರಹಿಸುವುದೆಂದೂ, ಅದರಲ್ಲಿ ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಪರಂಪರೆಯ ಲಭ್ಯವಿದ್ದ ಹಾಡುಗಳನ್ನು ಸೇರಿಸಿಕೊಂಡು ೩೫ ಸಂಪುಟಗಳಲ್ಲಿ ಪ್ರಕಟಿಸುವುದೆಂದೂ ನಿರ್ಧರಿಸಲಾಯಿತು.

ಈ ೩೫ ಸಂಪುಟಗಳನ್ನು* ಸಂಪಾದಕ ಮಂಡಳಿಯ ಸದಸ್ಯರಲ್ಲದೆ ನಾಡಿನ ಹಲವಾರು ವಿದ್ವಾಂಸರನ್ನು ಸಂಪಾದಿಸಿಕೊಡಲು ಕೇಳಿಕೊಳ್ಳಲಾಯಿತು.

ಇಂಥದೊಂದು ಬೃಹತ್ ಕಾರ್ಯವನ್ನು ಕೈಗೊಂಡಾಗ ಕೆಲವು ಮಾರ್ಗದರ್ಶಿ ಸೂತ್ರಗಳನ್ನು ಅನುಸರಿಸುವುದು ಅನಿವಾರ್ಯವಾಗುತ್ತದೆ. ಅನ್ಯ ಮತ-ಪಂಥಗಳ ಟೀಕೆಗಳು ಬಂದಿದ್ದರೆ ಅಂಥ ಹಾಡುಗಳನ್ನು ಕೈಬಿಡಬೇಕು. ಒಂದೇ ಹಾಡು ಇಬ್ಬರು ದಾಸರ ಅಂಕಿತದಲ್ಲಿ ಪ್ರಚಲಿತದಲ್ಲಿದ್ದರೆ, ಎರಡೂ ಕಡೆಗೆ ಅವುಗಳನ್ನು ಕೊಟ್ಟು, ಕೆಳಗೆ 'ಈ ಕೀರ್ತನೆ . . . . ದಾಸರ ಅಂಕಿತದಲ್ಲೂ ಇದೆ' ಎಂದೂ ಸೂಚಿಸಬೇಕು. ದ್ವೈತ ಸಂಪ್ರದಾಯದ ಕೀರ್ತನೆಗಳನ್ನು ಪ್ರಕಟಿಸುವಾಗ ದೇವ-ಗುರು ತಾರತಮ್ಯವನ್ನು ಪಾಲಿಸಬೇಕು : ಉಳಿದೆಡೆ ಗಣೇಶ ಪ್ರಾರ್ಥನೆ, ಭಗವಂತನ ನಾಮಸಂಕೀರ್ತನೆ, ಆತ್ಮನಿವೇದನೆ, ಲೋಕನೀತಿ, ತಾತ್ವಿಕ, ಕಥನಾತ್ಮಕ, ಸಂಪ್ರದಾಯ ಹಾಗೂ ವಿಶೇಷ ಹಾಡುಗಳೆಂದು ಮುಂತಾಗಿ ವಿಂಗಡಿಸಿಕೊಡಬೇಕು-ಎಂಬುದಾಗಿ ನಿರ್ಧರಿಸಲಾಯಿತು.

---

*ಇವುಗಳಲ್ಲಿ ಕೆಲವುಗಳಿಗೆ ಎರಡು ಮೂರು ಭಾಗಗಳಿವೆ.

ಪ್ರತಿಯೊಂದು ಸಂಪುಟದ ಪ್ರಾರಂಭದಲ್ಲಿ ಹಾಡುಗಳ ಪರಿವಿಡಿಯನ್ನು ಕೊಟ್ಟು ಪ್ರಸ್ತಾವನೆಯಲ್ಲಿ ಆಯಾ ದಾಸರ ಸಂಕ್ಷಿಪ್ತ ಜೀವನ ಚರಿತ್ರೆ, ಕೃತಿಗಳ ಸಮೀಕ್ಷೆ, ಶೈಲಿ ಇತ್ಯಾದಿಗಳನ್ನು ವಿವರಿಸಿ, ಗ್ರಂಥಸಂಪಾದನೆಯ ಆಕರಗಳನ್ನೂ ಕೊಡಲು ಪ್ರಯತ್ನಿಸಲಾಗಿದೆ. ಕೊನೆಯಲ್ಲಿ ಬರುವ ಅನುಬಂಧಗಳಲ್ಲಿ ಕಠಿಣ ಶಬ್ದಗಳ ಅರ್ಥ, ಟಿಪ್ಪಣಿ ಮತ್ತು ವಿಶಿಷ್ಟ ಅಂಕಿತನಾಮಗಳ ಸೂಚಿ ಹಾಗೂ ಹಾಡುಗಳ ಅಕಾರಾದಿಯನ್ನು ಕೊಡಲಾಗಿದೆ.

ಈ ಸಂಪುಟಗಳು ಜನಪ್ರಿಯ ಆವೃತ್ತಿಗಳಾಗಿರುವುದರಿಂದ ಲಭ್ಯವಿರುವ ಪಾಠಾಂತರಗಳಲ್ಲಿ ಯೋಗ್ಯವಾದುದನ್ನು ಸ್ವೀಕರಿಸಿದೆ. ಅನ್ಯ ಪಾಠಗಳನ್ನು ಅಡಿಯಲ್ಲಿ ನಮೂದಿಸಿಲ್ಲ. ಆದರೂ ಇವು ವಿದ್ವಜ್ಜನಪ್ರಿಯ ಆವೃತ್ತಿಗಳೂ ಆಗಬೇಕೆಂಬ ರೀತಿಯಲ್ಲಿ ಈ ಸಂಪುಟಗಳನ್ನು ರೂಪಿಸಲು ಪ್ರಯತ್ನಿಸಿದ್ದೇವೆ.

ಕೃತಜ್ಞತೆಗಳು

ಕಳೆದ ನೂರೈವತ್ತು ವರ್ಷಗಳಿಂದ ಪಾಶ್ಚಾತ್ಯ ಮಿಶನರಿಗಳಿಂದ ಹಿಡಿದು ಈ ಮೊದಲು ಉಲ್ಲೇಖಿಸಿದ ನಾಡಿನ ಅನೇಕ ವಿದ್ವಜ್ಜನರು, ಸಂಘ ಸಂಸ್ಥೆಗಳು, ವಿಶ್ವವಿದ್ಯಾಲಯಗಳು ದಾಸಸಾಹಿತ್ಯ ಕುರಿತು ನಿರಂತರ ದುಡಿದು ವಿಪುಲ ಸಾಮಗ್ರಿಯನ್ನು ಪ್ರಕಟಿಸಿದ್ದಾರೆ. ಈ ಎಲ್ಲ ವ್ಯಕ್ತಿಗಳಿಗೂ, ಸಂಘ ಸಂಸ್ಥೆಗಳಿಗೂ ನಮ್ಮ ಕೃತಜ್ಞತಾಪೂರ್ವಕ ವಂದನೆಗಳು ಸಲ್ಲುತ್ತವೆ.

ಈ ಯೋಜನೆ ಅಸ್ತಿತ್ವಕ್ಕೆ ಬಂದುದೂ ಒಂದು ವಿಶಿಷ್ಟ ಸಂದರ್ಭದಲ್ಲಿ ಎಂಬುದನ್ನು ಇಲ್ಲಿ ನಮೂದಿಸಬೇಕು. ಕರ್ನಾಟಕ ಸರ್ಕಾರವು ನಾಡಿನ ಖ್ಯಾತ ಸಂಶೋಧಕರಾದ ಡಾ. ಎಂ. ಎಂ. ಕಲಬುರ್ಗಿ ಅವರ ಪ್ರಧಾನ ಸಂಪಾದಕತ್ವದಲ್ಲಿ ಸಮಗ್ರ ವಚನಸಾಹಿತ್ಯವನ್ನು ಪ್ರಕಟಿಸಿತಷ್ಟೇ. ಅವರೇ 'ದಾಸಸಾಹಿತ್ಯ' ಯೋಜನೆಯನ್ನು ರೂಪಿಸಿ ಶ್ರೀ ಪೇಜಾವರ ಮಠಾಧೀಶರಾದ ಶ್ರೀ ವಿಶ್ವೇಶತೀರ್ಥರ ಮೂಲಕ ಈ ಯೋಜನೆಯತ್ತ ಸರ್ಕಾರದ ಗಮನ ಸೆಳೆದರು. ಇದನ್ನು ಅರಿತ ಅಂದಿನ ಮುಖ್ಯಮಂತ್ರಿಗಳೂ, ಅನಂತರ ಭಾರತದ ಪ್ರಧಾನಮಂತ್ರಿಗಳೂ ಆಗಿದ್ದ ಸನ್ಮಾನ್ಯ ಶ್ರೀ ಹೆಚ್. ಡಿ. ದೇವೇಗೌಡರು ಮುಧೋಳದಲ್ಲಿ (೧೯೯೫) ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ, "ಸರ್ಕಾರವು ಸಮಗ್ರ

ದಾಸಸಾಹಿತ್ಯವನ್ನು ಪ್ರಕಟಿಸಲು ಒಪ್ಪಿಕೊಂಡಿದೆ" ಎಂದು ಘೋಷಿಸಿದರು. ಅದರಂತೆ, ಸರ್ಕಾರವು ಒಂಬತ್ತು ಜನರ ಸಂಪಾದಕ ಮಂಡಳಿಯನ್ನು ರಚಿಸಿತು. ಅದರಲ್ಲಿ ಡಾ. ಶ್ರೀನಿವಾಸ ಹಾವನೂರ, ಡಾ. ಟಿ.ಎನ್. ನಾಗರತ್ನ ಮತ್ತು ಪ್ರೊ. ವಸಂತ ಕುಷ್ಟಗಿ ಅವರನ್ನು ಸಮಿತಿಯ ಕಾರ್ಯನಿರ್ವಾಹಕ ಸಂಪಾದಕರೆಂದು ನಿಯಮಿಸಿತು. ಜೊತೆಗೆ ಈ ಮೊದಲು ಇಂಥ ಕಾರ್ಯವನ್ನು ಯಶಸ್ವಿಯಾಗಿ ಮಾಡಿದ ಅನುಭವಿ ಡಾ. ಎಂ. ಎಂ. ಕಲಬುರ್ಗಿ, ದಾಸಸಾಹಿತ್ಯದಲ್ಲಿ ನುರಿತ ವಿದ್ವಾಂಸರುಗಳಾದ ಪ್ರೊ. ಎಂ. ರಾಜಗೋಪಾಲಾಚಾರ್ಯ, ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ, ಡಾ. ಮಂದಾಕಿನಿ, ಪ್ರೊ. ಸುಧಾಕರ ಮತ್ತು ಡಾ. ಬಸವರಾಜ ಸಬರದ ಅವರನ್ನು ಸಂಪಾದಕ ಮಂಡಳಿಯ ಸದಸ್ಯರನ್ನಾಗಿ ನಿಯಮಿಸಿತು. ಅವರುಗಳ ನಿರಂತರ ಪರಿಶ್ರಮದ ಫಲವೇ ಈ ಸಮಗ್ರ ದಾಸಸಾಹಿತ್ಯದ ಪ್ರಕಟಣಾ ಕಾರ್ಯ. ಈ ಪ್ರಕಟಣಾ ಕಾರ್ಯದಲ್ಲಿ ಅವರುಗಳೊಂದಿಗೆ ೩೫ ಸಂಪುಟಗಳನ್ನು ಸಿದ್ಧಪಡಿಸುವಲ್ಲಿ ಸರ್ವಶ್ರೀ ಡಾ. ಅರಳುಮಲ್ಲಿಗೆ ಪಾರ್ಥಸಾರಥಿ, ಡಾ. ಡಿ. ಆರ್. ಪಾಂಡುರಂಗ, ಡಾ. ಅನಂತಪದ್ಮನಾಭರಾವ್, ಪ್ರೊ. ಬಿ. ಆರ್. ಕುಲಕರ್ಣಿ, ಡಾ. ಕೆ. ಜಿ. ವೆಂಕಟೇಶ್, ಪ್ರೊ. ಜಿ. ಅಶ್ವತ್ಥನಾರಾಯಣ, ಡಾ. ಕೆ. ಗೋಕುಲನಾಥ, ಡಾ. ಕೆ. ಎಂ. ಕೃಷ್ಣರಾವ್, ಶ್ರೀ ಹಣಮಂತ ತಾಸಗಾಂವಕರ್, ಪ್ರೊ. ನಾ. ಗೀತಾಚಾರ್ಯ, ಡಾ. ಸ್ವಾಮಿರಾವ್ ಕುಲಕರ್ಣಿ, ಶ್ರೀ ಹನುಮನಗೌಡ, ಶ್ರೀ ಎ. ಎನ್. ಅನಂತಸ್ವಾಮಿರಾವ್, ಡಾ. ನಾರಾಯಣಾಚಾರ್ಯ ಧೂಳಖೇಡ, ಶ್ರೀ ಶಾಶ್ವತಸ್ವಾಮಿ ಮುಕ್ಕುಂದಿಮಠ, ಶ್ರೀ ಕೆ. ಎಸ್. ವೆಂಕಟೇಶ್ ಮತ್ತು ಶ್ರೀ ಎಚ್. ಎಸ್. ಶ್ರೀನಿವಾಸಮೂರ್ತಿ ಅವರುಗಳು ಹಾಗೂ ಶ್ರೀಮತಿಯರಾದ ನಳಿನಿ ವೆಂಕಟೇಶ್, ಮೀನಾರಾವ್, ಲೀಲಾವತಿ ಎಸ್. ರಾವ್, ಡಾ. ಜಯಲಕ್ಷ್ಮಿ ಮಂಗಳಮೂರ್ತಿ, ಡಾ. ಅಕ್ಕಮಹಾದೇವಿ, ಶೀಲಾ ದಾಸ್, ಡಾ. ರಮಾ ಕಲ್ಲೂರಕರ, ಡಾ. ಸೀತಾ ಗುಡೂರ ಕುಲಕರ್ಣಿ, ಹೆಚ್. ಎಸ್. ಪದ್ಮಾ ಮೂರ್ತಿ, ಮತ್ತು ರುಕ್ಮಿಣಿ ಗಿರಿಮಾಜಿ ಅವರುಗಳು ತುಂಬ ಶ್ರಮವಹಿಸಿ ಸಂಪುಟಗಳನ್ನು ಸಿದ್ಧಪಡಿಸಿಕೊಟ್ಟಿದ್ದಾರೆ. ಅವರುಗಳಿಗೆ ಸಂಪಾದಕ ಮಂಡಳಿಯು ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಈ ಮಧ್ಯೆ ಸಂಪಾದಕ ಸಮಿತಿಯ ಸದಸ್ಯರಲ್ಲೊಬ್ಬರಾದ ಪ್ರೊ. ಎಂ. ರಾಜಗೋಪಾಲಾಚಾರ್ಯರು ಮತ್ತು ಡಾ. ಮಂದಾಕಿನಿ ಹಾಗೂ ಸಂಪುಟ ಸಂಪಾದಕರಲ್ಲಿ ಒಬ್ಬರಾದ ಶ್ರೀ ಎಚ್. ಎಸ್. ಶ್ರೀನಿವಾಸಮೂರ್ತಿ, ಡಾ. ಕೆ.ಎಂ. ಕೃಷ್ಣರಾವ್, ಶ್ರೀಮತಿ ಪದ್ಮಾ ಮೂರ್ತಿ ಹಾಗೂ ಶ್ರೀ ಹನುಮನಗೌಡ ಮಾನ್ವಿ ಅವರು ನಮ್ಮನ್ನು ಅಗಲಿದ್ದು ದುಃಖದ ವಿಷಯವಾಗಿದೆ.

ಆಯಾ ಕಾಲದಲ್ಲಿ ಈ ಯೋಜನೆಗೆ ಸಹಕರಿಸಿದ ಹಾಗೂ ಈ ಯೋಜನೆಯ ಪರಿಕಲ್ಪನೆ ಯಶಸ್ವಿಯಾಗಿ ಕಾರ್ಯಾನುಷ್ಠಾನಕ್ಕೆ ಬರುವ ದಿಸೆಯಲ್ಲಿ ಸಹಕರಿಸಿದ ಈ ಹಿಂದಿನ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ ವಿಶೇಷವಾಗಿ ಇಂದಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಎಸ್. ಎಂ. ಕೃಷ್ಣ ಅವರಿಗೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆ ಶ್ರೀಮತಿ ರಾಣಿ ಸತೀಶ್ ಅವರಿಗೆ, ಇಲಾಖೆಯ ಹಿಂದಿನ ಕಾರ್ಯದರ್ಶಿಗಳಾದ ಶ್ರೀ ಚಂದ್ರಹಾಸ ಗುಪ್ತ ಮತ್ತು ಈಗಿನ ಕಾರ್ಯದರ್ಶಿಗಳಾದ ಶ್ರೀ ಸಿ. ಎಸ್. ಕೇದಾರ್ ಅವರಿಗೆ ನಮ್ಮ ನಮನಗಳು ಸಲ್ಲುತ್ತವೆ. ಈ ಕಾರ್ಯದಲ್ಲಿ ಈ ಯೋಜನೆಗೆ ನೆರವಾದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಹಿಂದಿನ ನಿರ್ದೇಶಕರುಗಳು ಹಾಗೂ ಈಗಿನ ನಿರ್ದೇಶಕರಾದ ಶ್ರೀ ವೈ. ಕೆ. ಮುದ್ದುಕೃಷ್ಣ, ಜಂಟಿ ನಿರ್ದೇಶಕರಾದ ಶ್ರೀ ಕಾ. ತ. ಚಿಕ್ಕಣ್ಣ, ಸಹಾಯಕ ನಿರ್ದೇಶಕರಾದ ಶ್ರೀಮತಿ ವೈ.ಎಸ್. ವಿಜಯಲಕ್ಷ್ಮಿ ಮತ್ತು ಡಾ. ಮಂಜುಳಾ ಅವರಿಗೆ ನಮ್ಮ ವಂದನೆಗಳು ಸಲ್ಲುತ್ತವೆ. ಈ ಕಾರ್ಯದಲ್ಲಿ ನೆರವಾದ ಎಂ. ಎಸ್. ಐ. ಎಲ್. ಸಂಸ್ಥೆಯ ಅಧಿಕಾರಿ ಹಾಗೂ ಸಿಬ್ಬಂದಿವರ್ಗಕ್ಕೆ, ವಿಶೇಷವಾಗಿ ಶ್ರೀ ಎಂ. ರವಿಶಂಕರ್, ವಿಶೇಷಾಧಿಕಾರಿ, ಅವರಿಗೆ ನಮ್ಮ ವಂದನೆಗಳು ಸಲ್ಲುತ್ತವೆ.

ಇದು ಒಂದು ದೊಡ್ಡ ಯೋಜನೆ. ಇದರ ಸಂಪಾದನೆಯ ಸಮಸ್ಯೆಗಳು ದೊಡ್ಡವು. ಪಾಠಾಂತರ, ರೂಪಾಂತರ, ಪ್ರಕ್ಷಿಪ್ತತೆ ಇತ್ಯಾದಿಗಳ ಗೊಂದಲಕ್ಕೆ ಗುರಿಯಾಗುತ್ತ ಬಂದ ವ್ಯಾಪಕ ಪ್ರಮಾಣದ ಈ ದಾಸಸಾಹಿತ್ಯವನ್ನು ಒಂದೆಡೆ ಸಂಗ್ರಹಿಸುವುದು, ಪುನರುಕ್ತಿಗಳನ್ನು ಗುರುತಿಸುವುದು, ಅಂಕಿತ ಪಲ್ಲಟಗಳನ್ನು ಸರಿಪಡಿಸುವುದು, ಪ್ರಕ್ಷಿಪ್ತಗಳನ್ನು ದೂರೀಕರಿಸುವುದು, ಕೊನೆಯದಾಗಿ ಕೀರ್ತನೆಗಳನ್ನು ಶುದ್ಧೀಕರಿಸುವುದು ಎಂಥವರನ್ನೂ ಧೈರ್ಯಗೆಡಿಸುವ ಕೆಲಸ. ಹೀಗಿದ್ದೂ ದಾಸಸಾಹಿತ್ಯದ ಮೇಲಿನ ಗೌರವ ಪ್ರೀತಿಗಳು ನಮ್ಮಿಂದ ಈ ಕೆಲಸ ಮಾಡಿಸಿವೆ. ನಮ್ಮ ಶಕ್ತಿಗೆ ಮೀರಿ ಉಳಿದಿರಬಹುದಾದ ದೋಷಗಳನ್ನು ಮನ್ನಿಸಬೇಕೆಂದು ಕೋರುತ್ತೇವೆ. ಈ ಮೂವತ್ತೈದು ಸಂಪುಟಗಳನ್ನು ಸಹೃದಯ ಲೋಕಕ್ಕೆ ಅರ್ಪಿಸುತ್ತಿದ್ದೇವೆ. ಸಮಗ್ರ ದಾಸಸಾಹಿತ್ಯವು ಸುಲಭ ಬೆಲೆಯಲ್ಲಿ ಕನ್ನಡಿಗರ ಮನೆ–ಮನಗಳಲ್ಲಿ ಬೆಳಗಲೆಂದು ಹಾರೈಸುತ್ತೇವೆ.

ಸಂಪಾದಕ ಮಂಡಳಿ

ಪರಿವಿಡಿ

ವಿಷಯ		ಪುಟ
೧.	ಮುನ್ನುಡಿ	5
೨.	ಎರಡು ಮಾತು	7
೩.	ಯೋಜನೆಯನ್ನು ಕುರಿತು	9
೪.	ಪ್ರಕಾಶಕರ ಮಾತು	11
೫.	ಸಂಪಾದಕ ಮಂಡಳಿಯ ನುಡಿ	13
೬.	ಪ್ರಸ್ತಾವನೆ	23
೭.	ಉಗಾಭೋಗಗಳ – ಸುಳಾದಿಗಳ ಕ್ರಮಸೂಚಿ	31
೮.	ಪುರಂದರದಾಸರ ಉಗಾಭೋಗಗಳು ಮತ್ತು ಸುಳಾದಿಗಳು	೩–೨೩೮
೯.	ಅನುಬಂಧಗಳು	೨೩೯–೨೯೧
	೧. ಕಠಿಣಶಬ್ದಗಳ ಅರ್ಥ	*೨೪೧–೨೬೦*
	೨. ಲಘುಟಿಪ್ಪಣಿಗಳು ಮತ್ತು ಪೂರ್ವ ಕಥೆಗಳು	*೨೬೧–೨೭೩*
	೩. ಉಗಾಭೋಗಗಳ ಅಕಾರಾದಿ ಸೂಚಿ	*೨೭೪–೨೮೬*
	೪. ಸುಳಾದಿಗಳ ಅಕಾರಾದಿ ಸೂಚಿ	*೨೮೭–೨೯೧*
	೫. ಸಹಾಯಕ ಸಾಹಿತ್ಯ	*೨೯೨–೨೯೬*

ದೇವತಾಸ್ತುತಿ

೧

ಉಗಾಭೋಗ

ಎಲ್ಲಿ ಹರಿಕಥಾ ಪ್ರಸಂಗವೊ
ಅಲ್ಲಿ ಗಂಗಾ–ಯಮುನೆ–ಗೋದಾ–ಸರಸ್ವತಿ ಸಿಂಧು
ಎಲ್ಲಿ ತೀರ್ಥಗಳು ಬಂದು ಎಣೆಯಾಗಿ ನಿಲ್ಲುವುವು
ವಲ್ಲಭ ಶ್ರೀ ಪುರಂದರ ವಿಠಲ ಮೆಚ್ಚುವನು.

೨

ಉಗಾಭೋಗ

ಎಲ್ಲಿ ಹರಿಕಥೆಯ ಪ್ರಸಂಗವೊ
ಅಲ್ಲಿ ಗಂಗೆ ಯಮುನೆ ಗೋದಾವರಿ ಸಿಂಧು
ಎಲ್ಲ ತೀರ್ಥವು ಬಂದು ಎಣೆಯಾಗಿ ನಿಂದಿರಲು
ವಲ್ಲಭ ಪುರಂದರ ವಿಠಲ ಒಪ್ಪಿದನು

೩

ಉಗಾಭೋಗ

ಜಯ ಜಯಾ ಹರಿಯೆಂಬುದೆ ಸುದಿನವು
ಜಯ ಹರಿಯೆಂಬುದೆ ತಾರಾ ಬಲವು
ಜಯ ಹರಿಯೆಂಬುದೆ ಚಂದರ ಬಲವು
ಜಯ ಹರೆಯೆಂಬುದೆ ವಿದ್ಯಾಬಲವು
ಜಯ ಹರಿಯೆಂಬುದೆ ದೈವ ಬಲವು
ಜಯ ಹರಿ ಪುರಂದರ ವಿಠಲನ ಬಲವಯ್ಯ ಸುಜನರಿಗೆ

ಪ್ರಸ್ತಾವನೆ

ವಿಜಯನಗರ ಕಾಲದ ಕನ್ನಡದ ನೆಲವು ಅತ್ಯಂತ ಹೆಚ್ಚಿನ ಮಟ್ಟದಲ್ಲಿ ಸಾಂಸ್ಕೃತಿಕವಾಗಿ ಘನತೆಯನ್ನು ಪಡೆಯಿತು. ಶ್ರೀ ಕೃಷ್ಣದೇವರಾಯನು ಕರ್ನಾಟಕ ರಮಾರಮಣನೆಂಬ ಖ್ಯಾತಿಯನ್ನು ಪಡೆದನು. ಇದಕ್ಕೆ ಕಾರಣ ಆತನು ತನ್ನ ಬದುಕಿನ ಜೊತೆಗೆ ತನ್ನ ಜನತೆಯ ಬದುಕನ್ನು ಆಧ್ಯಾತ್ಮದ ನೆಲಗಟ್ಟಿನ ಮೇಲೆ ಸಮೃದ್ಧಗೊಳಿಸಿದನು. ಇದೇ ಕಾಲದಲ್ಲಿ ಆತನ ಆಡಳಿತದಲ್ಲಿ ನೆಮ್ಮದಿಯನ್ನುಂಟು ಮಾಡಲು ವ್ಯಾಸರಾಯರು ಮತ್ತು ಅವರ ಶಿಷ್ಯ ಪರಂಪರೆಯಲ್ಲಿ ಪುರಂದರ ದಾಸರು, ಕನಕದಾಸರು ಮೊದಲಾದವರು ಜನಹಿತ ಪರವಾಗಿ ಆ ಅರಸನಿಗೆ ಮಾರ್ಗದರ್ಶನ ಮಾಡುತ್ತಿದ್ದರು. ಹೀಗೆ ಜನಹಿತವನ್ನು ಕಾಪಾಡಿ ಜನತೆಯನ್ನು ಸನ್ಮಾರ್ಗಕ್ಕೆ ಹಚ್ಚುವಲ್ಲಿ ಇವರ ಕೊಡುಗೆ ವಿಶಿಷ್ಟವಾಗಿದೆ. ವಿಶೇಷತಃ ಹರಿದಾಸ ಸಾಹಿತ್ಯದ ಬೆಳವಣಿಗೆಗೆ ಇವರು ನೀಡಿದ ನಡೆ ಪರಂಪರೆಯನ್ನು ಅರ್ಥಪೂರ್ಣವಾಗಿ ಬೆಳಗಿಸಲು ಸಾಧ್ಯವಾಯಿತೆಂದರೆ ಅತಿಶಯೋಕ್ತಿಯೇನಲ್ಲ.

ಪುರಂದರ ದಾಸರು ಕ್ರಿ.ಶ. ೧೪೮೪-೧೫೬೪ರ ಅವಧಿಯಲ್ಲಿ ಬಾಳಿ ಬದುಕಿದರು. ಬದುಕಿನ ಎಲ್ಲ ಮಗ್ಗಲುಗಳನ್ನು ನೋಡಿದವರು. ಪ್ರಪಂಚವನ್ನು ವಿಸ್ತಾರವಾಗಿ ಕಂಡವರು. ಆಗರ್ಭ ಶ್ರೀಮಂತರಾಗಿದ್ದವರು, ಹೆಂಡತಿಯ ಪ್ರೇರಣೆಯಲ್ಲಿ ಜೀವನದ ನೈಜ ಸ್ವರೂಪವನ್ನು ಅರ್ಥಮಾಡಿಕೊಂಡು ಸಂಪತ್ತನ್ನೆಲ್ಲ ದಾನ ಮಾಡಿ, ಹರಿದಾಸರಾಗಿ ಜೀವನದ ಗುಟ್ಟನ್ನು ಬಿಚ್ಚಿ, ಸದ್ಗತಿ ಪಡೆಯಲು ಸಾಧನಾ ಕ್ರಮವನ್ನು ಬೀದಿ ಬೀದಿ ಕೇರಿ ಕೇರಿ, ಮನೆ ಗುಡಿಸಲುಗಳೆನ್ನದೆ ಎಲ್ಲೆಡೆಯೂ ಅಲೆದಾಡಿ, ಹಾಡಿ ಹಾಡಿ ತಿಳಿ ಹೇಳಿ ಕುಣಿಕುಣಿದಾಡಿದವರು. ಇವರೊಂದು ಲೋಕ ಸಂಚಾರೀ ವಿಶ್ವ ವಿದ್ಯಾನಿಲಯವಾಗಿ ಸಾಮಾನ್ಯ ಬದುಕಿನಲ್ಲಿ ವಿಶ್ವಾಸವನ್ನು

ಮೂಡಿಸಿ ಲೋಗಿಗರನ್ನು ವೀರ ಯೋಗಿಗಳನ್ನಾಗಿ ಮಾಡಿದವರು. ಈಸಬೇಕು ಇದ್ದು ಜೈಸಬೇಕು: ಮಾನವ ಜನ್ಮ ದೊಡ್ಡದು, ಇದನ್ನು ಹಾನಿ ಮಾಡಲಿ ಬೇಡಿ ಹುಚ್ಚಪ್ಪಗಳಿರಾ, ಎಂಬಂತಹ ಜೀವನ ತತ್ತ್ವಜ್ಞಾನವನ್ನು ನೀಡಿ, ಪೌರುಷ ವಾದವನ್ನು ಹಾಸುಹೊಕ್ಕಾಗಿಸಿ ಎಲ್ಲರ ಮನಮನಗಳಲ್ಲಿ ಬಿತ್ತಿದವರು, ಬೆಳೆದವರು. ಅದೆಲ್ಲ ಮುಂದಿನ ಪೀಳಿಗೆಗೆ ಸಾಹಿತ್ಯವಾಗಿ ಬದುಕನ್ನೆಲ್ಲ ನಡೆನುಡಿ ತೀರ್ಥವಾಗಿಸುವ ಬತ್ತದ ಸೆಲೆಯ ಭಂಢಾರವಾಯಿತು. ಈ ಭಂಢಾರವೆಲ್ಲ ಕನ್ನಡದ ಪುರಂದರೋಪನಿಷತ್ತಾಗಿ "ದಾಸರೆಂದರೆ ಪುರಂದರ ದಾಸರಯ್ಯ" ಎಂಬಂತಹ ಖ್ಯಾತಿಗೆ ಕಾರಣವೂ ಆಯಿತು. ಈ ಭಂಡಾರವು ಕಲ್ಲು ಸಕ್ಕರೆಯ ಖಣಿಯಾಗಿ ಇಷ್ಟು ಜನಪ್ರಿಯವಾಗಲು, ಸಹಿತವಾಗುವಂತೆ ಸಂಗೀತದ ಹಾಸುಹೊಕ್ಕನ್ನು ಅದು ಹೊಂದಿರುವುದೇ ಮುಖ್ಯ ಅಂಶವೆಂದು ಪರಿಗಣಿಸಲಾಯಿತು, ಏಕೆಂದರೆ ಈ ಸತ್ತ್ವವನ್ನು ಸಾಹಿತ್ಯಕ್ಕೆ ತಂದಿರುವುದರಿಂದಲೇ "ಕರ್ನಾಟಕ ಸಂಗೀತ ಪಿತಾಮಹ" ಎಂಬ ಬಿರುದೂ ಈ ದಾಸರಿಗೆ ಅರ್ಥಪೂರ್ಣವಾಗುತ್ತದೆ.

ಪುರಂದರೋಪನಿಷತ್ತಿನ ಕಟ್ಟನ್ನು ಬಿಚ್ಚಿದಾಗ ಪುರಂದರ ದಾಸರು "ಪುರಂದರ ವಿಟ್ಠಲ" ಎಂಬ ಅಂಕಿತದಿಂದ ಹಾಡಿದ ಕೀರ್ತನೆಗಳು, ಪದ ಸುಳಾದಿಗಳು, ಉಗಾಭೋಗಗಳು ಇತ್ಯಾದಿ ಕೃತಿಗಳು ಸಾಕಷ್ಟು ದೊರೆಯುತ್ತವೆ. ಆದರೆ ಇವುಗಳ ಲೆಕ್ಕ ೪,೭೫,೦೦೦ ಕ್ಕೆ ಮುಟ್ಟಿದೆ ಎಂಬುದು ನಂಬಿಕೆಯಾಗಿ ಮಾತ್ರ ಉಳಿದಿದೆ. ಇವುಗಳಗಲ್ಲಿ ಸುಮಾರು ೬೦,೦೦೦ ಸುಳಾದಿಗಳನ್ನೂ, ೭೫,೦೦೦ ಉಗಭೋಗಗಳನ್ನು ಅವರು ರಚನೆ ಮಾಡಿರಬಹುದೆಂದು ಪ್ರಚಾರದಲ್ಲಿರುವ ಮಾತೂ ಹೌದು. ಈ ಲೆಕ್ಕಾಚಾರವನ್ನು ಮಾಡುವಾಗ ಉಗಾಭೋಗಗಳು ಸುಳಾದಿಗಳ ಖಿಲ ಭಾಗಗಳೆಂಬುದನ್ನು ಅರ್ಥಪೂರ್ಣವಾಗಿ ಚಿಂತನೆ ಮಾಡಲು ಸ್ವೀಕರಿಸಬೇಕಾಗುತ್ತದೆ. ಏನೆಲ್ಲ ತಿಪ್ಪಲು ಪಟ್ಟರೂ ಪುರಂದರ ದಾಸರ ಉಗಾಭೋಗ ಸುಳಾದಿ ಪ್ರಕಾರಗಳಲ್ಲಿಯ ಕೃತಿಗಳ ಸಂಖ್ಯೆ ೩೨೮ ಎಂದಾಗ ದಟ್ಟವಾದ ನಂಬಿಕೆಯಲ್ಲಿ ನಿರಾಸೆಯನ್ನು ತುಂಬಿದಂತಾಗುತ್ತದೆ. ಆದರೆ ಇದು ಸಧ್ಯದ ಇಂದಿನ ವಸ್ತುಸ್ಥಿತಿ. ಆದ್ದರಿಂದ ಈ ನಿಟ್ಟಿನಲ್ಲಿ ಇನ್ನಷ್ಟು ಗಹನವಾಗಿ ಕ್ಷೇತ್ರ ಕಾರ್ಯವು

ನಡೆಯ ಬೇಕಿದೆ. ಈ ಸಂದರ್ಭದಲ್ಲಿ ವೈಜ್ಞಾನಿಕ ಹಾಗು ವಿಮರ್ಶಾತ್ಮಕ ದೃಷ್ಟಿಯು ಕ್ಷೇತ್ರ ಕಾರ್ಯ ಮಾಡುವ ಸಂಶೋಧಕರಿಗೆ ಅವಶ್ಯವಿದೆ. ಏಕೆಂದರೆ ಅವರ ಪರಿಶ್ರಮದ ಫಲವಾಗಿ ಜನತೆಯ ನಾಲಗೆಯ ಮೇಲಿರುವ ಹಾಗು ಅಲ್ಲಲ್ಲಿ ಹುದುಗಿದ್ದ ಸಾಹಿತ್ಯ ಸಂಪತ್ತು ಬಯಲಿಗೆ ಬರಲು ಸಾಧ್ಯ. ಅದರಿಂದ ಕನ್ನಡ ಸಾಹಿತ್ಯದ ಶ್ರೀಮಂತಿಕೆಯು ಅರ್ಥಾತ್ ಮೌಲ್ಯವು ವಿಶ್ವದಲ್ಲಿ ಗಣನೀಯವಾಗಿ ಹೆಚ್ಚಳವನ್ನು ಪಡೆಯುವುದರಲ್ಲಿ ಸಂಶಯವಿಲ್ಲ.

ಹೀಗೆ ಈಗ ಉಪಲಬ್ಧವಿರುವ ಹರಿದಾಸ ಸಾಹಿತ್ಯ ರಾಶಿಯಲ್ಲಿ ಪುರಂದರ ದಾಸರು ಉಗಾಭೋಗ, ಸುಳಾದಿ, ಕೀರ್ತನೆಗಳೆಂಬ ಹರಿದಾಸ ಸಾಹಿತ್ಯದ ಪ್ರಕಾರಗಳಲ್ಲಿ ಸಾಕಷ್ಟು ಕೊಡುಗೆಗಳನ್ನು ನೀಡಿದ್ದಾರೆಂಬುದಂತೂ ನಿರ್ವಿವಾದದ ಮಾತು. ಇವುಗಳಲ್ಲದೆ ಅವರು ಪುಣ್ಯ ಕ್ಷೇತ್ರಗಳ ಮಹಿಮೆಗಳನ್ನೂ, ಚರಿತ್ರೆಗಳುಳ್ಳ ಹಾಡುಗಳಗನ್ನೂ, ವೃತ್ತನಾಮಗಳನ್ನೂ ರಚನೆ ಮಾಡಿರುವ ಅಂಶವು ಗಮನಾರ್ಹವಾದುದು ಕೂಡ. ಅವರು ಈ ಪ್ರಕಾರಗಳ ಮುಖಾಂತರ ಭಕ್ತ_ಭಗವಂತರ ಸಂಬಂಧವನ್ನು ಸ್ಪಷ್ಟವಾಗಿ ತೋರಿದರು: ಲೋಕದ ಓರೆಕೋರೆಗಳನ್ನು ತೀಡಿ ಸುಂದರ ಸಮಾಜದ ನಿರ್ಮಾಣದಲ್ಲಿ ಸಾಮರ್ಥ್ಯ ತೋರಿದರು: ಜನಸಾಮಾನ್ಯರ ಬದುಕಿನ ನಿತ್ಯದ ಘಟನೆಗಳಿಗೆ ಪಾರಮಾರ್ಥಿಕ ತಿರುವನ್ನು ನೀಡಿ ಅವರ ಬದುಕಿನಲ್ಲಿ ನೆಮ್ಮದಿ ತರಲು ಪ್ರಯತ್ನಿಸಿದರು: ಮಣ್ಣಿನಿಂದ ಅರಳಿಬಂದ ದೇಸೀಯ ಸೊಗಡಿನ ಜನವಾಣಿಯನ್ನೇ ತಮ್ಮ ರಚನೆಗಳಿಗೆ ತಾಯಿ ಬೇರಾಗಿಸಿ ಬದುಕಿನ ತತ್ವಜ್ಞಾನದಲ್ಲಿರುವ ಜಟಿಲ ಪ್ರಮೇಯಗಳನ್ನು ಸರಳವಾಗಿ ತಿಳಿಸಲು ಹೋರಾಡಿದರು. ಹೀಗೆ ಪುರಂದರ ದಾಸರ ಸಾಧನೆಯು ಬದುಕಿನ ಸಾಹಿತ್ಯದಲ್ಲಿ ಅಚ್ಚಳಿಯದೇ ನಿಲ್ಲುವಂತಹದು.

ಇಂಥ ಪುರಂದರ ದಾಸರ ಸಾಹಿತ್ಯ ರಚನೆಗಳಲ್ಲಿ ಬಹು ಪಾಲು ಕೀರ್ತನೆಯ ಪ್ರಕಾರದ ಕೃತಿಗಳಿಗೇ ಮೀಸಲು. ಈ ಪ್ರಕಾರವನ್ನು ಹರಿದಾಸ ಸಾಹಿತ್ಯದಲ್ಲಿ ಶ್ರೀಪಾದರಾಯರ ಕಾಲದಿಂದ ಭಕ್ತಿ ಪ್ರಚಾರಕ್ಕೆ ಉತ್ತಮವಾದ ಪ್ರಭಾವೀ ಮಾರ್ಗವೆಂದು ಗಮನಿಸಲಾಯಿತು. ಅಂತೆಯೇ ಅವರು ಪೂಜಾ ಕಾಲದಲ್ಲಿ

ಕನ್ನಡದಲ್ಲಿ ರಚನೆಯಾದ ಕೀರ್ತನೆಗಳನ್ನು ಹಾಡುವ ಪರಂಪರೆಯನ್ನು ಆರಂಭಿಸಿದರು. ಅದನ್ನು ಪುರಂದರ ದಾಸರು ತಾರಕಕ್ಕೆ ಮುಟ್ಟಿಸಿದರು. ಹೀಗಾಗಿ ಕೀರ್ತನ ಪ್ರಕಾರಕ್ಕೆ, ಅವರು ರಚನೆ ಮಾಡಿರುವರೆಂಬ ೪,೭೫,೦೦೦ ಕೃತಿಗಳಲ್ಲಿ ಬಹುಪಾಲು ಸಂದಿರಲೇಬೇಕು. ಅದನ್ನು ಗಮನದಲ್ಲಿಟ್ಟುಕೊಂಡು ಈಗ ಉಪಲಬ್ಧವಿರುವ ಕೀರ್ತನೆಗಳ ಅಂತಃ ಸತ್ವವನ್ನು ಪರಿಶೀಲಿಸಿದಾಗಲೂ ಈ ನಿಟ್ಟಿನಲ್ಲಿ ಇವರ ಕಾಣ್ಕೆಯು ಅದ್ಭುತವೆಂಬುದನ್ನು ಅಲ್ಲಗಳೆಯುವಂತಿಲ್ಲ. ಇದು ಸತ್ಯದ ಮಾತು. ಈ ಕೀರ್ತನೆಗಳನ್ನೆಲ್ಲ ಅಭ್ಯಾಸ ಮಾಡಿದಾಗ, ನವವಿಧ ಭಕ್ತಿಯನ್ನೊಳಗೊಂಡು ಪಂಚವಿಧ ಭಾವಗಳನ್ನು ಪ್ರತಿಪಾದಿಸುವ ಆಧ್ಯಾತ್ಮಿಕ ದೃಷ್ಟಿಯನ್ನುಳ್ಳ ಕೀರ್ತನೆಗಳು ಒಂದೆಡೆಯಾದರೆ, ಜನ ಸಾಮಾನ್ಯರ ಲೋಪ ದೋಷಗಳು ಆಚಾರ ವಿಚಾರಗಳು ಕುಂದುಕೊರತೆಗಳನ್ನು ನಿರ್ದಾಕ್ಷಿಣ್ಯವಾಗಿ ಎತ್ತಿ ತೋರಿಸುವ ನೀತಿ ಬೋಧಕ ಕೀರ್ತನೆಗಳು ಮತ್ತೊಂದೆಡೆ ಎಂದು ಕೀರ್ತನೆಗಳ ಬಗ್ಗೆ ಡಾ: ಟಿ.ಎನ್. ನಾಗರತ್ನ ಅವರು ಮಾಡಿರುವ ವಿಶ್ಲೇಷಣೆಯು ಪುರಂದರದಾಸರ ಕೀರ್ತನೆಗಳಿಗೂ ಅನ್ವಯಿಸುತ್ತದೆ. ಇದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಈ ಕೀರ್ತನೆಗಳಲ್ಲಿ ಬರುವ ಮಾತುಗಳು ಶ್ರುತಿಸುಭಗವಾಗಿದ್ದು, ಅವುಗಳಲ್ಲಿರುವ ಗೇಯ ಗುಣದಿಂದಾಗಿ ಹೃದಯ ಸಂಸ್ಕಾರಿಯಾಗಿದ್ದು, ಆಧ್ಯಾತ್ಮಿಕ ದೃಷ್ಟಿಯನ್ನು ಅರಳಿಸುತ್ತವೆ. ಹೀಗಾಗಿ ಪುರಂದರದಾಸರ ಕೀರ್ತನೆಗಳು ಮನೋರಂಜನೆಯ ಜೊತೆಗೆ ಜನಹಿತ ಸಾಧನೆಯತ್ತ ತುಡಿಯುತ್ತವೆ. ಇದನ್ನೆಲ್ಲ ಗಮನಿಸಿ ಸಮಗ್ರ ದಾಸವಾಙ್ಮಯ ಪ್ರಕಟನ ಯೋಜನೆಯಲ್ಲಿ ಪುರಂದರದಾಸರ ಕೀರ್ತನೆಗಳ ಪ್ರಕಾರದ ಕೃತಿಗಳಿಗಾಗಿಯೇ ಒಂದು ಸಂಪುಟವೇ ಮೀಸಲಾಗಿದೆ. ಆದ್ದರಿಂದ ಆ ಬಗ್ಗೆ ಹೆಚ್ಚಿಗೆ ಇಲ್ಲಿ ಚರ್ಚೆ ಮಾಡಲು ಹೋಗಿಲ್ಲ. ಆದರೂ ಈ ಸಂದರ್ಭದಲ್ಲಿ ಕೀರ್ತನ ಪ್ರಕಾರ ಸಾಹಿತ್ಯಕ್ಕೆ ಪುರಂದರ ದಾಸರಷ್ಟೇ ಅಲ್ಲ, ಹರಿದಾಸ ಪರಂಪರೆಯದಾಸರೆಲ್ಲರೂ ಕೀರ್ತನ ಪ್ರಕಾರದ ಕ್ಷೇತ್ರದಲ್ಲಿ ಸಾಕಷ್ಟು ಕೃಷಿ ಮಾಡಿದವರು. ಮತ್ತು ಆ ಪ್ರಕಾರವನ್ನು ವಿಸ್ತಾರಗೊಳಿಸಿದವರು. ಸಮೃದ್ಧಿ-ಗೊಳಿಸಿದವರು. ಆದರೆ ಹರದಾಸ ಸಾಹಿತ್ಯದ ಇನ್ನೊಂದು ಪ್ರಮುಖ ಪ್ರಕಾರವಾದ

ಉಗಾಭೋಗಕ್ಕೆ ಆ ಪ್ರಮಾಣದಲ್ಲಿ ಹರಿದಾಸರಿಂದ ರಚನೆಗಳು ಬರಲಿಲ್ಲವೆಂಬುದನ್ನು ಸಧ್ಯದಲ್ಲಿ ಒಪ್ಪಿಕೊಳ್ಳಬೇಕಾಗುತ್ತದೆ.

ಉಗಾಭೋಗವು ಹರಿದಾಸ ಸಾಹಿತ್ಯದಲ್ಲಿ ತೀರ ಚಿಕ್ಕದಾದ ಚೊಕ್ಕವಾದ ಸಾರವತ್ತಾದ ಪ್ರಕಾರ. ಇದರ ಲಕ್ಷಣ ಹಾಗು ನಿಷ್ಪತ್ತಿಯ ಬಗ್ಗೆ, ಬಗೆ ಬಗೆಯ ಅಭಿಪ್ರಾಯಗಳಿವೆ.

ಬೇಲೂರು ಕೇಶವದಾಸರ ಪ್ರಕಾರ, "ಉಗಾಭೋಗಗಳಲ್ಲಿ ಪಂಚಧಾತುಕ ಉಗಾಭೋಗಗಳು ಕೆಲವು ಮಾತ್ರ ಇದ್ದಂತೆ ಇವೆ. ಹೆಚ್ಚು ಸಂಖ್ಯೆಯವು ಕೇವಲ ದ್ವಿಧಾತುಕಗಳಾಗಿವೆ. ಹಾಡುವ ಸಂಪ್ರದಾಯವು ಮರೆತಿರುವುದರಿಂದ ಅವುಗಳನ್ನು ಅಟ್ಟ ತಾಳಗಳ ಗತಿಯಿಂದಲಾಗಲಿ, ಏಕ ತಾಳ ಗತಿಯಿಂದಾಲಾಗಲಿ ಯಾವ ರಾಗದ ಕಳೆಯಲ್ಲಾದರೂ ಹಾಡಬಹುದು... ರಾಗದ ಜೀವ ಸ್ವರಗಳನ್ನರಿತು ಉದ್ಗಾಹ ಆಭೋಗ ಕ್ರಮದಂತೆ ವಿನ್ಯಾಸ ಮಾಡಬಹುದು" ಎಂಬ ಅಬಿಪ್ರಾಯವನ್ನು ಸಂಗ್ರಹಿಸಬಹುದು.

"ಕರ್ನಾಟಕ ಸಂಗೀತವೂ ದಾಸ ಕೂಟವೂ ಅರ್ಥಾತ್ ಭಾರತೀಯ ಆರ್ಯ ಸಂಗೀತದ ಇತಿಹಾಸವು" ಎಂಬ ಪುಸ್ತಕದಲ್ಲಿ ಉಗಾಭೋಗದ ರಚನೆಯನ್ನು ಕುರಿತು, "ನಿಬದ್ಧವಾದ ಉಗಾಭೋಗದಲ್ಲಿದ್ದ ಐದು ಧಾತುಗಳಲ್ಲಿ ಉದ್ಗಾಹವೆಂಬುದು ಮೊದಲನೆಯ ಧಾತು, ಎರಡನೆಯ ಧಾತು ಮೇಲಾಪಕವು; ಮೂರನೆಯ ಧಾತು ಧ್ರುವ, ನಾಲ್ಕನೆಯ ಧಾತು ಅಂತರಾ, ಐದನೆಯ ಧಾತು ಆಭೋಗ. ಈ ಐದು ಧಾತುಗಳಿಂದ, ಸಹಿತವಾಗಿ ರಚಿಸಲ್ಪಟ್ಟ ಪ್ರಬಂಧಕ್ಕೆ ಅನ್ವರ್ಥವಾಗಿ, 'ಉದ್ಗಾಹಾ ಭೋಗ' ಎಂಬ ರೂಪವು ಸಂಸ್ಕೃತದಲ್ಲಾಗುವುದು. ಅದಕ್ಕೆ ತಿಳಿಗನ್ನಡ ರೂಪ ಕೊಡುವುದಕ್ಕಾಗಿ ದ, ರ, ಹ ಕಾರಗಳ ಲೋಪದಿಂದ, 'ಉಗಾಭೋಗ' ಎಂಬ ಪಾರಿಭಾಷಿಕ ರೂಪವನ್ನು ಕಲ್ಪಿಸಿ, ಮೇಲಿನ ಐದು ಧಾತುಗಳನ್ನು ಲಕ್ಷಣಾನು-ಸಾರವಾಗಿ ಹಾಡಲರ್ಹವಾದ ಗೀತಗಳು ಅಥವಾ ಸಾಹಿತ್ಯವು ಎಂಬುದನ್ನು ನಿರ್ಣಯಿಸಿ, ಅದರಂತೆ ಕನ್ನಡದಲ್ಲಿ ಕೃತಿಗಳನ್ನು ಹರಿದಾಸ ಕೂಟದವರು

ಮಾಡಿದರು" ಎಂಬ ವಿವರಗಳು ದೊರೆಯುತ್ತವೆ. ಈ ಗ್ರಂಥವನ್ನು ಸಂಗೀತ ಶಾಸ್ತ್ರಜ್ಞ ಹುಲಗೂರು ಕೃಷ್ಣಾಚಾರ್ಯರು ರಚನೆ ಮಾಡಿದ್ದಾರೆ.

ಈ ಉಗಾಭೋಗಗಳ ಸ್ವರೂಪದ ಬಗ್ಗೆ ಮತ್ತೊಬ್ಬ ಸಂಗೀತ ತಜ್ಞರಾದ ಡಾ: ರಾ. ಸತ್ಯನಾರಾಯಣ ಅವರು, "ಈ ಪ್ರಬಂಧದ ಸ್ವರೂಪವು (composition form) ಕನಿಷ್ಠ ಪಕ್ಷ ಐದು ಶತಮಾನಗಳಷ್ಟು ಹಿಂದಿನ ಇತಿಹಾಸವನ್ನು ಉಳ್ಳುದಾದರೂ ಯಾವ ಸಂಗೀತ ಶಾಸ್ತ್ರಗಳಲ್ಲಿಯೂ ಉಕ್ತವಾಗಿಲ್ಲ.... ಉಗಾಭೋಗಗಳು ಸಾಲಗ ಸೂಡ ಪ್ರಬಂಧಗಳಷ್ಟೇ ಪ್ರಾಚೀನವಾದುವು.. ಉಗಾಭೋಗವೆನ್ನುವುದು ಸಾಧಾರಣವಾಗಿ ಧಾರ್ಮಿಕ ವಿಷಯವನ್ನು ಕುರಿತ ಸಾಹಿತ್ಯದ ಒಂದು ರಚನೆಯೆಂದೂ, ಸಂಗೀತಕ್ಕಿಂತಲೂ ಹೆಚ್ಚಾಗಿ, ಮುಖ್ಯವಾಗಿ ಪೂಜಾ ವಿಷಯವನ್ನೇ ಪ್ರಧಾನವಾಗಿ ಉಳ್ಳದೂ, ಹೆಚ್ಚು ಕಡಮೆ ಇದ್ದಕ್ಕಿದ್ದಂತೆಯೇ ಸಂಗೀತದ ಹಿನ್ನೆಲೆಯಲ್ಲಿ ವ್ಯಕ್ತವಾಗತಕ್ಕದೂ ಆದುದೆಂದು ಸಂಗ್ರಹವಾಗಿ ಹೇಳಬಹುದು. ಅದು ಸುಳಾದಿಗಳ ಒಂದು ಅಂಗವಾಗಿ ಜನ್ಮ ತಾಳಿತು. ಆನಂತರ ಬಹುಶಃ ಕ್ರಿ.ಶ. ೧೫ ಮತ್ತು ೧೬ನೆಯ ಶತಮಾನಗಳಲ್ಲಿ, ಸುಳಾದಿಗಳು ಸ್ವತಃ ಪರಿಪೂರ್ಣಾವಸ್ಥೆಯನ್ನು ಪಡೆದು, ಹಾಗೂ ರೂಪದಲ್ಲಿ ಸ್ಥಿರವಾದ ಮೇಲೆ ಸ್ವತಂತ್ರವಾಗಿ ಪ್ರತ್ಯೇಕವಾಗಿ ಹೊರ ಹೊಮ್ಮಿತು." ಎಂದು ಖಚಿತವಾದ ತಮ್ಮ ಅಭಿಪ್ರಾಯವನ್ನು ನೀಡಿದ್ದಾರೆ. ಇವರಲ್ಲದೆ, ಆರ್.ಎಸ್. ಪಂಚಮುಖಿ, ಭೀಮರಾವ್ ಚಿಟಗುಪ್ಪ, ಎಂ. ರಾಮರಾವ್, ಜಿ. ವರದರಾಜರಾವ್, ಟಿ.ಎನ್. ನಾಗರತ್ನ ಮೊದಲಾದವರೂ ಬೇರೆ ಬೇರೆ ಸಂದರ್ಭದಲ್ಲಿ ಈ ಬಗ್ಗೆ ತಮ್ಮ ತಮ್ಮ ವಿಚಾರಗಳನ್ನು ನೀಡಿ ಉಗಾಭೋಗದ ನಿಷ್ಪತ್ತಿಯ ಬಗ್ಗೆ ವಿವರಿಸಿದ್ದಾರೆ.

ಒಟ್ಟಾರೆ ಹೇಳುವುದಾದರೆ, ಉಗಾಭೋಗವು ಲಘುವಾದ ಬಂಧ. ರಾಗ ಪ್ರಧಾನವಾಗಿ ಸಂಗೀತದ ತಳಗಟ್ಟಿಯ ಮೇಲೆ ರೂಪಿತವಾದ ಪುಟ್ಟ ರಸಗಟ್ಟಿ. ಸಂಸ್ಕೃತ ಶ್ಲೋಕಕ್ಕೆ ಸಂವಾದಿಯಾದ ಪ್ರಕಾರ. ಶರಣರ ವಚನಗಳಂತೆ ಕಂಡರೂ ಸಂಗೀತದ ಕಟ್ಟುಪಾಡುಗಳಿಂದ ಕೇಳುಗರಲ್ಲಿ ಆದರವನ್ನು ಮೂಡಿಸುವ ಸೊಬಗು ಇಲ್ಲಿದೆ. ಇಲ್ಲಿರುವ ಬಿಗಿ ಬಂಧದಿಂದಾಗಿ ಉನ್ನತಮಟ್ಟದ ಆನಂದ ಪ್ರಾಪ್ತಿಗೆ ಅನುವು

ಲಭ್ಯವಾದ ಕೇವಲ ೭೩ ಸುಳಾದಿಗಳನ್ನು ಮಾತ್ರ ಈ ಸಂಪುಟದಲ್ಲಿ ಅಣಿ ಮಾಡಿಕೊಡಲು ಸಾಧ್ಯವಾಯಿತು.

"ಪುರಂದರ ದಾಸರ ಉಗಾಭೋಗಗಳು ಮತ್ತು ಸುಳಾದಿಗಳು" ಎಂಬ ಈ ಸಂಪುಟವನ್ನು ಸಂಪಾದನೆ ಮಾಡುವಾಗ ನಾನು ಸಹಾಯ ಪಡೆದ ಆಕರ ಗ್ರಂಥಗಳ ಯಾದಿಯನ್ನು ಅನುಬಂಧ ೫ ರಲ್ಲಿ ಕೊಟ್ಟಿದ್ದೇನೆ. ಆ ಎಲ್ಲ ಗ್ರಂಥಕರ್ತರನ್ನು, ಸಂಪಾದಕರನ್ನು ಈ ಸಂದರ್ಭದಲ್ಲಿ ನೆನೆದು ಕೃತಜ್ಞತೆಗಳನ್ನು ಸಲ್ಲಿಸುವುದು ನನ್ನ ಕರ್ತವ್ಯವಾಗಿದೆ. ಅವರೆಗೆಲ್ಲ ನಾನು ಚಿರಋಣಿ.

ಇಂತಹ ಅಮೂಲ್ಯವಾದ ಉಗಾಭೋಗ ಸುಳಾದಿಗಳ ಸಾಹಿತ್ಯವನ್ನು ಸಂಗೀತಜ್ಞರು ಲಕ್ಷಣಕ್ಕನುಸಾರವಾಗಿ ಅಭ್ಯಾಸ ಮಾಡಿ, ಅದರ ಪ್ರಯೋಗವನ್ನು ಪುನರುಜ್ಜೀವನಗೊಳಿಸಿದ್ದೇ ಆದರೆ ತುಂಬ ಉಪಕಾರವಾಗುತ್ತದೆ. ೨೦ನೆಯ ಶತಮಾನದ ಸುಮಾರು ೧೯೨೦-೧೯೮೦ರ ಅವಧಿಯಲ್ಲಿ ಬದುಕಿ ಬಾಳಿದ, ಪ್ರಾಣೇಶ ದಾಸರ ವಂಶಜರಾದ, ಚಾಳೀಸ ಕುಪ್ಪೇರಾಯರು ಅಖಂಡ ಕರ್ನಾಟಕದಲ್ಲಿ ತಿರುಗಾಡಿ ಆ ಉದ್ದಕ್ಕೆ ಈ ಉದ್ದಕ್ಕೆ ಉಗಾಭೋಗ ಸುಳಾದಿಗಳನ್ನು ಹಾಡಿದರು. ಹಾಡಿಹಾಡಿ ಆಡಿ ಕುಣಿದರು. ಅವರನ್ನು ಜನಸ್ತೋಮ, "ಸುಳಾದಿಕುಪ್ಪಣ್ಣ" ಎಂದೇ ಗುರುತಿಸಿತು. ಅಂತಹವರನ್ನು ನೆನೆದು ನಾವು ಸ್ಫೂರ್ತಿ ಪಡೆದು ಈ ಗೀತ ಸಂಪ್ರದಾಯವನ್ನು ಪುನರುಜ್ಜೀನಗೊಳಿಸುವುದು ಅತ್ಯಗತ್ಯ.

ಸಂಪುಟ ಸಂಪಾದಕರ ನುಡಿ

ಕರ್ನಾಟಕ ಸರ್ಕಾರವು ಸಮಗ್ರದಾಸಸಾಹಿತ್ಯವನ್ನು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಮುಖಾಂತರ ಸಂಪಾದನೆ ಮಾಡಿಸಿ ಪ್ರಕಟಿಸಲು ಮುಂದಾದದ್ದು ಅಭಿನಂದನೀಯವಾದ ಸಂಗತಿ. ಹರಿಯು, ಮೆಚ್ಚುವ ಮಾತು.

ಇಂತಹ ಮಹತ್ವಪೂರ್ಣಕಾರ್ಯದಲ್ಲಿ, ಪುರಂದರದಾಸರ ಉಗಾಭೋಗಗಳು ಮತ್ತು ಸುಳಾದಿಗಳು ಎಂಬ ಸಂಪುಟಸಂಪಾದನೆಯ ಹೊಣೆಯನ್ನು ಸಂಪಾದಕ ಸಮಿತಿಯು ನನಗೆ ವಹಿಸಿ ಕೊಟ್ಟಿತು. ಇದನ್ನು ನಾನು ಶ್ರದ್ಧಾಪೂರ್ವಕ ಒಪ್ಪಿಕೊಂಡು

ನನ್ನ ಸಾಮರ್ಥ್ಯಕ್ಕನುಸರಿಸಿ, ಸೇವಾಭಾವದಿಂದ ಈ ಕಾರ್ಯವನ್ನು ಮಾಡಿಕೊಟ್ಟಿದ್ದೇನೆ. ಆದರೆ ಇದು ಪೂರ್ಣವಾಗಿದೆಯೆಂಬ ಭಾವನೆಯು ನನ್ನದಾಗಿಲ್ಲ. ಏನೋ ಒಂದಿಷ್ಟು, ಪರಿಶ್ರಮ ಪಟ್ಟಾಗ ಸಿಕ್ಕಷ್ಟು, ಸಾಧ್ಯವಾದಷ್ಟು, ಸಧ್ಯಕಣ್ಣರಿಕೆಯಲ್ಲಿ ಇದ್ದಷ್ಟು ಒಂದು ಕಡೆ ಬಂದಿದೆಯೆಂಬ ಕಿಂಚಿತ್ ಸಮಾಧಾನವು ಮಾತ್ರ ನನ್ನದು. ಈ ಬಗ್ಗೆ ಓದುಗರು ಸ್ವಲ್ಪವಾದರು ಮೆಚ್ಚಿದರೆ ಅದೇ ನಮ್ಮ ಶ್ರಮಕ್ಕೆ ಏನೋ ಒಂದು ಬಗೆಯ ನೆಮ್ಮದಿ. ಅದನ್ನು ಅನುಭವಿಸಿದಾಗ ಸಾಧನೆಯ ಪಥದಲ್ಲಿಯ ಕೆಲವು ಹೆಜ್ಜೆಗಳನ್ನಾದರೂ ಮುಂದೆ ಇಟ್ಟೆವಲ್ಲವೆಂಬ ಅಲ್ಪ ಸಂತುಷ್ಟಿ. ಈ ಸಂಪುಟ ಸಂಪಾದನೆಯ ಕೆಲಸಕ್ಕೆ ನನ್ನನ್ನು ಗುರುತಿಸಿ ನನ್ನಿಂದ ಈ ಕೆಲಸವನ್ನು ಮಾಡಿಸಿದ ಕರ್ನಾಟಕ ಸರ್ಕಾರವನ್ನು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸಚಿವಾಲಯವನ್ನೂ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರನ್ನೂ ಸಂಪಾದಕ ಸಮಿತಿಯ ಎಲ್ಲಾ ಸದಸ್ಯರನ್ನೂ ಅನಂತ ಕೃತಜ್ಞತೆಗಳಿಂದ ನಾನು ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ.

ನನ್ನ ಈ ಸಂಪಾದನೆಯ ಕಾರ್ಯದಲ್ಲಿ ಸಕಲ ನೆರವನ್ನು ನೀಡಿದ ಕಾರ್ಯನಿರ್ವಾಹಕ ಸಂಪಾದಕರಾದ ಡಾ. ಶ್ರೀಮತಿ. ಟಿ.ಎನ್. ನಾಗರತ್ನ ಅವರನ್ನು ಬಹಳ ಗೌರವದಿಂದ ನೆನೆಯುತ್ತೇನೆ.

ಹಸ್ತಪ್ರತಿಯನ್ನು ಸಿದ್ಧಮಾಡಿಕೊಡುವಲ್ಲಿ ಸಹಕರಿಸಿದ ಶ್ರೀಮತಿ ಸರಸ್ವತಿ ಅವರನ್ನೂ ಸಂಪಾದನಾ ಕಾರ್ಯದಲ್ಲಿ ಆಕರಗ್ರಂಥಗಳನ್ನು ಒದಗಿಸಿದ ಶ್ರೀನಿವಾಸ ಕುಷ್ಟಗಿ, ಗುರುರಾಜ ಕುಲಕರ್ಣಿ ಹಾಗೂ ಶ್ರೀಮತಿ ವಸುಧಾ ಅವರನ್ನೂ ನಾನು ಸದಾ ನೆನೆಯುತ್ತೇನೆ.

ಪ್ರೊ. ವಸಂತ ಕುಷ್ಟಗಿ
ಸಂಪಾದಕ

ಉಗಾಭೋಗ–ಸುಳಾದಿಗಳ ಕ್ರಮಸೂಚಿ*

ಕ್ರಮ ಸಂಖ್ಯೆ	ಉಗಾಭೋಗ–ಸುಳಾದಿಗಳ ಮೊದಲ ಸಾಲು	ಪುಟ ಸಂಖ್ಯೆ
	ದೇವತಾಸ್ತುತಿ	
೧.	ಎಲ್ಲಿ ಹರಿಕಥಾ ಪ್ರಸಂಗವೊ (ಉ)	೩
೨.	ಎಲ್ಲಿ ಹರಿಕಥೆಯ ಪ್ರಸಂಗವೊ (ಉ)	೩
೩.	ಜಯ ಜಯಾ ಹರಿಯೆಂಬುದೆ ಸುದಿನವು (ಉ)	೩
೪.	ಸತತ ಗಣನಾಥ ಸಿದ್ಧಿಯನೀವ ಕಾರ್ಯದಲಿ (ಉ)	೪
೫.	ಶ್ರೀಪತಿಯ ನಾಭಿಯಿಂದ ಅಜ ಜನಿಸಿದನು– (ಉ)	೪
೬.	ವ್ಯಾಸರಾಯರ ಚರಣ ಕಮಲ ದರ್ಶನವೆನ– (ಸು)	೫
೭.	ಆದಿಯಲಿ ಗಜಮುಖನ ಅರ್ಚಿಸಿ ಆರಂಭಿಸಲು (ಉ)	೮
೮.	ವರವೇದ ಪುರಾಣ ವಿವಿಧ ಶಾಸ್ತ್ರಂಗಳಿಗೆ (ಉ)	೯
೯.	ಹನುಮಂತನ ಬಲಗೊಂಡರೆ ಹರಿಪದ ಸೇವೆ (ಸು)	೯
೧೦.	ಕ್ಷೀರ ಸಾಗರಕೆ ಶ್ರೀರಮಣ ಬಂದಂತೆ (ಉ)	೧೦
೧೧.	ಬಲಿಯ ಮನೆಗೆ ವಾಮನ ಬಂದಂತೆ (ಉ)	೧೧
೧೨.	ಹರಿಕಥಾ ಶ್ರವಣಕ್ಕೆ ಮನವಿಟ್ಟ ಪ್ರೌಢ (ಉ)	೧೧
೧೩.	ಹರಿನಾಮ ಕೀರ್ತನೆಯ ಭಕುತಿಯಿಂಕೇಳ್ವ (ಉ)	೧೨
೧೪.	ನೀನೆ ಕರ್ತನು ಆಕರ್ತರು ಅಜಭವೇಂದ್ರಾದ್ಯಮರರು (೭)	೧೨

*. ಕ್ರಮಸೂಚಿಯಲ್ಲಿ ಮೊದಲಸಾಲಿನ ಮುಂದೆ ಸೂಚಿಸಿರುವ
(ಉ) – ಉಗಾಭೋಗ; (ಸು) – ಸುಳಾದಿ.

ಕ್ರಮ ಸಂಖ್ಯೆ	ಉಗಾಭೋಗ–ಸುಳಾದಿಗಳ ಮೊದಲ ಸಾಲು	ಪುಟ ಸಂಖ್ಯೆ
೧೫.	ನೀನೆ ಕರ್ತನು ಅಕರ್ತರು ಸಿರಿ ಅಜಭವಾದಿ ಇಂದ್ರಾದ್ಯಮರರು (ಉ)	೧೨
೧೬.	ಸಂಕರ್ಷಣನೆನಿಸಿ ಶಂಕರನ ಅಂತರ್ಯಾಮಿಯಾಗಿ (ಉ)	೧೩
೧೭.	ಕೆಟ್ಟೆನೆಂದೆನಲೇಕೆ ಕ್ಲೇಶ ಪಡುವುದೇಕೆ (ಉ)	೧೩
೧೮.	ಕೆಟ್ಟೆನೆಂದೆನಲೇಕೋ ಕ್ಲೇಶ ಪಡುವುದೇಕೋ ಗೇಣು (ಉ)	೧೪
೧೯.	ದಾಸನಾದವನಿಗೆ ವೈಕುಂಠಲೋಕದಲ್ಲಿ ವಾಸ (ಉ)	೧೪
೨೦.	ತಪ್ಪು ರಾಶಿಗಳೊಪ್ಪಿ ಕಾಯೊ ಕೃಪಾಳು (ಉ)	೧೪
೨೧.	ಹರಿ ನೀನೊಲಿವಂತೆ ಮಾಡು (ಉ)	೧೫
೨೨.	~~ಹರಿ ನೀನೊಲಿವಂತೆ ಮಾಡು (ಉ)~~	~~೧೫~~
೨೩.	ನಿನ್ನ ನಾಮ ಭಂಡಾರವ ಕದ್ದ ಕಳ್ಳ (ನು) ನಾನು (ಉ)	೧೫
೨೪.	ಪಾದನಖ ಪರಿಪೂರ್ಣ ಜಾನುಜಂಘೆ ಪರಿಪೂರ್ಣ (ಸು)	೧೬
೨೫.	ಪಾದನಖ ಪರಿಪೂರ್ಣ ಜಾನುಜಂಘೆ ಪರಿಪೂರ್ಣ (ಸು)	೧೭
೨೬.	ಅಂಬುಧಿ ತೊಟ್ಟಿಲಾಗಿ ಆಲದೆಲೆಯಾಗಿ (ಸು)	೧೯
೨೭.	ಅಂಬುಧಿ ತೊಟ್ಟಿಲಾಗೆ ಆಲದೆಲೆಯಾಗಿ (ಸು)	೨೧
೨೮.	ಇಂದಿನ ದಿನವೇ ಶುಭ ದಿನವು (ಉ)	೨೨
೨೯.	ಇಂದಿನ ದಿನ ಶುಭ ದಿನವು (ಉ)	೨೩

ಆರ್ತಭಾವ

೩೦.	ಸ್ವರ್ಗ–ಮರ್ತ್ಯ ಪಾತಾಳಗಳಲ್ಲಿ ತಿರುತಿರುಗಿ ಬಳಲಿದೆನು (ಸು)	೨೩
೩೧.	ಇಂದಿಗೆಂಬಾ ಚಿಂತೆ ನಾಳಿಗೆಂಬಾ ಚಿಂತೆ (ಉ)	೨೫
೩೨.	ಗಾಣದೆತ್ತಿನಂತೆ ತಿರುಗಾಡಲಾರೆ (ಉ)	೨೬
೩೩.	ಒಂದಪರಾಧವೆ ಹರಿಹರಿ ಎರಡಪರಾಧವೆ ಹರಿಹರಿ (ಸು)	೨೬

ಕ್ರಮ ಸಂಖ್ಯೆ	ಉಗಾಭೋಗ–ಸುಳಾದಿಗಳ ಮೊದಲ ಸಾಲು	ಪುಟ ಸಂಖ್ಯೆ
೩೪.	ಒಂದಪರಾಧವೆ ಹರಿಹರಿ (ಸು)	೨೮
೩೫.	ಅನೆಯನ್ನು ಕಾಯುವಾಗ ಜ್ಞಾನವಿದ್ದುದು ಏನು (ಉ)	೩೦
೩೬.	ಬಡವರೊಳಗೆ ಎನ್ನಿಂದಾರು ಬಡವರಿಲ್ಲ (ಉ)	೩೦
೩೭.	ಎಮ್ಮನು ಸಿರಿದೇವಿ ಇನ್ನೂ ಅರಿಯಳು (ಉ)	೩೦
೩೮.	ಇರಲಿ ನಿನ್ನಲ್ಲಿ ಭಕ್ತಿ ಎನಗೆ ಇರದಿರಲಿ (ಉ)	೩೧
೩೯.	ಎನಗೆ ನಿನ್ನಲ್ಲಿ ಭಕ್ತಿ ಇರಲಿ ಇಲ್ಲದಿರಲಿ (ಉ)	೩೧
೪೦.	ತಂದೆ, ನೀ ತಂದೆ – ನಾ ಬಂದೆ ನಿನ್ನ ಹಿಂದೆ (ಉ)	೩೧
೪೧.	ಮನೆಯೆಂಬಾಶೆಯು ಎನ್ನ ಮುಂದುಗೆಡಿಸುತಿದೆ (ಉ)	೩೨
೪೨.	~~ಮನೆಯೆಂಬ ಆಸೆಯು ಎನ್ನ ಮುಂದುಗೆಡಿಸುತಿದೆ (ಉ)~~	~~೩೨~~
೪೩.	ಹರಿ–ಗುರುಗಳಿಗೆರಗದ ಭಕ್ತಿಯೆಂತೆಹದಯ್ಯ (ಉ)	೩೨
೪೪.	ಹರಿ ನಿನ್ನ ಭಕ್ತನೆನಿಸಿಕೊಂಡವ ಭಂಗ ಬಡಲು ಬೇಕು (ಉ)	೩೩
೪೫.	ನಿನ್ನ ಭಕ್ತರೆಂದೆನಿಸಿದ ಜನರು ಭಂಗಪಡಲು ಬೇಕು (ಉ)	೩೩
೪೬.	ತಿಂಬಲು ಅನ್ನ ಹುಟ್ಟಲಿ ಬೇಡ (ಉ)	೩೩
೪೭.	ಮನದ ಚಂಚಲದಿ ತಪವು ಮಾಡಲು ಅಶಕ್ಯವು (ಉ)	೩೪
೪೮.	ತಂಬೂರಿ ಮೀಟಿದವ ಭವಾಬ್ಧಿಯ ದಾಟಿದವ (ಉ)	೩೪
೪೯.	ಹುಟ್ಟುವ ಭೀತಿ ಹೊಂದುವ ಭೀತಿ ವಿಠಲನಂಘ್ರಿ ನೆನೆಯದವಗೆ (ಸು)	೩೪
೫೦.	ಪುಟ್ಟುವ ಭೀತಿ ಪೊಂದುವ ಭೀತಿ (ಉ)	೩೬
೫೧.	ಹುಟ್ಟುವ ಭೀತಿ ಹೊಂದುವ ಭೀತಿ (ಉ)	೩೬
~~೫೨.~~	~~ಹರಿ ನಿನ್ನ ಭಕ್ತನೆನಿಸಿಕೊಂಡವ ಭಂಗವ ಪಡಲು ಬೇಕು (ಉ)~~ Repeat ~~44~~	32 ~~೩೬~~

ಕ್ರಮ ಸಂಖ್ಯೆ	ಉಗಾಭೋಗ–ಸುಳಾದಿಗಳ ಮೊದಲ ಸಾಲು	ಪುಟ ಸಂಖ್ಯೆ
೫೩.	ನರಲೋಕದ ಸುಖ ಹೇಯವೆಂಬರು ಗಡ (ಸು)	೩೭
೫೪.	ನರಲೋಕದ ಸಿರಿ ಹೇಯವೆಂಬೋದು ಗಡ (ಸು)	೩೯
೫೫.	ಮನವೆ ಆಲಿಸಿಕೇಳೋ, ಬಿನ್ನಯಿಸುವೆನು ನಿನಗೆ (ಸು)	೪೦
೫೬.	ಮನವೆ ಆಲೈಸಿ ಕೇಳು ಬಿನ್ನೈಸುವೆನು ನಿನಗೆ (ಸು)	೪೫
೫೭.	ನವರತ್ನಗಳು ಕಂಡ ಠಾವಿನಲಿ ಉಂಟೆ (ಉ)	೪೯
೫೮.	ಶ್ವಾನನ ಕಂಕುಳೊಳಿಟ್ಟು ವಾರಣಾಸಿಗೆ ಪೋದಂತೆ (ಉ)	೪೯
೫೯.	ಹರಿಯ ಭಜಿಸಬೇಕು ವನವ ಮುಟ್ಟಿ (ಉ)	೪೯
೬೦.	ಜಗವು ನಿನ್ನೊಳಗೆ ನೀನು ಎನ್ನೊಳಗೆ (ಉ)	೫೦
೬೧.	ಜಗವು ಸುತ್ತಿಹುದೆಲ್ಲ ನಿನ್ನ ಮಾಯವಯ್ಯ (ಉ)	೫೦
೬೨.	ಏಕಾನೇಕ ಮೂರುತಿ ಲೋಕವೆಲ್ಲ ಮೂರುತಿ (ಉ)	೫೦
೬೩.	ಚಂದಿರಗಿಂತಿನ್ನು ನಿಂದಿರೆ ತೆರಪಿಲ್ಲ (ಉ)	೫೧
೬೪.	ತಾಯಿ ಲಕುಮಿ ತಂದೆ ವಿಠಲ (ಸು)	೫೧
೬೫.	ಮಾತಾಪಿತರು ನಿನಗಂದೆ ಮಾರಿದರೆನ್ನ (ಉ)	೫೩
೬೬.	ಜಗದಂತರ್ಯಾಮಿ ನೀನು ನಿನ್ನ ಬಟ್ಟಬಯಲೆಂದು (ಉ)	೫೩
೬೭.	ಹಾಡಿದರೆನ್ನೊಡೆಯನ ಹಾಡುವೆ (ಉ)	೫೪
೬೮.	ನೋಡಿದರೆನ್ನೊಡೆಯನ ನೋಡುವೆ (ಉ)	೫೪
೬೯.	ಆರು ಮುನಿದು ನಮಗೆ ಏನು ಮಾಡುವರಯ್ಯ (ಉ)	೫೫
೭೦.	ಯಾರು ಮುನಿದು ನಮಗೇನು ಮಾಡುವರಯ್ಯ (ಉ)	೫೫
೭೧.	ತುಳಸಿ ಇರಲು ತುರುಚಿಯನು ತರುವಿರೊ (ಉ)	೫೫
೭೨.	ತುಲಸಿಯಿರಲು ತುರುಚಿಯನು ತರುವಿರೋ (ಉ)	೫೬
೭೩.	ಮರವಿದ್ದರೇನಯ್ಯ ನೆರಳಿಲ್ಲದನಕ (ಉ)	೫೬

ಕ್ರಮ ಸಂಖ್ಯೆ	ಉಗಾಭೋಗ-ಸುಳಾದಿಗಳ ಮೊದಲ ಸಾಲು	ಪುಟ ಸಂಖ್ಯೆ
೭೪.	ಮರ್ಕಟನಕೈನೂಲು ಕುಕ್ಕಡಿಯ ತೆರನಂತೆ (ಉ)	೫೬
೭೫.	ಗಾಣದೆತ್ತಿನಂತೆ ತಿರುಗಾಡಲಾರೆ (ಉ)	೫೭
೭೬.	ಕಿಚ್ಚಿನೊಳಗೆ ಬಿದ್ದ ಕೀಟಕನು ನಾನು (ಉ)	೫೭
೭೭.	ಕಿಚ್ಚಿನೊಳಗೆ ಬಿದ್ದ ಕೀಟಕನು ನಾನಯ್ಯ (ಉ)	೫೭
೭೮.	ಕ್ರಿಮಿ ಕೀಟಕನಾಗಿ ಹುಟ್ಟಿದಂದು ನಾನು (ಉ)	೫೮
೭೯.	ಕ್ರಿಮಿ ಕೀಟನಾಗಿ ಹುಟ್ಟಿದಂದು ಹರಿ ಶರಣೆಂತೆನಲುಂಟೆ (ಉ)	೫೮
೮೦.	ಸೂಸಲಾಸೆಗೆ ಹೋಗಿ ಬಡಿಗಲ್ಲಿನೊಳು ಸಿಕ್ಕಿದ (ಉ)	೫೮
೮೧.	ಪ್ರಸನ್ನ ರಕ್ಷಕ ನೀನು ಪಾಲಿಸು ನಿನ್ನವ ನಾನು (ಉ)	೫೯
೮೨.	ನಿನ್ನಂಥ ತಂದೆ ಎನಗುಂಟು ನಿನಗಿಲ್ಲ (ಉ)	೫೯
	ತತ್ತ್ವ ಜ್ಞಾನ	
೮೩.	ಹರಿಯ ಒಂಬತ್ತು ಭಕ್ತಿಯ ಬಲ್ಲಧೀರ (ಸು)	೫೯
೮೪.	ಅವರು ನಡದದ್ದೇ ರಾಜಪಥ ನಾರಾಯಣ (ಸು)	೬೩
೮೫.	ಐವರು ನಡೆವ ಪಥ ರಾಜ ಪಥ (ಸು)	೬೫
೮೬.	ಭಕುತರಿಗಾಗಿ ಬಾಳುವೆಯಯ್ಯ ನೀನು (ಸು)	೬೬
೮೭.	ಇದನು ಬಿಟ್ಟು ಇನ್ನಿಲ್ಲೆಂಬ ಮಹಾಬಾಧೆ ಬರಲಿ-ಮತ್ತೆ (ಸು)	೬೯
೮೮.	ಒಡೆಯ ಹಾವುಗೆ ಮೆಟ್ಟ ಹಾವುಗೆಯವ ನಾನು (ಸು)	೭೦
೮೯.	ಗರಭವಾಸ ಗಿರಭವಾಸ ಜನನ-ಗಿನನ (ಸು)	೭೨
೯೦.	ಕೋಳಿಗೆ ಹೊನ್ನ ಪಂಜರವು ಇನ್ನೇಕೆ ! (ಉ)	೭೪
೯೧.	ಕೋಳಿಗೆ ಯಾತಕ್ಕೆ ಹೊನ್ನ ಪಂಜರವು (ಉ)	೭೪
೯೨.	ಮರವಿದ್ದರೆ ಫಲವೇನು ನೆರಳಿಲ್ಲದನಕ (ಉ)	೭೪
೯೩.	ಮರವಿದ್ದರೇನಯ್ಯ ನೆರಳಿಲ್ಲದನಕ (ಉ)	೭೫

ಕ್ರಮ ಸಂಖ್ಯೆ	ಉಗಾಭೋಗ-ಸುಳಾದಿಗಳ ಮೊದಲ ಸಾಲು	ಪುಟ ಸಂಖ್ಯೆ
೯೪.	ಒಡೆಯನುಳ್ಳ ತೊತ್ತಿಗೇತರ ಚಿಂತೆ (ಉ)	೭೫
೯೫.	ಹರಿ ಶರಣರು ಎನ್ನ ಮನೆಗೆ ಬಂದರೆ (ಉ)	೭೫
೯೬.	ರಾವಣನು ರಥವೇರಿ ರಣಕೆ ಬಂದಿರಲಾಗಿ (ಉ)	೭೬
೯೭.	ಒಂದು ಕಾಲದಲ್ಲಿ ಆನೆ ಕುದುರೆ (ಮೇಲ್ಮೆರೆಸುವೆ) ಏರಿಸುವೆ (ಉ)	೭೬
೯೮.	ಅಂದು ಬಾಹೋದು ನಮಗಿಂದೆ ಬರಲಿ (ಉ)	೭೬
೯೯.	ಇಲ್ಲದಿದ್ದರೆ ಮುಗುಳು ತೆನೆ (ಉ)	೭೭
೧೦೦.	ಇರುವುದಾದರೆ ಮುಗುಳು ತೆನೆ (ಉ)	೭೭
೧೦೧.	ಅಕಿಂಚನಗೆ ಅನರ್ಘ್ಯವಾದಂತೆ (ಸು)	೭೮
೧೦೨.	ಬೆಟ್ಟದಂಥ ದುರಿತವು ಸುತ್ತ ಮುತ್ತುಇರಲಾಗಿರೆ (ಉ)	೭೯
೧೦೩.	ಬೆಟ್ಟದಂಥ ದುರಿತವು ಸುತಮುತ್ತಲೊಟ್ಟಿರೆ (ಉ)	೮೦
೧೦೪.	ಪಾತಕರೊಳಗೆಲ್ಲ ನಾನು ವೆಗ್ಗಳನಯ್ಯಾ (ಉ)	೮೦
೧೦೫.	ಹಿಂಸಕರ ಸಂಗದಿಂದ ಬಂದ ಪಾತಕಕ್ಕೆ (ಉ)	೮೦
೧೦೬.	ಆವಿನ ಕೊಂಬಿನ ತುದಿಯಲಿ ಸಾಸಿವೆ ಕಾಳಿದ್ದಷ್ಟೋತ್ತಾಗಲಿ (ಉ)	೮೧
೧೦೭.	ಆವಿನ ಕೊಂಬಿನ ತುದಿಯಲ್ಲಿ ಸಾಸಿವೆ ಕಾಳಿದ್ದಷ್ಟೋತ್ತಾಗಲಿ (ಉ)	೮೧
೧೦೮.	ಗಾಳಿಗಿಕ್ಕಿದ ದೀವಿಗೆಯಂತೆ ಈ ದೇಹ (ಉ)	೮೨
೧೦೯.	ಚೋರಗೆ ಚಂದ್ರೋದಯ ಸೊಗಸುವುದೆ (ಉ)	೮೨
೧೧೦.	ಧನದಾಸೆ ದೈನ್ಯಪಡಿಸುತಿದೆ (ಉ)	೮೨
೧೧೧.	ಧ್ವಜ ವಜ್ರಾಂಕುಶ ರೇಖಾಂಕಿತವಾದ (ಉ)	೮೩

ಕ್ರಮ ಸಂಖ್ಯೆ	ಉಗಾಭೋಗ-ಸುಳಾದಿಗಳ ಮೊದಲ ಸಾಲು	ಪುಟ ಸಂಖ್ಯೆ
೧೧೨.	ವರಗಿರಿಯಿಂದ ತಿಮ್ಮಯ್ಯ ಬಂದ (ಸು)	೮೩
೧೧೩.	ವರಗಿರಿಯಿಂದ ತಿಮ್ಮಪ್ಪ ಬಂದ ಹಸ್ತಿ (ಸು)	೮೫
೧೧೪.	ಗೋಪಿದೇವಿಯಂತೆ ನಿನ್ನ ಒರಳಿಗೆ ಕಟ್ಟದೆ (ಸು)	೮೭
೧೧೫.	ಅಚ್ಯುತ ಸುಳಿದ ಎನ್ನ ಕಣ್ಣ ಮುಂದೆ ಅವ್ವ (ಸು)	೮೮
೧೧೬.	ಅಚ್ಯುತ ಸುಳಿದ ಎನ್ನ ಕಣ್ಣ ಮುಂದೆ ಯವ್ವಾ (ಸು)	೯೦
೧೧೭.	ಸ್ಥಿರದಿ ಅಜ-ಭವಾದಿಗಳು ನಾರಾಯಣನ (ಸು)	೯೨
೧೧೮.	ವಿಶ್ವನೆನಿಸಿ ವಿಶ್ವಜಾಗರವ ಪ್ರೇರಿಸುವೆ ದೇವ (ಸು)	೯೪
೧೧೯.	ಮಣಿ ಮೌಳಿ ಮೊಲ್ಲೆ-ಮಲ್ಲಿಗೆಯ ದಂಡೆ ಪಿಂಛದೊಂಗಲ (ಸು)	೯೬
೧೨೦.	ಪರಿಪೂರ್ಣನು ನೀನು ಬೊಮ್ಮಾಂಡ ಕೋಟಿಗಳಿಗೆ (ಸು)	೯೮
೧೨೧.	ತ್ರಿಶೂಲ ಡಮರುಗ ಭಸಿತ ರುದ್ರಾಕ್ಷಿ (ಸು)	೧೦೦
೧೨೨.	ತ್ರಿಶೂಲ ಡಮರುಗ ಭಸಿತ ರುದ್ರಾಕ್ಷಿ ಪಶುವಾಹನ ನಾಮದೊದು ಮೂರುತಿ (ಸು)	೧೦೨
೧೨೩.	ಗಲಭೆ ಇದೇನೊ ಬೊಮ್ಮಾದಿಗಳ (ಸು)	೧೦೫
೧೨೪.	ಗಂಗಾಜನಕನಿಗೆ ಹೊಂಗಲಶಗಳಿಂದ (ಸು)	೧೦೭
೧೨೫.	ಕ್ಷೀರ ಸಾಗರದಲಿ ಹಾವಿನ ಹಾಸಿಗೆ-ಜಡೆಯೊಳ್ (ಸು)	೧೦೮
೧೨೬.	ಕ್ಷೀರಾಂಬುಧಿಯೊಳಿಹ ವಿಷ್ಣುವು ನೀನು (ಸು)	೧೧೧
೧೨೭.	ಆ ಪಾದವಾನಂದ ಆನಖವಾನಂದ (ಸು)	೧೧೨
೧೨೮.	ಅಂಜುವೆ ನಾನೀ ಸಿಂಗದ ಮೊಗದವ (ಸು)	೧೧೪
೧೨೯.	ಅಣುವಾಗಬಲ್ಲ ಮಹತ್ತಾಗಬಲ್ಲ (ಸು)	೧೧೬
೧೩೦.	ಅಚ್ಯುತಾನಂತ ಗೋವಿಂದ ಮುಕ್ಕುಂದ (ಸು)	೧೧೭

ಕ್ರಮ ಸಂಖ್ಯೆ	ಉಗಾಭೋಗ-ಸುಳಾದಿಗಳ ಮೊದಲ ಸಾಲು	ಪುಟ ಸಂಖ್ಯೆ
೧೩೧.	ಇದೇ ಮುನಿಗಳ ಮನದ ಕೊನೆಯ ಠಾವು (ಉ)	೧೧೯
೧೩೨.	ಕಮಲಜನು ನಿನ್ನ ಪಾದ ಕಮಲವನು ತೊಳೆದಿಹನು (ಉ)	೧೧೯
೧೩೩.	ಸ್ತ್ರೀಯರಿಗೆ ಪುರುಷರು ಮೋಹಿಸುವರಲ್ಲದೆ (ಉ)	೧೨೦
೧೩೪.	ಭಾರತಮಲ್ಲ ಭೀಮನೆಂತೆಂಬರು (ಉ)	೧೨೦
೧೩೫.	ಶರಧಿ ಸಡ್ಡಿಯ ಮಾಡಿ ಧರೆಯ ಕೂರಿಗೆ ಮಾಡಿ (ಉ)	೧೨೦
೧೩೬.	ಎಂಬತ್ತು ನಾಲ್ಕು ಲಕ್ಷಯೋನಿ ಮುಖಂಗಳಲ್ಲಿ ಪುಟ್ಟಿ ಪುಟ್ಟಿ (ಸು)	೧೨೧
೧೩೭.	ಎನ್ನ ಹೃದಯದಲ್ಲಿ ಎಲ್ಲಿ ಅನುವನೀಯಲೊ (ಸು)	೧೨೨
೧೩೮.	ಬೇಡುವ ಕಷ್ಟಕ್ಕಿಂತ ಸಾವುದೆ ಕರ ಲೇಸು (ಉ)	೧೨೪
೧೩೯.	ಬೇಡುವ ಕಷ್ಟಕ್ಕಿಂತ ಸಾವುದೆ ವರ ಲೇಸು (ಉ)	೧೨೫
೧೪೦.	ಧರ್ಮ ಪಥವ ಮೆಟ್ಟಲು ಮನವೆರಗದು (ಉ)	೧೨೫
೧೪೧.	ಮುಟ್ಟದಿರಚ್ಯುತಗರ್ಪಿತವಲ್ಲದುದನು ಕಂ-೧ (ಉ)	೧೨೫
೧೪೨.	ಕೆರೆಯ ನೀರನು ಕೆರೆಗೆ ಚೆಲ್ಲಿ (ಉ)	೧೨೬
೧೪೩.	ಎಲ್ಲಾ ಒಂದೇ ಎಂಬವರ ಎರಡು ದಾಡಿಯಲಿದ್ದ (ಉ)	೧೨೬
೧೪೪.	ಹೊಲೆಯ ಬಂದಾನೆಂದು ಒಳಗೆ ದೇವರ ಮಾಡಿ (ಉ)	೧೨೬
೧೪೫.	ನಾರದ ಮುನಿ ನಿಮ್ಮ ನೆನೆವನಲ್ಲದೆ (ಉ)	೧೨೭
೧೪೬.	ಕಾವ ದೈವವು ನೀನೇ ಕೊಲುವ ದೈವವು ನೀನೇ (ಉ)	೧೨೭
೧೪೭.	ಕಾವ ದೈವವು ನೀನೇ ಕೈಮುಗಿವೆನು ನಾನು (ಉ)	೧೨೭
	ಕೃಷ್ಣಲೀಲೆ	
೧೪೮.	ಎಲೆ ಎಲೆ ಸಿಡಿಲೆ ಮಿಂಚೆ ಗರ್ಜಿಸದಿರಿ ನೀವು (ಸು)	೧೨೮
೧೪೯.	ಎಲೆ ಎಲೆ ಸಿಡಿಲು ಮಿಂಚೆ ಗರ್ಜಿಸದಿರಿ ನೀವು (ಸು)	೧೨೯

ಕ್ರಮ ಸಂಖ್ಯೆ	ಉಗಾಭೋಗ–ಸುಳಾದಿಗಳ ಮೊದಲ ಸಾಲು	ಪುಟ ಸಂಖ್ಯೆ
೧೫೦.	ಕಾಲ ಮೇಲೆ ಮಲಗಿ ಸಿಂಪಿಯಲಿ ಹಾಲ ಕುಡಿದುಬೆಳೆದ (ಉ)	೧೩೧
೧೫೧.	ಹೊಡೆಮರಳ ಕಲಿತ ಶ್ರೀಕೃಷ್ಣ ನಾಗರ (ಸು)	೧೩೧
೧೫೨.	ಹೊಡೆಮರಳಲು ಕಲಿತ ಶ್ರೀ ಕೃಷ್ಣ ನಾಗರ (ಸು)	೧೩೪
೧೫೩.	ಕಿನ್ನರ ಕಿಂಪುರುಷರು ನಭದಲಿ ಸುರ – (ಸು)	೧೩೭
೧೫೪.	ಸಿಕ್ಕಿದಿಯೆಲೊ ಸಿರಿ ಕೃಷ್ಣ (ಉ)	೧೩೯
೧೫೫.	ಹಸುಗಳ ಕರೆವ ಧ್ವನಿ ಕರುಗಳ ಪಿಡಿದು ಬಿಡುವಧ್ವನಿ (ಸು)	೧೩೯
೧೫೬.	ಕಾಳಿಂದಿಯ ಮಡುವಿನಲಿ ಧುಮುಕಿ (ಉ)	೧೪೧
೧೫೭.	ಅಂಗುಟ ಮಾತುರವೆಂಬ ಮೂರುತಿ ಪರೀಕ್ಷಿಸಿತು (ಸು)	೧೪೨
೧೫೮.	ಕಡಗ ಕಂಕಣ ಕಟಿಯ ತೊಡರ ಸಮಚರಣದ (ಸು)	೧೪೪
೧೫೯.	ಕೆಲವರು ಕೆಂದಾವರೆ ಹಾಸಿ ಪವಡಿಸೆನೆ ಪವಡಿಸುವೆ (ಸು)	೧೪೫
೧೬೦.	ರತಿಪತಿ ಪಿತನೆಂತೆಂಬ – ಚೆಲುವ ನೀನುಳಿದು (ಸು)	೧೪೮

ಲೋಕನೀತಿ

೧೬೧.	ನೀರಡಿಸಿ ಜಾಹ್ನವಿಯ ತೀರದಲಿ ಬಂದು (ಉ)	೧೪೯
೧೬೨.	ಸುಖಕೆ ತಾನಾರೊ ದುಃಖಕೆ ತಾನಾರೊ (ಉ)	೧೫೦
೧೬೩.	ಧ್ವಜ ವಜ್ರಾಂಕುಶ ರೇಖಾಂಕಿತ ಹರಿ ಪಾದಾಂ– (ಉ)	೧೫೦
೧೬೪.	ನೀರಿ ಮೇಲಣ ಗುಳ್ಳೆಯಂತೆ ಈ ದೇಹ (ಉ)	೧೫೧
೧೬೫.	ಕಲಿಯುಗಕೆ ಸಮ ಯುಗವು (ಉ)	೧೫೧

ಕ್ರಮ ಸಂಖ್ಯೆ	ಉಗಾಭೋಗ-ಸುಳಾದಿಗಳ ಮೊದಲ ಸಾಲು	ಪುಟ ಸಂಖ್ಯೆ
೧೬೬.	ಕಲಿಕಾಲಕೆ ಸಮ ಯುಗವು ಇಲ್ಲವಯ್ಯ (ಉ)	೧೫೧
೧೬೭.	ಹರೇ ಗೋವಿಂದಾ ಎಂದೇಳು ಹತ್ತವತಾರವ ಪೇಳು (ಉ)	೧೫೨
೧೬೮.	ಹತ್ತೈದುಗಳಿಗೆಯ ಮೇಲೆ ಮತ್ತೈದು ಬರಲೆದ್ದು (ಉ)	೧೫೨
೧೬೯.	ಪ್ರಾತಃಕಾಲದ ನಿದ್ರೆ ಪರಿಹರಿಸಿ ಹರಿಯ (ಅರ್ತಿಯಿಂದಲಿ) ಸ್ಮರಿಸಿ (ಉ)	೧೫೨
೧೭೦.	ಮಲ_ಮೂತ್ರ ಮಾಡುವಾಗ ಕರದಲ್ಲಿ ಜಲವಿರೆ (ಉ)	೧೫೩
೧೭೧.	ನುಡಿವೆ ಲಿಂಗಶೌಚಕ್ಕೊಮ್ಮೆ ಗುದಕ್ಕೆ ಮೂರು (ಉ)	೧೫೩
೧೭೨.	ಹಲ್ಲು ಬೆಳಗುವಲ್ಲಿ ಜಂಬು – ಪ್ಲಕ್ಷಪತ್ರೆ (ಉ)	೧೫೩
೧೭೩.	ಹಲ್ಲು ಬೆಳಗುವಲ್ಲಿ ಬಿಂಬ (ಉ)	೧೫೪
೧೭೪.	ಎರಡು ಗಳಿಗೆ ಬೆಳಗು ಇರಲು ಗ್ರಹಸ್ಥಗೆ ಸ್ನಾನ (ಉ)	೧೫೪
೧೭೫.	ಕೂಪದಲ್ಲಿಯಾದರೂ ಕೊಳದಲ್ಲಿಯಾದರೂ (ಉ)	೧೫೪
೧೭೬.	ಕೂಪದಲ್ಲಾದರು ಕೊಳದಿ ಮುಳುಗಿಯಾದರು (ಉ)	೧೫೫
೧೭೭.	ಹೃದಯದ ಮಲವನ್ನು ತೊಳೆಯಲರಿಯದೆ ತಾವು (ಉ)	೧೫೫
೧೭೮.	ನೀಲ ವಸ್ತ್ರವಾಗದು ನಾರಿಯರ ಶಾಲೆಯಾಗದು (ಉ)	೧೫೫
೧೭೯.	ಅಂದವಿಲ್ಲದ ಅಶಕ್ತನಿಗೆ ಒಂದೇ ಅರಿವೆಯಿಂದ (ಉ)	೧೫೬
೧೮೦.	ನಕ್ಷತ್ರಗಳ ಕಂಡ ನರನಿಗೆ ಉತ್ತಮ ಸಂಧ್ಯೆಭೂ (ಉ)	೧೫೬
೧೮೧.	ಕಂಡ ಸೂರ್ಯಗೆ ಸಂಧ್ಯೆ ಕಾಣದ ಸೂರ್ಯಗೆ ಸಂಧ್ಯೆಭೂ–(ಉ)	೧೫೬
೧೮೨.	ಆಕಳ ಕಿವಿಗೆ ಎಣ್ಣೆ ಅಂಗ್ಯೆ ಹಳ್ಳವಾಗಿರಬೇಕು (ಉ)	೧೫೭

ಕ್ರಮ ಸಂಖ್ಯೆ	ಉಗಾಭೋಗ-ಸುಳಾದಿಗಳ ಮೊದಲ ಸಾಲು	ಪುಟ ಸಂಖ್ಯೆ
೧೮೩.	ಹಲವು ಕರ್ಮಗಳಿಗೆ ಹವಣು ಎರಡಾಚಮನ (ಉ)	೧೫೭
೧೮೪.	ಆಪೋಶನ ಅಭ್ಯಂಜನ ಆಚಮನ ಮಾಡಲು (ಉ)	೧೫೭
೧೮೫.	ರಮ್ಮೆರಮಣ ತಾನು ಬೊಮ್ಮಾದಿಗಳೆಲ್ಲ (ಉ)	೧೫೮
೧೮೬.	ರಮೆಯ ರಮಣನು ತಾನು ಬೊಮ್ಮಾದಿಗಳನೆಲ್ಲ (ಉ)	೧೫೮
೧೮೭.	ಬಿಡು ಮನುಜಾ ಈ ಜಪವು ಸಿದ್ಧಿಗೆ ಬಾರದು (ಉ)	೧೫೮
೧೮೮.	ಅನಾಮಿಕಾ ಮಧ್ಯದ ಎರಡನೆಯ ಗೆರೆ ಆದಿ (ಉ)	೧೫೯
೧೮೯.	ಮಧ್ಯಾಂಗುಲಿಯ ಮೇಲೆ ಮಣಿಸರವಿಟ್ಟು (ಉ)	೧೫೯
೧೯೦.	ಅಪರಾಧ ಹತ್ತಕೆ ಅಭಿಷೇಕ ಉದಕ (ಉ)	೧೫೯
೧೯೧.	ಒಂದಕ್ಷರವ ಪೇಳಿದವರ (ಉ)	೧೬೦
೧೯೨.	ಒಂದಕ್ಷರವ ಪೇಳಿದವರ ಉರ್ವಿಯೊಳು ಅವರೆ ಗುರು (ಉ)	೧೬೦
೧೯೩.	ಸಹಸ್ರಕಾಷ್ಠದ ಭಾರ ಸದ್ಯೋಘೃತ ಕುಂಭ ನೂರು (ಉ)	೧೬೦
೧೯೪.	ಅನ್ನ ಪಾನಾದಿಗಳೀಯೊ ಅಭ್ಯಾಗತ ಬ್ರಾಹ್ಮಣರಿಗೆ (ಉ)	೧೬೧
೧೯೫.	ಚೋರನಾದರೂ ಚಂಡಾಲನಾದರೂ (ಉ)	೧೬೧
೧೯೬.	ಶತ್ರುವಾಗಲಿ ಚೋರ – ಚಾಂಡಾಲನಾಗಲಿ (ಉ)	೧೬೧
೧೯೭.	ಪರರನ್ನ ಉಂಡ ಬ್ರಾಹ್ಮಣರಿಗೆ (ಉ)	೧೬೨
೧೯೮.	ಎಡದ ಕೈಯಿಂದ ನೀರ ಎತ್ತಿ ಬಲದ ಕೈಯಲ್ಲಿಟ್ಟು (ಉ)	೧೬೨
೧೯೯.	ಕುಂದದ ದೀಪವ ನಂದಿಪನಿಗೆ (ಉ)	೧೬೨
೨೦೦.	ಮನೆಯಲ್ಲಿ ವಿಪ್ರಪಾದೋದಕದ ಹೆಸರಿಲ್ಲದಿದ್ದರೆ (ಉ)	೧೬೩
೨೦೧.	ಹತ್ತು ಗೋದಾನ ಸಮವು ಹರವಾಹನ ವೃಷ್ಣೋತ್ಸರ್ಜನ (ಉ)	೧೬೩
೨೦೨.	ಎದೆಯ ನಾಡಿನಲೊಂದು ಸೋಜಿಗ ಹುಟ್ಟಿ (ಉ)	೧೬೩

ಕ್ರಮ ಸಂಖ್ಯೆ	ಉಗಾಭೋಗ-ಸುಳಾದಿಗಳ ಮೊದಲ ಸಾಲು	ಪುಟ ಸಂಖ್ಯೆ
೨೦೩.	ಹಿರಿಯರ ದಿನದಲ್ಲಿ ಹೆಸರ ತೊವ್ವೆ ಅತ್ತೈಲ ಭಕ್ಷ್ಯ (ಉ)	೧೬೪
೨೦೪.	ಕುಟುಂಬ ಭರಣ ಎರಡಷ್ಟು ಬ್ರಾಹ್ಮಣರಿಗೆ (ಉ)	೧೬೪
೨೦೫.	ಮಾನವರು ಕೃತ ಯುಗದಿ ಮಾಡಬೇಕು ತಪವನು (ಉ)	೧೬೪
೨೦೬.	ಮಾನವರು ಕೃತ ಯುಗದಿ ತಪವ ಮಾಡಲಿ ಬೇಕು (ಉ)	೧೬೫
೨೦೭.	ಆಯುಸ್ಸು ಇದ್ದರೆ ಅನ್ನಕ್ಕೆ ಕೊರತೆಯಿಲ್ಲ (ಉ)	೧೬೫
೨೦೮.	ಹಸಿವಾಯಿತೇಳು ದೇವರ ತೊಳೆ ಎಂಬರು (ಉ)	೧೬೫
೨೦೯.	ಗಂಡ ಮಾಡಿದ ಪಾಪ ಹೆಂಡತಿಗಿಲ್ಲ (ಉ)	೧೬೬
೨೧೦.	ಕೀರ್ತಿ ಕಿಂಕರಗೆ ಅಪಕೀರ್ತಿ ಮಂಕುಗಳಿಗೆ (ಉ)	೧೬೬
೨೧೧.	ಕುಡಿಯ ಕೊಟ್ಟ ಅಮೃತದಂತಹ ನೊರೆಹಾಲನೊಲ್ಲದೆ (ಉ)	೧೬೬
೨೧೨.	ಅಲ್ಲದ ಕರ್ಮವ ಆಚರಿಸಿದವ ಕೆಟ್ಟ (ಉ)	೧೬೭
೨೧೩.	ಅಲ್ಲದ ಕರ್ಮವ ಆಚರಿಸಿದವ ಕೆಟ್ಟ (ಉ)	೧೬೭
೨೧೪.	ಅನುಕೂಲವಿಲ್ಲದ ಸತಿಯ ವರ್ಜಿಸಬೇಕು (ಉ)	೧೬೭
೨೧೫.	ಸುಖವಾದಡೆ ಎನ್ನಿಂದಾಯಿತೆಂಬರು (ಉ)	೧೬೮
೨೧೬.	ಖಳರ ನೋಟವೆ ಹಾವಲ್ಲವೆ, ಹಾವ ಬೇರೆ ಇನ್ನರಸಲೇತಕೆ (ಸು)	೧೬೮
೨೧೭.	ಬೆಲ್ಲದ ಕಟ್ಟೆಯ ಬೇವಿನ ಬೀಜವ ಬಿತ್ತಿ (ಉ)	೧೭೦
	ಸಂಕೀರ್ಣ	
೨೧೮.	ನಿನ್ನ ಬೊಮ್ಮ ಮೂರುತಿಗೆ ನಮೋನಮೋ (ಸು)	೧೭೦

ಕ್ರಮ ಸಂಖ್ಯೆ	ಉಗಾಭೋಗ-ಸುಳಾದಿಗಳ ಮೊದಲ ಸಾಲು	ಪುಟ ಸಂಖ್ಯೆ
೨೧೯.	ನಿನ್ನ ಬೊಮ್ಮ ಮೂರುತಿಗೆ ನಮೋನಮೋ (ಸು)	೧೭೨
೨೨೦.	ಹರಿನಡೆಯದಿರಲು ನಡೆಯಲಿಲ್ಲೀ ಜಗವು (ಸು)	೧೭೩
೨೨೧.	ಶ್ರೀದೇವಿಯ ಮೂರುತಿಯಲ್ಲಿ ಭೂದೇವ ಪರಿಪೂರ್ಣನೀನೆಯೇ (ಉ)	೧೭೬
೨೨೨.	ನಿನಗೆ ನೀನೇ ಮೋಹ ನಿನಗೆ ನೀನೇ ಪ್ರೀತಿ (ಉ)	೧೭೬
೨೨೩.	ಆರು ಅಕ್ಷರವುಳ್ಳ ವ್ಯಾಹೃತಿಯಿಂದ ಓಂಕಾರವಾಗುವುದು ಕೇಳಿ (ಉ)	೧೭೬
೨೨೪.	ಅಲ್ಲಿ ವನಗಳುಂಟು ಆ ಪ್ರಾಕೃತವಾದ (ಉ)	೧೭೭
೨೨೫.	ಶ್ವೇತದ್ವೀಪದಿ ಆ ಮುಕ್ತ ಸ್ಥಳದಲ್ಲಿ (ಉ)	೧೭೭
೨೨೬.	ಶ್ರೀ ನಾರಾಯಣ ದೇವ ನೀನು (ಸು)	೧೭೮
೨೨೭.	ನಿನೇ ಕಾರಣ ಅಕಾರಣರು ಬೊಮ್ಮಾದಿಗಳು (ಸು)	೧೮೦
೨೨೮.	ಮರ್ತ್ಯದೊಳಗಿಲ್ಲ ಅರಸಿ ನೋಡಲು ದೇವ (ಸು)	೧೮೨
೨೨೯.	ಆಳುಗಳ ಪರಿ ಆಳಿದನೆ ಬಲ್ಲ (ಸು)	೧೮೫
೨೩೦.	ಅಣುರೇಣು ತೃಣದಲ್ಲಿ ಪರಿಪೂರ್ಣನಾಗಿರುವ (ಉ)	೧೮೬
೨೩೧.	ಅಣುವಿಗೆ ಅಣುವಾಗಿ ಘನಕೆ ಘನವಾಗಿ (ಉ)	೧೮೬
೨೩೨.	ನಿನ್ನಡಿ ಇಳೆಯ ನೀರಡಿ ಮಾಡಿತು (ಉ)	೧೮೭
೨೩೩.	ಬ್ರಹ್ಮಾಂಡವದೆಲ್ಲ ರೋಮ ಕೂಪದೊಳಿರಲು (ಉ)	೧೮೭
೨೩೪.	ಸಕಲ ಶ್ರುತಿ ಪುರಾಣಗಳೆಲ್ಲ ಅದಾವನ ಮಹಿಮೆ (ಉ)	೧೮೭
೨೩೫.	ಸಿರಿ ವಿರಂಚ್ಯಾದಿಗಳು ಅರಿಯದಂತಹ ಮಹಿಮೆ (ಉ)	೧೮೮
೨೩೬.	ಹರಿಯಂಬುದೇ ಲಗ್ನ ಬಲವು (ಉ)	೧೮೮
೨೩೭.	ಹರಿಯಂಬೋದು ಲಗ್ನ ಬಲವು (ಉ)	೧೮೮
೨೩೮.	ಹರಿ ಸರ್ವೋತ್ತಮನೆಂಬ ಹಿರಿಯ ಪುತ್ರನಿರಲಿಕ್ಕೆ (ಉ)	೧೮೯

ಕ್ರಮ ಸಂಖ್ಯೆ	ಉಗಾಭೋಗ–ಸುಳಾದಿಗಳ ಮೊದಲ ಸಾಲು	ಪುಟ ಸಂಖ್ಯೆ
೨೩೯.	ಹರಿ ಸರ್ವೋತ್ತಮನೆಂಬ ಹಿರಿಯ ಪುತ್ರನಿರಲಾಗಿ (ಉ)	೧೮೯
೨೪೦.	ಗುರಿಯ ನೆಚ್ಚವನೆ ಬಿಲ್ಲಾಳು (ಉ)	೧೮೯
೨೪೧.	ಗುರಿಯ ನೆಚ್ಚವನೆ ಬಿಲ್ಲಾಳು (ಉ)	೧೯೦
೨೪೨.	ಹರಿಯೆಂದು ಕರೆಯುವುದೇ ತಡ (ಉ)	೧೯೦
೨೪೩.	ಹಾ ಕೃಷ್ಣ ! ಹಾ ದ್ವಾರಕಾವಾಸಿ ! ಎಂದೆನಲು (ಉ)	೧೯೦
೨೪೪.	ಸಕಲ ಸಾಧನಕೆಲ್ಲ ಸಿದ್ಧಿಗೊಳಿಸುವುದು (ಉ)	೧೯೧
೨೪೫.	ಅರ್ಭಕನ ತೊದಲ್ನುಡಿ (ಗೆ) ತಾಯ್ತಂದೇ (ಯರು) ಕೇಳಿ ಮನ (ಉ)	೧೯೧
೨೪೬.	ಮಲಗಿ ಪಾಡಿದರೆ ಕುಳಿತು ಕೇಳುವನು (ಉ)	೧೯೧
೨೪೭.	ಗಜ–ತುರಗ ಸಹಸ್ರದಾನ (ಉ)	೧೯೨
೨೪೮.	ಜೀವ ಜೀವಕೆ ಭೇದ ಜಡಜಡಕೆ ಭೇದ (ಉ)	೧೯೨
೨೪೯.	ಗುರು ಕರುಣ ಬಾಹೋದು ಪರಮ ದುರ್ಲಭವಯ್ಯ (ಉ)	೧೯೨
೨೫೦.	ಗುರು ಕರುಣ ಹೊಂದುವುದು ಪರಮ ದುರ್ಲಭವಯ್ಯ (ಉ)	೧೯೩
೨೫೧.	ಮನದಭಿಮಾನಿ ಮಹಾರುದ್ರನ ಭಜಿಸಲು (ಉ)	೧೯೩
೨೫೨.	ಅತಿ ಮೀರಿತು ಶ್ರೀ ಹರಿ ಹರಿ ಅನ್ಯಾಯ (ಸು)	೧೯೩
೨೫೩.	ಖಳರ ನೋಟವೇ ಹಾವಲ್ಲದೆ ಹಾವ ಬೇರೆ ಇನ್ನರಸಲೇತಕೆ? (ಸು)	೧೯೫
೨೫೪.	ಅನ್ಯರೊಬ್ಬರೆ ಕಾಣೆ ಮನ್ನಿಸುವರೆನ್ನ (ಉ)	೧೯೬
೨೫೫.	ಅಪಾಯ ಕೋಟಿ (ಕೋಟಿ) ಗಳಿಗೆ ಉಪಾಯ ಒಂದೇ (ಉ)	೧೯೬

ಕ್ರಮ ಸಂಖ್ಯೆ	ಉಗಾಭೋಗ-ಸುಳಾದಿಗಳ ಮೊದಲ ಸಾಲು	ಪುಟ ಸಂಖ್ಯೆ
೨೫೬.	ಎಡಕೆ ಬಾವಿಯುಂಟು ಬಲಕೆ-ಕೆರೆಯು ನೋಡು (ಉ)	೧೯೭
೨೫೭.	ಎಂದಿಗಾದರೂ ನಿನ್ನ ಪಾದಾರವಿಂದವೆ ಗತಿ (ಉ)	೧೯೭
೨೫೮.	ಎರಗಿ ಭಜಿಪೆನು ನಿನ್ನ ಚರಣ ಸನ್ನಿಧಿಗೆ (ಉ)	೧೯೭
೨೫೯.	ಏನ ಓದಿದರೇನು ಏನು ಕೇಳಿದರೇನು (ಉ)	೧೯೭
೨೬೦.	ಏಳುತ್ತ ಗೋವಿಂದಗೆ ಕೈಮುಗಿಯುವೆ (ಉ)	೧೯೮
೨೬೧.	ಒಬ್ಬರ ಬಂಟನಾಗಿ ಕಾಲ ಕಳೆವುದಕ್ಕಿಂತ (ಉ)	೧೯೮
೨೬೨.	ದಿನ ದಿನ ದಿನ ದಿನಾ ನೆನೆದು ನೆನೆದು ತೋದುತೋದು (ಉ)	೧೯೮
೨೬೩.	ನಿನ್ನನೆ ಪಾಡುವೆ ನಿನ್ನನೆ ಪೊಗಳುವೆ (ಉ)	೧೯೯
೨೬೪.	ಮನೆಯಿಂದ ಸಂತೋಷ ಕೆಲವರಿಗೆ ಲೋಕದಲ್ಲಿ (ಉ)	೧೯೯
೨೬೫.	ಹರಿ ನಿನ್ನ ನಾಮವ ಸ್ಮರಿಸಲು (ಉ)	೧೯೯
೨೬೬.	ಹೀನ ಮಾನವನ ಯೋನಿಯಲಿ ಜನಿಸಿದೆನೊ ನಾನು (ಉ)	೨೦೦
೨೬೭.	ಹೃರದಯ ಕಮಲದಲ್ಲಿ ನಾನಿನ್ನ (ಉ)	೨೦೦
೨೬೮.	ಹೆತ್ತ ಮಕ್ಕಳು ಹುಚ್ಚರಾದರೆ ತಾಯ್ತಂದೆ (ಉ)	೨೦೧
೨೬೯.	ಎಲೆ ಜಿಹ್ವೆ ನೀ ಕೇಶವನ ನಾಮವನೆ ಸ್ತುತಿಸು (ಉ)	೨೦೧
೨೭೦.	ಬೆನಕನ ನಾನೊಲ್ಲೆನವ್ವ ಕುಲುಕಿ ನಡೆವವನ (ಉ)	೨೦೧
೨೭೧.	ಬೆನಕನೊಲ್ಲೆನವ್ವ (ಉ)	೨೦೨
೨೭೨.	ನಿನ್ನಾಧೀನ ಎನ್ನ ತನು-ಮನ (ಸು)	೨೦೨
೨೭೩.	ಶ್ರವಣದಿಂದ ಹೋಯಿತು ಬ್ರಹ್ಮ ಹತ್ಯಾಕಾಂಡ (ಉ)	೨೦೫

ಕ್ರಮ ಸಂಖ್ಯೆ	ಉಗಾಭೋಗ-ಸುಳಾದಿಗಳ ಮೊದಲ ಸಾಲು	ಪುಟ ಸಂಖ್ಯೆ
೨೭೪.	ಹರಿ ನೀ ಮುನಿದರೆ ಆರು ಒಲಿದೇನು ಮಾಡುವರು (ಉ)	೨೦೫
೨೭೫.	ಅಚ್ಯುತನ ಭಕುತರಿಗೆ ಮನ (ಉ)	೨೦೫
೨೭೬.	ಅಣುಕದಿಂದಾಗಲಿ ಡಂಭದಿಂದಾಗಲಿ (ಉ)	೨೦೫
೨೭೭.	ಒಡಲೊಳು ಪೊಗದನಕ ಅರೆ ಬಿಡರು ನಾಮ ಸುಧೆಯ (ಉ)	೨೦೬
೨೭೮.	ಕಣ್ಣಲ್ಲಿ ನೀರಿಲ್ಲ ಮನದಲ್ಲಿ ಕರಗಿಲ್ಲ (ಉ)	೨೦೬
೨೭೯.	ತನುವೆಂಬ ದೊಡ್ಡ ದೋಣಿಯಲಿ (ಉ)	೨೦೬
೨೮೦.	ದರಿದ್ರರೆನಬಹುದೆ ಹರಿದಾಸರ (ಉ)	೨೦೭
೨೮೧.	ದಾಸನಾಗುವುದಕ್ಕೆ ಏಸು ಜನ್ಮದ ಸುಕೃತ (ಉ)	೨೦೭
೨೮೨.	ನಿನ್ನ ಕಾಲ ಹೆಜ್ಜೆಯ ಪಿಡಿದು ನಾನಿರುವೆ (ಉ)	೨೦೭
೨೮೩.	ನಿನ್ನ ದಾಸನಾಗಿ ನಿನ್ನೆಂಜಲವನುಂಡು (ಉ)	೨೦೮
೨೮೪.	ನಿನ್ನಾಳೆಂದೆಡೆ ಹರಿಯೆ ಇನ್ನೇನಿನ್ನೇನು (ಉ)	೨೦೮
೨೮೫.	ಯದುಕೃಷ್ಣ ಯಾದವ ಕೃಷ್ಣ (ಉ) ಎಂದವರಿಗೆ ಅಂತ್ಯ ಕಾಲದಲಿ	೨೦೮
೨೮೬.	ಲೇಸು ದಾಸರಿಗೆ ಕ್ಲೇಶ ದುಷ್ಟರಿಗೆ (ಉ)	೨೦೯
೨೮೭.	ಲೇಸು ದಾಸರಿಗೆ ಸಿರಿ ಭಾಗವತರಿಗೆ (ಉ)	೨೦೯
೨೮೮.	ಸಂತತಿಯಪ್ಪುದು ರಾಮಾಯಣವ ಕೇಳಲು (ಉ)	೨೦೯
೨೮೯.	ಶಿವನೆ ದುರ್ವಾಸ ಕಾಣಿರೊ ಶಿವನೆ ಶುಕಯೋಗಿ ಕಾಣಿರೊ (ಸು)	೨೧೦
೨೯೦.	ಸಂತತ ಹನ್ನೆರಡು ಕೋಟಿ ಸುವರ್ಣ ಪುಷ್ಪ ಸಮರ್ಪಿಸಲು (ಸು)	೨೧೨

ಕ್ರಮ ಸಂಖ್ಯೆ	ಉಗಾಭೋಗ-ಸುಳಾದಿಗಳ ಮೊದಲ ಸಾಲು	ಪುಟ ಸಂಖ್ಯೆ
೨೯೧.	ಹೆಜ್ಜೆ ಹೆಜ್ಜೆಗೆ ಸಾವಿರ ಸಾವಿರ ಹೊನ್ನೀವರಾಯ ರಾವುತರಾಯ (ಸು)	೨೧೪
೨೯೨.	ಅಯ್ಯಯ್ಯ ! ಕೈಕೆ ಮುನಿದರೆ ಏನವ್ವ!! (ಸು)	೨೧೬
೨೯೩.	ಒಬ್ಬ ಆಚಾರ್ಯನು ದೈವವೇ ಇಲ್ಲವೆಂಬ (ಸು)	೨೧೮
೨೯೪.	ವರಮಣಿಗಳ ಕೆತ್ತಿಸಿದ ಮುಕುಟದ ಚಾರು (ಸು)	೨೨೦
	ಹೆಚ್ಚಿನ ಉಗಾಭೋಗ-ಸುಳಾದಿಗಳು	
೨೯೫.	ಉರಿಗಂಜೆ ಸೆರೆಗಂಜೆ ಶರೀರದ ಭಯಕಂಜೆ (ಉ)	೨೨೨
೨೯೬.	ಮನಶುದ್ಧಿಯಿಲ್ಲದವಗೆ ಮಂತ್ರದ ಫಲವೇನು (ಉ)	೨೨೨
೨೯೭.	ಶ್ರೀಪತಿಯ ಕಟಾಕ್ಷ ವೀಕ್ಷಣವು ತಪ್ಪುವಾಗ (ಉ)	೨೨೩
೨೯೮.	ಹರಿ ಸಿರಿ ಚರಣವಿರಲು ಮಿಕ್ಕ (ಉ)	೨೨೩
೨೯೯.	ಸತ್ಯಜನಾಭನೆ (ಉ)	೨೨೩
೩೦೦.	ನಿತ್ಯ ಪತಿಭಾವ ಶ್ರೀ ಲಕುಮಿ ದೇವಿಗಯ್ಯ (ಉ)	೨೨೪
೩೦೧.	ಮನೋ ವಚನಗಳಲ್ಲಿ ಕಾಯಕರ್ಮಗಳಲ್ಲಿ (ಉ)	೨೨೪
೩೦೨.	ಆದಿ ಸೃಷ್ಟಿಯಲಾರು ಮೊದಲೆ ಉದಿಸಿರಲೇನು (ಉ)	೨೨೪
೩೦೩.	ಸಿರಿ ಚತುರ್ಮುಖ ಸುರರು (ಉ)	೨೨೫
೩೦೪.	ನಿನ್ನಂಗುಟವು ಬೊಮ್ಮಾಂಡವನೊಡೆಯಿತು (ಉ)	೨೨೫
೩೦೫.	ಇದಿರಿಂ ಬಿಟ್ಟಿನ್ನಿಲ್ಲೆಂಬ ಮಹಾವ್ಯಾಧಿ ಬರಲಿ ಮ (ಉ)	೨೨೫
೩೦೬.	ಶ್ರೀರಾಮ ಎಂದರೆ ಭಾಗ್ಯಕ್ಕೆ ಕಾರಣ (ಉ)	೨೨೬
೩೦೭.	ತಾಯಿ ಗೋಪಿಯಂತೆ ನಿನ್ನ ಒರಳನೆಳಸಲಿಲ್ಲ (ಉ)	೨೨೬
೩೦೮.	ಇಕ್ಕೊ ನಮ್ಮ ಸ್ವಾಮಿ (ಉ)	೨೨೭

ಕ್ರಮ ಸಂಖ್ಯೆ	ಉಗಾಭೋಗ–ಸುಳಾದಿಗಳ ಮೊದಲ ಸಾಲು	ಪುಟ ಸಂಖ್ಯೆ
೩೦೯.	ಪರಮಾನಂದವು ಹರಿಗೆ ಪರಮಾನಂದವು ಸಿರಿಗೆ (ಉ)	೨೨೭
೩೧೦.	ದೇವ ದೇವರ ದೇವ (ಉ)	೨೨೮
೩೧೧.	ಶುಭವಿದು ಶೋಭನ ಹರಿಗೆ (ಉ)	೨೨೮
೩೧೨.	ಹಂಗಿಸಿ ಹಂಗಿಸಿ ಎನಗೆ ಹರಿನಾಮ ನಿಲಿಸಿದರು (ಉ)	೨೨೮
೩೧೩.	ಎನ್ನ ಕಡೆ ಹಾಯಿಸುವುದು ನಿನ್ನ ಭಾರ (ಉ)	೨೨೯
೩೧೪.	ಧ್ಯಾನವು ಕೃತಯುಗದಲ್ಲಿ ಯಜ್ಞಯಾಗವು ತ್ರೇತಾಯುಗದಲ್ಲಿ (ಉ)	೨೨೯
೩೧೫.	ಮಾರಿಯ ಕೈಯಿಂದ ನೀರ ತರಿಸುವರು (ಉ)	೨೨೯
೩೧೬.	ಕಂಡಾನಿಶದಲ್ಲಿ ಅರ್ಘ್ಯವನು (ಉ)	೨೩೦
೩೧೭.	ಉದಯ ಕಾಲದ ಜಪ ನಾಭಿಗೆ ಸರಿಯಾಗಿ (ಉ)	೨೩೦
೩೧೮.	ಒಂದೇ ಒಂದು ಬೆರಳ ಜಪ (ಉ)	೨೩೦
೩೧೯.	ಉದಯ ಅಸ್ತಮಾನವೆಂಬೊ ಎರಡು ಕೊಳಗವಿಟ್ಟು (ಉ)	೨೩೧
೩೨೦.	ಹಗಲು ನಿನ್ನ ನೆನೆಯಲಿಲ್ಲ ಹಸಿವು ತೃಷೆಯಿಂದ (ಉ)	೨೩೧
೩೨೧.	ಹಗಲು ನಾಲ್ಕು ಝಾವ ಹಸಿವನು ಕಳೆದೆನೊ (ಉ)	೨೩೧
೩೨೨.	ಸಂತತ ಹನ್ನೆರಡು ಕೋಟಿ ಸುವರ್ಣ ಪುಷ್ಪ ಸಮರ್ಪಿಸಲು (ಉ)	೨೩೨
೩೨೩.	ನಿನ್ನ ಧ್ಯಾನವ ಕೊಡೊ ಎನ್ನ ಧನ್ಯನ ಮಾಡೊ (ಉ)	೨೩೨
೩೨೪.	ಮುಳುಗುವಗೆ ಕಲ್ಲು ಮೇಲಿದ್ದರೇನು (ಉ)	೨೩೨
೩೨೫.	ನರವೃಂದವೆಂಬೊ ಕಾನನದಲ್ಲಿ ಶ್ರೀ (ಉ)	೨೩೩

ಕ್ರಮ ಸಂಖ್ಯೆ	ಉಗಾಭೋಗ-ಸುಳಾದಿಗಳ ಮೊದಲ ಸಾಲು	ಪುಟ ಸಂಖ್ಯೆ
೩೨೬.	ಇಲ್ಲೆಂಥಾ ಸುಖಗಳುಂಟೋ ಅಲ್ಲಂಥ ಸುಖಗಳುಂಟು(ಉ)	೨೩೩
೩೨೭.	ಪ್ರಳಯಲೋಕದಲ್ಲಿ ವಟಪತ್ರ ಶಯನನಾಗಿದ್ದ ಕಾಲದಲ್ಲಿ (ಸು)	೨೩೪
೩೨೮.	ಮಂಗಳಾಂಗ ನಿನ್ನಂಗವಟ್ಟದಲ್ಲಿ ಸಂಗಸುಖವಿತ್ತಳವ್ವೆ (ಸು)	೨೩೭

ಪುರಂದರ ದಾಸರ ಉಗಾಭೋಗಗಳು
ಮತ್ತು ಸುಳಾದಿಗಳು

ಅನುಬಂಧಗಳು

೧. ಕಠಿಣ ಶಬ್ದಗಳ ಅರ್ಥ

೨. ಲಘು ಟಿಪ್ಪಣಿಗಳು ಹಾಗೂ ಪೂರ್ವ ಕಥೆಗಳು

೩. ಉಗಾಭೋಗಗಳ ಅಕಾರಾದಿ

೪. ಸುಳಾದಿಗಳ ಅಕಾರಾದಿ

೫. ಸಹಾಯಕ ಸಾಹಿತ್ಯ

ಅನುಬಂಧ–೧

ಕಠಿಣ ಶಬ್ದಗಳ ಅರ್ಥ

ಅ

ಅಕಿಂಚನ – ದರಿದ್ರ

ಅಕುತೋಭಯ – ಭಯ ರಹಿತ, ಯಾವ ಕಾರಣದಿಂದಲೂ ಭಯವಿಲ್ಲದವನು.

ಅನಾಮಿಕ – ಕಿರಿ ಬೆರಳಿನ ಪಕ್ಕದ ಬೆರಳು; ಉಂಗುರದ ಬೆರಳು.

ಅಚಿಂತ್ಯ – ಧ್ಯಾನವನ್ನು ಮಿಕ್ಕಿದ, ಊಹೆಗೂ ನಿಲುಕದ ಸಾಮರ್ಥ್ಯ

ಅಟ್ಟುಮಣಿ

ಅರಿಮಣಿ ಇಕ್ಕ – ಎಡೆಬಿಡದೆ ಕೆಲಸಕ್ಕೆ ಹಚ್ಚು

ಅತುರಿಯ – ತುರ್ಯಾವಸ್ಥೆ ಮೀರಿದವ

ಅತೈಲ ಭಕ್ಷ – ಎಲ್ಲ ಭಕ್ಷಗಳನ್ನು ತುಪ್ಪದಲ್ಲಿ ಕರಿಯಬೇಕು.

ಅನಂತ – ಆಕಾಶ

ಅನುವಾಗಿಪ್ಪ – ಅನುಕೂಲವಾಗಿರುವ

ಅನರ್ಘ್ಯ – ಸಮೃದ್ಧಿ: ಬಹು ಬೆಲೆ ಬಾಳುವ ಒಡವೆ

ಅನಿಮಿತ್ತ ಬಂಧು – ನಿಮಿತ್ತವಲ್ಲದೆ ಸಮಯಕ್ಕೆ ಒದಗುವವರು

ಅನಿಮಿಷರು – ದೇವತೆಗಳು

ಅನಭಿಮುಖ – ವಿರೋಧಿ

ಅನ್ಯತ್ರ – ಬೇರೆಯವರನ್ನು

ಅನ್ಯೂನ – ಕೊರತೆಯಿಲ್ಲದಂತೆ

ಅಪರಿಮಿತ – ಅನಂತ

ಅಪ್ಪು – ನೀರು

ಅಪ್ಪು ನಿಧಿ – ಸಮುದ್ರ

ಅಪ್ಪಾಲು ಮರಳಪ್ಪುವೆ – ಹೊರಳುವೆ

ಅಪ್ರಮೇಯ – ಅಳೆಯಲಿಕ್ಕೆ ಬಾರದ, ಸರ್ವವ್ಯಾಪಿಯಾದ, ಅಸಮಾನ್ಯ

ಅಪ್ರಾಕೃತ – ಪ್ರಕೃತಿಯನ್ನು ಮಿಕ್ಕಿದವ; ಪ್ರಕೃತಿಯ ಸಂಬಂಧವಿಲ್ಲದ ; ದಿವ್ಯ

ಅಬ್ಬರ – ಆಡಂಬರ

ಅಭ್ಯಂಗ(ಜ)ನ – ಸ್ನಾನ

ಅಭ್ಯಾಗತರು – ಸಮಯಕ್ಕೆ ಸರಿಯಾಗಿ ತಾವೇ ಬಂದವರು.

೪

ಉಗಾಭೋಗ

ಸತತ ಗಣನಾಥ ಸಿದ್ಧಿಯನೀವ ಕಾರ್ಯದಲಿ
ಮತಿ ಪ್ರೇರಿಸುವಳು ಪಾರ್ವತೀದೇವಿ ಮು-
ಕುತಿ ಪಥಕೀವ ಮನ ಮಹರುದ್ರ ದೇವರು ಭ-
ಕುತಿ ದಾಯಕಳು ಭಾರತೀದೇವಿಯು ಯು-
ಕುತ ಶಾಸ್ತ್ರಗಳಲ್ಲಿ ವನಜ ಸಂಭವನರಸಿ
ಸತ್ಕರ್ಮದಲಿ ನಡಸಿ ಸುಜ್ಞಾನ ಮತಿಯಿತ್ತು
ಗತಿ ಪಾಲಿಸುವ ನಮ್ಮ ಪವಮಾನನು
ಚಿತ್ತದಲಿ ಆನಂದ ಸುಖವನೀವಳು ರಮಾ, ಭ-
ಕುತ ಜನರೊಡೆಯ ನಮ್ಮ ಪುರಂದರವಿಠಲನು
ಸತತ ಇವರೊಳು ನಿಂತು ಕೃತಿಯ ನಡೆಸುವನು

೫

ಉಗಾಭೋಗ

ಶ್ರೀಪತಿಯ ನಾಭಿಯಿಂದ ಅಜ ಜನಿಸಿದನು
ಅಜನ ಮಾನಸ ಪುತ್ರರೇ ಸನಕಾದ್ಯರು
ಸನಕಾದ್ಯರ ಶಿಷ್ಯರೇ ದೂರ್ವಾಸರು
ದೂರ್ವಾಸರ ಶಿಷ್ಯರೇ ಪರತೀರ್ಥರು
ಪರತೀರ್ಥರ ಶಿಷ್ಯರೇ ಸತ್ಯಪ್ರಜ್ಞರು
ಸತ್ಯಪ್ರಜ್ಞರತೀರ್ಥರೆ ಪ್ರಾಜ್ಞತೀರ್ಥರು
ಪ್ರಾಜ್ಞತೀರ್ಥರ ಶಿಷ್ಯರೇ ಅಚ್ಯುತ ಪ್ರೇಕ್ಷರು
ಅಚ್ಯುತ ಪ್ರೇಕ್ಷರ ಕರ ಸಂಜಾತರೇ ಪೂರ್ಣಪ್ರಜ್ಞರು
ಪೂರ್ಣ ಪ್ರಜ್ಞರೇ ನಮ್ಮ ಭಾಷ್ಯಕಾರರು
ಭಾಷ್ಯಕಾರರೇ ನಮ್ಮ ಗುರು ಮುಖ್ಯಪ್ರಾಣರು
ಗುರುಮುಖ್ಯ ಪ್ರಾಣಪತಿ ನಮ್ಮ ಪುರಂದರವಿಠಲ

೬

ಗುರುಸ್ತೋತ್ರ

ಸುಳಾದಿ

ಧ್ರುವತಾಳ

ವ್ಯಾಸರಾಯರ ಚರಣ ಕಮಲ ದರ್ಶನವೆನ-
ಗೇಸು ಜನ್ಮದ ಸುಕೃತ ಫಲದಿ ದೊರಕಿತೊ, ಎನ್ನ
ಸಾಸಿರ ಕುಲಕೋಟಿ ಪಾವನವಾಯಿತು-
ಶ್ರೀಶನ ಭಜಿಸುವುದಕಧಿಕಾರಿ ನಾನಾದೆ
ದೋಷರಹಿತನಾದ ಪುರಂದರವಿಠಲನ
ದಾಸರ ಕರುಣವು ಎನ್ನ ಮೇಲೆ ಇರಲಾಗಿ ೧

ಮಟ್ಟತಾಳ

ಗುರು ಉಪದೇಶವಿಲ್ಲದ ಜ್ಞಾನವು
ಗುರು ಉಪದೇಶವಿಲ್ಲದ ಸ್ನಾನವು
ಗುರು ಉಪದೇಶವಿಲ್ಲದ ಧ್ಯಾನವು
ಗುರು ಉಪದೇಶವಿಲ್ಲದ ಜಪವು
ಗುರು ಉಪದೇಶವಿಲ್ಲದ ತಪವು
ಗುರು ಉಪದೇಶವಿಲ್ಲದ ಮಂತ್ರ
ಗುರು ಉಪದೇಶವಿಲ್ಲದ ತಂತ್ರ
ಉರಗನ ಉಪವಾಸದಂತೆ ಕಾಣಿರೋ,
ಗುರು ವ್ಯಾಸರಾಯರೆ ಕರುಣದಿಂದಲಿ ಎನಗೆ
ಪುರಂದರ ವಿಠಲನೇ ಪರನೆಂದರುಹಿ
ದುರಿತಭಯವನೆಲ್ಲ ಪರಿಹರಿಸಿದರಾಗಿ
ವರ ಮಹಾಮಂತ್ರ ಉಪದೇಶಿಸಿದರಾಗಿ ೨

ರೂಪಕ ತಾಳ

ಅಂಕಿತವಿಲ್ಲದ ದೇಹ ನಿಷೇಧ
ಅಂಕಿತವಿಲ್ಲದ ಕಾವ್ಯ ಶೋಭಿಸದು

ಅಂಕಿತವಿಲ್ಲದೆ ಇರಬಾರದೆಂದು ಚ–
ಕ್ರಾಂಕಿತವನು ಮಾಡಿ ಎನ್ನಂಗಕೆ –
ಪಂಕಜ ನಾಭ ಶ್ರೀ ಪುರಂದರ ವಿಠಲನ
ಅಂಕಿತವೆನಗಿತ್ತ ಗುರವ್ಯಾಸ ಮುನಿ ರಾಯ ೩

ಝಂಪೆ ತಾಳ

ನ್ಯಾಯಾಮೃತ ತರ್ಕತಾಂಡವ ಚಂದ್ರಿಕೆ
ನ್ಯಾಯ ಗ್ರಂಥವ ರಚಿಸಿ ತನ್ನ ಭಕ್ತರಿಗಿತ್ತು
ಮಾಯಾವಾದಿ ಮೊದಲಾದಿಪ್ಪತ್ತೊಂದು ಕುಭಾಷ್ಯರ
ಬಾಯ ಮುದ್ರಿಸಿದೆ ಮಧ್ವರಾಯ ಕರುಣದಿಂದ
ಶ್ರೀಯರಸ ಪುರಂದರ ವಿಠಲನ ದಾಸರೊಳು
ನಾಯಕನೆಂದೆನಿಸಿದೆ ಗುರುವ್ಯಾಸ ಮುನಿರಾಯ ೪

ತ್ರಿವಿಡ ತಾಳ

ಶೇಷಾವೇಶ ಪ್ರಹ್ಲಾದನವತಾರವೆನಿಸಿದೆ
ವ್ಯಾಸರಾಯನೆಂಬ ಪೆಸರು ನಿನಗೆಂದಂತೆ
ದೇಶಾಧಿಪಗೆ ಬಂದ ಕುಹುಯೋಗವನು ನೂಕಿ–
ನೀ ಸಿಂಹಾಸನವೇರಿ ಮೆರೆದೆ ಜಗವರಿಯೆ:
ವ್ಯಾಸಾಬ್ಧಿಯನು ಬಲಿಸಿ ಕಾಶೀದೇಶದೊಳೆಲ್ಲ
ಭಾಸುರ ಕೀರ್ತಿಯನು ಪಡೆದೆ ನೀ ಗುರು ರಾಯ
ವಾಸುದೇವ ಪುರಂದರ ವಿಠಲನ ದಾಸರೊಳು
ಲೇಶ ನಿನ್ನಂತೆ ವೆಗ್ಗಳರ ಕಾಣೆನು ನಾನು ೫

ಧ್ರುವ ತಾಳ

ಸಿರಿ ನಾರಾಯಣ ಯೋಗಿ ಶ್ರೀ ಪಾದರಾಯರಲ್ಲಿ
ವರವಿದ್ಯಾಭ್ಯಾಸವ ಮಾಡಿದೆ ನೀನು
ಧರೆಯೊಳು ವಿಜಯೀಂದ್ರ–ವಾದಿರಾಜರೆಂಬ
ಪರಮಶಿಷ್ಯರ ಪಡೆದು ಮೆರೆದ ಕೀರುತಿಯ:

೮

ಉಗಾಭೋಗ

ವರವೇದ ಪುರಾಣ ವಿವಿಧ ಶಾಸ್ತ್ರಂಗಳಿಗೆ
ಸರಸಿಜೋದ್ಭವನರಸಿ ಸರಸ್ವತಿ ದೇವಿಯು
ಪರಮ ಮುಖ್ಯಾಭಿಮಾನಿಯೆಂದು ತಿಳಿದು
ನಿರುತ ಭಜಿಸುವ ಜನಕೆ ನಿಜಗತಿಯ ಸಲಿಸುವ
ಸಿರಿಯರಸ ಪುರಂದರ ವಿಠಲ ತಾನೊಲಿವ ೨

೯

ಸುಳಾದಿ

ಹನುಮಂತ ಸುಳಾದಿ

ಧ್ರುವತಾಳ

ಹನುಮಂತನ ಬಲಗೊಂಡರೆ –
ಹರಿಪದಸೇವೆ ದೊರೆಕೊಂಬುದು।
ಹನುಮಂತನ ಬಲಗೊಂಡರೆ ನವವಿಧ
ಭಕುತಿಯು ದೊರಕೊಂಬುದು।
ಹನುಮಂತನ ಬಲಗೊಂಡರೆ ತಾರತಮ್ಯ ಪಂಚಭೇದ ಜ್ಞಾನ
ದೊರೆಕೊಂಬುದು
ಹನುಮಂತನ ಬಲಗೊಂಡರೆ ದಯದಿಂದ
ಪುರಂದರ ವಿಠಲ ತಾ ಕೈ ಪಿಡಿವ ೧

ಮಟ್ಟತಾಳ

ಹನುಮಂತನ ಕಾಣದೆ ವಾಲಿ ಬಳಲಿದ।
ಹನುಮಂತನ ಕಂಡು ಸುಗ್ರೀವ ಬದುಕಿದ ।
ಹನುಮಂತನ ಪ್ರಿಯ ಪುರಂದರ ವಿಠಲ ೨

ಝಂಪೆ ತಾಳ

ಎಂದೆಂದೂ ತನ್ನ ಮನವಗಲದೆ ಇರು ಎಂದು ।
ಅಂದೇ ಇತ್ತನು ಬೊಮ್ಮ ಪದವಿ ಹನುಮಂತಗೆ ।
ತಂದೆ ಶ್ರೀ ರಾಮಚಂದ್ರ ಪುರಂದರ ವಿಠಲ ।
ಅಂದೆ ಇತ್ತನು ಬೊಮ್ಮ ಪದವಿ ಹನುಮಂತಗೆ । ೩

ಅಟ್ಟ ತಾಳ[೧]

ಹಬ್ಬಿದರ್ಜುನನ ಧ್ವಜಾಗ್ರಕ್ಕೆ ।
ಬೊಬ್ಬಿಟ್ಟು ಬಾಹ ಪರಬಲ ಬರಿದು ಮಾಡಿದ ।
ಸಬ್ಬಲ ಸೂರೆಗೊಂಡನು ಹನುಮಂತ ।
ಪುರಂದರ ವಿಠಲನ ಬಂಟ ಹನುಮಂತ । ೪

ಆದಿತಾಳ[೨]

ರೋಮಕೋಟಿಲಿಂಗ ಹೇಮಕುಂಡಲಧರ ।
[೩]ಭೀಮ ಬೆಳೆದನು ಬ್ರಹ್ಮಾಂಡಕ್ಕೆ[೩] ।
[೪]ಸ್ವಾಮಿ ಪುರಂದರ ವಿಠಲರೇಯನ ಬಲುಬಂಟ ಹನುಮಂತ[೪] ೫

ಜತೆ

ವಿಜಯೀಭವ ಹನುಮಂತ ವಿಜಯೀಭವ ಗುಣವಂತ ।
ವಿಜಯೀಭವ ಪುರಂದರ ವಿಠಲನ ಬಲುಬಂಟ ಹನುಮಂತ ॥

೧೦

ಉಗಾಭೋಗ

ಕ್ಷೀರ ಸಾಗರಕೆ ಶ್ರೀರಮಣ ಬಂದಂತೆ
ಪ್ರಹ್ಲಾದನಿಗೊಲಿದು ನರಸಿಂಹ ಬಂದತೆ

ಪುರಂದರ ಸಾಹಿತ್ಯ ದರ್ಶನ ಸಂಪುಟದಲ್ಲಿಯ ಪಾಠಾಂತರ : ೧. ಆದಿ ತಾಳ ಎಂದು ಇದೆ. ೨. ಅಟ್ಟತಾಳ ಎಂದು ಇದೆ., ೩. ಭೀಮ ಒಡೆಯ ಬೆಳೆದನು ಬ್ರಹ್ಮಾಂಡಕ್ಕೆ , ೪. ಸ್ವಾಮಿಪುರಂದರ ವಿಠಲನ ನಿಜದೂತ ಹನುಮಂತ

ಭಗೀರಥನ ಮನೆಗೆ ಶ್ರೀಗಂಗೆ ಬಂದಂತೆ
ಮುಚುಕುಂದನ ಮನೆಗೆ ಶ್ರೀ ಕೃಷ್ಣ ಬಂದಂತೆ
ಲಕ್ಷ್ಮೀಕಾಂತ ಪುರಂದರ ವಿಠಲ ಬರಲು ನನ್ನ
ನಾಲಗೆ ತುದಿಯಲಿ ಗಾಯನ ಮಾಡುತ ಧನ್ಯನಾದೆ.

೧೧

ಉಗಾಭೋಗ

ಬಲಿಯ ಮನೆಗೆ ವಾಮನ ಬಂದಂತೆ
ಭಗೀರಥಗೆ ಶ್ರೀಗಂಗೆ ಬಂದಂತೆ
ಮುಚುಕುಂದಗೆ ಶ್ರೀ ಮುಕುಂದ ಬಂದಂತೆ
ಗೋಪಿಯರಿಗೆ ಗೋವಿಂದ ಬಂದಂತೆ
ವಿದುರನ ಮನೆಗೆ ಶ್ರೀಕೃಷ್ಣ ಬಂದಂತೆ
ವಿಭೀಷಣನ ಮನಗೆ ಶ್ರೀ ರಾಮ ಬಂದಂತೆ
ನಿನ್ನ ನಾಮವು ಬಂದು ಎನ್ನ ನಾಲಗೆಯಲಿ
ನಿಂದು ಸಲಹಲಿ ಶ್ರೀ ಪುರಂದರ ವಿಠಲ.

೧೨

ಉಗಾಭೋಗ

ಹರಿಕಥಾ ಶ್ರವಣಕ್ಕೆ ಮನವಿಟ್ಟ ಪ್ರೌಢ
ಅರವತ್ತು ಗಳಿಗೆಗಳ ವ್ಯರ್ಥ ಹೋಗಾಡ
ಪರಮ ಪದವಿಗೆ ಐದುವನವನೆ ಗಡ
ನರಕದ ಬಟ್ಟೆ ದೂರದಲೊಮ್ಮೆ ನೋಡ
ಪುರಂದರ ವಿಠಲನಂಘ್ರಿ ಗಾಢ–
ತರದಲಪ್ಪುವ ಮೈಮರೆದು ಮಾತಾಡ.

೧೩

ಉಗಾಭೋಗ

ಹರಿನಾಮ ಕೀರ್ತನೆಯ ಭಕುತಿಯಿಂ ಕೇಳ್ವ
ಚಿರಸ್ವಭಾವದಲಿ ಕಣ್ಣೊರತೆಯ ತಾಳ್ವ
ಹರಿಯಂತೆ ಕೂಗಿ ಸುಜನರೊಳು ಬಾಳ್ವ
ದುರಿತ ಗಜಗಳ ಮಂಡೆಯನೇರಿ ಸೀಳ್ವ
ಹರುಷಾಮೃತಾಬ್ಧಿಯೊಳು ಇಳಿಮುಳಿಗೇಳ್ವ
ಪುರಂದರ ವಿಠಲೇಶನ ಹೊಂದಿ ತಾ ಬಾಳ್ವ.

೧೪

ಉಗಾಭೋಗ

ನೀನೆ ಕರ್ತನು ಅಕರ್ತರು ಅಜಭವೇಂದ್ರಾದ್ಯಮರರು
ನೀನೆ ಸ್ವತಂತ್ರ ಅಸ್ವತಂತ್ರರವರು
ನೀನೆ ಸಾರಾತ್ಮಕನಾಗಿ ಸ್ವೀಕರಿಸುವವ
ಜ್ಞಾನ ನಿನ್ನಧೀನ ಕರ್ಮನಿನ್ನಧೀನ
ಅನಾದಿಕಾಲದಿ ಇರುವ ಜೀವರಿಗೆ
ನೀನೆ ಸುಖವನೀವ ನೀನೆ ದುಃಖವನೀವ
ಅನಾದಿಗಳು ಜೀವಕರ್ಮ ಜ್ಞಾನ
ನಿನ್ನಧೀನವಯ್ಯ ಅನಾದಿಕರ್ಮ ನೀನೆ ಪುರಂದವಿಠಲ
ನೀನೆ ಸಲಹೋ ನಿನ್ನಡಿ ಪೊಂದಿದವರ.

೧೫

ಉಗಾಭೋಗ

ನೀನೆ ಕರ್ತನು ಅಕರ್ತರು ಸಿರಿ ಅಜಭವಾದಿ
ಇಂದ್ರಾದ್ಯಮರರು

ನೀನೆ ಸ್ವತಂತ್ರ ಅಸ್ವತಂತ್ರರವರು ನೀನೆ
ಸರ್ವಾತ್ಮಕನಾಗಿ ಸ್ವೀಕರಿಸುವಾ
ಜ್ಞಾನ ನಿನ್ನಾಧೀನ ಕರ್ಮ ನಿನ್ನಾಧೀನ
ಅನಾದಿಕಾಲದಿ ಜೀವ ಕರ್ಮಜ್ಞಾನ ಅನಾದಿಗಳು
ನಿನ್ನಾಧೀನವಯ್ಯ
ಅನಾದಿ ಕರ್ಮ ನೀನೆ ಪುರಂದರವಿಠಲ
ನೀನೆ ಸಲಹೋ ನಿನ್ನ ಅಡಿಯ ಪೊಂದಿದವರ.

೧೬

ಉಗಾಭೋಗ

ಸಂಕರ್ಷಣನೆನಿಸಿ ಶಂಕರನ ಅಂತರ್ಯಾಮಿಯಾಗಿ
ಸಂಹಾರ ಮಾಡುವೆ
ಸರಸಿಜೋದ್ಭವನಲ್ಲಿ ಅಂತರ್ಯಾಮಿ ವಾಸುದೇವನಾಗಿ
ಸೃಷ್ಟಿಯ ಮಾಡುವೆ
ಅನಿರುದ್ಧನೆನಿಸಿ ಪಾಲನೆ ಮಾಡುವೆ ಅನಾದಿ ಕಾಲದಿ
ನೀನು ನಿತ್ಯ , ಬ್ರಹ್ಮರುದ್ರರೇ ಅವರು
ಬೊಮ್ಮ ಪುರಂದರವಿಠಲರೇಯ

೧೭

ಉಗಾಭೋಗ

ಕೆಟ್ಟೆನೆಂದೆನಲೇಕೆ ಕ್ಲೇಶಪಡುವುದೇಕೆ
ಹೊಟ್ಟೆಗೋಸುಗ ಪರರ ಕಷ್ಟಪಡಿಸಲೇಕೆ
ಬೆಟ್ಟದ ಮೇಲಿದ್ದರೇನು ವನದೊಳಿದ್ದರೇನು
ಹುಟ್ಟಿಸಿದ ದೇವರು ಹುಲ್ಲುಮೇಯಿಸುವನೆ
ಗಟ್ಟಿಯಾಗಿ ನೆರನಂಬು ಪುರಂದರವಿಠಲನ
ಸೃಷ್ಟಿ ಮಾಡಿದ ಬ್ರಹ್ಮ ಸ್ಥಿತಿ ಮಾಡಲರಿಯನೇ?

೧೮

ಉಗಾಭೋಗ

ಕೆಟ್ಟೆನೆಂದೆನಲೇಕೋ ಕ್ಲೇಶ ಪಡುವದೇಕೋ ಗೇಣು
ಹೊಟ್ಟೆಗಾಗಿ ಪರರ ಕಷ್ಟ ಬಡಿಸಲೇಕೋ
ಹುಟ್ಟಿಸಿದ ದೇವ ಹುಲ್ಲು ಮೇಯಿಸುವವನಲ್ಲ
ಬೆಟ್ಟದ ಮೇಲಿದ್ದರೇನು ವನದೊಳಿದ್ದರೇನು
ಸೃಷ್ಟಿ ಮಾಡಿದ ದೇವ ಸ್ಥಿತಿ ಮಾಡಲರಿಯನೆ
ಗಟ್ಯಾಗಿ ಸಲಹುವ ಪುರಂದರವಿಠಲ.

೧೯

ಉಗಾಭೋಗ

ದಾಸನಾದವನಿಗೆ ವೈಕುಂಠಲೋಕದಲ್ಲಿ ವಾಸ
ದಾಸನಾದವನೆಲ್ಲಿ ಪೋದರಾಭಾಸ
ದಾಸನೆಂದೆನಿಸಿದ ಭಾರತೀಯ ಗಂಡ
ಸತ್ಯ ಲೋಕವನಾಳ್ವ ಶೌಂಡ
ದಾಸರ ಹೃದಯದಿ ಮಿನುಗುವ ವಾಸವಾದಿವಂದ್ಯ ಶ್ರೀಶದ್ವಿ–
ಸಾಸಿರಂಬಕಶರಣ್ಯ ದಾಸರಿಗೊಲಿವ ಶ್ರೀಪುರಂದರವಿಠಲ.

೨೦

ಉಗಾಭೋಗ

ತಪ್ಪುರಾಶಿಗಳ ಒಪ್ಪಿ ಕಾಯೊ ಕೃಪಾಳು
ಮುಪ್ಪುರವನಳಿದಂಥ ಮುನೀಂದ್ರವಂದ್ಯ
ಅಪ್ರಮೇಯನೆ ನಿನ್ನ ಅದ್ಭುತ ಮಹಿಮೆಗಳ
ಅಪ್ಪು ನಿಧಿಯಲ್ಲಿ ಪುಟ್ಟಿದವಳು ಬಲ್ಲಳೆ
ಕಪ್ಪು ಮೇಘಕಾಂತಿಯೊಪ್ಪುವ ತಿಮ್ಮಪ್ಪ
ಅಪ್ರಾಕೃತರೂಪ ಪುರಂದರವಿಠಲ

೨೧

ಉಗಾಭೋಗ

ಹರಿ ನೀನೊಲಿವಂತೆ ಮಾಡು
ಒಲಿದರೆ ತಿರಿವಂತೆ ಮಾಡು
ತಿರಿದರೆ ಆರೂ ನೀಡಿದಂತೆ ಮಾಡು
ನೀಡಿದರೆ ಹೊಟ್ಟೆ ತುಂಬಿದರೆ ಬಟ್ಟೆ ದೊರೆಯದಂತೆ ಮಾಡು
ಬಟ್ಟೆ ದೊರೆತರೆ ಇಂಬು ದೊರೆಯದಂತೆ ಮಾಡು
ಇಂಬು ದೊರೆತರೆ ನಿನ್ನ ಪಾದಾರವಿಂದದಲಿ
ಇಂಬುದೋರೋ ಪುರಂದರವಿಠಲ.

೨೨

ಉಗಾಭೋಗ

ಹರಿ ನೀವೊಲಿವಂತೆ ಮಾಡು
ಒಲಿದರೆ ತಿರಿವಂತೆ ಮಾಡು
ತಿರಿದರೆ ದಾರು ನೀಡದಂತೆ ಮಾಡು
ದಾರು ನೀಡಿದರು ಹೊಟ್ಟೆ ತುಂಬದಂತೆ ಮಾಡು
ಹೊಟ್ಟೆ ತುಂಬಿದರೆ ಬಟ್ಟೆ ದೊರೆಯದಂತೆ ಮಾಡು
ಬಟ್ಟೆ ದೊರೆತರೆ ಇಂಬು ದೊರೆಯದಂತೆ ಮಾಡು
ಇಂಬು ದೊರೆಯದಿದ್ದರೆ ರಂಗ ನಿನ್ನ ಪಾದಾರವಿಂದದಲ್ಲಿ
ಇಂಬಿಟ್ಟು ಸಲಹೊ ಪರಂದರವಿಠಲ.

೨೩

ಉಗಾಭೋಗ

ನಿನ್ನ ನಾಮಭಂಡಾರವ ಕದ್ದ ಕಳ್ಳ (ನು) ನಾನು
ನಿನ್ನ ಭಕ್ತಿಯೆಂಬ ಸಂಕೋಲೆಯ ಹಾಕಿ

ನಿನ್ನ ದಾಸರ ಕೈಯ್ಗೆ ಎನ್ನ ಒಪ್ಪಿಸಿಕೊಟ್ಟು
ನಿನ್ನ ಮುದ್ರಿಕೆಯಿಂದ ಗಾಸಿ ಮಾಡಿಸೊ ಕೃಷ್ಣ
ನಿನ್ನ ವೈಕುಂಠದುರ್ಗದಲ್ಲಿ ಎನ್ನ ಸೆರೆಯಿಟ್ಟು
ಚೆನ್ನಾಗಿ ಸಲಹೊ ಶ್ರೀ ಪುರಂದರವಿಠಲ.

೨೪

ಸುಳಾದಿ

ಧ್ರುವತಾಳ

ಪಾದ ನಖ ಪರಿಪೂರ್ಣ ಜಾನು ಜಂಘೆ ಪರಿಪೂರ್ಣ ।
ಊರು ಕಟಿ ಪರಿಪೂರ್ಣ ಜಘನ ಪರಿಪೂರ್ಣ ।
ಉದರ ತ್ರಿವಳಿ ವಕ್ಷ ಬಾಹು ಪರಿಪೂರ್ಣ ।
ಪದುಮ ಗದೆ ಚಕ್ರ ಶಂಖ ಪರಿಪೂರ್ಣ ।
ವದನ ಪರಿಪೂರ್ಣಕಂಬಕಂಠ ಪರಿಪೂರ್ಣ ।
ಸರ್ವಾಂಗ ಪರಿಪೂರ್ಣ ಪುರಂದರವಿಠಲನ ।
ಸರ್ವಾಂಗ ಪರಿಪೂರ್ಣ । ೧

ಮಟ್ಟಿತಾಳ

ಹಮ್ಮು ಪರಿಪೂರ್ಣ ಮನ್ಯು ಪರಿಪೂರ್ಣ ।
ಸುಮ್ಮನ ಪರಿಪೂರ್ಣಬುದ್ಧಿ ಪರಿಪೂರ್ಣ ।
ಚಿತ್ಸುಖ ಪರಿಪೂರ್ಣ ಪುರಂದರವಿಠಲನ ।
ಹಮ್ಮುಪರಿಪೂರ್ಣ ೨

ಝಂಪೆತಾಳ

ಅನಂತಬಾಹುವಾಗಿ ಅನಂತಚಕ್ಷುವಾಗಿ ।
ಅನಂತಕಲ್ಪದಲ್ಲಿ ಅನಂತನಾಮ ಶ್ರೀಪುರಂದರವಿಠಲನ ।
ಅನಂತ ಅವತಾರಗಳು ಪರಿಪೂರ್ಣ ।
ಅನಂತ ಅವತಾರಗಳು ಪರಿಪೂರ್ಣ । ೩

ಅಟ್ಟತಾಳ

ಶ್ರೋತುರ ನೇತುರ ಘ್ರಾಣ ತ್ವಗ್ರಸನವು
ಪಾಣಿ ಪಾದ ಪಾಯೂಪಸ್ಥಾದಿ ಈರೈದು
ಮಾತರಿಶ್ವಪ್ರಿಯ ಪುರಂದರವಿಠಲನ
ಜ್ಞಾನ–ಕರ್ಮೇಂದ್ರಿಯಗಳು ಪರಿಪೂರ್ಣ ೪

ಏಕತಾಳ

ಆವಾವ ಕಾಲದಲ್ಲಿ ಆವಾವ ದೇಶದಲ್ಲಿ ।
ಆವಾವ ಜೀವರಲಿ ಶ್ರೀವಲ್ಲಭ ಪರಿಪೂರ್ಣ ।
ಭೂವಲ್ಲಭ ಪರಿಪೂರ್ಣ ಸಕಲ ಲೋಕದೊಲೊಬ್ಬ ।
ಪುರಂದರವಿಠಲನು ಪೂರ್ಣ ಪಾದನಖ ಪರಿಪೂರ್ಣ । ೫

ಜತೆ

ಪರಿಪೂರ್ಣ ಜ್ಞಾನಪೂರ್ಣ ಆನಂದಪರಿಪೂರ್ಣ
ಪುರಂದರವಿಠಲವಿಭುವೆ ಪಾದನಖ ಪರಿಪೂರ್ಣ ॥

೨೫

ಪರಿಪೂರ್ಣಸುಳಾದಿ

ಸುಳಾದಿ

ಧ್ರುವ ತಾಳ

ಪಾದ ನಖ ಪರಿಪೂರ್ಣ ಜಾನು ಜಂಘ ಪರಿಪೂರ್ಣ ।
ಊರು ಕಟಿ ಪರಿಪೂರ್ಣ ಜಘನ ಪರಿಪೂರ್ಣ ।
ಉದರ ತ್ರಿವಳಿ ವಕ್ಷಬಾಹು ಪರಿಪೂರ್ಣ ।
ಸರ್ವಾಂಗ ಪರಿಪೂರ್ಣ ಪರಂದರವಿಠಲನ
ಸರ್ವಾಂಗ ಪರಿಪೂರ್ಣ ೧

ಮಟ್ಟ ತಾಳ

ಮನ ಪರಿಪೂರ್ಣ ಬುದ್ಧಿ ಪರಿಪೂರ್ಣ ।
ಚಿತ್ತಪರಿಪೂರ್ಣ ಹಮ್ಮು ಪರಿಪೂರ್ಣ ।
ಆತುಮ ಪರಿಪೂರ್ಣ ಪುರಂದರವಿಠಲನು ಪರಿಪೂರ್ಣ ।
ಮಾರುತಿ ಮನದಲಿ ಪರಿಪೂರ್ಣ ಕಾಣಿರೊ । ೨

ತ್ರಿವಿಡೆ ತಾಳ

ವಿಶ್ವತೋಮುಖನಾಗಿ ವಿಶ್ವತೋಬಾಹುವಾಗಿ ।
ವಿಶ್ವತೋಚಕ್ಷುವಾಗಿ ಪುರಂದರವಿಠಲನು ।
ತಾನಿಹ ಕಾಣಿಗೆ ವಿಶ್ವತೋಚಕ್ಷುವಾಗಿ ।
[ಅನಂತ ಬಾಹುವಾಗಿ ಅನಂತ ಚಕ್ಷುವಾಗಿ ।
ಅನಂತ ಕಲ್ಪದಲ್ಲಿ ಅನಂತನಾಮ ಶ್ರೀಪರಂದರವಿಠಲನ ।
ಅನಂತ ಅವತಾರಗಳು ಪರಿಪೂರ್ಣ] ೩

ಅಟ್ಟ

ಶ್ರೋತ್ರ ನೇತ್ರ ಪರಿಪೂರ್ಣ ಘ್ರಾಣತ್ವಗ್ರಸನ ।
ಪಾಣಿಪಾದವಾಯು ಉಪಸ್ಥಾದಿ ಈ ರೈದು ।
ಮಾತರಿಶ್ವ ಪ್ರಿಯ ಪರುಂದರವಿವಠಲನ ।
ಜ್ಞಾನ ಕರ್ಮೇಂದ್ರಿಯಗಳ ಪರಿಪೂರ್ಣ । ೪

ಆದಿ

ಆವಾವ ಕಾಲದಲ್ಲಿ ಅವಾವ ದೇಶದಲ್ಲಿ ।
ಆವಾವ ಜೀವರಲಿ ಶ್ರೀವಲ್ಲಭ ಪರಿಪೂರ್ಣ ।
ಭೂವಲ್ಲಭ ಪರಿಪೂರ್ಣ ಸಕಲ ಲೋಕದೊಳೊಬ್ಬ ।
ಪುರಂದರವಿಠಲನು ಪೂರ್ಣ । ೫

ಜೊತೆ

ಪರಿಪೂರ್ಣ ಜ್ಞಾನಪೂರ್ಣಾನಂದ
ಪರಿಪೂರ್ಣ ಪುರಂದರವಿಠಲ ವಿಭುವೆ

[ಅರಸಿ ಇಂದಿರೆ ಪರಿಪೂರ್ಣ ಪುರಂದರವಿಠಲ
ಸರಸಿಜೋದ್ಭವ ಶರ್ವಾದಿಗಳೆಲ್ಲ ಅಪೂರ್ಣರು]

೨೬

ಜೋ ಜೋ ಸುಳಾದಿ

ಸುಳಾದಿ

ಧ್ರುವತಾಳ

ಅಂಬುಧಿ ತೊಟ್ಟಿಲಾಗಿ ಆಲದೆಲೆಯಾಗಿ ।
ಅನಂತ ಮೃದುಹಾಸಿಗೆಯಾಗಿ ಅಯ್ಯಾ ।
ವೇದ ನೇಣುಗಳಾಗಿ ವೇದಾಂತದೇವಿಯರು ।
ಪಾಡಿ ಮುದ್ದಾಡಿ ತೂಗುವರಾಗಿ
ಆದಿಪುರುಷನಾತ ಅಜಾತ ಅಜನಪಿತ ಅಂಬುಧಿ ತೊಟ್ಟಿಲಾಗಿ
ಅಗಮ್ಯ ಅಗೋಚರನೆ ಶಿಶುವು ಆಗಿ ಅಯ್ಯಾ ।
ಆ ನಂದನರು ಗೋಪಾಲರು ।
ಆ ಯೊಶೋದಾದಿ ಗೋಪಿಯರು ।
ಇನ್ನೆಂಥ ಪರಮಾನಂದವನುಂಬರೋ ।
ಪುರಂದರವಿಠಲನೊಬ್ಬನೆ ಬಲ್ಲನವ । ೧

ಮಟ್ಟಿತಾಳ

ಜೋ ಜೋ ಜೋ ಎನ್ನ ಸಿರಿಹರಿಮೂರುತಿ ।
ಜೋ ಜೋ ಜೋ ಎನ್ನ ಕಂದ ಗೋವಿಂದ ।
ಜೋ ಜೋ ಜೋ ಎನ್ನ ತಮ್ಮ ದಮ್ಮಯ್ಯ ।
ಜೋ ಜೋ ಜೋ ಎನ್ನ ಹೊನ್ನುರನ್ನವೇ ।
ಜೋ ಜೋ ಜೋ ಎನ್ನ ಮರಿಯೆ ಬೊಮ್ಮದ ಮರಿಯೇ ।
ಜೋ ಜೋ ಜೋ ಎನ್ನ ಸಿರಿಯೆ ಸುರರ ಸಿರಿಯೆ ।
ಜೋ ಜೋ ಜೋ ಎನ್ನ ಸ್ವಾಮಿ ಸುರರಂತರ್ಯಾಮಿ ।
ಜೋ ಜೋ ಜೋ ಎನ್ನ ಪುರಂದರವಿಠಲ । ೨

ತ್ರಿವಿಡಿತಾಳ

ಮಂಥನ ಮಾಡಲೀಯೆ ಮಾಧವ ಮೊಸರು ಮೀಸಲು ।
ಇಂಥದುಂಟೇ ರಂಗ ಬಿಡು ಬಿಡುಕಂಡೆಯಾ ಕಡೆಗೋಲು ।
ಎಂಥವನೋ ನೀನು ಏಳುತ್ತಾಗಳೆ ಜಗಳ ।
ಇಂಥದುಂಟೇ ರಂಗ ಬಿಡು ಬಿಡು ಕಂಡೆಯಾ ಕಡೆಗೋಲು ।
ಎಂಥವನೋ ನೀನಂಜದೆ ಎನ್ನಾಳಿದ ಪುರಂದರವಿಠಲ ।
ಇಂತದುಂಟೇ ಬಿಡು ರಂಗಾ ಬಿಡು ಬಿಡು
ಕಂಡೆಯಾ ಕಡೆಗೋಲು ೩

ಅಟ್ಟತಾಳ

ಅಷ್ಟಮಹಿಷಿಯರು ಸಿಟ್ಟುಗುಟ್ಟಲಿ ಎನ್ನ ।
ಗೋಪಾಂಗನೆಯರು ನೂಕಿಸಲಿ ಎನ್ನ ।
ಸೋಳಸಾಸಿರ ಮಂದಿ ಅಳು ಮಾದಲೆ ಎನ್ನ ।
ಸೋಳಸಾಸೆರ ಮಂದಿ ಕೀಳು ಮಾಡಲಿ ಎನ್ನ ।
ಪುರಂದರವಿಠಲನ್ನ ಕಂಡಲ್ಲಿ ಬಿಡುವೆನೆ ।
ಮೇಲೆ ಬಂದುದು ಮತ್ತು ನೋಡಿಕೊಂಬೆನು ನಾನು
ಸೋಳಸಾಸಿರ ಮಂದಿ ೪

ಆದಿತಾಳ

ದೇಹವ ಮಾಡಿದೆ ದೇಹಿಯ ಮಾಡಿದೆ ।
ದೇಹ ಸಂಬಂಧವ ಮಾಡಿದೆ ಕೂಡಿದೆ ।
ದೇಹವು ತಾನೆಂಬ ಭ್ರಮೆಯನು ಮಾಡಿದೆ ।
ಶ್ರೀ ಹರಿ ವೃಥಾಪ್ರಲಾಪ ।
ದೇವನೀನಾದೆಯೆಲೊ ದೇಹಿ ನಾನಾದೆನು ।
ಶ್ರೀಧರನಾಮಕ ಪುರಂದರವಿಠಲ । ೫

ಜತೆ

ಅನಂತ ಮೂರುತಿ ಅನಂತ ಕೀರುತಿ
ಅನಂತ ನಾಮಕ ಪುರಂದರವಿಠಲ

೨೭

ಜೋಗುಳಸುಳಾದಿ

ಸುಳಾದಿ

ಧ್ರುವ ತಾಳ

ಅಂಬುಧಿ ತೊಟ್ಟಿಲಾಗೆ ಆಲದೆಲೆಯಾಗಿ ।
ಅನಂತ ಮೃದುಹಾಸಿಗೆಯಾಗಿ ಅಯ್ಯ ।
ವೇದ ನೇಣುಗಳಾ ವೇದಾಂತದೇವಿಯರು ।
ಪಾಡಿ ಮುದ್ದಾಡಿ ತೂಗುವರಾಗಿ ।
ಆನಂದ ಗೋಪಿಯರು ಇನ್ನೆಂಥ
ಪರಮಾನಂದವನುಂಬರೊ ।
ಪುರಂದರವಿಠಲ ಬಲ್ಲನಯ್ಯ । ೧

ಮಟ್ಟ ತಾಳ

ಜೋ ಜೋ ಜೋ ಎನ್ನ ಸಿರಿಹರಿ ಮೂರುತಿ ।
ಜೋ ಜೋ ಜೋ ಎನ್ನ ಬೊಮ್ಮದ ಮರಿಯೆ ।
ಜೋ ಜೋ ಜೋ ಎನ್ನ ಪುರಂಧರವಿಠಲ ।
ಜೋ ಜೋ ಜೋ ಎನ್ನ ಎನ್ನ ತಮ್ಮ ದಮ್ಮಯ್ಯ
ಜೋ ಜೋ ಜೋ ಎನ್ನ ಎನ್ನ ಕಂದ ಗೋವಿಂದ ೨

ತ್ರಿವಿಡೆ ತಾಳ

ಅಷ್ಟಮಹಿಷಿಯರು ಇಟ್ಟು ಗುಟ್ಟಲಿ ಅಯ್ಯ ।
ಸೋಳ ಸಾಸಿರ ಮಂದಿ ಆಳು ಮಾಡುವರೆನ್ನ ।
ಸೋಳಸಾಸಿರ ಮಂದಿ ಬೀಳು ಮಾಡುವರೆನ್ನ ।
ಪುರಂದರವಿಠಲನ್ನ ಕಂಡಲ್ಲೆ ಬಿಡುವೆನೆ ।
ಮೇಲೆ ಬಂದದ್ದು ಮತ್ತೆ ನೋಡಿಕೊಂಬೆ ಅಯ್ಯ ಅಯ್ಯಾ ೩

ಅಟ್ಟ ತಾಳ

ಮಂಥನ ಮಾಡಲು ಮಾಧವ ಮೊಸರೆ ಮೀಸಲು ।
ಇಂಥಾದ್ದುಂಟೆ ಬಿಡು ಬಿಡು ಕರದಲ್ಲಿ ಕಡೆಗೋಲು ।
ಎಂಥವನೊ ನೀನಂಜದೆ ಎನ್ನಾಳಿದೆ ।
ಪುರಂದರವಿಠಲ ಇಂಥಾದ್ದುಂಟೆ ಬಿಡು ಕರದಲ್ಲಿ ಕಡಗೋಲು ೪

ಆದಿ ತಾಳ

ದೇಹವ ಮಾಡಿದೆ ದೇಹವ ಕೂಡಿದೆ ।
ದೇಹವು ತಾನೆಂಬ ಭ್ರಮೆಯ ಬಿಡಿಸಿದೆ ।
ದೇಹಿ ನಾನಾದೆನೊ ದೇವ ನೀನಾದೆಯೋ ।
ಶ್ರೀವರನಾಥ ಪುರಂದರವಿಠಲ ೫

ಜೊತೆ

ಅನಂತಮೂರತಿ ಅನಂತಕೀರುತಿ
ಅನಂತನಾಭ ಪುರಂದರವಿಠಲ

೨೮

ಉಗಾಭೋಗ

ಇಂದಿನ ದಿನವೇ ಶುಭದಿನವು ।
ಇಂದಿನ ವಾರವೆ ಶುಭವಾರ ।
ಇಂದಿನ ತಾರೆಯೆ ಶುಭತಾರೆ ।
ಇಂದಿನ ಯೋಗವೆ ಶುಭಯೋಗ ।
ಇಂದಿನ ಕರಣವೆ ಶುಭಕರಣ ।
ಇಂದು ಪುರಂದರವಿಠಲರಾಯನ ।
ಸಂದರುಶನ ಫಲವೆಮಗಾಯಿತ್ತು.

೨೯

ಉಗಾಭೋಗ

ಇಂದಿನ ದಿನ ಶುಭದಿನ ।
ಇಂದಿನ ವಾರ ಶುಭವಾರ ।
ಇಂದಿನ ತಾರೆ ಶುಭತಾರೆ ।
ಇಂದಿನ ಯೋಗ ಶುಭಯೋಗ ।
ಇಂದಿನ ಕರಣ ಶುಭಕರಣ ।
ಇಂದಿನ ಲಗ್ನ ಶುಭಲಗ್ನ ।
ಇಂದು ಪುರಂದರವಿಠಲರಾಯನ ಪಾಡಿದ ।
ದಿನವೇ ಶುಭದಿನವು ।

ಆರ್ತಭಾವ

೩೦

ಸಾಧನವಿಚಾರಸುಳಾದಿ

ಧ್ರುವತಾಳ

ಸ್ವರ್ಗ ಮರ್ತ್ಯ ಪಾತಾಳಗಳಲ್ಲಿ ತಿರುತಿರುಗಿ ಬಳಲಿದೆನು ।
ದೇಹಯೋಗ ವಿಯೋಗ ಹಮ್ಮು
ಮಮತೆಯಿಂದಲಿ ಬಳಲಿದೆನು ।
ಯಮನ ಪಟ್ಟಣಕೆ ಎಂಬಂತೆಂಟುಸಾಸಿರ ಬಾರಿ ।
ಹೋಗಿ ಬಂದು ಬಂದು ಬಳಲಿದೆನಯ್ಯ ।
ಅಲ್ಲಿ ಯಮನಾಳ್ಗಳಿಂದ ನೊಂದೆನು ನಾನಲ್ಲಿ ।
ವೈತರಣಿಯಿಂದ ಬಳಲಿದೆನು ನಾನಲ್ಲಿ ।
ನರಕಭಾಜನನಾಗಿ ಹೋದೆನೊ ಪುರಂದರವಿಠಲ ।
ಇನ್ನು ಆರೆ ಆರೆನಯ್ಯ ಕರುಣಿಸು ಕರುಣಿಸಯ್ಯ ।
ಕರುಣಾಕರನೆ ದಮ್ಮಯ್ಯ ೧

ಮಟ್ಟತಾಳ

ಸಂಚಿತಕರ್ಮಗಳನಂತಕೋಟಿಗಳು ।
ಪ್ರಾರಬ್ಧ ಕರ್ಮಗಳು ಕೋಟಿಕೋಟಿಗಳು ।
ಆಗಾಮಿ ಕರ್ಮಗಳು ಕೋಟಿ ಕೋಟಿಗಳು
ಪುರಂದರವಿಠಲನ ಕಂಡಲ್ಲದೆ ಎಲ್ಲಿಯ ಮುಕುತಿ? ೨

ಝಂಪೆತಾಳ

ಜ್ಞಾನಭಕುತಿ ವೈರಾಗ್ಯವಿಲ್ಲದೆ ।
ಮಾನವ ಜನ್ಮವದೇತಕೆ ಸುಡುಸುಡು ।
ಆಹಾರ ಭಯ ನಿದ್ರೆಗೆ ಸ್ತ್ರೀಗೋಷ್ಠಿ ಎಂಬುವು ।
ವಿಹಾರ ಪಶು–ಪಕ್ಷಿ–ಮೃಗಕೆ ದಕ್ಕಲು ಸರಿ ।
ದೀನವತ್ಸಲ ಪುರಂದರವಿಠಲನ ।
ನೆನೆವ ಕ್ರಿಮಿಕೀಟ ಜನುಮವೆ ಸಾಕು ೩

ರೂಪಮಕತಾಳ

ಕೃಛ್ರ ತಪದಿಂದೆ ಬರಿದೆ ಬಳಲುವರು ಗೋ ।
ವತ್ಸ ಪಥದಂತೆ ಭವಸಾಗರವ ದಾಂಟಿ ಆ ।
ಚಿತ್ಸುಖನೋಲಯಿಸ ಬಲ್ಲವರು ಗೋ ।
ವತ್ಸ ಪದದಂತೆ ಭವಸಾಗರವ ದಾಂಟೆ ಶ್ರೀ ।
ವತ್ಸ ಚಿಹ್ನಾಂಕಿತ ಪುರಂದರವಿಠಲನ ಸಾರುವರು ೪

ತ್ರಿಪುಟತಾಳ

ಚಂದ್ರನು ನಿನ್ನ ಕಿತ್ತೀಳೆಯ ಹಣ್ಣಿಂದ ।
ಇಂದ್ರ ನಿನ್ನ ಪಾರಿಜಾತವ ತಂದ ।
ಎಲೆ ದೇವತೆಗಳಿರ ಅಂಜಿ ಬೆಚ್ಚುತ್ತಲಿರಿ ।
ಪುರಂದರವಿಠಲನೆ ಉದ್ದಂಡ ದೈವ ನೋಡಿ ೫

ಅಟತಾಳ

ವರುಣ ದೂತರು ಬಂದು ನಂದಗೋಪನ ಪಿಡಿದು ।
ವರುಣಪಾಶದಿ ಕಟ್ಟಿ ಕೊಂಡೊಯ್ಯಲು ।
ವರುಣಲೋಕಕ್ಕೆ ದಾಳಿಯನ್ನಿಟ್ಟು ।
ವರುಣನ ಕೈಯಲಿ ಪೂಜೆ ಮಾಡಿಸಿಕೊಂಡ ।
ಪುರಂದರವಿಠಲ ಈಶರಿಗೀಶ ೬

ಆದಿತಾಳ

ಸಾಸಿರಶಿರನೆ ಸಾಸಿರಲೋಚನನೆ ।
ಸಾಸಿರಭುಜನೆ ಸಾಸಿರಕರನೆ ।
ಸಾಸಿರ ಉದರನೆ ಸಾಸಿರಚರಣನೆ ।
ಸಾಸಿರ ನಮೋ ನಮೋ ಪುರಂದರವಿಠಲ ೭

ಜತೆ

ಎಲ್ಲಿ ಕಂಡೆರಗುವೆ ಎಲ್ಲಿ ಕೊಂಡಾಡುವೆ ।
ಫಾಲ್ಲಲೋಚನ ನಮ್ಮ ಪುರಂದರ ವಿಠಲನ ॥

೩೧

ಉಗಾಭೋಗ

ಇಂದಿಗೆಂಬ ಚಿಂತೆ ನಾಳಿಗೆಂಬಾ ಚಿಂತೆ ।
ನಾಡಿಗೆಂಬಾ ಚಿಂತೆ ತ್ಲೊತ್ತಿಗೇಕಯ್ಯ ।
ಒಡೆಯನುಳ್ಳನಕ ಕೊತ್ತಿಗೇತರ ಚಿಂತೆ ।
ಅಡಿಗಡಿಗೆ ನಮ್ಮನಾಳವ ಕಾವ ಚಿಂತೆಯವ ।
ನೊಡೆಯ ಪುರಂದರವಿಠಲರಾಯನು ಇರುತಿರೆ ।
ಒಡೆಯನುಳ್ಳ ಕೊತ್ತಿಗೇತರ ಚಿಂತೆ

೩೨

ಉಗಾಭೋಗ

ಗಾಣದೆತ್ತಿನಂತೆ ತಿರುಗಾಡಲಾರೆ
ದಂಡಿ(ಗೆ)ಯ ನೊಗದಂತೆ(ನಾ) ಬೀಳಲಾರೆ
ನವಿಲಂತೆ ನಾನಿನ್ನು ನೆಗೆದಾಡಲಾರೆ
ಗಿಳಿಯಂತೆ ನಾನಿನ್ನು ಕೂಗಾಡಲಾರೆ
ಪುರಂದರವಿಠಲನ್ನ ಕಾಣದೆ
ಧರೆಮೇಲೆ ಮತ್ತೆ ಕೇಳಲಾರೆ.

೩೩

ಸುಳಾದಿ

ಧ್ರುವತಾಳ

ಒಂದಪರಾಧವೆ ಹರಿಹರಿ, ಎರಡಪರಾಧವೆ ಹರಿಹರಿ
ಒಂದೊಂದು ಪರ್ವತದಂತಹದೋ ದೇವಾ ಒಂದನಂತ
ಸಾಸಿರಲಕ್ಷ ಕೋಟಿ ಅಪರಾಧ
ಒಂದಾಗಿ ನೋಡದೆ ಹರಿ ನೀ ಹಿಂದಿಕ್ಕಿಕೊಂಡು ಕಾದೆ
ಎಂದೆಂದೂ ನಿನಗೆ ನಾ ಸಲೆ ದೂರದೂರ ಹೋದೆ ಪು–
ರಂದರವಿಠಲ ಕೃಪಾಸಿಂಧುವೆ ನೀನಲ್ಲದುಂಟೆ ೧

ಮಟ್ಟ ತಾಳ

ಆನೆಂತಾಡುವೆ ಆನೆಂತು ಪಾಡುವೆ ।
ಆನೆಂತಂತು ಮನಬಂದಂತೆ ನಡೆವೆ ನುಡಿವೆ ।
ಒಡನಾಡಿಯಾಗಿರ್ಪ ಒಡನಿರ್ದು ಆಡಿಸುತಿಪ್ಪ; ।
ಪುರಂದರವಿಠಲನೊಬ್ಬನೆ ಕಾಣಿರೊ ೨

ತ್ರಿಪುಟ ತಾಳ

ಶ್ರುತಿಗಳಿವೆ ಸ್ಮೃತಿಗಳಿವೆ ।
ಯತಿತಲೆ ಪರಕೋಟಿಗಳ ಮಂತ್ರಂಗಳಿವೆ ।
ಇದೇನಯ್ಯ ಅತರ್ಕ್ಯನ ಪ್ರಮೇಯವಾಣಿ ।
ಇದೇನಯ್ಯ ಪುರಂದರವಿಠಲ ।
ಒಲಿದವರಿಗಳವಡುವೆಯಲ್ಲವೆ ೩

ಅಟ್ಟ ತಾಳ

ಉತ್ತುಂಗಸತ್ವ ಉತ್ತುಂಗನಾಮ ಉತ್ತುಂಗಮಹಿಮ ।
ತುರಿಯಾತುರಿಯ ತುರಿಯಾತೀತ ।
ಉತ್ತುಂಗ ಪಾಂಡುರಂಗ ।
ಉತ್ತುಂಗ ಪುರಂದರವಿಠಲರಾಯ ೪

ರೂಪಕತಾಳ

ಹಿರಿಯರಿಗೆ ಗುರುಗಳಿಗೆ ದೈವಜ್ಞರುಗಳಿಗೆ ।
ಶರಣೆನ್ನದೆ ಅನ್ಯಥಾ ಹರಿಭಕುತಿ ಪುಟ್ಟುವುದೆ ।
ಪುರಂದರವಿಠಲ ಹಿರಿಯರ ಕೈಪಿಡಿದವನಯ್ಯ ೫

ಆದಿತಾಳ

ಸಾತ್ವಿಕರ ದೈವವೆ ನಿನ್ನ ।
ಸಾತ್ವಿಕ ಭಕುತಿದೊರೆಕೊಂಬುದಲ್ಲವೇ ।
ಸಾತ್ವಿಕ ಪ್ರಿಯ ಪುರಂದರವಿಠಲರಾಯ ೬

ಏಕತಾಳ

ಸನಕ ಸನಂದನ ಸನತ್ಕುಮಾರ ಸನತ್ಸುಜಾತ ।
ಹನುಮಂತ ತುಂಬುರ ನಾರದಾದಿಗಳು ।
ಅನೇಕಾನೇಕ ವಿಧದಲಿ ಪಾಡುತಿರೆ ।
ಅನರ್ಘರತುನಾದಿಗಳು ಪಾದಾ ।

ರ್ಚನೆಗೈಸಿರಿ ಬರೆ ನೋಡೆ ನುಡಿಸಿ ।
ಅನೇಕ ವಿಧದಲಿ ಪಾಡುತಿರೆ ।
ಇದೇನು ಮಹಿಮೆ ಇದೇನು ಘನತೆಯೊ ।
ನೀನೆ ಬಲ್ಲೆ ಪುರಂದರವಿಠಲ ೭

ಜತೆ

ವೈಕುಂಠಪುರದಲ್ಲಿ ಯೋಗಿಹೃದಯದಲ್ಲಿ
ವೈಕುಂಠಪ್ರಿಯ ಪರುಂದರವಿಠಲ ನೀನಿಪ್ಪೆ ಕಾಣೊ ಸೂರ್ಯನಲ್ಲಿ

೩೪

ಸುಳಾದಿ

ಸಾತ್ವಿಕಭಕ್ತಿಸುಳಾದಿ

ಧ್ರುವಟ ತಾಳ

ಒಂದಪರಾಧವೆ ಹರಿಹರಿ ।
ಎರಡಪರಾಧವೆ ಹರಹರಿ ।
ಒಂದೊಂದು ಪರ್ವತ ಎಂಥದ್ದೋ ದೇವ ।
ಒಂದನಂತ ಸಾಸಿರ ಲಕ್ಷ ಕೋಟಿ ಅಪರಾಧ ।
ಒಂದಾಗಿ ನೋಡದೆ ಹರಿ ನೀ ಹಿಂದಿಕ್ಕಿ ಕೊಂಡು ಕಾದೆ ಹರಿಹರಿ
ಎಂದೆಂದು ನಿನಗ ನಾ ಸಲೆ ದೂರ ಹೋದೆ ಪು-
ರಂದರವಿಠಲ ಕೃಪಾಸಿಂಧುವೆ ನೀನಲ್ಲದುಂಟೆ ೧

ಮಟ್ಟ ತಾಳ

ಅನೆಂತಾಡುವೆ ಅನೆಂತು ಪಾಡುವೆ
ಆನೆಂತೆಂತು ಮನಬಂದಂತೆ ನಡೆವ ನುಡಿವೆ
ಒಡನಾಡಿಸಿ ಅನುವಾಗಿಪ್ಪ ಪುರಂದರವಿಠಲನೊಬ್ಬನೆ ಕಾಣೆರೊ ೨

ತ್ರಿವಿಡೆ ತಾಳ

ಶ್ರುತಿಗಳಿವೆ ಸ್ಮೃತಿಗಳಿವೆ ಯತಿತತಿ
ವರಕೋಟಿಗಳ ಮಂತ್ರಗಳಿವೆ ।
ಇದೇನಯ್ಯ ಅತರ್ಕ್ಯನ ಅಪ್ರಮೇಯನಾಗಿ ।
ಪುರಂದರವಿಠಲನು ಒಲಿದವರಿಗೆ ಅಳವಡುವೆ ೩

ಅಟ್ಟತಾಳ

ಉತ್ತುಂಗ ತತ್ವ ಉತ್ತುಂಗ ಸತ್ವ ।
ಉತ್ತುಂಗ ನಾಮ ಉತ್ತುಂಗ ಮಹಿಮೆ ।
ತುರಿಯ ತುರಿಯ ತುರಿಯಾತೀತ ।
ಉತ್ತುಂಗ ಪಾಂಡುರಂಗ ಉತ್ತುಂಗ ಪುರಂದರವಿಠಲರೇಯ ೪

ರೂಪಕ ತಾಳ

ಹಿರಿಯರಿಗೆ ಗುರುಗಳಿಗೆ ದೈವಜ್ಞರುಗಳಿಗೆ ।
ಶರಣೆನ್ನದನ್ಯಥಾಹರಿ ಭಕುತಿ ನಿಜ ಭಕುತಿ ಪುಟ್ಟುವದೆ ।
ಪುರಂದರವಿಠಲ ಹಿರಿಯರ ಕೈಪಿಡಿದವನಯ್ಯಾ ೫

ಆದಿತಾಳ

ಸಾತ್ವಿಕರ ದೈವವೆ ನಿನ್ನ ಸಾತ್ವಿಕ ಭಕುತಿ ದೊರೆಗೊಂಬುದಲ್ಲದೆ
ಸಾತ್ವಿಕಪ್ರೀಯ ಪುರಂದರವಿಠಲರೇಯ ೬

ಏಕ ತಾಳ

ಸನಕ ಸನಂದನ ಸನಾತನ ಸನತ್ಕುಮಾರ ಸನತ್ಸುಜಾತ ।
ಹನುಮಂತ ತುಂಬುರು ನಾರದಾದಿಗಳು
ಅನೇಕ ವಿಧದಲ್ಲಿ ಪಾಡಿತಿರೆ ।
ಅನರ್ಘ್ಯರತುನಾದಿಗಳು ಪಾದಾರ್ಚನೆ ಗೈಸಿರಿ
ಬರೆ ನೋಡೆ ನುಡಿಸಿ ।
ಅನೇಕ ವಿಧದಲಿ ಪಾಡುತಿರೆ ಇದೇನು ಮಹಿಮೆ ।
ಇದೇನು ಘನತೆಯೊ ನೇನೆ ಬಲ್ಲೆ ಪುರಂದರವಿಠಲ ೭

ಜೊತೆ

ವೈಕುಂಠಪುರದಲ್ಲಿ ಯೋಗಿ ಹೃದಯದಲ್ಲಿ
ಸೂರಿಯನಲ್ಲಿ ನೀನಿಪ್ಪೆ ಕಂಡ್ಯಾ ವೈಕುಂಠಪ್ರಿಯ ಪುರಂದರವಿಠಲ

೩೫

ಉಗಾಭೋಗ

ಆನೆಯನ್ನು ಕಾಯುವಾಗ ಜ್ಞಾನವಿದ್ದುದು ಏನು।
ನಾನೀಗ ಕೂಗಲು ಕೇಳದಿದ್ದುದು ಏನು ।
ದಾನವಾಂತಕ ಹರಿ ದೀನರಕ್ಷಕನೆಂಬ ।
ಮಾನ ಉಳಿಸಿಕೊಳ್ಳೋ ಪುರಂದರವಿಠಲ ।

೩೬

ಉಗಾಭೋಗ

ಬಡವರೊಳಗೆ ಎನ್ನಿಂದಾರು ಬಡವರಿಲ್ಲ
ಕೊಡುವರೊಳಗೆ ನಿನ್ನಿಂದಾರು ಕೊಡುವರಿಲ್ಲ
ದೃಢಭಕ್ತಿ ಎನಗೆ ನಿನ್ನಲ್ಲಿಯೆ ಕಲ್ಪಿಸಿ।
ಬಿಡದೆ ಸಲಹಯ್ಯ ಶ್ರೀ ಪುರಂದರವಿಠಲ.

೩೭

ಉಗಾಭೋಗ

ಎಮ್ಮನು ಸಿರಿದೇವಿ ಇನ್ನೂ ಅರಿಯಳು ಮಹಿಮೆ
ಕುನ್ನಿಮಾನವ ನಾನೇನ ಬಲ್ಲೆನೊ
ಪನ್ನಗಾದ್ರಿ ನಿಲಯನೆ ಪಾವನ ಮೂರುತಿ ಶ್ರೀಕೃಷ್ಣ
ಎನ್ನನುದ್ಧರಿಸಯ್ಯ ಪುರಂದರ ವಿಠಲ.

೩೮

ಉಗಾಭೋಗ

ಇರಲಿ ನಿನ್ನಲ್ಲಿ ಭಕ್ತಿ ಎನಗೆ ಇರದಿರಲಿ
ಹರಿದಾಸನೆಂದೆನ್ನ ಕರೆವರು ಸಜ್ಜನರು ।
ಹರಿದಾಸರನು ಯಮನೆಳೆವನೆಂಬಪಕೀರ್ತಿಯ ।
ಪರಿಹರಿಸಿಕೊಳ್ಳೊ ಶ್ರೀ ಪುರಂದರವಿಠಲ.

೩೯

ಉಗಾಭೋಗ

ಎನಗೆ ನಿನ್ನಲ್ಲಿ ಭಕ್ತಿ ಇರಲಿ ಇಲ್ಲದಿರಲಿ
ಹರಿದಾಸನೆಂದೆನ್ನ ಕರೆವರು ಸಜ್ಜನರು
ಹರಿದಾಸನ್ನ ಯಾಮ್ಯರು ಎಳೆವರೆಂಬ ಅಪಕೀರ್ತಿಯ
ಪರಿಹರಿಸಿಕೊಳ್ಳೊ ಶ್ರೀಪುರಂದರ ವಿಠಲ.

೪೦

ಉಗಾಭೋಗ

ತಂದೆ, ನೀ ತಂದೆ–ನಾ ಬಂದೆ ನಿನ್ನ ಹಿಂದೆ
ಕಾಮದಲಿ ನೀ ತಂದೆ ಕ್ರೋಧದಲಿ ನೀ ತಂದೆ
ತಾಮಸ ದುರ್ಯೋನಿಯಲಿ ನೀ ತಂದೆ ನಾ ಬಂದೆ ।
ಒಂದಲ್ಲ ಎರಡಲ್ಲ ಮೂರಲ್ಲ ನಾಲ್ಕಲ್ಲ
ಒಂದಿ ಎಂಬತ್ನಾಲ್ಕು ಲಕ್ಷ ಯೋನಿಗಳ
ತಂದೆ ನೀ ತಂದೆ, ನಾ ಬಂದೆ ನಿನ್ನ ಹಿಂದೆ
ಹಿಂದಿನ ಜನ್ಮವು ಹೇಗಾದರಾಗಲಿ
ಮುಂದೆನ್ನ ಸಲಹೊ ಶ್ರೀ ಪುರಂದರವಿಠಲ.

೪೧

ಉಗಾಭೋಗ

ಮನೆಯೆಂಬಾಶೆಯು ಎನ್ನ ಮುಂದುಗೆಡಿಸುತಿದೆ
ಮನೆವಾರ್ತೆಯು ಎನ್ನ ಭಂಗಪಡಿಸುತಿದೆ ।
ವನಿತೆ ಸುತರಾಶೆಯು ಎನ್ನ ದೈನ್ಯ ಬಡಿಸುತಿದೆ ।
ಇನಿತಾಶೆಯೊಳಿದ್ದು ಬುದ್ಧಿಯು ನಿನ್ನಲಿ
ನಿಲುವಂತೆ ಮಾಡೋ ಶ್ರೀ ಪುರಂದರವಿಠಲ.

೪೨

ಉಗಾಭೋಗ

ಮನೆಯೆಂಬ ಆಸೆಯು ಎನ್ನ ಮುಂದುಗೆಡಿಸುತಿದೆ
ಮನೆವಾರುತೆಯು ಎನ್ನ ಭಂಗಪಡಿಸುತಿದೆ
ಧನದಾಸೆಯು ಎನ್ನ ದೈನ್ಯಪಡಿಸುತಿದೆ
ಇನಿತಾಸೆಯಳಿದು ಬುದ್ಧಿ ನಿನ್ನಲ್ಲಿ
ನಿಲುವಂತೆ ಮಾಡೋ ಸಿರಿಪುರಂದರವಿಠಲ.

೪೩

ಉಗಾಭೋಗ

ಹರಿ–ಗುರುಗಳಿಗೆರಗದ ಹರಿಭಕ್ತಿಯೆಂತೆಹದಯ್ಯ
ಕೆರವತಿಂಬ ನಾಯಿಗೆ ತುಪ್ಪ–ಓಗರ ಸೊಗಸುವುದೆ
ಹರಿನಾಮಕ್ಕೆ ಹರಿದಾಸರು ಕರಗುವರಲ್ಲದೆ
ನರಕಭಾಜನ ಪಾಮರರು ಕರಗುವರೆ
ಚಂದ್ರಕಿರಣಕೆ ಚಂದ್ರಕಾಂತಶಿಲೆ ಒಸರುವುದಲ್ಲದೆ
ಗೋರ್ಕಲ್ಲು ಒಸರುವುದೆ ಪುರಂದರವಿಠಲ.

೪೪

ಉಗಾಭೋಗ

ಹರಿ ನಿನ್ನ ಭಕ್ತನೆನಿಸಿಕೊಂಡವ ಭಂಗ ಬಡಲುಬೇಕು
ಹರಿ ನಿನ್ನ ಭಕ್ತನೆನಸಿಕೊಂಡವ ದಿನ–ಪ್ರತಿದಿನದಲ್ಲಿ
ಅನ್ನ ಉದಕಗಳ ಕಾಣದಿರಬೇಕು
ಬೆನ್ನಟ್ಟಿರೋಗಗಳು ಹತ್ತಿಕೊಂಡಿರಬೇಕು
ತನ್ನವರ ಕೈಯಿಂದ ಚಿಹಿ ಎನಿಸಿಕೊಳಬೇಕು
ಎನ್ನ ಈ ಪರಿಯ ಮಾಡಿದ ಬಗೆ ಏನೋ ಪುರಂದರವಿಠಲ.

೪೫

ಉಗಾಭೋಗ

ನಿನ್ನ ಭಕ್ತರೆಂದೆನಿಸಿದ ಜನರು ಭಂಗಪಡಲುಬೇಕು
ದಿನಂಪ್ರತಿ ದೀನ ಅನ್ನ ಉದಕ ವಸ್ತುಗಳು ಕಾಣದೆ ಇರಬೇಕು
ಬೆನ್ಹತ್ತಿ ರೋಗಗಳು ಹತ್ತಿ ಇರಲು ಬೇಕು
ತನ್ನವರ ಕೈಯಿಂದ ಛೀ ಎನಿಸಿಕೊಳಬೇಕು
ಪನ್ನಗಶಯನ ಶ್ರೀ ಪುರಂದರವಿಠಲ.

೪೬

ಉಗಾಭೋಗ

ತಿಂಬಲು ಅನ್ನ ಹುಟ್ಟಲಿ ಬೇಡ
ಅನ್ನ ಹುಟ್ಟಿದರೆ ಬಟ್ಟೆ ದೊರಕಲಿ ಬೇಡ
ಬಟ್ಟೆ ದೊರಕಿದರೆ ಇಂಬು ತೋರಲಿ ಬೇಡ
ಇಂಬು ನಿನ್ನ ಪಾದಾರವಿಂದದಲಿ
ಸಂತೋಷ ತೋರಿಸಯ್ಯ
ಇಂದಿರಾರಾಧ್ಯ ಶ್ರೀ ಪುರಂದರವಿಠಲ.

೪೭

ಉಗಾಭೋಗ

ಮನದ ಚಂಚಲದಿ ತಪವ ಮಾಡಲು ಅಶಕ್ಯವು
ಘನ ಅಜ್ಞಾನದಿ ಸತ್ಕರ್ಮಗಳು ಹತ್ತವು
ಧನಶುದ್ಧಿ ಇಲ್ಲದೆ ದಾನವು ವ್ಯರ್ಥವು
ಇನಿತಾದ್ದರಿಂದ ಈ ಯುಗದಿ ಪುರಂದರ
ವಿಠಲನ ನಾಮಸ್ಮರಣೆಯೆ ಲೇಸು ಲೇಸುಕಾಣಾ.

೪೮

ಉಗಾಭೋಗ

ತಂಬೂರಿ ಮೀಟಿದವ ಭವಾಬ್ಧಿಯ ದಾಟಿದವ
ತಾಳವ ತಟ್ಟಿದವ ಸುರರೊಳು ಸೇರಿದವ
ಗೆಜ್ಜೆಯ ಕಟ್ಟಿದವ ಖಳರೆದೆಯ ಮೆಟ್ಟಿದವ
ಗಾಯನ ಮಾಡಿದವ ಹರಿಮೂರ್ತಿಯ ನೋಡಿದವ
ಪುರಂದರವಿಠಲನ ನೋಡಿದವ ವೈಕುಂಠಕೋಡಿದವ.

೪೯

ಭವಾಂಭುದಿ ಸುಳಾದಿ

ಸುಳಾದಿ

ಧ್ರುವತಾಳ

ಹುಟ್ಟುವ ಭೀತಿ ಹೊಂದುವ ಭೀತಿ
ವಿಠಲನಂಘ್ರಿಯ ನೆನೆಯದವಗೆ ।
ಕಾಲನ ಭೀತಿ ಕರ್ಮದಭೀತಿ ಗೋಪಾಲನದಾಸನಾಗದವಗೆ
ಅರಿಷಡ್ವರ್ಗದ ಮಹಾಭೀತಿ ಹರಿನಾಮ ಉಚ್ಚರಿಸದವಗೆ ।
ಹಲವು ಮಾತಿನಲೇನು ಹಲವು ಭೀತಿ ನಮ್ಮ ಪುರಂದರ
ವಿಠಲನ ಪೂಜಿಸದವನಿಗೆ ೧

ಮಟ್ಟ ತಾಳ

ನಿನ್ನ ದಿವ್ಯನಾಮ ಸುಧಾಂಬುಧಿಯಲ್ಲಿ
ಮನ ಮುಳುಗಿಪ್ಪ ಮಹಾಮಹಂತರ
ನಿನ್ನ ದಿವ್ಯ ಚಿನ್ಮಾತ್ರ ಮೂರುತಿಯ
ಅನುಭವಿಸುವಾನಂದಭರಿತರ ।
ಅನುದಿನವು ಅವರೊಳಿರಿಸೆನ್ನ
ಘನ ಮಹಿಮ ಶ್ರೀಪುರಂದುವಿಠಲವಿಭುವೆ । ೨

ತ್ರಿಪುಟತಾಳ

ನೀಲ ಘನಶ್ಯಾಮ ಕೋಮಲಾಂಗನಕಂಡು ।
ಅವ್ವಾ ಅವ್ವಾ ಎಂತು ನಿಲ್ಲಬಹುದೇ।
ಇನ್ನೆಂತು ಸೈರಿಪೆನೆ ಆರಾದಡೆ ಏನಾದಡೆ
ಎನ್ನ ಚಿನ್ನನು ಪುರಂದರವಿಠಲ
ಆತನನಪ್ಪಿದೆನವ್ವಾ ೩

ಅಟ್ಟತಾಳ

ಮಂಗಲಮಯ ವಿಷ್ಣುವಾಮನ ।
ಗಂಗಾಪಿತ ಹರಿಯೆ ಎನಲೆನ್ನ ।
ಕಂಗಳಲ್ಲಿ ಜಲವು ಉಕ್ಕವುದು ।
ಅಂಗ ಪುಳಕಾಂಕವೆಂದಪ್ಪುದು–ಎನ್ನ–।
ಕಂಗಳಲ್ಲಿ ಜಲವೆಂದು ಉಕ್ಕುವುದು?
ಪುರಾದರ ವಿಠಲನಂಘ್ರಿ ಭಜಕನೆಂದು ।
ಕಂಗಳಲ್ಲಿ ಜಲವೆಂದು ಉಕ್ಕವುದು? ೪

ಆದಿತಾಳ

ಮಂದರಧರನ ಮೊರೆಹೊಕ್ಕು ಬದುಕುವೆನು ।
ಇಂದು ನಾಳೆ ನಾಡಿದ್ದೆಂಬ ।
ಮಂದಮತಿಗಿನ್ನೇನೆಂಬೆ ।

ಹಿಂದೆ ಮುಂದೆ ಸುತ್ತಿ ಬಪ್ಪ ಮೃತ್ಯು ವಿಚಾರಿಸದೆ ।
ತಂದು ತಂದು ಕೆಡಹುತಲಿದೆ ಭವಾಂಬುಧಿಯಲ್ಲಿ ।
ತಂದೆ ನಿಂದು ಪರಿಯಂತ ಈ ಬೆಂದ ಮನ ದೀಪ್ತಿಯ ।
ತಂದೆ ಕರುಣಿಸೆಲೆ ಪುರಂದರವಿಠಲ ವಿಭವೆ ೫

ಜತೆ

ಮಾರಮಣ ಭೂರಮಣ ಪುರಂದರವಿಠಲ
ಸಾರ್ವಭೌಮ ರಮಾರಮಣ ॥

೫೦

ಉಗಾಭೋಗ

ಪುಟ್ಟುವ ಭೀತಿ ಪೊಂದುವ ಭೀತಿ।
ವಿಠಲನಂಘ್ರಿಯ ನೆನೆಯದವರಿಗೆ॥
ಪಾಪದ ಭೀತಿ, ನಿರಯದ ಭೀತಿ ಶ್ರೀ
ಗೋಪಾಲನ ದಾಸನಾಗದವರಿಗೆ ॥
ಕಾಲನ ಭೀತಿ ಕರ್ಮದ ಭೀತಿ ಶ್ರೀ–
ಲೋಲನ ಒಮ್ಮೆ ನೆನೆಯದವಗೆ ॥
ಅತಳದಲ್ಲಿರಿಸೊ, ಸುತಳದಲ್ಲಿರಿಸೊ ।
ತಳಾತಳ ಪಾತಾಳದಲ್ಲಿರಿಸೊ ॥
ಯೋನಿಯೊಳಿರಿಸೊ ಮತ್ತಾ ವಿಯೋನಿಯಲಿರಿಸೊ
ಎಲ್ಲರಿಸಿದರೂ ನಾ ಹೋಹೆನಯ್ಯ ।
ಎಂತೆಂತು ನಡೆದು ನಡಸಿಕೊಂಬುವೆ
ಅಂತಂತು ನಡೆಯುವೆ ಶ್ರೀ ಪುರಂದರವಿಠಲ.

೫೧

ಉಗಾಭೋಗ

ಹುಟ್ಟುವ ಭೀತಿ ಹೊಂದುವ ಭೀತಿ
ವಿಠಲನಂಘ್ರಿಯ ನೆನೆಯದವರಿಗೆ

ಕಾಲನ ಭೀತಿ ಕರ್ಮದ ಭೀತಿ ಗೋ–
ಪಾಲನ ದಾಸನಾಗದವನಿಗೆ
ಅರಿಷಡ್ವರ್ಗದ ಮಹಾಭೀತಿ ಶ್ರೀ
ಹರಿನಾಮವನುಚ್ಚರಿಸದವಗೆ
ಚೆಲುವ ಪುರಂದರವಿಠಲನ್ನ ಪೂಜಿಸದವರಿಗೆ.

೫೨

ಉಗಾಭೋಗ

ಹರಿನಿನ್ನ ಭಕ್ತನೆನಿಸಿಕೊಂಡವ ಭಂಗವ ಪಡಲು ಬೇಕೇ
ದಿನ–ಪ್ರತಿದಿನದಲ್ಲಿ ಅನ್ನ ವಸ್ತ್ರ ಉದಕಗಳ ಕಾಣದಿರಬೇಕೆ?
ಬೆನ್ನಟ್ಟಿ ರೋಗಗಳು ಹತ್ತಿರಬೇಕೇ?
ತನ್ನವರ ಕೈಯಿಂದ ಚಿಹಿ ಎನಸಿಕೇಳಬೇಕೆ?
ಎನ್ನ ಈಪವರಿಯಲಿ ಮಾಡಿದ ಬಗೆಯೇನೊ ಪುರಂದರವಿಠಲ.

೫೩

ಸುಳಾದಿ

ಮಿಥ್ಯಾಭಕ್ತಿ ಸುಳಾದಿ

ಧ್ರುವತಾಳ

ನರಲೋಕದ ಸುಖ ಹೇಯವೆಂಬರು ಗಡ ।
ಸುರಲೋಕದ ಸುಖ ಹೇಯವೆಂಬರು ಗಡ
ಅತಲಲೋಕದ ಸಿರಿ ಹೇಯವೆಂಬರು ಗಡ ।
ಸತ್ಯ ಲೋಕದ ಪದವಿ ಹೇಯವೆಂಬರು ಗಡ ।
ಮುಕುತಿ ಪಥವನದು ಹೇಯವೆಂಬರು ಗಡ ।
ಪರಂದರವಿಠಲನ ಸಿರಿಪಾದ ಪದುಮದಲುಂಡುಂಡು ।
ಬದುಕುವ ಮಧುಕರರು ಆವಾಗಲು ೧

ಮಟ್ಟತಾಳ

ಅಶಾಪಾಶಗಳುಳ್ಳ ಅರೋಹಣ ಭಕುತರು– ।
ಕಾಸುವೀಸಕ್ಕಾಗಿ ಕಳ್ಳ ಭಕುತರಾವು ।
ದೇಶವ ತಿರುಗುವ ಕೀಳು ಭಕುತರಾವು ।
ಶ್ರೀಶಮುಕುಂದನಲಿ ಭಕುತಿರಹಿತರಾವು ।
ಪುರಂದರವಿಠಲನ ಭಕುತರೆತ್ತ ನಾವೆತ್ತ ಬಣಗುಗಳು ೨

ತ್ರಿವಿಡಿತಾಳ

ಭಾಗವತನೆಂದು ಕರಸಿ ಕೊಂಬುದೇ ।
ಯೋಗಯೋಗ್ಯವೆ ಜಗದೊಳಗೆಲ್ಲ ।
ಇದು ನನಗೇಡಲ್ಲದೆಯೋಗ ಯೋಗ್ಯವೆ ನಮ್ಮ – ।
ಪುರಂದರವಿಠಲನ ದಾಸಾನುದಾಸರ ದಾಸನೆನಿಸದಲೆ ।
ಭಾಗವತನೆಂದು ಕರಸಿಕೊಂಬುದು? ೩

ಅಟತಾಳ

ಎನಗೆ ಶ್ರೀಹರಿಯಲ್ಲಿ ಭಕುತಿ ಇಲ್ಲವು ।
ಎಂಬುದಕೆ ಇದೆ ಕುರುಹು ।
ವನಿತೆ ಸುತರ ಭ್ರಾಂತಿ ಇದೆ ಕುರುಹು ।
ಪುರಂದರವಿಠಲನ ದಾಸನೆನಿಸಿಕೊಂಡು
ನರರಿಗಾಲ್ಪರಿವುದೆ ಜಗದೊಳು ಇದೆ ಕುರುಹು ೪

ಆದಿತಾಳ

ಬಾಎಂದೆನೆ ಹೋ ಎಂದೆನೆ ಅಯ್ಯಾಸಹಾಯಾ ।
ಜೀಯಾ ಅವಧಾರು ಎಂದೆನೆ ।
ರಾಯ ರಾಯ ರಾಯ ಪುರಂದರವಿಠಲನೆ
ಬಾ ಎಂದೆನೆ ಹೋ ಎಂದೆನೆ ? ೫

ಜತೆ

ಕೊಂಚೆಯೂರ ಚೆನ್ನ ಕೈಯಲ್ಲಿ ಕಾಳಂಜಿ ।
ಪಂಚಬಾಣನ ಪಿತ ಪುರಂದರವಿಠಲ ॥

೫೪

ಸುಳಾದಿ

ಮಿಥ್ಯಾಭಕ್ತಿಸುಳಾದಿ

ಧ್ರುವ ತಾಳ

ನರಲೋಕದ ಸಿರಿ ಹೇಯವೆಂಬೋದುಗಡ ।
ಸುರಲೋಕದ ಸಿರಿ ಹೇಯವೆಂಬೋದುಗಡ ।
ಅತಳಲೋಕದ ಸಿರಿಯು ಹೇಯವೆಂಬೋದು ಗಡ ।
ಸತ್ಯಲೋಕದ ಸಿರಿ ಹೇಮವೆಂಬೋದು ಗಡ ।
ಯಕುತಿ ಪಾಥೇಯವದು ಹೇಮವೆಂಬೋದು ಗಡ ।
ಯೋಗಪದ್ಧತಿಯಿನ್ನು ಹೇಯವೆಂಬರು ಗಡ ।
ಪುರಂದರವಿಠಲನ ಶ್ರೀ ಪಾದಪದುಮದ ।
ಬಂಡುಂಡು ಬದುಕುವ ಮಧುಕರರೆನಿಪರು ೧

ಮಟ್ಟ ತಾಳ

ಅಶಾಪಾಶಗಳುಳ್ಳ ಬದ್ಧ ಆರೋಹಣ ಭಕುತರಾವು ।
ಕಾಸುವೀಸಕ್ಕಾಗಿ ಕಳ್ಳ ಭಕುತರಾವು ।
ದೇಶ ದೇಶ ತಿರಗುವ ಕೇಳುಭಕುತರಾವು ।
ರಾಯ ಮುಕುಂದನಲ್ಲಿ ಭಕುತಿ ರಹಿತರಾವು
ಪುರಂದರವಿಠಲನ ದಾಸರೆತ್ತ ನಾವೆತ್ತ ಬಣಗುಗಳು ೨

ತ್ರಿವಿಡೆ ತಾಳ

ಭಾಗವತನೆಂಬ ಪೆಸರು ಬಂದಿದೆ ಯೋಗ ಯೋಗ್ಯವೆ ।
ಜಗದೊಳಗೆಲ್ಲ ಇದು ನಗೆಗೇಡಲ್ಲವೆ ಯೋಗ ಯೋಗ್ಯವೆ ।
ಪುರಂದರವಿಠಲನ ದಾಸಾನುದಾಸರ ದಾಸನೆನಿಸದಲೆ ।
ಭಾಗವತನೆಂದು ಕರೆಸಿಕೊಂಬುವ ಯೋಗ ಯೋಗ್ಯವೆ ೩

ಅಟ್ಟ ತಾಳ

ಎನಗೆ ಶ್ರೀಹರಿಯಲ್ಲಿ ಭಕುತಿಲ್ಲವೆಂಬದು ಇದೆ ಕುರಹು ।
ಧನಧಾನ್ಯದಾಕಾಂಕ್ಷೆ ಇದೇ ಕುರುಹು ।
ವನಿತೆ ಸುತರ ಭ್ರಾಂತಿ ಇದೆ ಕುರುಹು ।
ಪುರಂದುರವಿಠಲನ ದಾಸನೆನಿಸಿಕೊಂಡು ।
ಪರರಿಗಾಲ್ಪರಿವದೆ ಇದೇ ಕುರುಹು ೪

ಆದಿ ತಾಳ

ಬಾ ಎಂದೆನೆ ಹೋಗೆಂದೆನೆ ।
ಅಯ್ಯ ಸಾಹಯ್ಯ ಜೀಯ್ಯ ।
ಅವಧಾರೆಂದರೆ ।
ರಾಯ ರಾಯ ರಾಯ ಪುರಂದರವಿಠಲನ ।
ಬಾ ಎಂದೆನೆ ಹೋಗೆಂದೆನೆ ೫

ಜೊತೆ

ಕುಂಚ ವಿರಿಂಚನ ಕೈಯಲ್ಲಿ ಕಾಳಂಜಿ ।
ಪಂಚಬಾಣದ ಪಿತ ಪುರಂದರವಿಠಲನಿಗೆ ॥

೫೫

ದಾಸಸುಳಾದಿ

ಧ್ರುವತಾಳ

ಮನವೆ ಆಲಿಸಿಕೇಳೊ, ಬಿನ್ನಯಿಸುವೆನು ನಿನಗೆ ।
ಚಿನುಮಯ ಮೂರುತಿಯ ಗುಣ ರೂಪ ನಾಮ ಕೀ–।
ರ್ತನೆ ಮಾಳ್ಪ ಬಗೆಯ ನಿನಗೆ ತಿಳಿಸುವೆನು ।
ಘನವಾದ ಸುಸಾಧನವೆಂದು ತ್ರಿಕರಣಪೂರ್ವಕವಾಗಿ ।

ಘನಮಹಿಮ ನಾರಾಯಣನ ಅಚಿಂತ್ಯಾದ್ಭುತ ಶಕ್ತಿ ।
ಅನುಭವಕೆ ತಂದುಕೊಂಡು ಸುಖಿಸುವುದು ।
ಮನ ಮೊದಲದ ಸರ್ವಇಂದ್ರಿಯಂಗಳ ಅ-।
ವನ ಪಾದದಲ್ಲಿ ಇಟ್ಟು ಕೀರ್ತನೆ ಗೈಯೊ ।
ನಿನಗಿದೆ ಮುಖ್ಯ ಗತಿ ಸಾಧನವೆಂದು ಸಾರಿದೆ ।
ಅನುಮಾನ ಮಾಡಸಲ್ಲ ಎಂದೆಂದಿಗೂ ।
ಬಿನುಗುದೈವಂಗಳ ಕಾಲಿಲೊದೆದು ಮಧ್ವ-।
ಮುನಿಮತದಲಿ ದೀಕ್ಷಾಬದ್ಧನಾಗೊ ।
ಕುನರರ ನೆರಹಿಕೊಂಡು ಕುಚೇಷ್ಟೆ ಕಥೆಯ ಪೇಳಿ ।
ಘನ ಅಂಧಂತಮಸಿನೊಳು ಬೀಳದಿರು ॥
ವನಜಭವಾಂಡದೊಳು ಹರಿದಾಸರ ದೀಕ್ಷೆ
ಬಲುಕಷ್ಟಕಾಣೊ ।
ಮನುಜಾಧಮರಿಗೆ ಅದು ಸುಲಭವಲ್ಲವು ಕೇಳು ।
ಇನಿತು ಇದರೊಳು ತ್ರಿವಿಧ ಬಗೆಯುಂಟು ।
ಗುಣವಂತನಾಗಿ ನೀನು ಕಾಲಕ್ರಮಣ ಮಾಡೋ ।
ಅನುದಿನದಲ್ಲಿ ಹರಿಸೇವೆಗೆ ವಿಮುಖನಾಗದೆ ।
ಮನಮುಟ್ಟಿ ಒಬ್ಬನೆ ಏಕಾಂತದಲಿ ಕುಳಿತು ।
ತನುರೋಮಗಳು ಉಬ್ಬಿ ಆನಂದಾಶ್ರುಗಳಿಂದ
ಗಾನವ ಮಾಡೊ ॥
ಘನಜ್ಞಾನ ಪುಟ್ಟುವುದು ಅನಿಮಿಷರೀಶನ
ದಯಕೆ ಪಾತ್ರನಪ್ಪೆ ॥
ದಿನದಿನಕೆ ಜ್ಞಾನವೆಗ್ಗಳವಹುದು ।
ನಿನಗೊಂದೆ ಪೇಳಿದೆ ಶುದ್ಧಸತ್ವದಾಶೆ_।
ಗುಣವನು ಮನಸಿಗೆ ತಂದುಕೊಂಡು ನೀ।
ಅನುಮಾನಬಿಟ್ಟು ನಿಶ್ಚಯವಾಗಿ ನಂಬೊ ಹರಿಯ।
ಗುಣಗಣಾಂಬುಧಿ ನಮ್ಮ ಪುರಂದರವಿಠಲನು ।
ಅನುಸಾರಿಯಗಿ ನಿನ್ನ ಹಿಂದೆ ಮುಂದಿಹ ಕಾಣೊ ೧

ಮಟ್ಟತಾಳ

ಉದಯಕಾಲದಲೆದ್ದು ಮುದದಿಂದ ಹರಿನಾಮ ।
ಒದಗಿ ಆರತನಾಗಿ ವದನದಿ ಕೊಂಡಾಡಿ ।
ವಿಧಿ ಪೂರ್ವಕ ಸ್ನಾನವ ಮಾಡಿ ಕರ್ಮವಮುಗಿಸಿ ನಿತ್ಯ ।
ಬುಧರಲ್ಲಿಗೆ ಪೋಗಿ ಸತ್ಕಥಾಶ್ರವಣವನು ।
ಹೃದಯದೊಳಗೆ ನಿಲಿಸಿ ಉದರಕೋಸುಗವಾಗಿ ।
ಸಾಧುಗಳ ಮನೆಯಲಿ ಶುದ್ಧವೃತ್ತಿಯ ಮಾಡಿ ।
ಇದ್ದನಿತರೊಳು ಸಾಕ್ಷೀಭೂತದಿಂದ ಮೆದ್ದು ।
ಸತಿಸುತರೊಡನೆ ಮಮತಾರಹಿತನಾಗಿ ಇದ್ದು ।
ಸತುಕಾಲವನು ಕಳೆಯಬೇಕು ಹೀಗೆ ಪ–।
ದ್ಧತಿ ತಪ್ಪದಂತೆ ಧರೆಯೊಳು ಸತತ ಚರಿಸಲು ।
ಮುದ್ದು–ಮೋಹನ ರಂಗ ಪುರಂದರವಿಠಲನ ।
ಗದ್ದುಗೆ ಬಳಿಯಲಿರುವ ಮುದ್ದು ದಾಸನು ಒಯ್ವನು ೨

ತ್ರಿವಿಡಿತಾಳ

ಯಾಮ ರಾತ್ರಿಯೊಳಗೆ ನೀ ಸತ್ಕರ್ಮದ ।
ನೇಮವ ಮುಗಿಸಿ ಬಲು ಭಕುತಿಯಿಂದ ।
ಶ್ರೀಮುಕುಂದನಿಗೆ ಅರ್ಪಣವನು ಮಾಡಿ ।
ವಾಮಭಾಗದಿ ತನ್ನ ಸತಿಯಿಂದ ಒಡಗೂಡಿ ।
ಶ್ರೀಮನೋಹರನ ಸ್ತುತಿಸಿಕೊಳುತಲಿ ।
ಪ್ರೇಮದಿಂದಲಿ ಕಳೆದು ನಿತ್ಯದಲಿ ।
ಕಾಮಿನಿಯಳ ಬಿಟ್ಟು ಪೃಥಕುಶಯನನಾಗೆ ।
ಭೂಮಿಯೊಳಗೆ ಅವನೇ ಪಾವನನು ।
ಯಾಮವು ಮೀರಿದ ಮೇಲೆ ಮಾಡಿದ ಪುಣ್ಯ ।
ಆ ಮಹಾದೈತ್ಯರು ಸೆಳೆದುಕೊಂಬರು ಕಾಣೊ ।
ಮಾಮನೋಹರನ ದಿನದಲ್ಲಿ ಮಾತ್ರ ಅವರ ।
ಸ್ವಾಮಿತ್ವ ನಡೆವುದಿಲ್ಲ ಹರಿ ಆಜ್ಞೆಯಲಿ ।
ಭೂಮಿಜಾಪತಿ ತನ್ನ ಚಕ್ರವ ತಿರುಗಿಸುವ ।

ಕಾಮುಕ ದೈತ್ಯರ ಅಳಿವುದಕೆ ।
ಪಾಮರ ಮನುಜನು ದಾಸ ವೇಷವ ಧರಿಸಿ ।
ನೇಮನಿತ್ಯಗಳೆಲ್ಲ ಲೋಪವಿಡಿಸಿ ।
ಕಾಮಾಚಾರಿಗಳಾಗಿ ಕಂಡಲ್ಲಿ ಸಂಚರಿಸಿ ।
ಮಾಮನೋಹರನ (ಸ್ತುತಿ) ಪೇಳಿದರೇನು ।
ತಾಮಸ ದಾಸನೆಂದು ತಿಳಿಯೇ ಈಗ ಘೋರ ।
ತಾಮಸ ಅಹುದೋ ಅವರಿಗೆ ಸಂದೇಹವಿಲ್ಲ ।
ಈ ಮಹಿಯೊಳಗೆ ಮೃಷ್ಟಾನ್ನಭೋಜನ ವಸನದಿಂ ।
ದೇ ಮಹಾಫಲವೆಂದು ಹಿಗ್ಗಿಕೊಳ್ಳುವನಯ್ಯ ।
ಕಾಮಿತಫಲ ದೇವ ಅಂಥಾದ್ದೆ ಆವನಿಗೆ ।
ನೇಮಿಸಿ ಇಪ್ಪನು ಅವನ ಯೋಗ್ಯತೆಯಂತೆ ।
ಸ್ವಾಮಿ ತನ್ನ ನಿಜದಾಸರೆಂಬವರಿಗೆ ।
ನಾಮಸುಧೆಯನುಣಿಸಿ ಸಲಹುತ್ತಿಪ್ಪ ।
ಈ ಮಹಾಭಾಗ್ಯಕ್ಕೆ ಎಣೆಗಾಣೆ ಎಣೆಗಾಣೆ ।
ಭ್ರಾಮಕನಾಗಿ ನೀ ಕೆಡಬೇಡವೋ ।
ಕಾಮಜನಕ ನಮ್ಮ ಪುರಂದರವಿಠಲನ ।
ಸುಮ್ಮನವೆಂತೆಂಬ ಧಾಮದೊಳಗೆ ನಿತ್ಯ ।
ಪೂಜೆ ಮಾಡಿ ನಲಿದಾಡೊ ೨

ಅಟ್ಟತಾಳ

ನಿರುಪಾಧಿಕವಾಗಿ ಹರಿಸೇವೆ ಮಾಳ್ಪುದಕೆ– ।
ನರರ ನಿರೀಕ್ಷಿಸಿಕೊಂಡು ಕುಳ್ಳಿರುವ–ಪಾ– ।
ಮರ ಹರಿದಾಸನು ಅವನಲ್ಲ ।
ನರವಾನರ ಕಾಣೊ ಪರಮ ಭಕುತಿಯಿಂದ ।
ನರಹರಿಯ ಚರಿತೆಯ ವರಸುಧಾರಸ ಸುಖ ।
ಸುರಿಯಬೇಕೋ ತನ್ನೊಳುತಾನೆ ಗುಪ್ತದಿ ।
ಇರಬೇಕು ತನ್ನ ಸ್ವರೂಪ ತೋರಗೊಡದೆ ।
ದುರುಳಜನಕೆ ದುರಾಚರಿಯೆಂಬ ಹಾಗಾ– ।
ಚರಿಸಬೇಕು ಅವರ ಪೋಗಾಡುವಂದದಲಿ ।

ಅರಜಾಣನಾದವ ಹಗಲು ಇರುಳು ತಾನು ।
ಹರಿದಾಸರ ಚರಣರಜವನು ಧರಿಸುವ ।
ಶಿರಬಾಗಿ ಪರಮಯೋಗ್ಯನಾಗಿ ಭಕುತಿಕೈಕೊಂಬನು ।
ವರಕಲಿಯುಗದಲಿಂಥವರೇ ದುರ್ಲಬರು ।
ಕರುಣಾಕರ ಸಿರಿಪುರಂದರವಿಠಲಗೆ
ಪರಮಪ್ರಿಯರಿವರೇ ಹರಿದಾಸರು ಕಾಣೋ ೪

ಆದಿತಾಳ

ಒಂದು ಪಾಡುತ ಅದನು ಹಿಂದುಗಳೆದು ಮ-।
ತ್ತೊಂದು ಪಾಡಲು ನೊಂದುಕೊಂಬರು ವರ್ಣಾಭಿಮಾನಿಗಳು ।
ಸಂದೇಹ ಜ್ಞಾನವುಳ್ಳ ಹರಿದಾಸನಿವ ಕಾಣೊ ।
ಒಂದು ಎರಡು ಸ್ಥಳದಿಂದ ತಿರುಗಿ ತಿರುಗಿ ।
ಬಂದು ಪುಟ್ಟುವನೊ ನಾನಾ ಬಗೆಯ ಸುಖ ।
ಇಂದಿರೇಶ ಇವಗೆ ಇದೆ ಕ್ಲಪ್ತ ಮಾಡಿಪ್ಪ ।
ಮಂದಮಾನವ ಕೇಳೋ ಮರುಳನಾಗಿ ನೀನು ನಾ-।
ನೆಂದ ವಚನ ಮನಕೆ ತಾರದೆ ನಮ್ಮ ।
ಕಂದರ್ಪಜನಕಗೆ ದೂರನಾದೆ ಕಾಣೋ ।
ವಂದಿಸಿ ನಾನಿನಗೆ ಬೇಡಿಕೊಂಬೆನು ಹೀಗೆ ।
ಮಂದರಧರ ಸಿರಿ ಪುರಂದರವಿಠಲನ ।
ಪೊಂದಿ ಸಂಸಾರದಿಂದ ಮುಕುತನಾಗೊ ೫

ಜತೆ

ಜ್ಞಾನ ಭಕುತಿ ವೈರಾಗ್ಯ ಭಾಗ್ಯವನ್ನು
ನೀನೆ ಪಡೆಯೋ ನಮ್ಮ ಪುರಂದರವಿಠಲನಿಂದ ॥

೫೬

ಸುಳಾದಿ

ದಾಸಸುಳಾದಿ

ಧ್ರುವತಾಳ

ಮನವೇ ಆಲೈಸಿಕೇಳು ಬಿನ್ನೈಸುವೆನು ನಿನಗೆ ।
ಚಿನುಮಯ ಮೂರ್ತಿಯ ಘನಗುಣನಾಮ ಕೀ ।
ರ್ತನ ಮಾಳ್ಪ ಬಗೆಯನು ನಿನಗೆ ತಿಳಿಸುವೆನು ।
ಘನ ಮಹಿಮ ನಾರಾಯಣನ ಅಮಿತ ಅದ್ಭುತಶಕ್ತಿ ।
ಅನುಭವಕೆ ತಂದುಕೊಂಡು ಸ್ತುತಿಸುವುದು ।
ಮನ ಮೊದಲಾದ ಸರ್ವೇಂದ್ರಿಯಂಗಳ ಅ ।
ವನ ಪಾದದಲ್ಲಿಟ್ಟು ಕೀರ್ತನೆಗೈಯ್ಯೊ ಮನವೆ ।
ನಿನಗೆ ಮುಖ್ಯಗತಿಗೆ ಸಾಧನವೆಂದು ಸಾರಿದೆ ।
ಅನುಮಾನಮಾಡೆ ಸಲ್ಲ ಎಂದೆಂದಿಗೂ ।
ಬಿನುಗು ದೈವಂಗಳ ಕಾಲಿಲಿ ಒದ್ದು ಮಧ್ವ ।
ಮುನಿ ಮತದಲ್ಲಿ ಬದ್ಧ ದೀಕ್ಷಿತನಾಗು ಕು ।
ಜನರ ನೆರಹಿಕೊಂಡು ಕುಚೇಷ್ಟೆ ಕತೆ ಪೇಳಿ ।
ಘನ ಅಂಧಂತಮಸಿನೊಳು ಬೀಳದಿರು ।
ವನಜಭವಾಂಡದೊಳು ಹರಿದಾಸತ್ವ ದೀಕ್ಷೆ ।
ಯನು ಬಲು ಬಲು ಕಷ್ಟ ಕಷ್ಟವೆಂದು ಕಾಣೊ ।
ಮನುಜಾಧಮಗಿದು ಸುಲಭವಲ್ಲವೊ ಪ್ರಾಣಿ ಇನಿತು ।
ಇದರೊಳಗೆ ತ್ರಿವಿಧಬಗೆಯುಂಟು ।
ಗುಣವಂತನಾಗಿ ನೀನು ಕಾಲಕ್ರಮಣ ಮಾಡು ।
ಅನುದಿನದಲ್ಲಿ ಹರಿಸೇವೆಗೆ ವಿಮುಖನಾಗದೆ ।
ತನುವುಬ್ಬಿ ರೋಮಾಂಚನಾನಂದ ಬಾಷ್ಪದಿ ಗಾನ ।
ವನು ಮಾಡು ಘನಜ್ಞಾನ ಪುಟ್ಟುವದು ಅನಿಮಿಷೇ
ಶನ ಪ್ರೀತಿ ದಿನದಿನಕೆ ವೆಗ್ಗಳವಾಗುವುದು ।
ನಿನಗೆ ಪೇಳಿದ ಶುದ್ಧ ದಾಸಭಾವವಿದನು ।

ಮನಸಿಗೆ ತಂದುಕೊಂಡು ಜ್ಞಾನಿಯಾಗೊ ಗುಣ ।
ಗಣಾಂಬುಧಿ ನಮ್ಮ ಪುರಂದರವಿಠಲ ।
ಅನುಸಾರಿಯಾಗಿ ತಾನು ಹಿಂದೆ ತಿರುಗುತ್ತಿಪ್ಪ ೧

ಮಟ್ಟತಾಳ

ಉದಯಕಾಲದಲೆದ್ದು ಮುದದಿಂದ ಹರಿನಾಮ ।
ಒದಗಿ ಆರತನಾಗಿ ವದನದಿ ಕೊಂಡಾಡಿ ।
ವಿಧಿಪೂರ್ವಕವಾಗಿ ಸ್ನಾನಾದಿಕರ್ಮ ಮುಗಿಸಿ ।
ಬುಧರಲ್ಲಿಗೆ ಪೋಗಿ ಕಥಾಶ್ರವಣ ಮಾಡಿ ।
ಅದರ ತರುವಾಯ ಉದರಕೆ ಸಲುವಾಗಿ ।
ಸಾಧುಗಳ ಶುದ್ಧವೃತ್ತಿಯ ಮಾಡಿ ।
ಇದ್ದನಿತರೊಳು ಸಾಕ್ಷಿಭೂತನಾಗಿ ।
ಮೆದ್ದು ಸತ್ಕಾಲವನ್ನು ಕಳೆಯಬೇಕು ।
ಪದ್ಧತಿ ತಪ್ಪದಂತೆ ಈ ಧರೆಯೊಳಗೆ ಹೀ ।
ಗಿದ್ದವನೇ ನಿಜದಾಸನು ಕಾಣೊ ।
ಮುದ್ದು ಮೋಹನರಂಗ ಪುರಂದರವಿಠಲಗೆ
ಮುದ್ದಾಗುವವನೇ ನಿಜದಾಸನು ಸಿದ್ಧ ೨

ತ್ರಿವಿಡತಾಳ

ಯಾಮರಾತ್ರಿಯೊಳು ನೀ ಸತ್ಕರ್ಮದ ।
ನೇಮವ ಮುಗಿಸಿ ಬಲು ಭಕುತಿಯಿಂದ ।
ಶ್ರೀಮುಕುಂದನಿಗೆ ಅರ್ಪಣವನು ಮಾಡಿ ।
ವಾಮಭಾಗದಿ ತನ್ನ ಸತಿಯಿಂದಲೊಡಗೂಡಿ ।
ಶ್ರೀಮನೋಹರನ ಸ್ತುತಿಸಿಕೊಳುತ ।
ಪ್ರೇಮದಿಂದಲಿ ನಿದ್ರೆಕಳೆದು ನಿತ್ಯ ।
ಕಾಮಿನಿಯಳ ಬಿಟ್ಟು ಪೃಥಕುಶಯನನಾಗೆ ।
ಭೂಮಿಯೊಳವನೇ ಪಾವನನೋ ।
ಯಾಮವ ಮೀರಿ ಮಾಡಿದ ಸಾಧನ ।
ಆ ಮಹಾದೈತ್ಯರು ಸೆಳೆದುಕೊಂಬರು ।

ಮಾಮನೋಹರನ ದಿನದಲ್ಲಿ ಅವರ ।
ಸ್ವಾಮಿತ್ವ ನೆಡೆವುದಿಲ್ಲ ಕಾಣಿರೋ ।
ಭೂಮಿಜಾಪತಿ ತನ್ನ ಚಕ್ರವ ತಿರುಗಿಸುವ ಕಾಮಕೆ ।
ದೈತ್ಯರ ಅಳಿವುದಕ್ಕೆ ।
ಪಾಮರ ಮನುಜರು ದಾಸವೇಷವ ಧರಿಸಿ ।
ನೇಮ ನಿತ್ಯಗಳೆಲ್ಲ ಪೋಗಾಡಿಸಿ ।
ಕಾಮಾಚಾರಿಗಳಾಗಿ ಕಂಡಲ್ಲಿ ಸಂಚರಿಸಿ ।
ಮಾಮನೋಹರನ ಲೀಲೆಯ ಪೇಳಿದರೇನೊ ।
ತಾಮಸದಾಸನೆಂದು ತಿಳಿಯೋ ಘೋರ ।
ತಮಸು ಅವಗಾಗುವದು ಸಂದೇಹವಿಲ್ಲ ।
ಈ ಮಹಿಯೊಳು ಮೃಷ್ಟಾನ್ನ ಭೋಜನ ವಸನ ।
ವೇ ಮಹಾಫಲವೆಂದು ಹಿಗ್ಗಿ ಕೆಟ್ಟು ಹೋಗುವನು ।
ಕಾಮಿತಪ್ರದದೇವ ಅಂಥಾದ್ದೆ ಅವನಿಗೆ ।
ನೇಮಿಸಿಪ್ಪನು ಅವನ ಯೋಗ್ಯತೆಯಂತೆ ।
ಸ್ವಾಮಿ ತನ್ನ ನಿಜದಾಸನಾದವನಿಗೆ ನಾಮಸುಧೆಯನುಣಿಸಿ ।
ಸಲಹುತಿಪ್ಪ ।
ಈ ಮಹಾಭಾಗ್ಯಕ್ಕೆ ಎಣೆಗಾಣೆ ಎಣೆಗಾಣೆ ।
ಭ್ರಾಮಕನಾಗಿ ನೀ ಕೆಡಬೇಡವೋ ।
ಕಾಮಜನಕ ನಮ್ಮ ಪುರಂದರವಿಠಲನ್ನ ।
ಈ ಮನವೆಂಬ ಧಾಮದೊಳಗೆ ನಿಲ್ಲಿಸಿ ।
ಪೂಜೆಯ ಮಾಡುವುದು ಸುಖಕಾಣೊ ೩

ಅಟ್ಟತಾಳ

ಒಂದು ಪದವ ಪಾಡುತಲದನು ।
ಹಿಂದು ಕಳೆದು ಮತ್ತೊಂದು ಪಾಡಲು ।
ನೊಂದಕೊಂಬರು ವರ್ಣಾಭಿಮಾನಿಗಳು ।
ಸಂದೇಹ ಜ್ಞಾನವುಳ್ಳ ಹರಿದಾಸ ಕಾಣೊ ।
ಒಂದೆರಡು ಸ್ಥಳದಿಂದ ತಿರುಗಿ ಪುಟ್ಟಿಸುವ ।
ಬಂದು ಉಂಟನು ಸಕಲ ಸೌಖ್ಯಂಗಳ ।

ಇಂದಿರೇಶನು ಇವಗೆ ಇದೇ ಕ್ಲುಪ್ತ ಮಾಡಿಪ್ಪ ।
ಮಂದಮನವೇ ಕೇಳು ಮದಡನಾಗಿ ನಾ ।
ನಂದ ಮಾತುಗಳೆಲ್ಲ ತಾರದೆ ನಮ್ಮ ।
ಕಂದರ್ಪನಯ್ಯಗೆ ದೂರನಾದೀ ಕಂಡ್ಯ ।
ವಂದಿಸಿ ನಿನಗೆ ಬೇಡಿಕೊಂಬೆನು ।
ಮಂದರಧರ ಶ್ರೀ ಪುರಂದರವಿಠಲನ ।
ಹೊಂದಿ ಸಂಸಾರ ದುಃಖಕಳೆದು ಮುಕ್ತನಾಗೊ ೪

ಆದಿತಾಳ

ನಿರುಪಾಧಿಕವಾಗಿ ಹರಿಸೇವೆ ಮಾಡಿದ್ದಾಂಗೆ ।
ನರರ ನೀಕ್ಷಿಸಿಕೊಂಡು ಕುಳ್ಳಿರುವನು ಪಾ ।
ಮರನೊ ಹರಿದಾಸನಲ್ಲ ನರರೊಳು ವಾ ।
ನರನೊ ಪರಮಭಕುತಿಯಿಂದ ನರಹರಿ ।
ಚರಿತ್ರೆಯ ವರ ಸುಧಾಧಾರೆಯ ।
ಸುರಿಯಬೇಕು ತನ್ನ ಸ್ವರೂಪ ತೋರಗೊಡದೆ ।
ದುರುಳ ಜನಕೆ ದುರಾಚಾರಿಯಂತೆ ತೋರಬೇಕು ಅ ।
ವರು ಹೊಗಳುವಂದದಿ ಪೊಗಳುತ್ತಲೆ ।
ನರ ಜಾಣನಾದವ ಹಗಲು ಇರುಳು ।
ಹರಿದಾಸರ ಚರಣರಜವನ್ನು ಧರಿಸುವ ।
ಶಿರಬಾಗಿ ಪರಮಯೋಗ್ಯನಾಗಿ ।
ಪರಮ ಭಕುತಿಯಲಿ ಕೈಗೊಂಡು ಎಲೆ ।
ಮನವೆ ಇದು ಕಲಿಯುಗದೊಳು ಈ ಭಾಗ್ಯ ದುರ್ಲಭ ।
ಕರುಣಾಕರ ರಂಗ ಪುರಂದರವಿಠಲನೆ ।
ಪರಮಪ್ರಿಯನು ಇವನೇ ಹರಿದಾಸನು ಕಾಣೊ ೫

ಜೊತೆ

ಜ್ಞಾನ ಭಕ್ತಿ ವೈರಾಗ್ಯ ನೀನು ಪಡೆಯೋ ಮನವೇ ।
ಶ್ರೀನಿಧಿ ಪುರಂದರವಿಠಲನ ದಯೆಯಿಂದ ॥

೫೭

ಉಗಾಭೋಗ

ನವರತ್ನಗಳು ಕಂಡ (ಕಂಡ) ಠಾವಿನಲ್ಲಿ ಉಂಟೆ
ನವವಿಧದ ಭಕುತಿ (ಕಂಡ) ಕಂಡವರಿಗುಂಟೆ ದೇವ
ನಿನ್ನ ಭಕುತಿ ಸುರ್ರನೆ ಸುರಿದುಕೊಂಡರೆ ಬಾರದು
ಕಲಿತರೆ ಬಾರದು ಪುರಂದರ ವಿಠಲನ ಒಲುಮೆಯಾಗದತನಕ.

೫೮

ಉಗಾಭೋಗ

ಶ್ವಾನನ ಕಂಕುಳೊಳಿಟ್ಟು ವಾರಣಾಸಿಗೆ ಪೋದಂತೆ
ಮಾನವ ಕೇಳು ಮದ ಮತ್ಸರಗಳ ಬಿಡದೆ
ಏನ ಮಾಡಿದರೇನು ವ್ಯರ್ಥವಲ್ಲವೆ?
ಜ್ಞಾನಿ ಪುರಂದರವಿಠಲನ ನೆನೆ ಕಾಣೊ ಮರುಳೇ.

೫೯

ಉಗಾಭೋಗ

ಹರಿಯ ಭಜಿಸಬೇಕು ಮನಮುಟ್ಟಿ
ಭಜಿಸಿದರೆ ತನ್ನ ಕಾರ್ಯವೆಲ್ಲವು ಗಟ್ಟಿ
ಇಲ್ಲದಿದ್ದರೆ ತಾಪತ್ರಯವು ಬೆನ್ನಟ್ಟಿ
ಯಮದೂತರೆಳೆವರು ಹೆಡೆಮುಡಿಗಟ್ಟಿ
ಪುರಂದರವಿಠಲನ ಕೋಪದ ದೃಷ್ಟಿ
ಹರಿಯ ಭಜಿಸಬೇಕು ಮನಮುಟ್ಟಿ.

೬೦

ಉಗಾಭೋಗ

ಜಗವು ನಿನ್ನೊಳಗೆ ನೀನು ಎನ್ನೊಳಗೆ
ಜಗಕೆ ಬಲ್ಲಿದ ನೀನು ನಿನಗೆ ಬಲ್ಲಿದ ನಾನು
ಜಗವ ಸುತ್ತಿಹುದೆಲ್ಲ ಮಾಯೆಯಯ್ಯ
ನಿನ್ನ ಸುತ್ತಿಹುದೆಲ್ಲ ಎನ್ನ ಮಾಯೆಯಯ್ಯ
ಕರಿಯು ಕನ್ನಡಿಯೊಳು ಅಡಗಿಹ ತೆರನಂತೆ
ನೀ ಎನ್ನಳು ಅಡಗಿರೊ ಪುರಂದರವಿಠಲ.

೬೧

ಉಗಾಭೋಗ

ಜಗವ ಸುತ್ತಿಹುದೆಲ್ಲ ನಿನ್ನ ಮಾಯೆಯಯ್ಯ
ನಿನ್ನ ಸುತ್ತಿಹುದೆಲ್ಲ ಎನ್ನ ಮಾಯೆಯಯ್ಯ
ಜಗವು ನಿನ್ನೊಳಗೆ ನೀನು ಎನ್ನೊಳಗೆ
ಜಗಕೆ ಬಲ್ಲಿದ ನೀನು ನಿನಗೆ ಬಲ್ಲಿದ ನಾನು
ಕರಿಯ ಕನ್ನಡಿಯೊಳು ಅಡಗಿಪ್ಪ ತೆರದಿ
ನೀನು ಎನ್ನೊಳಡಗಿಪ್ಪೆ ಪುರಂದರವಿಠಲ.

೬೨

ಉಗಾಭೋಗ

ಏಕಾನೇಕ ಮೂರುತಿ ಲೋಕವೆಲ್ಲ ಮೂರುತಿ
ಸನಕಾದಿಗಳೆಲ್ಲ ಸಾನ್ನಿಧ್ಯ ಮೂರುತಿ
ನಮ್ಮ ಘನ ಮಹಿಮ ಬೊಮ್ಮ ಮೂರುತಿ
ಪುರಂದರವಿಠಲನೇ ಕಾಣಿರೊ.

೬೩

ಉಗಾಭೋಗ

ಚಂದಿರಗಿಂತಿನ್ನು ನಿಂದಿರೆ ತೆರಪಿಲ್ಲ
ಸೂರ್ಯನಿಗಿಂತಿನ್ನು ತಿರುಗಿ ಹೋಯಿತು ಹೊತ್ತು
ಬೊಮ್ಮಾದಿಗಳಿಗೆಲ್ಲಾ ರುದ್ರಾದಿಗಳಗೆಲ್ಲ
ಒಂದು ಉತ್ತರನಾಡಲು ತೆರಪಿಲ್ಲ
ಈ ದೇವರನೆಲ್ಲ ಒತ್ತಿ ಆಳುವ ನಮ್ಮ
ಪುರಂದರವಿಠಲ ಕಟ್ಟರಸು ಕಾಣಿರೊ.

೬೪

ಭಕ್ತಪಾಲಕ ಸುಳಾದಿ

ಧ್ರುವತಾಳ

ತಾಯಿ ಲಕುಮಿ ತಂದೆ ವಿಠಲ ।
ದಾಯಿಗ ಚತುರಾನನ ।
ವಾಯು ತನುಜನು ರಕ್ಷಕನು ಸ–।
ಹಾಯಿಗಳು ದೇವತೆಗಳು ।
ಮಾಯಿ ಅವರ ಮನೆದೊತ್ತು ರಘು ।
ರಾಯನ ಡಿಂಗರಿಗರಿಗೆ ಏನಯ್ಯ ।
ಚತುರ್ದಶ ಭುವನಂಗಳಲ್ಲಿ ।
ಪ್ರತಿಕಕ್ಷಿಗಳಲ್ಲಿವರಿಗೆ ।
ಪುರಂದರವಿಠಲರಾಯನ ಶರಣರ ಭಾಗ್ಯವಿನ್ನೆಂತೊ ೧

ಮಟ್ಟತಾಳ

ಒಡಲೊಳು ಪೋಗುವನ್ನಕ ।
ಎರೆವರೊ ನಾಮಸುಧೆಯ ।
ಕೊಡುವರು ಮುಕುತಿಯ ।

ತಡೆವರು ಭವ ಸಿಂಧುವ ।
ಒಡೆಯ ಮುಕುಂದನ ।
ಒಡನಾಡಿಸಿ ತೋರ್ಪರು ।
ಕೊಡುವರು ಮುಕುತಿಯ ।
ತಡೆವರು ಭವ ಸಿಂಧುವ ।
ಮೃಡಸುಖಪುರಂದರ ವಿಠಲನ ದಾಸರು ॥
ಕೊಡುವರು ಮುಕುತಿಯ ।
ತಡೆವರು ಭವಸಿಂಧು ೨

ತ್ರಿವಿಡಿ ತಾಳ

ನಿನ್ನನೆ ಪಾಡುವೆ ನಿನ್ನನೆ ಪೊಗಳುವೆ
ನಿನ್ನನೆ ಬೇಡಿ ಬೇಸರಿಸುವೆ ರಂಗಯ್ಯ ।
ನಿನ್ನ ಕಾಲಪಿಡಿವೆ ನಿನ್ನ ಹಾರಯಿಸುವೆ ।
ನಿನ್ನ ತಂಬುಲಕೆ ಕೈಯಾನುವೆ ರಂಗಯ್ಯ ।
ನಿನ್ನಂತೆ ಸಾಕಬಲ್ಲ ದೇವ ಉಂಟೆ ಸ್ವಾಮಿ ।
ನಿನ್ನಾಣೆ ಪುರಂದರವಿಠಲರಾಯ ೩

ಅಟತಾಳ

ಅಚ್ಯುತನ ಭಕುತಿಗೆ ಆವನ ಮನ ।
ಮೆಚ್ಚದು ,ಅವ ಪಾಪಿ ಅವನೊಳಾಡೆ
ನೋಡೆ ನುಡಿಸೆ ।
ಮನುಜವೇಷದ ರಕ್ಕಸನವ ।
ಅವನೊಳಾಡೆ ನೋಡೆ ನುಡಿಸೆ ।
ಸಚ್ಚಿದಾನಂದ ಪುರಂದರವಿಠಲನ ।
ತೊತ್ತಿನ ತೊತ್ತಿನ ಮಗನೆನ್ನದವನೊ– ।
ಳಾಡೆ ನೋಡೆ ನುಡಿಸೆ ೪

ಆದಿತಾಳ

ನಿನ್ನಾಳೆಂದರೆ ಎನ್ನನು ಹರಿ ।
ಇನೇನಿನ್ನೇನಿನ್ನೇನು ।
ಎನ್ನ ಸಾಕದಿರಲು ಇನ್ನು ನಗರೆ ।
ನಿನ್ನ ದಾಸರು ? ।
ಎನ್ನಲಿದ್ದವ ನೀನಾದೆ–
ನಿನ್ನ ದಾಸನು ನಾನದೆ ।
ಘನ್ನ ಮಹಿಮ ಪುರಂದರ ವಿಠಲ ।
ಇನ್ನು ಸಾಕದಿಹರೆ? । ೫

ಜತೆ

ಲಕುಮಿಯ ರಮಣನೆ ಲಕುಮಿಯಾಭರಣನೆ ।
ಲಕುಮಿಪರಾಯಣನೇ ಪುರಂದರವಿಠಲ ॥

೬೫

ಉಗಾಭೋಗ

ಮಾತಾಪಿತರು ನಿನಗಂದೇ ಮಾರಿದರೆನ್ನ ।
ನೀತವೆ ನೀ ಎನ್ನ ಸಲಹದಿದ್ದರೆ ದೇವ ।
ಏತಕೆ ಭಕುತವತ್ಸಲನೆಂದಿನಿಸಿದೆ? ।
ನಾ ತಡೆಯನು ನಿನ್ನ ಬಿರುದಿಗಂಜುವನಲ್ಲ ।
ಸಾತ್ವಿಕ ದೈವವೆ ಸಲಹೋ ಎನ್ನನು ವಿ (ಪ್ರ) ।
ಖ್ಯಾತ ಮೂರುತಿ ಆದ್ಯ ಪುರಂದರವಿಠಲ.

೬೬

ಉಗಾಭೋಗ

ಜಗದಂತಾರ್ಯಾಮಿ ನೀನು ನಿನ್ನ ಬಟ್ಟಬಯಲೆಂದು
ಬಗೆವವನು ಜಗದೊಳಗೆ ಬ್ರಹ್ಮಹತ್ಯಾಕಾರಿ

ಅಗಣಿತ ಗುಣ ನೀನು ನಿನ್ನ ಗುಣಗಳಿಷ್ಟೆಂದು
ಬಗೆವವನು ಜಗದೊಳಗೆ ಸ್ವರ್ಣಸ್ತೇಯಿ
ಜಗದೊಡೆಯ ನೀನಿರಲು ಅನ್ಯದೇವನು ಒಡೆಯನೆಂದು
ಬಗೆವವನು ಜಗದೊಳಗೆ ಮಧ್ಯಪಾನಿ
ಜಗದ ತಂದೆ ನೀನು ನಿನ್ನ ದಾಸನೆಂದೆನಿಸಿದೆ ನಿನೇ ತಾನೆಂದು
ಬಗೆವವನೆ ಜಗದೊಳಗೆ ಗುರುತಲ್ಪಗಾಮಿ
ಅವರ ಸಾಕ್ಷಿಯೋಗದಿಂದಲಿ ಇಹ ಜನರು
ಜಗದೊಳಗೆ ಮುಖ್ಯ ಪಂಚಮಹಾಪಾತಕರು
ಅದು ಕಾರಣದಿಂದ ನೀ ನಿತ್ಯ ನೀಸತ್ಯ ನೀ ಬಲ ನೀ
ಅಗಣಿತ ಗುಣನಿಲಯ ನೀ ಸಕಲಸುಖಕಾರಣದಿಂದ
ನಂಬಿದೆ ನೀ ಸಲಹಯ್ಯ ಪುರಂದರವಿಠಲ.

೬೭

ಉಗಾಭೋಗ

ಹಾಡಿದರೆನ್ನೊಡೆಯನ ಹಾಡುವೆ
ಬೇಡಿದರೆನ್ನೊಡೆಯನ ಬೇಡುವೆ
ಒಡೆಯನಿಗೆ ಒಡಲನು ತೋರುತ ನನ್ನಯ
ಬಡತನ ಬಿನ್ನಹ ಮಾಡುವೆ ಕಾಡುವೆ
ಒಡೆಯ ಪುರಂದರ ವಿಠಲನ
ಅಡಿಗಳ ಸಾರೆ ಬದುಕುವೆನಯ್ಯ ಸಾರಿ ಬದುಕುವೆ.

೬೮

ಉಗಾಭೋಗ

ನೋಡಿದರೆನ್ನೊಡೆಯನ ನೋಡುವೆ
ಪಾಡಿದರೆನ್ನೊಡೆಯನ ಪಾಡುವೆ
ಬೇಡಿದರೆನ್ನೊಡೆಯನ ಬೇಡುವೆ
ಕಾಡಿದರೆನ್ನೊಡೆಯನ ಕಾಡುವೆ ಒಡಯಗೆ ಒಡಲನು ತೋರುವೆ

ಎನ್ನ ಬಡತನದ ಬಿನ್ನಹವ ಮಾಡುವೆ
ಒಡೆಯ ಶ್ರೀಪುರಂದರವಿಠಲನ ಅಡಿಗಳ
ಸಾರೆ ಬದುಕುವೆ ಸೇರಿ ಬದುಕುವೆ.

೭೯

ಉಗಾಭೋಗ

ಆರು ಮುನಿದು ನಿಮಗೆ ಏನು ಮಾಡುವರಯ್ಯ
ಊರು ಒಲಿದು ನಮಗೇನ ಮಾಡುವುದಯ್ಯ
ಕೊಡಬೇಡ ತಮ್ಮೊಡಲಿಗೆ ತುಸುವನು
ಇಡಬೇಡ ನಮ್ಮ ಶುನಕಗೆ ತಳಿಗಿಯನು
ಆನೆಯ ಬಪ್ಪನ ಶ್ವಾನ ಕಚ್ಚಲು ಬಲ್ಲುದೆ?
ದೀನ ನಾಥ ನಮ್ಮ ಪುರಂದರವಿಠಲ ಉಳ್ಳನಕ
ಆರುಮುನಿದು................॥

೭೦

ಉಗಾಭೋಗ

ಯಾರು ಮುನಿದು ನಮಗೇನು ಮಾಡುವರಯ್ಯ
ಯಾರು ಒಲಿದು ನಮಗೇನು ಕೊಡುವರಯ್ಯ
ಕೊಡಬೇಡ ನಮ್ಮೊಡಲಿಗೆ ತುಸುವನು ಇಡಬೇಡ
ಈಯಲು ಬೇಡ ನಮ್ಮ ಶುನಕಗೆ ತಳಗಿಯ
ಆನೆಯ ಮೇಲೆ ಬಪ್ಪನ ಶ್ವಾನ ಕಚ್ಚಲು ಬಲ್ಲುದೆ
ದೀನನಾಥ ಪುರಂದರ ವಿಠಲ ನಮಗುಳ್ಳತನಕ.

೭೧

ಉಗಾಭೋಗ

ತುಳಸಿಯಿರಲು ತುರುಚಿಯನು ತರುವಿರೊ
ಗಂಗೆ ಇರಲು ಕೂಪಸ್ನಾನ ಮಾಡುವಿರೊ

ಹಂಸವಿರಲು ಹಾಲ ಕೋಳಿಗೆರೆಯುವಿರೊ
ಬಾವನ್ನದ ನೆಳಲಿರಲು ಬೇಲಿಯ ಬಯಸುವಿರೊ
ತಾಯ ಮಾರಿ ತೊತ್ತನು ತರುವಿರುವಿರೊ
ಪುರಂದರ ವಿಠಲನ ದೂರಮಾಡುವಿರೊ.

೭೨

ಉಗಾಭೋಗ

ತುಲಸಿಯಿರಲು ತುರುಚಿಯನು ತರುವಿರೊ
ಗಂಗೆಯಿರಲು ತೋಡಿದ ಕೂಪದಿ ಪಾನವ ಮಾಡಿದೆ
ರಾಜಹಂಸವಿರಲು ಕೋಯೆಂದು ಕೂಗುವ ಕೋಳಿಗೆ ಹಾಲೆರೆದೆ
ಬಾವನ್ನವಿರಲು ಬೇಲಿಯ ನೆಳಲೊಳೊರಗಿದೆ
ತಾಯಿಯ ಮಾರಿ ತೊತ್ತನು ತರುವ ಮಾನವನಂತೆ
ಪುರಂದರವಿಠಲ ನೀನಿರಲನ್ಯತ್ರ ದೈವಂಗಳ ಎಣಿಸಿದೆನೊ.

೭೩

ಉಗಾಭೋಗ

ಮರವಿದ್ದರೇನಯ್ಯ ನೆರಳಿಲ್ಲದನಕ
ನೆರಳಿದ್ದರೇನಯ್ಯ ನೀರಿಲ್ಲದನಕ
ಮನವಿದ್ದರೇನಯ್ಯ ಜ್ಞಾನವಿಲ್ಲದನಕ
ತನುವಿದ್ದರೇನಯ್ಯ ಪುರಂದರವಿಠಲನ
ನೆನೆ ನೆನೆದು ಊಳಿಗವ ಮಾಡದನಕ.

೭೪

ಉಗಾಭೋಗ

ಮರ್ಕಟನ ಕೈನೂಲ ಕುಕ್ಕಡಿಯ ತೆರನಂತೆ
ಸಿಕ್ಕಿಕೊಂಡು ಕಾಮಕ್ರೋಧ ಮೋಹಗಳೆನ್ನ

ಹಿಕ್ಕಿ ಹೀರುತಲಿವೆ ಏಕೆ ನೋಡುತಲಿರುವೆ?
ಅಕ್ಕಟಕ್ಕಟಾ! ನಿನ್ನ ದಾಸನಲ್ಲವೆ ನಾನು?
ಸಿಕ್ಕ ಬಿಡಿಸಿ ನಿನ್ನ ಭಕ್ತಿಯ ತೋರಿಸೊ
ಪಕ್ಷಿವಾಹನ ನಮ್ಮ ಪುರಂದರ ವಿಠಲ.

೭೫

ಉಗಾಭೋಗ

ಗಾಣದೆತ್ತಿನಂತೆ ತಿರುಗಾಡಲಾರೆ
ದಂಡಿಗೆಯ ನೊಗದಂತೆ ನಾ ಬೀಳಲಾರೆ
ನವಿಲಂತೆ ನಾನಿನ್ನು ನೆಗೆದಾಡಲಾರೆ
ಗಿಳಿಯಂತೆ ನಾನಿನ್ನು ಕೂಗಾಡಲಾರೆ
ಪುರಂದರ ವಿಠಲನ ಕಾಣದೆ ಧರೆಯ ಮೇಲೆ
ಮಾತನಾವುದು ಕೇಳಲಾರೆ.

೭೬

ಉಗಾಭೋಗ

ಕಿಚ್ಚಿನೊಳಗೆ ಬಿದ್ದ ಕೀಟಕನು ನಾನು
ಅಚ್ಯುತ ತೆಗೆಯೊ ಅನಂತ ಕಾಯೊ ಗೋವಿಂದ ಪೊರೆಯೊ
ಘೋರಪಾತಕಿ ನಾನು ಪುರಂದರವಿಠಲ
ನೀ ಕರುಣದಿ ಕಾಣೊ.

೭೭

ಉಗಾಭೋಗ

ಕಿಚ್ಚಿನೊಳಗೆ ಬಿದ್ದ ಕೀಟಕನು ನಾನಯ್ಯ
ಅಚ್ಯುತನೆ ಕಾಯೊ ಅನಂತನೆ ತೆಗೆಯೊ
ಗೋವಿಂದ ಹರಿ ಪೊರೆಯೊ ಪುರಂದರವಿಠಲ
ನೀ ಕರುಣವುಳ್ಳವನು ಕಾಣೊ ।

೭೮

ಉಗಾಭೋಗ

ಕ್ರಿಮಿಕೀಟಕನಾಗಿ ಹುಟ್ಟಿದಂದು ನಾನು
ಹರಿಶರಣಂದೆನಲುಂಟೆ
ಹಕ್ಕಿ ಪರಿಣಿಯಾಗೆ ಹುಟ್ಟಿದಂದು ನಾನು
ಹರಿಶರಣೆಂದೆನಲುಂಟೆ
ಹಂದಿ–ಸೊನಗನಾಗಿ ಹುಟ್ಟಿದಂದು ನಾನು
ಹರಿಶರಣೆಂದೆನಲುಂಟೆ
ಮರೆದೆ ಮಾನವ ನಿನ್ನ ಹಿಂದಿನ ಭವಗಳನಂದು
ಮಾನುಷ ದೇಹ ಬಂದಿತೊ ನಿನಗೀಗ
ನೆನೆಯಲೊ ಬೇಗ ಪುರಂದರವಿಠಲನ.

೭೯

ಉಗಾಭೋಗ

ಕ್ರಿಮಿ ಕೀಟನಾಗಿ ಹುಟ್ಟಿದಂದು ಹರಿ ಶರಣೆಂತೆನಲುಂಟೆ
ಹರಿ ಶರಣನಾಗಿ ಹುಟ್ಟಿದಂದು ಹರಿ ಶರಣೆಂತೆನಲುಂಟೆ
ಕತ್ತೆ ಕರಡಿಯಾಗೆ ಹುಟ್ಟಿದಂದು ಹರಿ ಶರಣೆಂತೆನಲುಂಟೆ
ಹಂದಿ ಶುನಕನಾಗಿ ಹುಟ್ಟಿದಂದು ಹರಿ ಶರಣೆಂತೆನಲುಂಟೆ
ಮರೆತೀಯೆ ಮಾನವ ನಿನ್ನ ಹಿಂದಿನ ಭವಗಳ ನೊಂದು
ಮಾನುಷ ದೇಹ ಬಂದಿತೋ ನಿನಗೀಗ
ಬೇಗ ನೆನೆಯಲೊ ಪುರಂದರ ವಿಠಲರಾಯನ.

೮೦

ಉಗಾಭೋಗ

ಸೂಸಲಾಸೆಗೆ ಹೋಗಿ ಬಡಿಗಲ್ಲಿನೊಳು ಸಿಕ್ಕಿದ
ಮೂಷಕನ ಪರಿಯಂತಾದೆನೊ ಎಲೆ ದೇವ

ಹೇಸಿ(ಕೆ) ವಿಷಯಂಗಳಿಗೆ ಎರಗುತಿದೆ ಎನ್ನ ಮನ
ಗಾಸಿಯಾದೆನೊ ಹೃಷಿಕೇಶ ನೀ ಸಲಹಯ್ಯ
ವಾಸವಾರ್ಚಿತ ಸಿರಿ ಪುರಂದರವಿಠಲ ನಿನ್ನ
ದಾಸರ ಸಂಗದಲಿ ಇರಿಸೆನ್ನ ಅನವರತ.
[ಕ್ಲೇಶವ ಕಳೆಯಯ್ಯಾ ದೊರೆಯೆ]

೮೧

ಉಗಾಭೋಗ

ಪ್ರಪನ್ನ ರಕ್ಷಕ ನೀನು ಪಾಲಿಸು
ಉಪಸಾಧನವನರಿಯೆನು ಒಮ್ಮೆ ನಿನ್ನ ನೆನೆವೆನು
ಅಪರಾಧಿ ನಾನಾದಡೇನು ಅಭಯಪ್ರದನು ನೀನು
ವಿಪರೀತ ಮಾಡಿದೆನ್ನನು ಸಲಹೋ ಪುರಂದರವಿಠಲ.

೮೨

ಉಗಾಭೋಗ

ನಿನ್ನಂಥ ತಂದೆ ಎನಗುಂಟು ನಿನಗಿಲ್ಲ
ನಿನ್ನಂಥ ಸ್ವಾಮಿ ಎನಗುಂಟು ನಿನಗಿಲ್ಲ
ನಿನ್ನಂಥ ದೊರೆಯೊಬ್ಬ ಎನಗುಂಟು ನಿನಗಿಲ್ಲ
ನೀನೆ ಪರದೇಶಿ ನಾನು ಸ್ವದೇಶಿ
ನಿನ್ನ ಅರಸಿ ಲಕ್ಷ್ಮಿ ಎನಗೆ ತಾಯಿಯುಂಟು
ಎನಗಿದ್ದ ತಾಯ್ತಂದೆ ನಿನಗಾರಯ್ಯ ಪುರಂದರವಿಠಲ.

ತತ್ತ್ವಜ್ಞಾನ

೮೩

ಸುಳಾದಿ

ಶ್ರೀನವವಿಧ ಭಕ್ತಿ ಸುಳಾದಿ

ಹರಿಯ ಒಂಬತ್ತು ಭಕ್ತಿಯ ಬಲ್ಲ ಧೀರ ।

ಮರಳಿ ಸಂಸ್ಕೃತಿಯ ದಾರಿಗೆ ಹುಟ್ಟಿ ಬಾರ ।
ದುರಾಚಾರ ದುಷ್ಕೃತಿಗಳನು ಕಂಡುಸೇರ ।
ಹಿರಿಯರೊಳು ಬಿರುನುಡಿಯ ಜಿಹ್ವೆಗೆ ತಾರ ।
ಪುರಂದರ ರಾಯನ ಉದಾರ – ।
ಚರಣಾಬ್ಜನಿಷ್ಠೆ ಅಂಗಡಿ ಇಟ್ಟು ತೋರ ೧

ಶ್ರವಣ ಭಕ್ತಿ

ಹರಿಕಥಾಶ್ರವಣಕ್ಕೆ ಮನವಿಟ್ಟ ಪ್ರೌಢ ।
ಅರುವತ್ತು ಗಳಿಗೆಗಳ ವ್ಯರ್ಥ ಹೋಗಾಡ ।
ಪರಮ ಪದವಿಯನ್ನೈದುವನು ಅವನು ಗಾಢ ।
ನರಕದಾಬಟ್ಟೆ ದೂರದಲೊಮ್ಮೆ ನೋಡ ।
ಪುರಂದರವಿಠಲನಪ್ರಿಯನು ಗಾಢ–।
ತರಲಪ್ಪುವ ಮೈಯಮರೆದು ತಾನಾಡ ೨

ಕೀರ್ತನ ಭಕ್ತಿ

ಹರಿಯ ಕೀರ್ತನೆ ಭಕುತಿ ತುಂಬಿ ಪೇಳ್ವ ।
ಚಿರಸ್ವಭಾವದಲಿ ಕಣ್ಣೊರೆತೆಯನೆ ತಾಳ್ವ ।
ಹರಿಯಂತೆ ಕೂಗಿ ಸಜ್ಜನರೊಳಗೆ ಬಾಳ್ವ ।
ದುರಿತಗಜಗಳ ಮಂಡೆಗಳನೇರಿ ಸೀಳ್ವ ।
ಹರುಷಾಮೃತಾಬ್ಧಿಯೊಳು ಇಳಿಮುಳುಗಿ ಏಳ್ವ ।
ಪುರಂದರವಿಠಲರಾಯನ ಹೊಂದಿ ಬಾಳ್ವ ೩

ಸ್ಮರಣಭಕ್ತಿ

ಹರಿಯ ಸ್ಮರಣೆಗೆ ವಿಸ್ಮೃತಿಯನಾವ ಜರೆದ ।
ಚಿರಕಾಲದಘವನೊಮ್ಮಿಂದೊಮ್ಮೆ ತರೆ(ರಿ)ದ ।
ಪರಮಭಾಗವತರ ಸಮ್ಮೇಳ(ನದಿ)ವನು ಬೆರೆದ ।
ನೆರೆಹೊರೆಗೆ ಎಲ್ಲ ಮುಕುತಿಯನು ಕರೆದ ।
ವರಬಿಂಬಕಾಂಬ ಕಂಗಳನು ತೆರೆದ ।
ಪುರಂದರ ವಿಠಲರಾಯನ ಹೊಂದಿ ಬೆರೆದ ೪

ಪಾದಸೇವನ ಭಕ್ತಿ

ಹರಿಪಾದಸೇವನ ಧ್ಯಾನ ಬಲ್ಲಣ್ಣ ।
ವರಟಕಿಟ್ಟ ಚಿನ್ನದ ಸುಖದ ಬಣ್ಣ ।
ದುರುರುಚಿಯಿಂದ ದುರುವಿಷಯಕೆತ್ತೆ ಕಣ್ಣ ।
ಹರಿಗುರುಗಳಿಗೆ ಅಲ್ಲದೆ ಶರಣೆನ್ನ ।
ಪುರಂದರವಿಠಲ ಪತಿತಪಾವನ ।
ಚರಣಾಬ್ಜರಸವೀಂಟಿ ಮೊಲೆವಾಲನುಣ್ಣ ೫

ಅರ್ಚನಾಭಕ್ತಿ

ಹರಿಯ ಅರ್ಚನೆಯ ಭಕ್ತಿಯ ಪ್ರವೀಣ ।
ತೆರತೆರದಿ ಬರುವ ಎಡರನು ಒಮ್ಮೆ ಕಾಣ ।
ಹರಿಗೆ ದೇಹೇಂದ್ರಿಯವರ್ಪಿಸಿ ಪ್ರಾಣ ।
ಹರಿಪುರದೊಳಗೆ ಮಾಡಿದ ತನ್ನ ತಾಣ ।
ಪುರಂದರವಿಠಲರಾಯನ ಪೂಜೆ ತಾಣ ।
ವರಿತು ಕಾಯದೊಳಿಟ್ಟು ಪಡೆವ ನಿರ್ವಾಣ ೬

ವಂದನಾಭಕ್ತಿ

ಹರಿಮೂರ್ತಿಗಾಷ್ಟಂಗ ಪೊಡಮಟ್ಟು ನಿಚ್ಚ
ಉರುಪಾಪಾಟವಿಗೆ ಗಮ್ಮನೆ ಇಟ್ಟ ಕಿಚ್ಚ
ಸುರಲೋಕ ಮುಂತಾದ ಸಿರಿಗವ ಮೆಚ್ಚ
ನರರ ಸಂಪದವೆಲ್ಲ ಸ್ಥಿರವೆಂದು ನೆಚ್ಚ
ಪುರಂದರ ವಿಠಲನಂಘ್ರಿಯ ನಂಬಿದ ಹುಚ್ಚ
ನಿರಯದರಸನಿಗೆ ಬೆದರನು ಬೆಚ್ಚ ೭

ದಾಸ್ಯ ಭಕ್ತಿ

ಹರಿದಾಸರ ದಾಸತ್ವವ ಪಡೆದ ।
ನರ ಜೀವನ್ಮುಕ್ತರೆನಿಸಿ ಕೀರ್ತಿ ಪಡೆದ ।
ಹರಿನಾಮವನೆಂಬವನೆದೆಮೆಟ್ಟಿ ನೆಡೆದ ।

ಹರಿಯ ಬಾಕುಳಿಗವೃತ್ತಿಯನೆ ಹಿಡಿದ ।
ಪುರಂದರ ವಿಠಲರಾಯನ ಎಡದ ।
ಚರಣ ನಿರ್ಜರತರ ಛಾಯೆಯ ಹಿಡಿದ ೮

ಸಖ್ಯ ಭಕ್ತಿ

ಹರಿಯಲ್ಲಿ ಭಕ್ತಿಯ ಗೆಳೆತನವಿಟ್ಟಾ ।
ತರುಣಿ ಸಂಪದ ಪ್ರಜೆಗಳನೆಲ್ಲ ಬಿಟ್ಟಾ ।
ಕರುಮತ್ರಯಂಗಳನಿವಹದಿ ಕೆಟ್ಟಾ ।
ತಿರುಗಿ ಬರುವ ಉರುಬಟ್ಟೆಯ ಮೆಟ್ಟಾ ।
ಪುರಂದರವಿಠಲನಲಿ ಚಿತ್ತವಿಟ್ಟಾ ।
ನರಸಿಂಹನೊಲಿಸಿ ಲಿಂಗಾಂಗವ ಸುಟ್ಟಾ ೯

ಆತ್ಮನಿವೇದನ ಭಕ್ತಿ

ಹರಿಗೆ ತನ್ನಾತ್ಮನಿವೇದನದಿಂದ ।
ಉರಿ-ಜಲ-ಮಣ್ಣು ಬಯಲು ಗಾಳಿ ಹೊಂದ ।
ಸ್ವರೂಪವ ಹರಿಯಂಘ್ರಿಗರ್ಪಿಸಿ ನಿಂದ ।
ಹರುಷವನುಂಬ ಉನ್ನಾಹಗಳಿಂದ ।
ಪುರಂದರವಿಠಲರಾಯನ ದಯದಿಂದ ।
ಸುರ ಋಷಿಯೊಲುಮೆಗೆಲ್ಲವು ನಿಜಾನಂದ ೧೦

ಉಪಸಂಹಾರ[ನವವಿಧಭಕ್ತಿ]

ಹರಿಕಥಾಶ್ರವಣವು ಹರಿನಾಮಕೀರ್ತನೆ ।
ಹರಿಸ್ಮರಣೆ ಹರಿಪಾದಸೇವನೆ ।
ಹರಿಪೂಜನ, ವಂದನ, ದಾಸ್ಯ, ಸಖ್ಯತ್ವ ।
ಹರಿಗಾತ್ಮ, ಅರ್ಪಣೆ, ಮುಕ್ತಿಪಥತತ್ವ ।
ಪುರಂದರ ವಿಠಲ ಪರಮಾತ್ಮ ಸಿದ್ಧ ।
ಗುರು ಮಧ್ವಮತ ಶ್ರುತಿ ಸ್ಮೃತಿಯೊಳು ಶುದ್ಧ ೧೧

ಶ್ಲೋಕ: ನವವಿಧಭಕ್ತಿ

೧. ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಂ ।
ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮ ನಿವೇದನಂ ।
ವಿಷ್ಣೋಸ್ತು ಶ್ರವಣೇ ಪರೀಕ್ಷಿದಭವತ್ ವೈಯಾಸಕಿಃಕೀರ್ತನೇ ।
ಪ್ರಹ್ಲಾದಃ ಸ್ಮರಣೆ ತದಂಘ್ರಿಭಜನೇ ಲಕ್ಷ್ಮೀಪೃಥುಃ ಪೂಜನೇ ।
ಅಕ್ರೂರಸ್ತ್ವಭಿವಂದನೇಚ ಹನುಮಾನ್ ದಾಸ್ಯೇಸಖ್ಯೇಚಾರ್ಜುನಃ ।
ಸರ್ವಸ್ಯಾತ್ಮನಿವೇದನೇ ಬಲಿರಭೂತ್‌ಕೈವಲ್ಯಮೇಘಾಸಮಃ ।

[ಪ್ರಸನ್ನ ವೆಂಕಟದಾಸರ ಅಂಕಿತದಲ್ಲಿಯೂ ಈ ಸುಳಾದಿಯು ಪ್ರಚಲಿತಲ್ಲಿದೆ.]

೮೪

ಸುಳಾದಿ

ಧ್ರುವತಾಳ

ಅವರು ನಡೆದದ್ದೆ ರಾಜಪಥ ನಾರಾಯಣ ।
ಅವರು ನುಡಿದದ್ದೆ ವೇದಾರ್ಥ ನಾರಾಯಣ ।
ಅವರು ಮಾಡಿದ್ದೆ ಮರ್ಯಾದೆ ನಾರಾಯಣ ।
ಅವರು ನಿಂತಿದ್ದೆ ಕ್ಷೇತ್ರವೈ ನಾರಾಯಣ ।
ಅವರು ಮಿಂದದ್ದೆ ಸುರಗಂಗೆ ನಾರಾಯಣ ।
ಅವರು ರಾಜಾಧಿರಾಜರು ಅವರೆ ಕಾಣಿರೋ ।
ಅವರು ರಾಜಪರಮೇಶ್ವರರು ಅವರೆ ಕಾಣಿರೋ ।
ಅವರ ದಾಸ ಜಗದೇಕನಾಥ ।
ಅವರು ನಮ್ಮ ಪುರಂದರ ವಿಠಲನ ಆಳುಗಳು ಕಾಣಿರೊ ೧

ಮಟ್ಟ ತಾಳ

ಹಸ್ತಿನಾಪಟ್ಟಣವ ನೇಗಿಲಲೆತ್ತಿದನೊಬ್ಬ ।
ಅಸ್ತಮಿಸಿದ ಇನಮಂಡಲಕೆ ಉದಯವಿತ್ತನೊಬ್ಬ ।

ಪೃಥ್ವಿಯ ಅಂಬಿನಲಿ ಹರಗಿದನೊಬ್ಬ ।
ವಸ್ತು ಪುರಂದರವಿಠಲಾ ನೀನಿತ್ತ ಸಲುಗೆ ಎಂತೊ ೨

ತ್ರಿವಿಡೆ ತಾಳ

ಅಯ್ವತ್ತು ಸಾವಿರ ಯೋಜನವು ಎತ್ತ, ಸಂಜೀವಿನಿ ಎತ್ತ ।
ಲಂಕಾಪಟ್ಟಣ ತಾನೆತ್ತ,ಹನುಮ ಕಿತ್ತೆತ್ತಿ ತಾಹೋದೆತ್ತ
ಇಲ್ಲಿಂದಲ್ಲಿಗೆ ಈಡಾಡುವುದೆತ್ತ, ಹನುಮಕಿತ್ತೆತ್ತಿ ತಾಹೋದೆತ್ತ ।
ಪುರಂದರವಿಠಲಾ ನಿನ್ನ ಮಹಿಮೆ ಎಂತೊ ೩

ಅಟ ತಾಳ

ಸ್ವರ್ಗದ ಮುಕ್ತಿಯ ಅಂಬಿನಲಿ ಇಸುವರು ।
ಮಾರ್ಗಣದಿಂದೆರೆವರು ಪಾತಾಳದ ಉದಕವನು ।
ನೀರ್ಗೆಯ್ಸಿ ಭೂಮಿಯ ಮೇಲಿಟ್ಟು ಮೆರೆವರು ।
ಅಗ್ರಣಿ ಪುರಂದರವಿಠಲನ ಆಳುಗಳು ಕಾಣಿರೋ ೪

ಏಕತಾಳ

ಭಾಗೀರಥಿಯ ನೀಂಟಿದರುಂಟೆ ।
ಸಾಗರವ ಆಪೋಶನವ ಕೊಂಡವರುಂಟೆ ।
ನಾಗಾಭರಣವ ಮಾಡಿದರುಂಟೆ ।
ಭಾಗವತೋತ್ತಮರುತ್ತಮರಲ್ಲದೆ ।
ನಾಗಾಭರಣವ ಮಾಡಿದರುಂಟೆ ।
ಪುರಂದರವಿಠಲನೆ ನಿನ್ನ ಕರುಣೆವೆಂತುಟೋ ೫

ಜತೆ

ಹರಿಶರಣರಿಗಿನ್ನು ಸರಿಗಾಣೆ ಜಗದೊಳು ।
ಪುರಂದರವಿಠಲ ಸ್ವಾಮಿ ನೀನಿರಲಾಗಿ ।

೮೫

ಹರಿಭಕ್ತಮಹಿಮಾ ಸುಳಾದಿ

ಸುಳಾದಿ

ಐವರು ನಡೆವ ಪಥ ರಾಜಪಥ ।
ಐವರು ನುಡಿದುದೆ ವೇದಾರ್ಥ ।
ಐವರು ಮಿಂದುದೇ ಗಂಗೆ ತೀರ್ಥ ।
ಐವರು ಮಾಡಿದುದೇ ನಾರಾಯಣ ।
ಐವರು ರಾಜಾಧಿರಾಜರುಗಳು ಕಾಣಿರೋ ।
ಐವರು ರಾಜಪರಮೇಶ್ವರರು ಕಾಣಿರೊ ।
ಐವರ ಗೋಷ್ಠಿಯಲ್ಲಿ ಪುರಂದರವಿಠಲನಿಪ್ಪ ೧

ಮಟ್ಟ ತಾಳ

ಹಸ್ತಿನ ಪಟ್ಟನವ ನೇಗಿಲಲಿ ಎತ್ತಿದನೊಬ್ಬ ।
ಅಸ್ತಮಿಸಿ ದಿನಮಂಡಲ ಉದಯವಿತ್ತನೊಬ್ಬ ।
ಪೃಥ್ವಿಯ ಬಿಲ್ಲಿಂದ ಹರಹಿ ಇತ್ತವನೊಬ್ಬ ।
ಪೃಥ್ವಿಯಂ ಗೋವಿನಂತೆ ಕರೆದು ಕೊಟ್ಟವನೊಬ್ಬ ।
ವಸ್ತು ಪುರಂದರವಿಠಲನಿತ್ತ ಸಲಿಗೆಯಂತೊ ೨

ತ್ರಿವಿಡೆ ತಾಳ

ಐವತ್ತು ಸಾವಿರ ಯೋಜನವೆತ್ತ
ಲಂಕಾಪಟ್ಟಣವೆತ್ತ ಸಂಜೀವನವುವೆತ್ತ
ಇದನಿಲ್ಲಿಂದಿಲ್ಲಿಗೀ ಡಾಡುವುದೆತ್ತ
ಪುರಂದರವಿಠಲನವರ ಪ್ರತಿಮರಕಾಣಿರೋ ೩

ಅಟ್ಟ ತಾಳ

ಸ್ವರ್ಗದ ಮುತ್ತಿಗೆಯನು ಬಿಡಿಸುವರು ।
ಮಾರ್ಗಣದಿಂದೆಚ್ಚೆತ್ತು ಪಾತಾಳದುದಕವ ।

ವಿಗ್ರಹಭೂಮಿಯಲ್ಲಿಟ್ಟು ಮೆರೆವರು ।
ಅಗ್ರಣಿ ಪುರಂದರವಿಠಲನಾಳುಗಳು ೪

ಆದಿ ತಾಳ

ಭಾಗೀರಥಿಯನೀಂಟಿದವರುಂಟೆ ।
ಸಾಗರವಾಪೋಶನ ಕೊಂಡವರುಂಟೆ ।
ನಾಗಾಭರಣವ ಮಾಡಿದವರುಂಟೆ ।
ಪುರಂದರವಿಠಲನ ದಾಸರಲ್ಲದಲೆ ೫

ಜೊತೆ

ಹರಿದಾಸರಿಗಿನ್ನು ಏನು ತೀರದಯ್ಯ ।
ಪುರಂದರವಿಠಲನ ಓವಿ ಕಾವುತಲಿದೆ ॥

೮೬

ಭಕ್ತವತ್ಸಲ ಸುಳಾದಿ

ಧ್ರುವತಾಳ

ಭಕುತರಿಗಾಗಿ ಬಾಳುವೆಯಯ್ಯ ನೀನು ।
ಭಕುತರಿಗಾಗಿ ಬದುಕೆವೆಯಯ್ಯ ನೀನು ।
ಭಕುತರಿಗಾಗಿ ಗಳಿಸುವೆಯಯ್ಯ ನೀನು ।
ಭಕುತರಿಗಾಗಿ ಉಳಿಸುವೆಯಯ್ಯ ನೀನು ।
ಸಕಲೇಶ್ವರ ನಿನಗೊಂದೂ ಕಾರಣವಿಲ್ಲ ।
ಮುಕುತೇಶ್ವರ ನಿನಗೊಂದೂ ಕಥನವಿಲ್ಲ ।
ಭಕುತರಿಗಾಗಿ ನಿನ್ನ ಜೀವನವಯ್ಯ ।
ಭಕ್ತವತ್ಸಲ ನಮ್ಮ ಪುರಂದರವಿಠಲ ।
ಭಕುತರಿಗಾಗಿ ನಿನ್ನ ಬಾಳುವೆಯ್ಯ ೧

ಮಟ್ಟತಾಳ

ಬೊಮ್ಮನ ಪಡೆದೆ ಬೊಮ್ಮನ ಪದದಲ್ಲಿ ನಿಲಿಸಿದೆ ।
ರುದ್ರನ ಪಡೆದೆ, ರುದ್ರನ ಪದದಲಿ ನಿಲಿಸಿದೆ ।
ಇಂದ್ರನ ಪಡೆದೆ, ಇಂದ್ರನ ಪದದಲಿ ನಿಲಿಸಿದೆ ।
ಚಂದ್ರನ ಪಡೆದೆ, ಚಂದ್ರನ ಪದದಲಿ ನಿಲಿಸಿದೆ ।
ಎಲ್ಲ ದೇವರ್ಕಳ ಪಡೆದೆ, ಎಲ್ಲದೇವರ್ಕಳ ಪಥದಲಿ ನಿಲಿಸಿದೆ ।
ಭಕುತರುಂಡದ್ದ ಉಂಬುದು ।
ಭಕುತರುಟ್ಟದ್ದ ಉಟ್ಟುದು ।
ಭಕುತರೊಡೆಯ ನೀನು ಭಕುತರಧೀನ ನೀನು ।
ಭಕುತವತ್ಸಲ ನಮ್ಮ ಪುರಂದರವಿಠಲ ।
ಭಕುತರೊಡೆಯ ನೀನು, ಭಕುತ ವತ್ಸಲ ನೀನು ೨

ರೂಪಕತಾಳ

ಗಾಳಿ ಬೀಸಲು ಪೊಂದದಂತೆ ನೀನು ।
ಶೀಲಚಕ್ರವಟ್ಟಿ ಭಕುತರ ಕಾಯಿದೆ ।
ಭಕುತವತ್ಸಲ ನಮ್ಮ ಪುರಂದರವಿಠಲ ।
ಆಸೆ ಚಕ್ರವನಟ್ಟಿ ಭಕುತರ ಕಾಯಿದೆ ೩

ಝಂಪ ತಾಳ

ಭಕುತರೆಂದರ ನಿನ್ನ ತೇಯುತಿಹೆಯಯ್ಯ ।
ಭಕುತರೆಂದರೆ ಅರಗಿನಂತೆ (ಕರಗಿ) ಕರುಗುತಿಹೆಯಯ್ಯ ।
ಭಕುತರಿಚ್ಛೆಯ ನೀನು ನೆಡೆಸುತಿಹೆಯಯ್ಯ ।
ಭಕುತರವಸರಕೆ ಒದಗುವೆಯಯ್ಯ ।
ಭಕುತವತ್ಸಲ ನಮ್ಮ ಪುರಂದರವಿಠಲ ।
ಭಕುತರಿಚ್ಛೆಯ ನೀನು ನೆಡೆಸುತಹೆಯಯ್ಯ ೪

ತ್ರಿವಿಡೆ ತಾಳ

ಮೇರುಮಂದಾರಾದಿ ಗಿರಿಗುಹೆಗಳಲ್ಲಿ ।
ಸಪುತಾಂಬುಧಿಗಳಲ್ಲಿ ಸಪುತದ್ವೀಪಗಳಲ್ಲಿ ।

ಮನಸಿಗೆ ಬಂದಂತೆ ಭಕುತರುಂಡದ್ದುಣುವಂತೆ ।
ನಿನ್ನ ಲಲನೆಯೆಂತೊ ಪುರಂದರವಿಠಲ ।
ನಿನ್ನ ಲಲನೆಯಂತೊ ೫

ಅಟ್ಟತಾಳ

ಭಕುತರಿಚ್ಛೆಯ ಮಾತ್ರದಲಿ ಇದ್ದುದನು ।
ಕಂಡು ಕೇಳಿ ಉಣಬಲ್ಲೆನಯ್ಯ ನಾನು ।
ಅನವರತ ಅನುಭವಿಸಬಲ್ಲೆನಯ್ಯ ನಾನು ।
ನಮ್ಮ ಪುರಂದರವಿಠಲನ ಶೀಲಸ್ವಭಾವವ ।
ಅನವರತ ಅನುಭವಿಸಬಲ್ಲೆ ನಾನು । ೬

ಏಕತಾಳ

ಭಕುತರಿಗಾಗಿ ನಡೆವೆ ನುಡಿವೆ ನೀನು ।
ಭಕುತರಿಗಾಗಿ ಕೊಡುವೆ ಕೊಳ್ಳುವೆ ನೀನು ।
ಭಕುತರಿಗಾಗಿ ಬರುವೆ ಹೋಗುವೆ ನೀನು ।
ಭಕುತರ ಪ್ರಭು ನೀನು ಭಕುತರಧೀನ ನೀನು ।
ಭಕುತವತ್ಸಲ ನಮ್ಮ ಪುರಂದರವಿಠಲ ೭

ಜತೆ

ಬಂಟ ಬದಿಗನಾದೆ ಬಂಡಿಯ ಬೋವನಾದೆ ।
ಬಂಟರಿಗೆ ಬಂಟನಾದೆ ಪುರಂದರವಿಠಲ ॥

೮೭

ಸುಳಾದಿ

ಆಪದ್ರಕ್ಷಕ ಸುಳಾದಿ

ಧ್ರುವತಾಳ

ಇದನು ಬಿಟ್ಟು ಇನ್ನಿಲ್ಲೆಂಬ ಮಹಾಬಾಧೆ ಬರಲಿ – ಮತ್ತೆ ।
ಇದನು ಬಿಟ್ಟು ಇನ್ನಿಲ್ಲೆಂಬ ಮಹಾಭೀತಿ ಬರಲಿ – ಮತ್ತೆ ।
ಇದನು ಬಿಟ್ಟು ಇನ್ನಿಲ್ಲೆಂಬ ಮಹಾ ಅಪಾಯ ಬರಲಿ – ಮತ್ತೆ ।
ಅದಕ್ಕೊಂದು ಇದಕ್ಕೊಂದು ಯೋಚಿಸಬೇಡಿ ಕಾಣಿರೊ ।
ಪುರಂದರವಿಠಲ ತನ್ನ ನಂಬಿದವರ ಹಿಂದಿಕ್ಕಿಕೊಂಬ ಕಾಣಿರೊ ೧

ಮಟ್ಟತಾಳ

ಅಪಾಯ ಕೋಟಿ ಕೋಟಿಗಳಿಗೆ ಉಪಾಯ ಒಂದೆ ।
ಹರಿದಾಸರು ತೋರಿಸಿಕೊಟ್ಟ ಉಪಾಯ ಒಂದೆ ।
ಅಪಾಯ ಕೋಟಿ–ಕೋಟಿಗಳಿಗೆ ಉಪಾಯ ಒಂದೆ ।
ಪುರಂದರವಿಠಲನೆಂದು ಬಾಯ್ಬಿಟ್ಟು ಕರೆವ
ಉಪಾಯ ಒಂದೆ ಕಾಣಿರೊ ೨

ತ್ರಿವಿಡೆ ತಾಳ

ಅಜಾಮಿಳನ ಯಮದೂತರು ಎಳೆಯಲು ।
ಆಗಲಲ್ಲಿಗೆ ಬಂದರಚ್ಯುತನ ದೂತರು ।
ಯಮದಂಡವ ಖಂಡಿಸಿ ತುಂಡಿಸಲಾಕ್ಷಣ ।
ಆಗಲ್ಲಲ್ಲಿಗೆ ಬಂದರಚ್ಯುತನ ದೂತರು ।
ನಾರಾಯಣ ಎಂದು ಚೀರುವ ಧ್ವನಿ ಕೇಳಿ ।
ಆಗಲ್ಲಲ್ಲಿಗೆ ಬಂದರಚ್ಯುತನ ದೂತರು ।
ಪುರಂದರವಿಠಲ ಕರುಣಿಪನಾಗಿ । ೩

ಅಟ್ಟತಾಳ

ಹಾ ಕೃಷ್ಣ ದ್ವಾರಕಾವಾಸಿ ಎಂಬುದ ಕೇಳಿ ।
ದ್ರೌಪದಿಯ ಮಾನವ ಕಾಯ್ದ ಬೇಕೆನುತಲಿ ।
ಶ್ರೀಪತಿ ಅಕ್ಷಯವಸ್ತ್ರವರವನಿತ್ತು ।
ದ್ರೌಪದಿಯ ಮಾನವ ಕಾಯ್ದ ಬೇಕೆನುತಲಿ ।
ಆಪತ್ತಿಗೆ ನಂಟ ಪುರಂದರವಿಠಲ ।
ದ್ರೌಪದಿಯಭಿಮಾನ ಕಾಯ್ದನಾತ । ೪

ಆದಿ ತಾಳ

ಹರಿಹರಿ ಎಂದು ಕರೆವುದೆ ತಡ ।
ಕರೆದಲ್ಲಿಗೆ ಬಾಹ-ಕರೆವಲ್ಲಿಗೆ ಬಾಹ ।
ಸುರ-ನರ-ಉರಗ ಲೋಕದಲ್ಲಿದ್ದರೂ ಸರಿ – ನೀ ।
ಕರೆದಲ್ಲಿಗೆ ಬಾಹ-ಕರೆವಲ್ಲಿಗೆ ಬಾಹ ।
ಪುರಂದರವಿಠಲನೆಂದೊಮ್ಮೆ ಕರೆಯಲು ।
ಕರೆದಲ್ಲಿಗ ಬಾಹ ೫

ಜತೆ

ತನ್ನ ಡಿಂಗರಿಗರ ತಾನೆತ್ತಿಕೊಂಬಲ್ಲಿ ।
ಸನ್ನದ್ಧ ಸರ್ವದಾ ಪುರಂದರವಿಠಲ ॥

೮೮

ಸುಳಾದಿ

ಒಡೆಯ ಸುಳಾದಿ

ಧ್ರುವತಾಳ

ಒಡೆಯ ಹಾವುಗೆ ಮೆಟ್ಟ ಹಾವುಗೆಯವ ನಾನು ।
ಒಡೆಯ ಮೆಲ್ಲಡಿಯಿಡಲು ಕಟ್ಟಿಗೆಯವ ನಾನು ।

ಒಡೆಯ ತಾಂಬೂಲವ ಉಗುಳುವ ವೇಳೆಯಲಿ ।
ಪಡಿಗ–ಕಾಳಂಜಿಯ ಪಿಡಿವವ ನಾನು ।
ಒಡೆಯನೊಡ್ಡೋಗಲಗದಿ ಚಿತ್ತೈಸಿರೆ ।
ಪಿಡಿವವ ಛತ್ರ ಛಾಮರವ ಕನ್ನಡಿಯ–ನಾನು ।
ಒಡೆಯ ಪುರಂದರವಿಠಲರಾಯನ ।
ಉಗುರು ಬಿದ್ದಲ್ಲಿ ಎನ್ನ ಶಿರವ ಕೊಡುವೆ ನಾನು ೧

ಮಟ್ಟತಾಳ

ಹರಿಯನೋಲೈಸುವೆಂಬಣ್ಣಗಳಿರಾ ಕೇಳಿ ।
ಶರಧಿಯ ಕಟ್ಟಬೇಕು, ಲಂಕೆಯ ಮುತ್ತಬೇಕು ।
ರಾವಣಾದಿಗಳ ಕೂಡ ಇರಿದಾಡುತಿರಬೇಕು ।
ಪುರಂದರವಿಠಲನ ಊಳಿಗ ಘನ–ಶರಧಿಯ ಕಟ್ಟಬೇಕು । ೨

ತ್ರಿವಿಡೆ ತಾಳ

ಚೆಂದಿರನಿಗೆ ಇಂದು ನಿಂದಿರೆ ತೆರಪಿಲ್ಲ ।
ಸೂರ್ಯನಿಗೆ ಇಂದು ಕುಳ್ಳಿರೆ ಹೊತ್ತಿಲ್ಲ ।
ಇಂದ್ರಾದಿಗಳೆಲ್ಲ ಹರಿ ಹರಿ ಎಂದು
ತಲೆಯನ್ನು ತುರಿಸ ಹೊತ್ತಿಲ್ಲ ।
ಬೊಮ್ಮಾದಿಗಳಿಗೂ ಒಮ್ಮೆಯೂ ತೆರಹಿಲ್ಲ ।
ಈ ದೇವರನೆಲ್ಲ ಮೆಟ್ಟಿ ಆಳುವ ನಮ್ಮ ಪುರಂದರವಿಠಲನ
ಕಟ್ಟಾಳು ಕಾಣಿರೊ ೩

ಅಟ್ಟತಾಳ

ಶ್ರೀಕೃಷ್ಣನರಮನೆಯ ಗಾಯಕರಾವು ।
ನಟರಾವು, ಬಿಜಾವಂತರಾವು ।
ಸೂತ ಮಾಗಧ ವಂದಿಗಳಾವು, ಭಟ್ಟರಾವು ।
ಪುರಂದರವಿಠಲನ ಸೇವಕರಾವು
ಭಟರಾವು ವಿದ್ಯಾವಂತರಾವು । ೪

ಏಕತಾಳ

ತಿರೆಯಂಜುತಲಿದೆ, ಗಿರಿಯಂಜುತಲಿದೆ ।
ಮರಬಳ್ಳಿಗಳಂಜಿ ಫಲವನೀವುತಲಿವೆ ।
ಸರಿತು ಸಮುದ್ರಗಳಂಜಿ ಬೆಚ್ಚುತಲಿವೆ ।
ಆ ಸಚರಾಚರವಂಜುತಲಿದೆ ।
ಪುರಂದರವಿಠಲ ನೀನೆಂಥ ಅರಸನೊ । ೫

ಜತೆ

ನಾ ಘನ, ನೀ ಘನ, ತಾ ಘನ ಎನಬೇಡ ।
ಪುರಂದರವಿಠಲನೊಬ್ಬನೆ ಘನ ಘನ ॥

೭೯

ಸುಳಾದಿ

ಧ್ರುವತಾಳ

ಗರಭವಾಸ, ಗಿರಭವಾಸ. ಜನನ ಗಿನನ ।
ಮರಣ ಗಿರಣ ಕಾಲ-ಗೀಲ, ಕರುಮ-ಗಿರುಮ ।
ದಾರಿ-ಗೀರಿ, ದಃಖ-ಗಿಕ್ಖ, ಸಂಚಿತ-ಗಿಂಚಿತ ।
ಪ್ರಾರಬ್ಧ-ಗೀರಬ್ಧ, ಆಗ್ರಾಮಿ-ಗೀಗಾಮಿ ।
ಬಂಧಕ-ಗಿಂಧಕ, ಎಡರು-ಗಿಡರು ।
ಭೀತಿ-ಗೀತಿ, ನರಕ-ಗಿರಕ, ಯಾತನೆ-ಗೀತನೆ ।
ಪುರಂದರವಿಠಲನವರಿಗುಂಟೆ ?ಅವರ ।
ತೊಂಡಗಿಂಡರಿಗುಂಟೆ? । ೧

ಮಟ್ಟತಾಳ

ಹರಿಯ ಅಭಿಮುಖರ ಬಡತನ-ಗಿಡತನ ।
ಹರಿಯ ಅನಭಿಮುಖರ ದೊಡ್ಡತೆ ದೊರೆತನ-ಗಿರಿತನ ।
ಸರಿಯೆನಬಹುದೆ? ಪ್ರತಿಯೆನಬಹುದೆ? ಈ-।

ಸುರತರುವಿನ ಮೊಳಕೆ ಎಲವದ ಮರಕೆ ।
ಸರಿಯೆನಬಹುದೆ? ಪ್ರತಿಯೆನಬಹುದೆ? ।
ಪುರಂದರವಿಠಲನ ಆಳುಗಳಿಗೆ ನೋಡಾ ।
ಸ್ವರ್ಗ,ಮರ್ತ್ಯ, ಪಾತಾಳ ಲೋಕದಲಿ ।
ಸರಿಯುಂಟೆ ? ಪ್ರತಿಯುಂಟೆ ? ೨

ಝಂಪೆ ತಾಳ

ಅಲರು ಮೋಹಿದೊಡೇನು, ಅಲಗು ಮೋಹಿದೊಡೇನು ।
ಜಲರುಹಾಕ್ಷನ ಪಾದಜಲರುಹಕ್ಕಾಗಿ ಮುಳುಗಿ ।
ಫಲಿಸದಿದ್ದರೆ ನಿಮ್ಮ ಚಿತ್ತ ಒಂದೆ ಅಯ್ಯ ।
ಗಿರಿರಮಣ ಪುರಂದರವಿಠಲರಾಯ ।
ಹಾವುಗೆಯಾಳರ ತಲೆಗೆ ಸಂದಿದೆ, ಸಂದೇಹವಿಲ್ಲ ।
ಫಲಿಸದಿದ್ದರೆ ನಿಮ್ಮ ಚಿತ್ತ ಅಯ್ಯ । ೩

ತ್ರಿವಿಡೆ ತಾಳ

ಅಡಗಿ ನೋಡಿಕೊಂಡು ಕೂಡಿಕೊಂಬನು ತನ್ನ ಕಪಿಲೆಯೆಂದು ।
ಕೂಡಿಕೊಂಬನು ತನ್ನ ಹಿಂಡಿನೊಳಗೆ ।
ಒಡೆಯೊರೊಡೆಯ ನಮ್ಮ ಪುರಂದರವಿಠಲ ।
ಕೂಡಿಕೊಂಬನು ೪

ಏಕತಾಳ

ಅರಳನ್ನರಳುವ ಕೈಯ ನಾರಾಯಣನಾಳ್ಗಳು ।
ಇವರುಗಳಳವಲ್ಲವೆ ಅಯ್ಯ ।
ನಾರಾಯಣ ಪುರಂದರವಿಠಲರಾಯನಲ್ಲದೆ ।
ನಾರಾಯಣ ನಾಳ್ಗಳ ೫

ಜತೆ

ಪುರಂದರವಿಠಲಗೆ ಆತನ ಆಳುಗಳಿಗೆ ।
ಶರಣು ಶರಣೆಂದು ಬದುಕುವೆ ನಾ ॥

೯೦

ಉಗಾಭೋಗ

ಕೋಳಿಗೆ ಹೊನ್ನ ಪಂಜರವು ಇನ್ನೇಕೆ
ಜೋಳಿಗೆ ಜಾಳಿಗೆದಂಡೆ ಇನ್ನೇಕೆ
ಮಾಳಿಗೆಯ ಮನೆಯಿನ್ನು ಡೊಂಬಗೇಕೆ
ಆಳು ಇಲ್ಲದೆ ಅರಸುತನವೇಕೆ
ನಮ್ಮ ಪುರಂದರವಿಠಲನ ಊಳಿಗಕ್ಕಾಗದವನ
ಬಾಳುವೆ ಇನ್ನೇಕೆ?

೯೧

ಉಗಾಭೋಗ

ಕೋಳಿಗೆ ಯಾತಕ್ಕೆ ಹೊನ್ನಪಂಜರವು
ಜೋಳಿಗೆಯಾತಕ್ಕೆ ಜಾಜಿಮಲ್ಲಿಗೆ ದಂಡೆ
ಆಳಿಲ್ಲದವನಿಗೆ ಅರಸುತನವ್ಯಾತಕ್ಕೆ ನಿನ್ನ
ಊಳಿಗವ ಮಾಡದನ ಬಾಳು ಇನ್ನ್ಯಾತಕ್ಕೆ
ಪೇಳಯ್ಯ ದೇವ ಶ್ರೀ ಪುರಂದರವಿಠಲ.

೯೨

ಉಗಾಭೋಗ

ಮರವಿದ್ದರೆ ಫಲವೇನು ನೆರಳಿಲ್ಲದನಕ
ಒರತೆ ಇದ್ದರೆ ಫಲವೇನು ಜಲವಿಲ್ಲದನಕ
ಧನವಿದ್ದರೆ ಫಲವೇನು ಮನವಿಲ್ಲದನಕ
ಏನು ಇದ್ದೊಡೇನು ಜ್ಞಾನವಿಲ್ಲದನಕ
ತನುವಿದ್ದರೆ ಫಲವೇನು ಪುರಂದರವಿಠಲನ
ಊಳಿಗಮಾಡದನಕ.

೯೩

ಉಗಾಭೋಗ

ಮರವಿದ್ದರೇನಯ್ಯ ನೆರಳಿಲ್ಲದನಕ
ನೆರಳಿದ್ದರೇನಯ್ಯ ನೀರಿಲ್ಲದನಕ
ನೀರಿದ್ದು ಫಲವೇನು ಒರತಿಲ್ಲದನಕ
ಧನವಿದ್ದು ಫಲವೇನು ಕೊಡುವ ಮನವಿಲ್ಲದನಕ
ದೇವಪುರಂದರವಿಠಲರಾಯನ
ಊಳಿಗ ಮಾಡದವನ ಬಾಳುವೆಯಿದ್ದೇನು.

೯೪

ಉಗಾಭೋಗ

ಒಡಲುಗುನುಳ್ಳ ತೊತ್ತಿಗೇತರ ಚಿಂತೆ
ಎನ್ನೊಡೆಯ ದ್ವಾರಕಿನಿವಾಸ ಎಂಬ ಛತ್ರವಿರೆ
ಇಂದಿಗೆಂಬ ಚಿಂತೆ ನಾಳೆಗೆಂಬ ಚಿಂತೆ
ನಾಡಿದಿಗೆಂಬ ಚಿಂತೆ ತೊತ್ತಿಗೇತಕಯ್ಯ?
ಅಡಿಅಡಿಗೆ ಎಮ್ಮನೋವ ಕಾವ ಚಿಂತೆಯ
ಒಡೆಯ ಪುರಂದರವಿಠಲ ನೀನಿರುತಿರೆ.

೯೫

ಉಗಾಭೋಗ

ಹರಿಶರಣು ಎನ್ನ ಮನೆಗೆ ಬಂದರೆ
ಮನೆ ಪಾವನವಪ್ಪದು
ಹರಿಶರಣರ ಎನ್ನ ಕೂಡೆ ಮಾತನಾಡಿದರೆ
ತನು ಪಾಪ ಹೋಹುದು
ಮನೆಯೊಳುಂಡರೆ ಎನ್ನ ಇಪ್ಪತ್ತೊಂದು ಕುಲ
ಪಾವನವಪ್ಪುದು

ಹರಿಶರಣರೆನಗೆ ಗತಿ ಹರಿಶರಣರೆನಗೆ ದೆಸೆ
ಎನ್ನ ಗದುಗಿನ ವೀರನಾರಾಯಣ ಪುರಂದರವಿಠಲ.

೯೬

ಉಗಾಭೋಗ

ರಾವಣನು ರಥವೇರಿ ರಣಕೆ ಬಂದಿರಲಾಗಿ
ನೀವು ಪಾದಾಚಾರಿಯಾಗಿ ಭೂಮಿಯಲ್ಲಿರಲು
ನಮ್ಮ ಹನುಮಂತನು ನಿಮ್ಮನು ಕಂಡು
ಚಾಲ್ವರಿದು ಬೊಬ್ಬಿರಿದು ಕುಣಿಕುಣಿದಾಡಿ
ಸುಖ(ವ) ಸೂರೆ(ಯ) ಮಾಡಿ ಎತ್ತಿರಲು
ನಮ್ಮ ಹಿರಿಯ ನಿಮ್ಮ ವೇಳೆಗೊದಗಿರಲಾಗಿ
ನಮ್ಮ ನೀ (ಮರೆಯುವದೆ) ಮರೆಯಲಾಗದು ಪುರಂದರವಿಠಲ

೯೭

ಉಗಾಭೋಗ

ಒಂದು ಕಾಲದಲ್ಲಿ ಆನೆ ಕುದರೆ (ಮೇಲ್ಮೆರೆಸುವೆ) ಏರಿಸುವೆ
ಒಂದು ಕಾಲದಲ್ಲಿ ಬರಿಗಾಲಿಂದ ನೆಡೆಸುವೆ
ಒಂದು ಕಾಲದಲ್ಲಿ ಅಮೃತಾನ್ನವನುಣಿಸುವೆ
ಒಂದು ಕಾಲದಲ್ಲಿ ಉಪವಾಸವಿರಿಸುವೆ
ನಿನ್ನಳವ ನೀನೇ ಬಲ್ಲೆ ನಾನೇನ ಬಲ್ಲೆನಯ್ಯ
ಪನ್ನಗಶಯನ ಶ್ರೀಪುರಂದರವಿಠಲ.

೯೮

ಉಗಾಭೋಗ

ಅಂದು ಬಾಹೋದು, ನಮಗಿಂದೇ ಬರಲಿ
ಇಂದೆ (ಇಂದು) ಬಾಹುದು ನಮಗೀಗೇ ಬರಲಿ

ಈಗ ಬಾಹೋದು ನಮಗೀಕ್ಷಣವೆ ಬರಲಿ
ಪುರಂದರವಿಠಲನ ದಯೆ(ವೊಂದು) ನಮಗಿರಲಿ.

೯೯

ಉಗಾಭೋಗ

ಇಲ್ಲದಿದ್ದರೆ ಮುಗುಳು ತೆನೆ
ಇಲ್ಲದಿದ್ದರೆ ಚಿಗುರೆಲೆ
ಇಲ್ಲದಿದ್ದರೆ ಬರಲು ಕಟ್ಟಿಗೆ
ಇಲ್ಲದಿದ್ದರೆ ಬೇರು ಮಣ್ಣು
ಅದೂ ಇಲ್ಲದಿದ್ದರೆ
ತುಲಸಿ ತುಲಸಿ ಎಂದು ಕೂಗಿದರೆ ಸಾಕು
ಎಲ್ಲ ವಸ್ತುಗಳ ನೀಡಾಡುವ ಪುರಂದರವಿಠಲ.

೧೦೦

ಉಗಾಭೋಗ

ಇರುವದಾದರೆ ಮುಗುಳುತೆನೆ
ಅದಿಲ್ಲದಿರೆ ಚಿಗುರೆಲೆ
ಅದೂ ಇಲ್ಲದಿರೆ ಬರಲು ಕಟ್ಟಿಗೆ
ಇಲ್ಲದಿದ್ದರೆ ಬೇರು ಮಣ್ಣು
ಅದೊಂದು ಇರದಿರೆ
ತುಳಸಿ ತುಳಸಿ ಎಂದೊರಲಿದರೆ ಸಾಕು
ಎಲ್ಲ ವಸ್ತುಗಳನೀಡಾಡುವ ಪುರಂದರವಿಠಲ.

೧೦೧

ಸುಳಾದಿ

ಮಹಿಮಾಸುಳಾದಿ

ಧ್ರುವತಾಳ

ಅಕಿಂಚನಗೆ ಅನರ್ಘ್ಯವಾದಂತೆ ।
ಅರತಂಗೆ ಆರತವಾದಂತೆ ।
ಅಂಧಕಂಗೆ ಅಕ್ಷಿಯಾದಂತೆ ।
ಅರವಿಂದಕಾದಿತ್ಯನಾದಂತೆ ।
ಅಳಿಗೆ ಅಮರಾಂಘ್ರಿಪವಾದಂತೆ ।
(ಆ) ಅಪುಣ್ಯಕ್ಕೆ ಅಮೃತವಾದಂತೆ ।
ಅಯ್ಯ ಅಕಿಂಚನಗೆ ಅನರ್ಘ್ಯವಾದಂತೆ ।
ಅಪಾರ ಸಂಸಾರ ಭಯಭೇದ ।
ಅನೇಕದ ಅದಿಪತಿಯಾದ ।
ಪುರಂದರವಿಠಲರಾಯ ।
ಎನಗೆ ನಿನ್ನ ಸಿರಿ ನಾಮ ದೊರಕಿಸು ದೇವಾ ೧

ಮಟ್ಟತಾಳ

ಅಕಳಂಕ ಚರಿತ ನಮೋ ನಮೋ ।
ಸಕಲ ಸ್ವರೂಪ ನಮೋ ನಮೋ ।
ಭಕುತವತ್ಸಲ ನಮೋ ನಮೋ ।
ಬಕವಿದಾರಣ ನಮೋ ನಮೋ ।
ಅಕುತೋಭಯ ನಮೋ ನಮೋ ।
ರುಕುಮಿಣೀಪತಿ ಪುರಂದರವಿಠಲ ನಮೋ ನಮೋ ೨

ಏಕತಾಳ

ಹೃದಯಕಮಲದಲ್ಲಿ ನಾ ನಿನ್ನ ಪಾದ– ।
ಪದುಮವ ನೆನೆವಂತೆ ಮಾಡು ।

ಯದುರಾಜಾಧಿರಾಜ ಸುದರುಶನಧರ ।
ಇದನೆ ಕೃಪೆ ಮಾಡೆನಗೆ ।
ಮದನಪಿತ ಪುರಂದರವಿಠಲರಾಯ ೩

ಅಟ್ಟತಾಳ

ಮನೆಯಾಕೆ ಮನ್ನಣೆಗೆಡೆಸುತಲಿದೆಯೆನ್ನ– ।
ಮನೆ ಮನೆವಾರತೆಯಾಶೆ ಬಲು ಬಾಧಿಸುತಿದೆ ।
ಧನದಾಶೆ ದೈನ್ಯ ಬಡಿಸುತಿದೆ ।
ವನಿತೆಯರಾಶೆ ಒಡಲ ಸುಡುತಿದೆ ।
ಇನಿತಾಶೆಯ ಬಿಡಿಸು ಬುದ್ಧಿಯಲಿ ನಿನ್ನ ।
ನೆನೆವಂತೆ ಮಾಡೆನ್ನ ಪುರಂದರವಿಠಲ ೪

ಝಂಪೆತಾಳ

ಮೊರೆಹೊಕ್ಕವರ ಕಾವ ಮಾರಾಂತರನಿರಿವ ।
ದೇವ ನಿನಗಿಲ್ಲದುಂಟೆ ಸಚರಾಚರದೊಳು ।
ನಿನಗಲ್ಲದುದುಂಟೆ ನಾ ನಿನ್ನ ಮೊರೆ ಹೊಕ್ಕೆನಯ್ಯ ।
ನೀ ಎನ್ನ ಕಾಯ್ದುಕೋ ಪುರಂದರವಿಠಲ ರಾಮ. ೫

ಜತೆ

ನಿತ್ಯಾನಿತ್ಯಸುವಸ್ತುಗಳೊಳಗೆ ।
ನಿತ್ಯ ಸುನಿತ್ಯ ಪುರಂದರ ವಿಠಲ ॥

೧೦೨

ಉಗಾಭೋಗ

ಬೆಟ್ಟದಂಥ ದುರಿತವು ಸುತ್ತಮುತ್ತು ಇರಲಾಗೆ
ಕೃಷ್ಣ ನಾಮದ ಕಿಡಿಬಿದ್ದು ದುರಿತ ಬೇವುದ ಕಂಡೆ
ಎಲೆ ಎಲೆ ದುರಿತವೆ, ನಿಲ್ಲ–ನಿಲ್ಲದೆ ಹೋಗು

ಎಲೆ ಎಲೆ ದುರಿತವೆ, ತಿರುಗಿ ನೋಡದೆ ಹೋಗು ।
ಎಲೆ ಎಲೆ ದುರಿತವೆ, ಮರಳಿ ನೋಡದೆ ಹೋಗು
ಎನ್ನೊಡೆಯ ಪಂಢರಿರಾಯ ಪುರಂದರ ವಿಠಲ ಕಂಡರೆ
ಶಿರವ ಚೆಂಡಾಡುವನು–ತಿರುಗಿ ನೋಡದೆ ಹೋಗು.

೧೦೩

ಉಗಾಭೋಗ

ಬೆಟ್ಟದಂಥ ಸುತ್ತಮುತ್ತಲೊಟ್ಟಿರೆ
ಕೃಷ್ಣ ನಾಮದ ಕಿಡಿಬಿದ್ದು ಬೆಂದುಹೋದದ್ದು ಕಂಡೆ
ಎಲೆ ಎಲೆ ದುರಿತವೆ ತಿರುಗಿ ನೋಡದೆ ಹೋಗು
ಎಲೆ ಎಲೆ ದುರಿತವೆ ಮರಳಿ ನೋಡದೆ ಹೋಗು
ನಿನ್ನ ಕಂಡರೆ ಶಿಕ್ಷಿಸದೆ ಬಿಡ
ಇನ್ನೊಮ್ಮೆ ಕಂಡರೆ ಶಿರವ ಚೆಂಡಾಡುವನು
ಪುಂಡರೀಕಾಕ್ಷ ನಮ್ಮ ಪುರಂದರವಿಠಲ.

೧೦೪

ಉಗಾಭೋಗ

ಪಾತಕರೊಳಗೆಲ್ಲ ನಾನು ವೆಗ್ಗಳನಯ್ಯ
ಪ್ರಾಯಶ್ಚಿತ್ತದಲಿ ನಿನ್ನ ನಾಮ ವೆಗ್ಗಳವಯ್ಯ
ಪಾತಕವ ನಾ ಮಾಡಿದೆನು ಪ್ರಾಯಶ್ಚಿತ್ತವ ನೀಡು
ಇನ್ನೇತರ ಭಯವಯ್ಯ ಪುರಂದರವಿಠಲ.

೧೦೫

ಉಗಾಭೋಗ

ಹಿಂಸಕರ ಸಂಗದಿಂದ ಬಂದ ಪಾತಕಕ್ಕೆ
ಕಂಸಮರ್ದನನೆಂದರೆ ಸಾಲದೆ?

ಜಾರರ ಸಂಗದಿಂದ ಬಂದ ಪಾತಕಕ್ಕೆ
ಗೋಪೀಜನ ಜಾರನೆಂದರ ಸಾಲದೆ?
ಚೋರರ ಸಂಗದಿಂದ ಬಂದ ಪಾತಕಕ್ಕೆ
ನವನೀತಚೋರನೆಂದರೆ ಸಾಲದೆ?
ಜಾರ ಚೋರನಾದ ಅಜಮಿಳನನ್ನು
ವೈಕುಂಠಕ್ಕೇರಿಸಿದ ಪುರಂದರವಿಠಲಗೆ ನಮೊ ನಮೊ.

೧೦೬

ಉಗಾಭೋಗ

ಆವಿನ ಕೊಂಬಿನ ತುದಿಯಲಿ ಸಾಸಿವೆ
ನಿಂತಷ್ಟು ಹೊತ್ತಾದರಾಗಲಿ
ದೇವ ನಿನ್ನ ನೆನೆದವ ಜೀವನ್ಮುಕ್ತನಲ್ಲವೆ?
ಸರ್ವಕಾಲದಲ್ಲೂ ಒರಲುತ್ತ ನರಳುತ್ತ
ಹರಿ ಹರಿ ಎಂದವ ಜೀವನ್ಮುಕ್ತನೆಂಬುದು
ಏನು ಆಶ್ಚರ್ಯವಯ್ಯ ಪುರಂದರವಿಠಲ.

೧೦೭

ಉಗಾಭೋಗ

ಆವಿನ ಕೊಂಬಿನ ತುದಿಯಲ್ಲಿ ಸಾಸಿವೆ ಕಾಳಿದ್ದಷ್ಟೋತ್ತಾಗಲಿ
ದೇವ ನಿನ್ನ ನೆನೆದವ ಜೀವನ್ಮುಕ್ತನಲ್ಲವೇನೈ
ಸರ್ವಕಾಲದಲಿ ನರಳುತ್ತ ಹೊರಳುತ್ತ ವರಲುತ್ತ
ಶ್ರೀಹರಿ ಹರಿ ಯೆಂದವರು
ಜೀವನ್ಮುಕ್ತನೆಂಬದಕ್ಕೆ ಏನು ಆಶ್ಚರ್ಯವಯ್ಯ
ಶ್ರೀ ಪುರಂದರವಿಠಲರೇಯ.

೧೦೮

ಉಗಾಭೋಗ

ಗಾಳಿಗಿಕ್ಕಿದ ದೀವಿಗೆಯಂತೆ ಈ ದೇಹ
ನಿಮಿಷವೊ ನಿಮಿಷಾರ್ಧವೊ ತಿಳಿಯದು
ಕಾಲಕಾಲಗಳಲ್ಲಿ ಹರಿಗುಣ ಕಲ್ಯಾಣಗಳ
ಕೇಳದವನ ಜನ್ಮ ವ್ಯರ್ಥವೊ ಪುರಂದರವಿಠಲ.

೧೦೯

ಉಗಾಭೋಗ

ಚೋರಗೆ ಚಂದ್ರೋದಯ ಸೊಗಸುವುದೆ?
ಜಾರಗೆ ಸೂರ್ಯೋದಯ ಸೊಗಸುವುದೆ?
ಶ್ರೀರಮಣನ ಕಥೆ (ಯುಹೀನಗೆ) ಮೆಚ್ಚುವುದೆ?
ನಾರಿಯ ನಯನವಿಲ್ಲದ ಚೆಲುವಿಕೆಯು
ಶಾರೀರವಿಲ್ಲದವನ ಹಾಡಿಕೆಯು
ಅರಣ್ಯರೋದನ(ವೋ)ವಯ್ಯ ಪುರಂದರವಿಠಲ.

೧೧೦

ಉಗಾಭೋಗ

ಧನದಾಸೆ ದೈನ್ಯಪಡಿಸುತಿದೆ
ವನಿತೆಯರ ಓಡಾಡಿಸುತಿದೆ
ಮನದಾಸೆ ಮಂತ್ರವ ಕೆಡಿಸುತಿದೆ
ಮನೆವಾರ್ತೆಯಾಸೆ ಮನವ ಬಾಧಿಸುತಿದೆ
ಇನಿತರಾಸೆಯ ಬಿಡಿಸಿ ನಿನ್ನ ಚರಣಗಳ
ನೆನೆವಂತೆ ಮಾಡೊ ಪುರಂದರವಿಠಲ.

೧೧೧

ಉಗಾಭೋಗ

ಧ್ವಜವಜ್ರಾಂಕಶ ರೇಖಾಂಕಿತವಾದ
ಹರಿಯ ಪದ್ಮಾಂಜುವ (ಸೇವಿಪ) ಸೇವಿಸುವ
ಅಜಭವಾದಿಗಳ (ಭಾಗವತರ) ಭಾಗ್ಯವ (ನೋಡೋ) ನೋಡು
ತ್ರಿಜಗವಂದ್ಯನ ಪಾಡು
ಭಕುತಿಯನು ಬೇಡು (ಸುಜನಸಂಗಮಮಾಡು)
ಕುಜನಮತವ ಸುಡು
ದರ್ಜನರ ಸಂಗವ ಬಿಡು
ಗಜೇಂದ್ರನ ಕಾಯ್ದ ಶ್ರೀಕೃಷ್ಣನ ಧ್ಯಾನವ (ಸ್ಮರಣೆ) ಮಾಡು ।
ಪುರಂದರವಿಠಲ(ರಾಯನ) ಬಿಡದೆ ಕೊಂಡಾಡು.

೧೧೨

ಸುಳಾದಿ

ಕ್ಷೇತ್ರ ಸುಳಾದಿ

ಧ್ರುವತಾಳ

ವರಗಿರಿಯಿಂದ ತಿಮ್ಮಯ್ಯ ಬಂದ ।
ಸಿಂಹಗಿರಿಯಿಂದ ನರಸಿಂಹ ಬಂದ ।
ಹಸ್ತಿಗಿರಿಯಿಂದ ವರದರಾಜನು ಬಂದ ।
ಯದುಗಿರಿಯಿಂದ ನಾರಾಯಣ ಬಂದ ।
ಕಾವೇರಿಯಿಂದ ರಂಗನಾಥನು ಬಂದ ।
ಪುರುಷೋತ್ತಮದಿಂದ ಜಗನ್ನಾಥ ಬಂದ ।
ಪಾಂಡುರಂಗದಿಂದ ಎನ್ನ ಮನ್ನಿಸಿ ।
ಮನೆಗೆ ಪುರಂದರ ವಿಠಲರಾಯ ಬಂದ ೧

ಮಟ್ಟತಾಳ

ಬದರಿಕಾಶ್ರಮದಿಂದ ಬಾದರಾಯಣ ಬಂದ ।
ಕಿಂಪುರಕ್ಷಖಂಡದಿಂದ ಹನುಮನೊಡೆಯ
ರಾಮಚಂದ್ರ ಬಂದ ।
ಕ್ಷೀರವಾರಿಧಿವಾಸಿ ಪುರಂದರವಿಠಲರಾಯ ಬಂದ ೨

ತ್ರಿವಿಡಿತಾಳ

ಶ್ರೀಮದನಂತಶಯನದಿಂದ ಶ್ರೀಮದನಂತ ಪದ್ಮನಾಭ ಬಂದ ।
ಶ್ರೀಮದಾಚಾರ್ಯರಿಗೊಲಿದ ಶ್ರೀಮದುಡುಪಿಯ ಕೃಷ್ಣ ಬಂದ ।
ಶ್ರೀಮದ್ವಾರಣಾಸಿಯಿಂದ ಶ್ರೀಮಹಾವಿಷ್ಣುವೇ ಬಂದ ।
ಅಹಾ ಅಹಾ ಪುರಂದರವಿಠಲನೇ ಮನೆಗೆ ಬಂದ ೩

ಅಟ್ಟತಾಳ

ಪ್ರಯಾಗದಿಂದ ಪ್ರಯಾಗಮಾಧವ ಬಂದ
ಗಯೆಯಿಂದ ಗದಾಧರ ಬಂದ
ಆಯಾಸವಿಲ್ಲದೆ ಆದಿಕೇಶವ ಬಂದ ।
ಕೈವಲ್ಯ ಪುರಂದರ ವಿಠಲ ಮನೆಗೆ ಬಂದ ೪

ಆದಿತಾಳ

ಅತಳ ವಿತಳ ಸುತಳ ಮಹಾತಾಳ ।
ತಳಾತಳ ರಸಾತಳ ಪಾತಾಳದಿಂದ ।
ಭೂಭುವಸ್ವಃ ಮಹಾಜನ ತಪಃಸತ್ಯ ಲೋಕದಿಂದ ।
ಪರಮಪದವೀವ ಪರಿಪೂರ್ಣ ಪರಬ್ರಹ್ಮ ।
ಪುರಂದರವಿಠಲ ಬಂದ ೫

ಝಂಪೆತಾಳ

ಮೇಲುಗಿರಿಯಿಂದ ಮಹಾಲಕ್ಷ್ಮೀವರನು ಬಂದ ।
ಅಲುಮೇಲು ಮಂಗದಿಂದ ಭೂರಮಣ ಬಂದ ।

ಕಾಲಿಂದಿಯಿಂದ ಕಾಳಿಂಗಮರ್ದನ ಬಂದ ।
ಲೀಲಾವಿನೋದಿ ಪುರಂದರವಿಠಲ ಬಂದ ೬

ಜತೆ

ಲೋಕ ಸಂರಕ್ಷಕ ಅಸುರ ಸಂಹಾರಕ ।
ಲೋಕೇಶ ಪುರಂದರವಿಠಲ ಬಂದ ॥

೧೧೩

ಸುಳಾದಿ

ಕ್ಷೇತ್ರಸುಳಾದಿ

ಧ್ರುವತಾಳ

ವರಗಿರಿಯಿಂದ ತಿಮ್ಮಪ್ಪ ಬಂದ ಹಸ್ತಿ ।
ಗಿರಿಯಿಂದ ವರದರಾಜ ಬಂದ ಯದು ।
ಗಿರಿ ಶ್ರೀ ನಾರಾಯಣ ಬಂದ ಕಾವೇರಿ ।
ಶ್ರೀ ರಂಗನಾಥ ಬಂದ ಶ್ರೀಮುಷ್ಣದಿಂದ ಶ್ವೇತ ।
ವರಾಹ ಬಂದ ಪಂಢರಪುರದಿಂದ ಎನ್ನ ಮನೆಗೆ ಮನ್ನಿಸಿ ।
ಪುರಂದರವಿಠಲರಾಯ ಬಂದ । ೧

ಮಟ್ಟತಾಳ

ಬದರಿಕಾಶ್ರಮದಿಂದ ಬಾದರಾಯಣ ಬಂದ ।
ಕಿಂ ಪುರುಷಖಂಡದಿಂದ ಹನುಮನೊಡೆಯ ರಾಮ ।
ಚಂದ್ರ ಬಂದ ಕ್ಷೀರವಾರಿಧಿಯಿಂದ ಶ್ರೀಮಂತ ಪು ।
ರಂದರ ವಿಠಲರಾಯಬಂದ ೨

ತ್ರಿವಿಡೆತಾಳ

ಶ್ರೀಮದನನಂತ ಶಯನದಿಂದ ।
ಶ್ರೀಮದನಂತಶಯನ ಬಂದ ।

ಶ್ರೀಮಧ್ವಾಚಾರ್ಯರ ಮನೆದೈವ ।
ಶ್ರೀಮದ್ದ್ವಾರಾವತಿಯಿಂದ ಬಂದ ।
ಶ್ರೀಮದುಡುಪಿ ಕೃಷ್ಣರಾಯ ಬಂದ ।
ಶ್ರೀಪತಿಪುರಂದರ ವಿಠಲರಾಯ ಬಂದ ೩

ಅಟ್ಟತಾಳ

ಪ್ರಯಾಗ ಮಾದವ ಕಾ-।
ಶಿಯಾದಿಕೇಶವ ಕ್ಲೇಶನಾಶನ ಬಂದ ।
ಗಯಾ ಗದಾಧರ ದಾಸರಿಗೊಲಿದು
ಪುರಂದರವಿಠಲರಾಯ ಬಂದ ೪

ಆದಿತಾಳ

ಅತಳವಿತಳದಿಂದ ಸುತಳ ತಳಾತಳ ರ-।
ಸಾತಳ ಮಹಾತಳ ಪಾತಳದಿಂದ ।
ಭೂತಳ ನಭಸ್ಥಳದಿಂದಾನು ವಿಜನ ಮಹರ್ಲೋಕ ।
ಸತ್ಯಲೋಕದಿಂದ ಪರಮಪದವೀವ ಪರಿಪೂರ್ಣ ।
ಪುರಂದರವಿಠಲರಾಯ ಬಂದ ೫

ಜತೆ

ಲೋಕಸಂರಕ್ಷಣ ಅಸುರರ ಸಂಹರಣ ।
ಲೋಕೇಶ ಪುರಂದರವಿಠಲರಾಯ ಬಂದ ॥

೧೧೪

ಸುಳಾದಿ

ನಿಂದಾಸ್ತುತಿ ಸುಳಾದಿ

ಧ್ರುವತಾಳ

ಗೋಪಿದೇವಿಯಂತೆ ನಿನ್ನ ಒರಳಿಗೆ ಕಟ್ಟಿದೆ
ಬರಿದೆ ದೈನ್ಯೈವ ಪಡುವೆ ನಾನಯ್ಯ ।
ಭೃಗುಮುನಿಯಂತೆ ನಿನ್ನೆದೆಯಮೇಲೊದಯದೆ
ಬರಿದೆ ದೈನ್ಯೈವ ಪಡುವೆ ನಾನಯ್ಯ ।
ಭೀಷ್ಮನಂತೆ ನಿನ್ನ ಹಣೆಯನೊಡೆಯದೆ ।
ಕೊಂಕಣದೆಮ್ಮೆಗೆ ಕೊಡತಿಯ ಮದ್ದು...................
ಇವರೇ ನಿನಗೆ ಮದ್ದು (ಮುದ್ದು) ಪುರಂದರವಿಠಲ ೧

ಮಟ್ಟತಾಳ

ಕಾಳಿಂಗನಂತೆ ನಿನ್ನ ಕಟ್ಟಿ ಬಿಗಿಯಲು ಬೇಕು ।
ಬಲಿಯಂತೆ ಬಾಗಿಲನು ಕಾಯಿಸಬೇಕು ।
ಕುಬುಜೆಯಂತೆ ನಿನ್ನ ರಟ್ಟು ಭೂತವನೆ ಮಾಡಿ ।
ಮುಂಜೆರಗ ಪಿಡಿದು ಗುಂಜೆ ಹಾಕಲು ಬೇಕು ।
ಪುರಂದರ ವಿಠಲ ನಿನಗೆ ಅಂಜದಿರಬೇಕು ೨

ತ್ರಿವಿಡತಾಳ

ಪಾಂಡುತನಯನಂತೆ ಕರೆ ಕರೆದು ನಿನ್ನ ।
ಅಟ್ಟುಮಣಿ ಅಡಿಮಣಿ ಇಕ್ಕಬೇಕು ।
ಅರ್ಜುನನಂತೆ ಬಂಡಿಯ ಬೋವನ ಮಾಡಿ ।
ಕುದುರೆಗಳ ವಾಘಿಸಬೇಕು ।
ಅಂಬು ತಾ ಬಿಲ್ಲು ತಾ ಎನ್ನಲು ಬೇಕು ।
ನಾ ನಿನ್ನ ಪೂಜಿಸಿ ಪೂಜಿಸಿ ।
ಮೋಸ ಹೋದೆನಯ್ಯ ಪುರಂದರವಿಠಲ ೩

ಅಟ್ಟತಾಳ

ವಾಲಿಯಂತೆ ನಿನ್ನ ಮೂದಲಿಸಬೇಕು ।
ಸುಗ್ರೀವನಂತೆ ನಿನ್ನ ಲೆಕ್ಕಿಸದಿರಬೇಕು ।
ಅಟ್ಟು ಇಟ್ಟು ಸುಟ್ಟು ಕೊಟ್ಟು ಮುಟ್ಟಿ ।
ಮೋಸ ಹೋದೆನಯ್ಯ ಪುರಂದರವಿಠಲ ೪

ಆದಿತಾಳ

ಇಂದ್ರನಂತೆ ನಿನ್ನ ಮಳೆಗರೆದು ಗೋಕುಲದಲ್ಲಿ ।
ನಿಂದಿರಿಸಬೇಕು ಏಳು ದಿನ ।
ಗೋವರ್ಧನ ಗಿರಿಯನೆ ಹೊರಿಸಲು ಬೇಕು ।
ನಾ ನಿನ್ನ ಅನುದಿನ ಪೂಜಿಸಿ ಪೂಜಿಸಿದರೂ ।
ನೀ ಯೆನ್ನ ತಿರಿತಿಂಬುವಂತೆ ಮಾಡಿದೆ ।
ಪುರಂದರವಿಠಲ ಹುಟ್ಟಿದ ಊರಲ್ಲಿಯೆ ।
ತಿರಿತಿಂಬುವಂತೆ ಮಾಡಿದೆ ೫

ಜತೆ

ಅಂಜುವರಿಗೆ ದೇವ ಬ್ರಹ್ಮರಾಕ್ಷಸನಂತೆ ।
ಅಂಜೆನು ನಿನಗಿನ್ನು ಪುರಂದರವಿಠಲ ।

೧೧೫

ಸುಳಾದಿ

ಉಮ್ಮತ್ತೂರ ಸುಳಾದಿ

ಧ್ರುವತಾಳ

ಅಚ್ಯುತ ಸುಳಿದ ಎನ್ನ ಕಣ್ಣ ಮುಂದೆ ಅವ್ವ ।
ಅನಂತ ಸುಳಿದ ಎನ್ನ ಕಣ್ಣ ಮುಂದೆ ಅವ್ವ ।
ಕಸ್ತೂರಿಮೃಗದಂತೆ ಘಮ ಘಮಿಸುತ ।

ನಗುತ ನೋಡುತ ನುಡಿಯುತ ನುಡಿಸುತ ।
ಏನೆಂಬೆನವ್ವ ಸೆರೆಗೊಂಡ ಸೂರೆಗೊಂಡ ।
ಉಮ್ಮತ್ತೂರ ಚನ್ನಯ ಪುರಂದರವಿಟಲ ೧

ಮಟ್ಟತಾಳ

ಮಧುರಾಪಟ್ಟಣದ ರಾಜಬೀದಿಯಲಿ ।
ಧಾಮ–ಸುಧಾಮರೆಲ್ಲ ಕೈಹೊಡೆದು ನಗಲು ।
ಕುಬುಜೆಯ ಕೂಡ ತನ್ನ ಕಾಕುಪೋಕಿತನ ಮಾತು ।
ಸನ್ನೆ–ಸನ್ನೆಯ ನೋಟ ನೂಕುತಾಕಿನಾಟ ।
ಉಮ್ಮತ್ತೂರ ಚೆನ್ನಯ ಪುರಂದರ ವಿಠಲ ೩

ತ್ರಿವಿಡೆತಾಳ

ಸುಳಿದರೆ ಸುಂಕವ ಕೊಂಬ ಮುಂಡಗಾರ ।
ಹರಿಯಲ್ಲದಾರು ಹೇಳೆಲೆ ಅವ್ವ ।
ಯಶೋದೆ ರಂಗನಲ್ಲದೆ ಗೋಪಮ್ಮ ।
ಕೃಷ್ಣನಲ್ಲದೆ ಅದಾರು ಹೇಳೆ ।
ಉಮ್ಮತ್ತೂರ ಚೆನ್ನಯ ಪುರಂದರವಿಠಲ । ೪

ಅಟ್ಟತಾಳ

ಕೊಂಬುಕೊಳಲು ತುತ್ತುರಿ ಮೌರಿಯಗಳು ।
ಭುಂ ಭುಂ ಭುಂ ಭುಂ ಭೋರಿಡುತ ।
ಸರಿಗಮಪಧನಿಸ ಸನಿದಪಮಗರಿಸ ।
ತು ತ್ತು ತ್ತು ರು ರು ರು ಎನುತ ಮಧುರೆಯೊಳು ।
ಕೊಳಲನು ಪಿಡಿಯುತ ಝಣ ಝಣ ಸಣ ಸಣ ।
ಗೆಜ್ಜೆಯ ಕುಣಿಸುತ ಉಮ್ಮತ್ತೂರ ಚೆನ್ನಯ ।
ಪುರಂದರವಿಠಲ ೪

ಆದಿತಾಳ

ಆರಮುಡಿಯನ್ನುಟ್ಟೆ ಆರಗಂಧವನ್ನಿಟ್ಟೆ? ।
ಆರ ಪೂಗಳ ಮುಡಿದೆ ಆರ ರಾಜ್ಯ ವ- ।
ನಾರಿಗಿತ್ತು ಮೆರೆದೆ ದೇವ? ।
ಬಲ್ಲಿದರಿಗೆ ಬಟ್ಟೆ ಸಸಾರವೆಂಬಂತೆ ।
ಉಮ್ಮತ್ತೂರ ಪುರಂದರ ವಿಠಲ ೫

ಜತೆ

ಅಸುರರ ಸಂಹರಿಸೆ ಸುರರ ಪಾಲಿಪ ನಮ್ಮ ।
ಉಮ್ಮತ್ತೂರ ಪುರಂದರವಿಠಲ ॥

೧೧೬

ಸುಳಾದಿ

ಉಮ್ಮತ್ತೂರು ಸುಳಾದಿ

ಧ್ರುವ

ಅಚ್ಯುತ ಸುಳಿದೆ ಎನ್ನ ಕಣಣ ಮುಂದೆ ಯವ್ವ ।
ಕಸ್ತೂರಿ ಮೃಗದಂತೆ ಘಮ ಘಮಿಸುತ್ತ ।
ಅನಂತ ಸುಳಿದ ಎನ್ನ ಕಣ್ಣ ಮುಂದೆ ಯವ್ವಾ ।
ಮೇರೆದಪ್ಪುತ ಏನೆಂಬೆ ಎನ್ನಪ್ಪುತ ।
ಗೋವಿಂದ ಸುಳಿದ ಎನ್ನ ಕಣ್ಣ ಮುಂದೆ ಯವ್ವಾ ।
ನಗುತ ನೋಡುತ ನುಡಿಯುತ ಎನ್ನಪ್ಪುತ ।
ಮಾಧವ ಸುಳಿದ ಎನ್ನ ಕಣ್ಣ ಮುಂದೆ ಯವ್ವಾ ।
ಮನ್ಮಥಕೋಟಿ ಲಾವಣ್ಯನಂತೆ ಮೆರೆವ ।
ಗೋಪಾಲ ಸುಳಿದ ಎನ್ನಕಣ್ಣಮುಂದೆ ಯವ್ವಾ ।
ದಿನಕರಕೋಟಿ ತೇಜನಂತೆ ಹೊಳೆಯುತ ।
ಎನ್ನ ಮನದುತ್ಸಾಹ ಸೂರೆಗೊಂಡನವ್ವ ।
ಉಮ್ಮತ್ತೂರ ಅಜನಯ್ಯ ಪುರಂದರವಿಠಲ ೧

ಮಟ್ಟತಾಳ

ಸುಳಿದರೆ ಸುಂಕವ ಕೊಂಬ ಪುಂಡಗಾರ ।
ಹರಿಯಲ್ಲದಾರು ಹೇಳಲೆ ಎಲೆ ಗೆಳತಿ ।
ಉಮ್ಮತ್ತೂರ ಜನಯ್ಯ ಪುರಂದರವಿಠಲ ಹರಿ ೨

ತ್ರಿವಿಡೆತಾಳ

ಮಧುರಪಟ್ಟಣರಾಯಾ ಬೀದಿಯಲ್ಲಿ ಇದ್ದ ।
ದಾಮ ಸುದಾಮರು ಕೈ ಹೊಯ್ದು ನಗಲು ।
ಚದುರೆಯ ಮಾಡಿ ಕುಬುಜೆಯ ಕೂಡಿದ ನಕ್ಕ ।
ಚದುರ ಸನ್ನೆ ನೋಟದಿ ನಗುತ ಆಕೆಯ ಬಿಟ್ಟ ।
ಉಮ್ಮತ್ತೂರಜನಯ್ಯ ಪುರಂದರವಿಠಲ ೩

ಅಟ್ಟತಾಳ

ಆರ ಮಡೆಯನುಟ್ಟೆ ಆರ ಗಂಧವನಿಟ್ಟೆ ।
ಆರ ಪೂಗಳ ಮುಡಿದೆ ಆರ ರಾಜ್ಯವ ।
ನಾರಿಗಿತ್ತು ಮೆರೆದೆ ದೇವ ಆರ ಪೂಗಳ ಮುಡಿದೆ ।
ಬಲ್ಲಿದರಿಗೆ ಬಟ್ಟಿಸೆ ಸಾರವೆಂಬತೆ ಉಮ್ಮ ।
ತ್ತೂರ ಅಜನಯ್ಯ ಪುಇರಂದರವಿಠಲ ೪

ಆದಿತಾಳ

ಕೊಂಬು ಕೊಳುಲ ತಿತ್ತಿರಿ ಮವುರಿಗಳು ।
ಭೊಂ ಭೊಂ ಭೊಂ ಭೊಂ ಭೋರೆನುತ ।
ಸರಿಗಮಧನಿಸ ತುತ್ತುರೆ ಎನುತ ।
ಝುಂ ಝುಂ ಝುಂ ಝುಂ ಝಣಿಲೆನುತ ।
ಮಧುರೆಯೊಳಗೆ ಕೋಲಾಹಲ ಮಾಡಿ ಮುಸುಕಲು ।
ಭೊಂ ಭೊಂ ಭೊಂ ಭೊಂ ಭೋರೆನುತ ।
ಉಮ್ಮತ್ತೂರು ಅಜನಯ್ಯನೆ ಪುರಂದರವಿಠಲ ।
ಝುಂ ಝುಂ ಝುಂ ಝುಂ ಝಣರೆನುತ ೫

ಜೊತೆ

ಅಸುರರ ಸಂಹರಿಸಿ ಸುರರ ಪಾಲಿಪ ನಮ್ಮ ।
ಉಮ್ಮತ್ತೂರ ಅಜನಯ್ಯ ಪುರಂದರವಿಠಲ ೫

೧೧೭

ಸುಳಾದಿ

ಧ್ರುವತಾಳ

ಸ್ಥಿರದಿ ಅಜ-ಭವಾದಿಗಳು ನಾರಾಯಣನ ಗುಣಗಳನೆಲ್ಲ ।
ಅರಿಯಲಾರರು ಮಿಕ್ಕ ಸುರರಿನ್ನು ಬಲ್ಲರೇನು ।
ಸರಸಿಜಾಕ್ಷಿ ಇಂದಿರಾದೇವಿ ತನ್ನ ಪತಿಯ ಪಾದಕಮಲ ।
ಕಿರುಬೆರಳ ನಖತುದಿಯ ನೋಡಲಳವಲ್ಲದಂಥ ।
ನರಹರಿಗೆ ಶರಣು ಶರಣೆನ್ನಿ ೧

ಮಟ್ಟತಾಳ

ಬಿಡು ಕಾಮ ಕ್ರೋಧ ಮದ ಮತ್ಸರಾದಿ ಷಡ್ವರ್ಗ।
ನುಡಿ ನುಡಿಗೆ ವಾಸುದೇವ ಎಂಬ ಶಬ್ದವ ।
ನುಡಿಸಿ ಸುಡಿಸು ಸಂಚಿತ ಪಾಪಕರ್ಮಗಳನೆಲ್ಲ ।
ಕೆಡಲಿ ಬೇಡಿ ಈ ದೇಹ ಸ್ಥಿರವಲ್ಲ ।
ಒಡೆಯನಾದವಗೆ ನರಹರಿಗೆ ಶರಣು ಶರಣೆನ್ನಿ । ೨

ತ್ರಿವಿಡೆತಾಳ

ಅಗಣಿತ ಮಹಿಮನು ಸುಗುಣನು ನಗೆಮೊಗ।
ಜಗದಾಧಾರನ ಹಗಲಿರಳು ।
ಪೊಗಳಲು ಶಕಟನ ಅಳಿದವನ ।
ನಗಧರ ಖಗವಾಹನ ಕೈಪಿಡಿವ ।
ಅಗಣಿತಮಹಿಮ ನಮ್ಮ ನರಹರಿಗೆ ಶರಣು ಶರಣೆನ್ನಿ ೩

ಅಟತಾಳ

ವಕ್ಷಸ್ಥಲದಲಿ ಶ್ರೀ ವತ್ಸ ।
ಕುಕ್ಷಿಯಲಿ ಇಟ್ಟು ಮೂರು ಲೋಕವನು ।
ರಕ್ಷಿಸುವನು ಭಕ್ಷಿಸ ಬಂದ ಸುರರ ಮಡುಹಿದ ।
ಪಕ್ಷಿವಾಹನ ಅಕ್ಷಯವೆಂದು ಪಾಂಚಾಲಿಯ ಪೊರೆದ ।
ನರಹರಿಗೆ ಶರಣು ಶರಣೆನ್ನಿ ೪

ಏಕತಾಳ

ಮಾನ ಅವಮಾನ ಜ್ಞಾನ ಅಜ್ಞಾನ ।
ಜಾನಕೀಪತಿಯ ಧ್ಯಾನ ।
ಸ್ನಾನ ಪೂಜಿತನಾಗಿ ।
ತಾನು ಕೊಡಿಸುವ ಮುಕ್ತಿ ।
ನಿತ್ಯಾನಂದದಲಿರುವ ನರಹರಿಗೆ ಶರಣು ಶರಣೆನ್ನಿ ೫

ಝಂಪೆತಾಳ

ದುಷ್ಟ ದುರ್ಯೋಧನ ದಶಮುಖ ಬಾಣಾಸುರರಂದದಿ ।
ಶಿಷ್ಟರಾಗಿ ಶಿವನ ಪೂಜಿಸಿ ಗತಿಯೆಂದರೆ ।
ಭ್ರಷ್ಟರಾಗಿ ಪುತ್ರ–ಮಿತ್ರ –ಕಳತ್ರವು ।
ಅಷ್ಟು ಹತವಪ್ಪುದು ।
ಶ್ರೇಷ್ಠ ರಾರಯ್ಯ ಹೇಳಿರಿಂದು ೬

ರೂಪಕತಾಳ

ಅಕ್ರೂರ ಪ್ರಹ್ಲಾದ ಅಂಬರೀಷ ಅಜಮಿಳ ।
ನಕ್ರಪಿಡಿದ ಹಜೇಂದ್ರ ಕುಚೇಲ ಯಾವತ್ಪರಿವಾರ ।
ಚಕ್ರಧಾರಿ ಕೃಷ್ಣನ ನಂಬಿದವರ ।
ಅಕ್ಕರಿಂದಲಿ ಸಲಹಿದ ಪುರಂದರವಿಠಲ ೭

ಜತೆ

ನುಡಿವ ಮಾತುಗಳನ್ನು ಅಡಿಗಡಿಗೆ ಭೋಗಭಾಗ್ಯ ।
ಸುಡಿಸುವ ದಾರಿದ್ರ್ಯದುಷ್ಕೃತವ ನಡಿಸುವ ಸುಕೃತದ ।
ಯೋಗ್ಯತೆ ಪಡೆಯಲಿ॥

೧೧೮

ಸುಳಾದಿ

ಶರಣು ಸುಳಾದಿ

ಧ್ರುವತಾಳ

ವಿಶ್ವನೆನಿಸಿ ವಿಶ್ವಜಾಗರವ ಪ್ರೇರಿಸುವೆ ದೇವ ।
ತೈಜಸನೆನಿಸಿ ಲೋಕದ ಸ್ವಾಪನವ ಸೃಜಿಸುವೆ ದೇವ ।
ಪ್ರಾಜ್ಞನೆನಿಸಿ ಜನರಿಗೆ ಸುಬುದ್ಧಿಯನೀವೆ ।
ತುರೀಯನೆನಿಸಿ ಚೇತರಿಗೆ ಪರಗತಿಯ ನೀವೆ ।
ಆತುಮ ಅಂತರಾತುಮನೆನಿಸಿ ನೀನೆ
ಶುಭಸಾರವ ಭೋಗಿಪೆ ದೇವ ॥
ಅನಿರುದ್ಧನೆನಿಸಿ ಲೋಕವನಾದಿಯಲೆ ಸೃಜಿಸುವೆ ದೇವ ।
ಪ್ರದ್ಯಾಮ್ನ ನೆನಿಸಿ ಲೋಕವನವರತ ಪಾಲಿಸುವೆ ದೇವ ।
ಸಂಕರುಷಣನೆನಿಸಿ ಲೋಕವ ನಿನ್ನೊಳಗಿಡುವೆ ।
ವಾಸುದೇವನೆನಿಸೆ ಕೈವಲ್ಯವ ನೀವೆ ।
ಸರ್ವವ್ಯಾಪಾರಕೆ ಕಾರಣ ನೀನೆಯಲಾ ಪುರಂದರವಿಠಲ
ವಿಭುವೆ ದೇವ ೧

ಮಟ್ಟತಾಳ

ಒಂದೊಂದವತಾರದೊಳನಂತ ಮಹಿಮೆ ।
ಒಂದೊದವಯವದೊಳನಂತ ಮಹಿಮೆ ।
ಒಂದೊಂದು ರೋಮಾದಿಗಳಲಿ ಅಜಭವಾದಿ ಕಾರ್ಯ ।
ಪುರಂದರವಿಠಲ ನೀನೆ ಸಮರ್ಥ ೨

ಆದಿತಾಳ

ಉಗುರು ಬೊಮ್ಮಾಂಡದ ಖರ್ಪರವನೊಡೆಯಿತು ।
ಉಂಗುಟವು ದುರ್ಯೋಧನನ ಕೆಡಹಿತು ।
ಪಾದ ಶಕಟನ ನುಗ್ಗೊತ್ತಿತು ।
ಬಾಹು ಕೇಶಿಯನೆತ್ತಿ ಕೆಡಹಿ ಬೀಸಾಡಿತು ।
ದೃಷ್ಟಿ ಕುರುಸೈನ್ಯವ ಅಸುಗುಂದಿಸಿತು ।
ಜಗಜಟ್ಟಿ ಪುರಂದರವಿಠಲಗಿದಿರುಂಟೆ ೩

ಅಟತಾಳ

ರಂಗನ ಚರಣಗಳನ್ನು ಹಿಂಗದೆ ನೀ ನೆನೆ ಮನವೆ ।
ಗಂಗಾ ಜನಕನ ಶರಣರ ಸಂಗದೊಳಿರಿಸೆಲೆ ಮನವೆ ।
ಹಿಂಗದೆ ಹಿಂಗದೆ ಹಿಗ್ಗುವವನ ನಂಬು ಪಾಂಡುರಂಗ
ಪುರಂದರವಿಠಲನ–ಹಿಂಗದೆ ೪।

ಝಂಪೆತಾಳ

ಸಂಸಾರಸಾಗರದ ತಡಿಗಳ ತೆರೆಗಳ ।
ಏಳುತ ಮುಳುಗುತಲೈದೇನೆ ದೇವ ।
ಕಡೆಗೈದುವೆನೆಂದು ಆಡುತ ಪಾಡುತಲೈದೇನೊ ದೇವ ।
ಪುರಂದರವಿಠಲನಾಮದಿ ಲೋಲಾಡುತ
ಪಾಡುತ ಲೈದೇನೋ ದೇವ ೫

ಜತೆ

ನಮೋ ನಮೋ ನಾರಾಯಣ ನಾರಾಯಣ ।
ತ್ವಮೇವ ಶರಣಂ ಪುರಂದರವಿಠಲ ॥

೧೧೯

ಸಂಭ್ರಮ ಸುಳಾದಿ

ಧ್ರುವತಾಳ

ಮಣಿ ಮೌಳಿ ಮೊಲ್ಲೆ ಮಲ್ಲಿಗೆಯ ದಂಡೆ
ಪಿಂಛದೊಂಗಲ ಉತ್ತಮಾಂಗ ।
ಮೆರೆವ ಕರ್ಣಕುಂಡಲ ಕೌಸ್ತುಭ ಕಮಲಮಾಲೆ ಕಂಬುಕಂಠ ।
ಸಿರಿಗಂಧ ಸಿರಿವತ್ಸ ಸಿರಿತುಲಸಿ ಸಿರಿವಕ್ಷ ಸ್ಥಳ ।
ಮರಕತಮಣಿಯ ಕಡಗ ಕಂಕಣ
ಕಡೆಯ ತೊಡೆಯ ಸಮಚರಣ ।
ಹೇಮವಸನ ಶ್ಯಾಮಲ ಕೋಮಲಾಂಗ ।
ಅಹೋ ಗೋಪಿಯರ ಮೋಹಿಸುತಿದೆ (ಕೃಷ್ಣ)
ಅಹೋ ಜಗಜ್ಜನರ ಪಾಲಿಸುತಿದೆ ।
ಅಹೋ ಪುರಂದರವಿಠಲನ ಬಾಲಲೀಲೆ ೧

ಮಟ್ಟತಾಳ

ಪೊಂಬಟ್ಟೆಯ ಮೇಲೆ ಕಾಂಚೀದಾಮದ
ಒಲ್ಲಿಯ ಉಡಿಸುತ್ತಿ ।
ಜಂಬು-(ನೀಲ) ಚೂತಗಳ ಎಳದಳಿರ ಮುಕುಟದ
ಮೇಲೆ ಸುತ್ತಿಕೊಂಡು ।
ಕೊಂಬು ಕೊಳಲು ತುತ್ತುರಿ-ಮೌರಿಯಗಳು ।
ಭಂವ್ ಭಂವ್ ಭಂವ್ ಝಂ ಝಂ ಝಮ್ಮೆಂಬ ।
ರಾಮಕೃಷ್ಣ ಗೋವಳರ ಸಂಭ್ರವವು ಸುರರನೊಲಿಸಿತು ।
ಜಂಭಭೇದಿ ಶಂಭು ಅಂಬುಜಸಂಭವನುತ ।
ಕಂಬುಗ್ರೀವ ತಿರುವಿಂಗಳಪ್ಪ ಪುರಂದರವಿಠಲ ೨

ತ್ರಿವಿಡೆತಾಳ

ಜಯ ಜಯ ಶ್ರೀನರಸಿಂಹ ಮಹಾಭಯ ನಿವಾರಣ ।
ಜಯ ಜಯ ಶ್ರೀ ದಿವ್ಯಸಿಂಹ ಘೋರದ(ದುರಿತ) ನಿವಾರಣ ।
ಪ್ರಹ್ಲಾದವರದ ಶ್ರೀ ಪುರಂದರವಿಠಲರಾಯ ೩

ಅಟತಾಳ

ಅಹಂಕಾರ ಮಮಕಾರವಳಿಯದೆ ವಿಹಂಗಗಮನನು ।
ಸಿಲುಕುವನೆ ಮರುಳೆ ।
ಕಾಮ ಕ್ರೋಧವಬಿಡದನ್ನಕ್ಕ ಪರಬೊಮ್ಮನೊಲುಮೆ–
ಯೆತ್ತ ನೀನೆತ್ತ ಮರುಳೆ ।
ಆ ಹರಿದಾಸ ಚರಣಾಬ್ಜಕೆ ಎರಗದೆ ಪುರಂದರವಿಠಲನು
ಸುಲಭನೆ ಮರುಳೆ? । ೪

ಆದಿತಾಳ

ವಾಮನ ವಾಸುದೇವ ಪದ್ಮನಾಭ ಹರೆ ।
ದಾಮೋದರ ಪ್ರದ್ಯುಮ್ನ ಸಂಕರ್ಷಣ ವಾಸುದೇವ ।
ಅನಿರುದ್ಧ ಪುರಂದರವಿಠಲರಾಯ ಪುರೋಷತ್ತಮ ಹರೆ ೫

ಜತೆ

ಮನೋವಚನಗಳಲ್ಲಿ ಕಾಯಕರ್ಮಗಳಲ್ಲಿ ।
ಕೊಲ್ಲೊ ಕಾಯೊ ನಂಬಿದೆ ಪುರಂದರವಿಠಲ ॥

೧೨೦

ಸುಳಾದಿ

ಕಾಣಾಚಿ ಸುಳಾದಿ

ಧ್ರುವತಾಳ

ಪರಿಪೂರ್ಣನು ನೀನು ಬೊಮ್ಮಾಂಡಕೋಟಿಗಳಿಗೆ
ಎಂತೆಡೆಗೊಟ್ಟೆ ಹೇಳಾ? ।
ಪರಿಪೂರ್ಣನು ನೀನು ಲಕುಮಿದೇವಿಯರಿಗೆ
ಎಂತೆಡೆಗೊಟ್ಟೆ ಹೇಳಾ ।
ಪರಿಪೂರ್ಣನು ನೀನು ಬೊಮ್ಮಾದಿ ಸುರರಿಗೆ
ಎಂತೆಡೆಗೊಟ್ಟೆ ಹೇಳಾ? ॥
ಪರಿಪೂರ್ಣನು ನೀನು ಅವ್ಯಾಕೃತಾಕಾಶಕ್ಕೆ
ಎಂತೆಡೆಗೊಟ್ಟೆ ಹೇಳಾ? ।
ಪರಿಪೂರ್ಣನು ನೀನು ಪುರಂದರವಿಠಲ
ಎಂತೆಡೆಗೊಟ್ಟೆ ಹೇಳಾ ೧

ಮಟ್ಟತಾಳ

ಅಣುವಿಂಗಣುವಿಂಗೆ
ಅಣುವಿಂಗಣುವಿಂಗಣುವು ಗಡಾ ।
ಮಹತ್ತು ಮಹತ್ತು ಮಹತ್ತು ಮಹತ್ತಿಗೆ ।
ಮಹತ್ತು ಮಹತ್ತು ಮಹತ್ತು ಗಡಾ ।
ಮಹತ್ತಾದ ಅಪರಿಮಿತ ಗಡಾ।
ಅಣೋರಣಿಯಾನ ಮಹತೋ ಮಹೀಯಾನ್ ।
ಗುಣ ಗುಣಾಭರಿತ ಪುರಂದರವಿಠಲ ೨

ಅಟತಾಳ

ಕಾಣಾಚಿ ನಿನ್ನುರವು ಲಕುಮಿದೇವಿಯರಿಗೆ ।
ಕಾಣಾಚಿ ನಿನ್ನ ಸರ್ವಾಂಗ (ಕಾಣಾಚಿ ನನ್ನ)
ಭವೇಂದ್ರಾದಿ ಸುರರಿಗೆ ।

ಕಾಣಾಚಿ ನಿನ್ನಸರ್ವಾಂಗ (ಕಾಣಾಚಿ) ಎನಗೆ
(ನೀ) ಪುರಂದರವಿಠಲ ೩

ಝಂಪೆತಾಳ

ಅಗ್ನಿಯೊಳಗಿದ್ದು ದಾಹಕ ಶಕುತಿಯನೀವೆ ।
ವಾಯುವಿನಲ್ಲಿದ್ದು ಶೋಷಕ ಶಕುತಿಯ ನೀವೆ ।
ವರುಣನಲ್ಲಿದ್ದು ಕ್ಲೇದಕ ಶಕುತಿಯನೀವೆ ।
ನಾನಾವಸ್ತುವಿನಲ್ಲಿದ್ದು ಇಂತು ನಾನಾ ಶಕುತಿಯನೀವೆ ।
ಆರು ನಿನ್ನಂತೆ ಘನಮಹಿಮರೊ ನೀನೆ ಘನ–ಪುರಂದರವಿಠಲ ೪

ಏಕತಾಳ

ಕಂಡೆ ಕಂಡೆ ಕಮಲಾರಮಣನ ।
ಕಂಡೆ ಕಂಡೆ ಕಮಲಜನಯ್ಯನ ।
ಕಂಡೆ ಕಂಡೆ ಕೌಸ್ತುಭಧರನ ।
ಕಂಡೆ ಕಂಡೆ ವೈಜಯಂತೀಧರನ ।
ಕಂಡೆ ಕಂಡೆ ಚಕ್ರಪಾಣಿಯ ।
ಕಂಡೆ ಕಂಡೆ ಶಂಖಧಾರಿಯ ।
ಕಂಡೆ ಕಂಡೆ ಕರುಣಾಳು ಪುರಂದರವಿಠಲನ ೫

ಜತೆ

ಎನಿತು ಕಾರಣಮನಿತು ನೀನೆ ।
ನಿನಗೂ ಎನಗೂ ಪುರಂದರವಿಠಲ ॥

೧೨೧

ಸುಳಾದಿ

ಅನಂತ ಮೂರುತಿ ಸುಳಾದಿ

ಧ್ರುವ ತಾಳ

ತ್ರಿಶೂಲ ಡಮರುಗ ಭಸಿತ ರುದ್ರಾಕ್ಷಿ
ಪಶುವಾಹನನಾದದ್ದೊಂದು ಮೂರುತಿ ।
ಕುಶಲದ ಜಪಮಣಿ ಮಾಲೆ ಚುತುರ್ಮುಖ ।
ವಸುಧೆಯ ಸೃಜಿಸುವುದೊಂದೇಮೂರುತಿ ।
ನೊಸಲಲ್ಲಿ ಸಿರಿನಾಮ ಶಂಖ–ಚಕ್ರ–ಗದೆ
ಬಿಸಜವ ಪಿಡಿದದ್ದೊಂದೇ ಮೂರುತಿ ।
ಎಸೆವ ವೇದಾನಂತ ಕೋಟಿಯ ಭೇದಿಸಿ ಸಂ–
ತಸದಿ ನೋಡು ತಿಹುದೊಂದೇ ಮೂರುತಿ ೧

ಮಟ್ಟ ತಾಳ

ಸುಮ್ಮನಾದರೂ ಒಮ್ಮೆ ಸುಳಿವ ತೋರತ
ಬ್ರಹ್ಮಾಂಡದೊಳಾಡುತಿಹುದೊಂದೇ ಮೂರುತಿ ।
ನಮ್ಮ ದೇವ ನಿಮ್ಮ ದೇವ ತಮ್ಮ ದೇವ ಎಂತೆಂಬ
ಹಮ್ಮಿಂದಲಾಡುತಿಹುದೊಂದೇ ಮೂರುತಿ ।
ಒಮ್ಮೊಮ್ಮೆ ನಾ ಕುರಹ ಹಿಡಿವೆನೆಂದರೆ
ಅಮ್ಮದೆ ಪುರಂದರವಿಠಲನಾದದ್ದೊಂದೆ ಮೂರುತಿ ೨

ತ್ರಿವುಡೆ ತಾಳ

ಸತ್ವರಜಸ್ತಮೋ ಗುಣದ ಸಕಲ ಮೂರುತಿ ।
ಭಕ್ತರಂಗ ಸಂಗದಲ್ಲಿ ನಲಿವ ಮೂರುತಿ ।
ವಸ್ತು ನಿನ್ನ ವರದ ಚೆನ್ನ ಮೂರುತಿ ।
ಕರ್ತೃ ಪುರಂದರವಿಠಲನಾದದ್ದೊಂದೆ ಮೂರುತಿ ೩

ಅಟತಾಳ

ಸಾಸಿರನಾಮಕ್ಕೆ ಸಾಸಿರ ಮೂರುತಿ ।
ವಾಸುಕಿಶಯನನ ಅನಂತ ಮೂರುತಿ ।
ಸಾಸಿರದಳದಲ್ಲಿ ಒಪ್ಪುವ ಮೂರುತಿ ।
ಯಶೋದೆಯ ಮೊಲೆಯುಂಡ
ಪುರಂದರವಿಠಲನ ಮೂರುತಿ ೪

ಝಂಪೆ ತಾಳ

ಬೊಮ್ಮಗೆ ಸಿರಿರಂಗ ಮೂರುತಿ ।
ರುದ್ರಂಗೆ ನರಸಿಂಹ ಮೂರುತಿ ।
ಇಂದ್ರಂಗೆ ಉಪೇಂದ್ರ ಮೂರುತಿ ।
ಚಂದ್ರಗೆ ದಧಿವಾಮನ ಮೂರುತಿ ।
ಸೂರ್ಯಗೆ ನಾರಾಯಣ ಮೂರುತಿ ।
ಅಗ್ನಿಗೆ ಪರಶುರಾಮ ಮೂರುತಿ ।
ಈರೇಳು ಲೋಕಕ್ಕೆಲ್ಲ ಕಾಲ ಪುರುಷ ವಿಷ್ಣು ಮೂರುತಿ ।
ಎನಗೆಂದೂ ಸಿರಿ ಬೊಮ್ಮ ಪರಿಪೂರ್ಣ
ಪುರಂದರವಿಠಲನೆ ಮೂರುತಿ ೫

ಏಕತಾಳ

ಅನಂತ ಕಿರೀಟ ಅನಂತಶಿರಸ ಅನಂತಕರಣ ಅನಂತ ಚಕ್ಷು
ಅನಂತ ನಾಶಿಕ ಅನಂತ ಜಿಹ್ವೆ ಅನಂತದಂತ ಅನಂತವದನ ।
ಅನಂತ ಕಂಠ ಅನಂತ ಭುಜ ಅನಂತ ಹಸ್ತ
ಅನಂತ ಬೆರಳ ಅನಂತನಖಾದಿ ।
ಅನಂತ ಶ್ರೀಗಂಧ ಶ್ರೀತುಲಸಿ ವೈಜಯಂತಿ
ಮಾಲೆಯಿಂದೊಪ್ಪುವ ।
ಅನಂತ ವಕ್ಷ ಅನಂತಕುಕ್ಷಿ ಅನಂತನಾಭಿ ।
ಅನಂತ ಕಟಿ ಅನಂತ ಜಾನು ಜಂಘೆ ಅನಂತ ಚರಣ ।
ಅನಂತ ಪೆಂಡೆಯ ಅನಂತ ಜಗಂಗಳ ಒಳಗು ಹೊರಗು ।
ನಮ್ಮ ಪುರಂದರವಿಠಲನೆ ಅನಂತ ೬

ರೂಪಕ ತಾಳ

ಅಣು ಮಹತ್ತಾಗಿ ತೋರುವ ಮೂರುತಿ ।
ತೃಣಕಾಷ್ಠದಲ್ಲಿ ವ್ಯಾಪ್ತ ಮೂರುತಿ ॥
ಮನುಜೋತ್ತಮರೆಂಬ ಮನುಜೋತ್ತಮರಿಗೆ ।
ಮಿನುಗು ಮಿಂಚಿನಂತೆ ಥಳಥಳಿಸು ನಮ್ಮ ಪುರಂದರವಿಠಲ ೭

ಜತೆ

ಅನಂತ ಮೂರುತಿ ಅನಂತ ಕೀರುತಿ ।
ಅನಂತ ನಾಮ ಪುರಂದರವಿಠಲ ॥

೧೨೨

ಸುಳಾದಿ

ಅನಂತ ಮೂರುತಿ ಸುಳಾದಿ

ಧ್ರುವತಾಳ

ತ್ರಿಶೂಲ ಡವರುಗ ಭಸಿತ ರುದ್ರಾಕ್ಷಿ ।
ಪಶುವಾಹನ ನಾಮದೊದು ಮೂರುತಿ ।
ನೊಸಲೊಳು ಸಿರಿನಾಮ ಶಂಖ ಚಕ್ರ ಗದೆ ।
ಬಿಸಜವ ಪಿಡಿದಿಹದೊಂದು ಮೂರುತಿ ।
ಕುಶಲದಿ ಜಪಮಣಿಮಾಲೆ ಚತುರ್ಮುಖ ।
ವಸುಧೆಯ ಸೃಜಿಸುವದೊಂದು ಮೂರುತಿ ।
ಎಸೆವಂತ ಕೋಟೆ ವೇದವರ್ಣಿಸಲು ಸಂ
ತಸದಿ ನೋಡುತಿಹದೊಂದೆ ಮೂರುತಿ ।
ಸನ್ಮೋಹನವೆ ಏಕಮೇವ ಶ್ರುತಿಯೆಂಬ ।
ನಿರ್ಮಳವಾಗಿಹ ದೊಂದೆ ಮೂರುತಿ ।
ಸುಮ್ಮನಸರಿಗೊಮ್ಮೆ ಸುಳುವು ತೋರುವ ಪರ ।
ಬೊಮ್ಮನೆಂದು ಕರೆಸುವದೊಂದೆ ಮೂರುತಿ ।

ನಮ್ಮ ದೇವ ನಿಮ್ಮ ದೇವ ತಮ್ಮ ದೇವನೆಂತೆಂಬ ।
ಹಮ್ಮಿಂದಲಾಡುತಿಹದೊಂದೆ ಮೂರುತಿ ।
ಒಮ್ಮೊಮ್ಮೆನಾ ಕುರುಹು ಹಿಡೆವೆನೆಂದರೆ
ಅಮ್ಮದೆ ಪುರಂದರವಿಠಲನಾದೊಂದೆ ಮೂರುತಿ ೧

ಮಟ್ಟತಾಳ

ಸತ್ವರಜಸ್ತಮೋಗುಣದ ಸಕಲ ಮೂರತಿ ।
ಭೃತ್ಯರಂಗ ಸಂಗದಲ್ಲಿ ನಲಿವ ಮೂರತಿ ।
ತತ್ವ ಪತಿಗಳೊಡನೆ ಇಪ್ಪ ದಿವ್ಯ ಮೂರತಿ ।
ಸತ್ಯ ಪುರಂದರವಿಠಲನು ಒಂದೇ ಮೂರುತಿ । ೨

ಝಂಪೆತಾಳ

ಸಾಸಿರ ನಾಮಕ್ಕೆ ಸಾಸಿರ ಮೂರುತಿ ।
ವಾಸುಕಿಶಯನನಾದ ಅನಂತ ಮೂರುತಿ ।
ಸಾಸಿರದಳದೊಳಡಗಿಹ ಮೂರುತಿ ।
ಶಾಶ್ವತ ನೆನೆವರ ಸಲಹುವ ಮೂರುತಿ ।
ಯಶೋದೆ ಮೊಲೆವುಂಡು ನಮ್ಮ ಪುರಂದರವಿಠಲ ।
ಅಸಮ ಕಾರುಣ್ಯಸಾಗರ ಮೂರುತಿ ೩

ತ್ರಿವಿಡೆತಾಳ

ಅನಂತ ಮುಕುಟ ಅನಂತ ಶಿರಸ್ಸು ಅನಂತ ನಯನ ।
ಅನಂತ ನಾಸಿಕ ಅನಂತ ಕರಣ ಅನಂತ ಕಂಬು ।
ಅನಂತ ಓಷ್ಠ ಅನಂತ ವದನ ಅನಂತ ರದನ ।
ಅನಂತ ಕಂಠ ಅನಂತ ಅನಂತ ಬಾಹು ।
ಅನಂತ ವಕ್ಷ ಅನಂತ ಶ್ರೀ ತುಲಸಿ ।
ವೈಜಯಂತಿ ಮಾಲೆಯಿಂದೊಪ್ಪುವ ।
ಅನಂತ ನಾಭಿ ಅನಂತ ಉದರ ಅನಂತ ತ್ರಿವಳಿ ।
ಅನಂತ ಕಟಿಯು ಅನಂತ ಜಘನ ಅನಂತ ಊರು ।

ಅನಂತ ಜಾನು ಅನಂತ ಜಂಘೆ ಅನಂತ ಗಲ್ಫ ಅನಂತ ಪೆಂಡೆ ।
ಅನಂತ ಚರಣಂ ಅನಂತ ನಖವು ।
ಅನಂತ ಜಗಗಳ ಒಳಗೆ ಹೊರಗೆ ಇಪ್ಪ ಸಾನ್ನಿಧ್ಯ ।
ಪುರಂದರವಿಠಲನೊಬ್ಬನೆ ಕಾಣಿರೊ ೪

ರೂಪಕತಾಳ

ಅಣು ಮಹತ್ತಾಗಿ ತೋರುವ ಮೂರುತಿ ।
ತೃಣಕಾಷ್ಟಗಳಲ್ಲಿ ಪರಿಪೂರ್ಣಮೂರುತಿ ।
ಗಣನೆ ಇಲ್ಲದ ಮೂರತಿ ಘನ ಗುರಡವಾಹನ ಮೂರುತಿ ।
ಸನಕಾದಿಗಳಲ್ಲಿ ಸಾನ್ನಿಧ್ಯ ಮೂರುತಿ ।
ಮನುಜೋತ್ತಮರಲ್ಲಿ ಮಿನುಗುವ ಮೂರುತಿ ।
ಎನ್ನ ಸ್ವಾಮಿ ಪುರಂದರವಿಠಲ ಮೂರುತಿ ೫

ಅಟ್ಟತಾಳ

ಬಮ್ಮಗೆ ಸಿರಿರಂಗ ಮೂರುತಿ ।
ರುದ್ರಗೆ ನರಸಿಂಗ ಮೂರುತಿ ।
ಇಂದ್ರಗೆ ಉಪೇಂದ್ರ ಮೂರುತಿ ।
ಚಂದ್ರಗೆ ದಧಿವಾಮನ ಮೂರುತಿ ।
ಸೂರ್ಯಗೆ ನಾರಾಯಣ ಮೂರುತಿ ।
ಅಗ್ನಿಗೆ ಪರಶುರಾಮ ಮೂರುತಿ ।
ಈರೇಳು ಲೋಕಕ್ಕೆಲ್ಲ ಕಾಲಪುರುಷ ।
ಶ್ರೀ ವಿಷ್ಣು ಮೂರುತಿ ।
ಎಮಗೆ ಮೂರುತಿ ಪರಿಪೂರ್ಣಸಿರಿ ।
ಪುರಂದರವಿಠಲ ಮೂರುತಿ ೬

ಆದಿತಾಳ

ಏಕಾನೇಕ ಮೂರತಿ ಲೋಕವೆಲ್ಲ ಈತನ ಮೂರುತಿ ।
ಕಾಲದೇಶಗಳಿಗೆ ಅಪರಿಚ್ಛಿನ್ನ ಮೂರುತಿ

ಲೋಕ ಲೋಕದೊಳಗೆಲ್ಲ ವ್ಯಾಪಕವಾದ ಮೂರುತಿ
ಏಕಮೇವ ಪುರಂದರವಿಠಲನೊಂಬೊ ಮೂರುತಿ ೭

ಜತೆ

ಅನಂತ ಮೂರುತಿ ಅನಂತ ಕೀರುತಿ
ಅನಂತ ನಾಮ ಪುರಂದರವಿಠಲ ಮೂರುತಿ

೧೨೩

ಸುಳಾದಿ

ವೈಕುಂಠಸುಳಾದಿ

ಧ್ರುವತಾಳ

ಗಲಭೆ ಇದೇನೊ ಬೊಮ್ಮಾದಿಗಳ ॥
ಉಲುಹು ಇದೇನೊ ರುದ್ರಾದಿಗಳ ।
ಸುಳಿಸದಿರೆಲೊ ಗರುಡಾದಿಗಳ ।
ನಿಲಹೇಳೊ ಇಂದ್ರ-ಚಂದ್ರಾದಿಗಳ ।
ಸುಳಿದರೆ ಹೊಯ್ಯೊ ಅಸುರಾದಿಗಳ ।
ತೊಲಗ ಹೇಳೆಲೊ ಸನಕಾದಿಗಳ ।
ನಳಿನಪತ್ರೇಕ್ಷಣನ ಓಲಗಶಾಲೆಗೆ ।
ಸಲುವರೆ ಲಿಂಗ ಶರೀರಿಗಳು? ।
ಕಾಲಕಾಲದಿ ಲಕ್ಷ್ಮಿಯವೆರಸಿ ।
ಸುಲಭನೊಪ್ಪಿದ ಪುರಂದರವಿಠಲ ೧

ಮಟ್ಟತಾಳ

ಮುಕುತವಿರಿಂಚಿ ವಿಹಂಗಪತಿಗಳ ಕೈಯ ।
ಉಕುತಿಗಳಿಂದಲಿ ನೀನು ನುತಿಸಿಕೊಂಬುವುದೆತ್ತ ।
ಆಕಳಕಾಯ್ವ ಗೋಪ ಗೊಲ್ಲತಿಯರ ಮಕ್ಕಳ ಕೈಯಿಂದ
ನೀ ಬೈಸಿಕೊಂಬವುದೆತ್ತ ।

ಸಕಲ ಸುರರು ನಗರೆ ರಂಗಯ್ಯ ನಿನಗೆ? ।
ತಕ್ಕುದನೆ ಮಾಡೊ ಪುರಂದರವಿಠಲ ೨

ತ್ರಿವಿಡೆತಾಳ

ಬದಿಯ ಬಲಿದು ಕಡಹದ ಮರನೇರಿ ।
ಕಾಲಿಯ ಮಡುವ ಧುಮುಕಿ ಅವನ ಶಿರದಲ್ಲಿ ॥
ಧಿಮಿ ಧಿಮಿ ಧಿಮಕೆಂದು ಕುಣಿಯಲು ।
ದಂಧಣ ಧಣ ಎಂದು ಬೊಮ್ಮ ಮದ್ದಲೆ ಬಡಿಯೆ ।
ತಂದನ್ನ ತಾ ಎಂದು ಹನುಮಂತ ಪಾಡೆ ।
ನಂದಿ ವಾಹನ ತಾಳವ ಪಿಡಿದು ತಥ್ಥೈ ಎನ್ನೆ ।
ನಂದನಕಂದ ಆಡಿದ ಆನಂದವ ।
ಎಂದವಗೊಲಿವ ಪುರಂದರವಿಠಲ ೩

ಅಟತಾಳ

ಪಂಕಜಲೋಚನ ಪಂಕಜಾನನ ।
ಪಂಕಜಾಪತಿ ಪಂಕಜಾಮತಿ ।
ಪಂಕಜಭವ ವಂದಿತಾಮಘ್ರಿಪಂಕಜ ।
ಪಂಕಜಮಿತ್ರಾನಂತ ಕೋಟಿ ತೇಜ ।
ಪಂಕಜನಾಭ ಪುರಂದುವಿಠಲ ೪

ಆದಿತಾಳ

ಚತುರಮೂರುತಿ ಚುತುರಕೀರುತಿ ।
ಚುತುರಪಾಣಿ ಚುತುರಾಯುಧ ।
ಚತುರವಿಧ ಮುಕುತಿದಾಯಕ ।
ಚತುರ್ದಶ ಭುವನೇಶ ಪುರಂದರವಿಠಲ ೫

ಜತೆ

ಹಾರಲೊದೆಯೊ ಸಂಚಿತಾಗಾಮಿಗಳನು ।
ತೋರೋ ನಿನ್ನ ಚರಣ ಪುರಂದರವಿಠಲ ॥

೧೨೪

ಸುಳಾದಿ

ಧ್ರುವತಾಳ

ಗಂಗಾಜನಕನಿಗೆ ಹೊಂಗಲಶಗಳಿಂದ ।
ಮಂಗಳ ಮಜ್ಜನ ಮಾಡಿಸುವಳು ।
ಅಂಗನೆ ದ್ರೌಪದಿಗೆ ಅಕ್ಷಯಾಂಬರವಿತ್ತ ।
ರಂಗಗೆ ಪೊಂಬಟ್ಟೆಯ ಉಡಿಸುವಳು ।
ಅಂಗಜನಯ್ಯನ ಅನರ್ಘ್ಯ ರತ್ನಾಭರಣಂಗಳಿಂದಲಿ ಸಿಂಗರಿಪಳು ।
ಇಂಗಡಲೊಡೆಯಗೆ ಕೆನೆವಾಲ ನೈವೇದ್ಯ ।
ಸಂಗ್ರಾಮ ಭೀಮಗೆ ರಕ್ಷೆಬೊಟ್ಟು ಆ ಭೃಂಗ
ಗೋರಂಟ್ಲೆಯ ಚೆನ್ನರಾಯ ।
ಶಾರಙ್ಗಧರ ಪುರಂದರವಿಠಲರಾಯ ೧

ಮಟ್ಟತಾಳ

ಬೊಮ್ಮಾಂಡ ಕೋಟಿಗಳ ಗೊಂಬೆಮನೆಯ ಮಾಡಿ ।
ಬೊಮ್ಮ-ಭವಾದಿಗಳ ಗೊಂಬೆಗಳ ಮಾಡಿ ।
ಒಮ್ಮೊಮ್ಮೆ ನಲಿಯುತ ಗೊಂಬೆಯಾಟ ವಾಡುವ ।
ನಮ್ಮ ಗೋರಂಟ್ಲಿಯ ಚೆನ್ನರಾಯ ಶಾ-।
ರಙ್ಗಧರ ಪುರಂದರವಿಠಲ ೨

ತ್ರಿವಿಡೆ ತಾಳ

ಈತ ವಿರಿಂಚಿಯು ಈತನು ಭವನು ।
ಈತ ಇಂದಿರನು ಈತ ಚೆಂದಿರನು ।
ಈತನ ನೋಡಲು ಈತನ ನುಡಿಸಲು ।
ಈತ ಗೋರಂಟ್ಲೆಯ ಚಿನ್ನರಾಯ ।
ಪುರಂದರವಿಠಲ ಈತನ ಮಹಿಮೆ ಎಂತುಟೊ ೩

ಅಟತಾಳ

ಮಾನವರಿಗೆ ದೇವತೆಗಳು ಒಡೆಯರು ।
ದೇವತೆಗಳಿಗೆಲ್ಲ ದೇವೇಂದ್ರ ಒಡೆಯ ।
ದೇವೇಂದ್ರಗೊಡೆಯ ಮಹದೇವ ಮಹಾ-।
ದೇವಗೊಡೆಯ ಬೊಮ್ಮ,ಬೊಮ್ಮಗೊಡತಿ ಲಕ್ಷ್ಮಿ ।
ದೇವಿಗೊಡೆಯನು ಗೋರಂಟ್ಲೆ ಚಿನ್ನರಾಯ ।
ಪುರಂದರವಿಠಲ ೪

ಏಕತಾಳ

ಉರುಮೂರುತಿ ಉರುಕೀರುತಿ-।
ಉರುಕರ್ಮ ಉರುಕಲ್ಯಾಣ ।
ಉರು ಮಹಾಮಹಿಮಗೋರಂಟ್ಲೆ ನಿಲಯ ।
ಚೆನ್ನರಾಯ ಪುರಂದರವಿಠಲ ೫

ಜತೆ

ಇನ್ನು ಸರಿಯುಂಟೆ ಈ ಗೋರಂಟ್ಲೆಯ ।
ಚೆನ್ನರಾಯ ಪುರಂದರವಿಠಲಗೆ ॥

೧೨೫

ಸುಳಾದಿ

ಜೀವ ಬಿಂಬ ಸುಳಾದಿ

ಧ್ರುವತಾಳ

ಕ್ಷೀರಸಾಗರದಲಿ ಹಾವಿನ ಹಾಸಿಗೆ ಓಜೆಯೊಳ್
ಒರಗಿಪ್ಪ ಎನ್ನೊಡೆಯ ।
ಹಾರಮುಕುಟ ಕುಂಡಲ ಪೀತಾಂಬರಧಾರಿಯಾಗಿಹ ಎನ್ನೊಡೆಯ ।
ನಾರದ ಗರುಡ ಗಂಧರ್ವರ ಗಾನದಿ
ಓರಂತೆ ಸುಖಿಸು ಎನ್ನೊಡೆಯ ।

ಮಾರ ಚಾಮರಗಳ ಢಾಳಿಸುತಿರಲು ।
ಮಾರುತಿ ಕಂಬಿವಿಡಿದು ನಿಲ್ಲಲು ।
ನೀರ ಜಾಲಿಯ ತಾನಡಿಗಳನೊತ್ತಲು ಉ-।
ದಾರ ದೇವರ ದೇವನೊಲುಮೆಯಿಂದ ।
ಕಾರುಣ್ಯ ಸುಧೆಯನು ಸುರಿಯೆ ಭಕ್ತರಮೇಲೆ ।
ಭೂರಮಣನೆ ಪುರಂದರ ವಿಠಲರಾಯ ೧

ಮಟ್ಟತಾಳ

ಇಂದ್ರ ನೀಲಾಚಲದಲಿ ಇಂದ್ರಚಾಪ ಮೂಡಿದಂತೆ ।
ಕುಂದ ಕುಸುಮನಂಗದಲ್ಲಿ ಚಂದ್ರಕಾಂತಿಗಳೆಸೆಯೆ ।
ತುಲಸೀಮಾಲೆಗಳೆಸೆಯೆ ।
ಕುಂದಕುಸುಮನಂಗದಲ್ಲಿ................
ಮಂದಗಮನ ಗರುವರೇಯ ಉಪೇಂದ್ರ ಪುರಂದರವಿಠಲ ೨

ತ್ರಿವಿಡೆತಾಳ

ನೀಲಮೇಘಶ್ಯಾಮ ನಿನ್ನ ಬಾಲಭಾಸ್ಕರ ವರ್ಣ ಉಡು- ।
ಪಾಲಯ ಕೋಟಿ ಪ್ರಕಾಶವೊ ದೇವಾ ।
ಕೇಳ್ಗ (ಳಿ) ಬಲ್ಲೆ ಅನೇಕ ವರ್ಣದಿಂದ ಓಲಗಿಪ
ಪುರಂದರವಿಠಲದೇವ ಕೇಳಬಲ್ಲೆ ೩

ಅಟತಾಳ

ನಿಚ್ಚಮಂಗಳ (ನಿಚ್ಚ) ನಿಧಿನೀನೆಂದು ।
ಸಚ್ಚಿದಾನಂದ ಸ್ವರೂಪ ನೀನೆಂದು ।
ಅಚ್ಯುತಾನಂತ ಗೋವಿಂದ ನೀನೆಂದು ।
ಮೆಚ್ಚಿದೆ ನಾನಿನ್ನ ಚರಣವ ಇಂದು ।
ಅಚ್ಚ ಸಕಲ ಲೋಕಕ್ಕಧಿದೈವ ನೀನೆಂದು
ಲಚ್ಚುಮೀಪತಿ ಪುರಂದರವಿಠಲ ನೀನೆಂದು ೪

ರೂಪಕತಾಳ

ಲೋಕದ ಮಾನವರೆಲ್ಲ ನಿರಾಕಾರನೆನೆಂದೆನಲು ನಮ- ।
ಗೇಕೊ ವಾದ ವಿವಾದ ಬರಿದೆ ಕಾಕರ ಕಣದೊಳಗೆ ।
ಸಾಕಾರನನರಿಯದ ಮೂಢಾಕಾರರ ಕೂಡೆ ನಮ- ।
ಗೇಕೊವಾದ ನಮಗಿದೇಕೊ ವಾದ ।
ಏಕೋ ವಿಷ್ಣುವೆಂಬ ಪುರಂದರವಿಠಲ ನೀನಿರಲು
ನಮಗಿನ್ನೇಕೊ ವಾದ ೫

ಆದಿತಾಳ

ಎನಗೊಬ್ಬ ಒಡೆಯ ದೊರಕಿದ ದೊರಕಿದ ।
ಸಿಧ್ಧಾಯವನೀವ ಕಟ್ಟಳೆ ಕಂದಾಯವನೀವ ।
ಬೇಡಿದ ಉಚಿತವ ನಮಗವನೀವ ।
ಎನಗೊಬ್ಬ ಒಡೆಯ ದೊರಕಿದ ।
ಕಷ್ಟ ನಷ್ಟಗಳಿಲ್ಲ ಒದೆ-ಜಡಿತಗಳಿಲ್ಲ ।
ಎನ್ನ ಮನಬಂದಂತೆ ಓಲೈಸುವೆನು ।
ಎನ್ನಮನಬಂದಾಗ ಓಲೈಸಿಕೊಂಬ ।
ಕೇಡಿಲ್ಲದೊಡೆಯ ಪುರಂದರವಿಠಲ
ಎನಗೊಬ್ಬ ಒಡೆಯ ದೊರಕಿದ ೬

ಝಂಪೆತಾಳ (ಏಕತಾಳ)

ದೇವದೇವಕಿನಂದ ದೇವೋತ್ತಮ ಗೋವಿಂದ ।
ಗೋವರ್ಧನಗಿರಿಧರ ಧರಣೀಧರ ।
ಜೀವಬಿಂನ ಪುರಂದರವಿಠಲ ಓವು ನನ್ನಯ್ಯ ದೇವ ೭

ಜತೆ

ಮನವಚನ ಕಾಯಕದಿಂದ ನಿನ್ನನೆ ನೋಡಿ ।
ಅನುದಿನ ನೆನೆವೆ ನಾನು ಪುರಂದರವಿಠಲ ॥

೧೨೬

ಗೋರಂಟ್ಲ ಕೃಷ್ಣಸುಳಾದಿ

ಧ್ರುವತಾಳ

ಕ್ಷೀರಾಬುಧಯೊಳಿಹ ವಿಷ್ಣುವು ನೀನು ।
ದೇವಕೀ ಜಠರದೊಳಿಹುದೇನಾಶ್ಚರ್ಯ ।
ಅನಂತಾಸನದಲ್ಲಿ ಅನಂತನು ನೀನು ।
ಅನಂತಾಸನದಲ್ಲಿ ಅನಂತನು ನೀನು ।
ದೇವಕೀ ಜಠರದೊಳಿಹುದೇನಾಶ್ಚರ್ಯ ।
ವಿಶ್ವವ್ಯಾಪಕ ನೀನು ವಿಷ್ಣುವೆ ನೀನು ।
ಭಕ್ತರ ಪರಾಧೀನ ನೀನಾದೆಯಲ್ಲೊ ।
ಗೋರಂಟ್ಲ ಚೆನ್ನರಾಯ ಪುರಂದರವಿಠಲ ೧

ಮಟ್ಟತಾಳ

ಅರಸೆ ಇದು ಅರಮನೆಯಂತೆ ನೋಡಾ ।
ಹರಿ ನೀ ದೇವಕಿಯ ಜಠರದೊಳಿರ್ದೆಯೆಂದು ।
ದೇವಕಿಯ ಜಠರ ವೈಕುಂಠ ನೋಡಾ ।
ಗೋರಂಟ್ಲ ಚೆನ್ನರಾಯ ಪುರಂದರವಿಠಲ ೨

ತ್ರಿವುಡೆತಾಳ

ವಾಸುದೇವ ಗರ್ಭವಾಸವ ಮಾಡಿದ ನೋಡಾ ।
ಹಾಸು ಮಂಚ ಶೇಷ, ಶ್ರೀಸತಿಯ ತೊಡೆಯಲ್ಲಿ ।
ಈಶನಿಗೆ ಗುರುವಾದನೀತ ।
ವಾಸವಾದಿಗಳು ಆಳುಗಳಯ್ಯ ।
ವಾಸುದೇವ ಗರ್ಭವಾಸವ ಮಾಡಿದ ನೋಡಾ ।
ಲೇಸು ಧಣಿ ಧಣಿ ಗೋರಂಟ್ಲ ಚಿನ್ನರಾಯ ।
ಪುರಂದುವಿಠಲ – ೩

ಅಟತಾಳ

ಬೊಮ್ಮಾದಿ ದೇವುರಗಳು ।
ಬೋಮ್ಮಾಂಡಲದಲಿದಿ ಚರಾಚರರು ।
ಚಾರಿವರಿವುತ್ತಲಿರಲು ।
ಬೊಮ್ಮಾಂಡವೊಂದೆ ಬೊಮ್ಮಸ್ವರೂಪ ।
ಗೋರಂಟ್ಲ ಚೆನ್ನರಾಯ ಪುರಂದರವಿಠಲ ॥ ೪

ಏಕತಾಳ

ಆನಂದವೆ (ಆನಂದವಾಗೆ) ಅರ್ಧಾಂಗಿಯಾಗಿ ।
ಗೋರಂಟ್ಲಚೆನ್ನರಾಯ ಪುರಂದರವಿಠಲ ೫

ಜತೆ

ಗರ್ಭವಾಸಿ ಗೋರಂಟ್ಲ ಚೆನ್ನರಾಯ ।
ಪುರಂದರವಿಠಲ ನಮೋ ನಮೋ ॥

೧೨೭

ಸುಳಾದಿ

ಆನಂದ ಸುಳಾದಿ

ಧ್ರುವತಾಳ

ಆಪಾದವಾನಂದ ಆನಖವಾನಂದ ।
ಆಜಾನು ಆಜಂಘೆ ಆನಂದಮಯಮಯ್ಯ ।
ಆ ಊರು ಆನಂದ ಆ ಕಟಿ ಆನಂದ ।
ಆನಾಭಿ ಆ ಕುಕ್ಷಿ ಆನಂದಮಯವಯ್ಯ ।
ಆ ಉರ ಆನಂದ ಆ ಭುಜವಾನಂದ ।
ಆ ಕಂಬುಗ್ರೀವ-ಮುಖ ಆನಂದಮಯವಯ್ಯ ।
ಆಶಿರೋರುಹಗಳು ಆನಂದಮಯವಯ್ಯ ।
ಅಸಂಖ್ಯ ಆನಮದ ಪುರಂದರವಿಠಲ ೧

ಮಟ್ಟತಾಳ

ಪಾವಕ–ಕೋಟಿ ಸೂರ್ಯರ ಪ್ರಭೆಯ ಸೋಲಿಸುವ ।
ದೇವನಂಗಕಾಂತಿ ಆನಂದಮಯವಯ್ಯ ।
ದೇವರಾಟ್ ಶ್ರೀಪುರಂದರವಿಠಲ । ೨

ತ್ರಿವಿಡೆತಾಳ

ದಶಮಾತುರಗಳು ಆನಂದಮಯವಯ್ಯ ।
ಹೃಷೀಕೇಶನ ಏಕಾದಶ ಹೃಷೀಕ ಆನಂದಮಯವಯ್ಯ ।
ಮಹಾಭಾವ ಭೂವಿಲಾಸ ದೇವನಂಗ ಕಾಂತಿ
ಆನಂದಮಯವಯ್ಯ। ।
ದೇವರಾಟ್ ಸಿರಿ ಪುರಂದರವಿಠಲ ೩

ಅಟತಾಳ

ಬೊಮ್ಮ ಬೊಮ್ಮ ಬೊಮ್ಮ ಶ್ರೀಹರಿಯ ।
ಕರ್ಮವಾನಂದ ಕರಣಗಳಾನಂದ ।
ಹಮ್ಮು ಆನಂದ ಹಾಸ್ಯವಾನಂದ ।
ಕಂಗಳಾನಂದ ನಮ್ಮ ಪುರಂದರ ವಿಠಲರಯನ ।
ದಿವ್ಯ ಕೋಪವಾನಂದ ೪

ಏಕತಾಳ

ಅನಂದವರ್ಧಾಂಗಿ ಆನಂದನ ಕುಮಾರ ।
ಆನಂದ ಮೂರುತಿಯ ಅಗಲದೆ ಇರಿ ।
ಆನಂದ ಆನಂದ ಪರಮಾನಂದ ।
ಪರಮಾನಂದ ಪುರಂದರವಿಠಲ ೫

ಜತೆ

ಜ್ಞಾನ ವಿಜ್ಞಾನ ಸುಗಂಧ ಸುಖದೇಹ ।
ಅನಂದಮಯವಯ್ಯ ಪುರಂದರವಿಠಲನ ಅವಯವಗಳೆಲ್ಲ ॥

೧೨೮

ಸುಳಾದಿ

ನರಸಿಂಹ ಸುಳಾದಿ

ಧ್ರುವತಾಳ

ಅಂಜುವೆ ನಾನೀ ಸಿಂಹದ ಮೊಗದವ ।
ಹುಂಕರಿಸುವೆ ಮೊರಿದೊಮ್ಮೊಮ್ಮೊ ।
ಅಂಜುವೆ ನಾನೀ ಕೋಪಾಟೋಪದವ ।
ಗುಡಗುಡಿಸುವೆ ಮೊರೆದೊಮ್ಮೊಮ್ಮೊ ।
ಅಂಜುವೆ ನಾನೀ ಕಿವಿಯ ಮೇಳವಿಸಿ
ಮೆಲ್ಲವಿದೆರಗುವೆ ಮೊರದೊಮ್ಮೊಮ್ಮೊ ।
ಅಂಜುವೆ ನಾನೀ ಕುಡುದಾಡೆಗಳ ।
ಕಿಡಿ ಕಿಡಿ ಕಿಡಿಗೆದರಿಸುವೆ ಮೊರೆದೊಮ್ಮೊಮೊ ।
ಅಂಜುವೆ ನಾನೀ ತೆರವಾಯ ತರೆಯುತ
ಗಹಗಹಿಸುವೆ ಮೊರೆದೊಮ್ಮೊಮ್ಮೊ ।
ಅಂಜುವೆ ನಾನೀ ಸಿರಿಮುದ್ದು ನರಸಿಂಹ
ಪುರಂದರವಿಠಲ ನೀನು ಉರಿಮೋರೆ ದೈವವೆ ಅಂಜುವೆ ೧

ಮಟ್ಟತಾಳ

ಹಿರಣ್ಯಕಶಿಪುವಿನ ಉದರವ ಬಗಿದ ಬಳಿಕ ।
ಕರುಳುಮಾಲೆಯ ಕಿತ್ತು ಕೊರಳಲಿಕ್ಕಿದ ಬಳಿಕ ।
ಉರಿಯನುಗುಳಲೇತಕೆ ಸಿರಿಯ(ಸು)ನುಡಿಸಲೇತಕೆ ।
ಹರ-ಬೊಮ್ಮಾದಿಗಳನ್ನು ಸರಕುಮಾಡಲೇತಕೆ ।
ಸಿರಿಮುದ್ದು ನರಸಿಂಹ ಪುರಂದರವಿಠಲ
ಪ್ರಹ್ಲಾದದೇವ ಬಂದರೆ ಕರೆದು ಮುದ್ದಾಡಲೇತಕೆ ೨

ತ್ರಿವುಡೆ ತಾಳ

ಅಟ್ಟಹಾಸಕಬುಜಜಾಂಡ ಕಟ್ಟಾಹ ಪ್ರತಿಧ್ವನಿಗೊಡುತಲಿದೆ ।
ಮೆಟ್ಟಿದಳೆ ತಲೆ ಕೆಳಗಾಗುತಲಿದೆ ।
ಬೆಟ್ಟಗಳೈಸೂ ಉರುಳುರುಳಿ ಬೀಳುತಿವೆ ।
ದಿಟ್ಟ ಮುದ್ದು ನರಸಿಂಹ ಪುರಂದರವಿಠಲನೆ
ಕಟ್ಟರಸು ಕಾಣಿರೊ ೩

ಅಟತಾಳ

ಉರಿಸಾಗರಗಳ ಸುರಿದು ನಾಲಗೆ ನೀಡೆ ।
ಚರಾಚರಂಗಳು ಚಾರಿವರಿವುತಲಿತ್ತು ।
ಬ್ರಹ್ಮಾಂಡವಂದೇ ಸಿಡಿದು ಹೋಗುತಿತ್ತು ।
ಬ್ರಹ್ಮಪ್ರಳಯವಂದೇ ಆಗಿಹೋಗುತಿತ್ತು ।
ಸಿರಿಮುದ್ದು ನರಸಿಂಹ ಪುರಂದರವಿಠಲ ।
ಪ್ರಹ್ಲಾದದೇವ ಬಂದು ನಿಲಿಸದಿದ್ದರೆ ।
ಬ್ರಹ್ಮಾಂಡವಂದೇ ಸಿಡಿದುಹೋಗುತಿತ್ತು ೪

ಏಕತಾಳ

ಹಿರಣ್ಯಕಶಿಪುವಿನುದರವ ಬಗಿದು ಉಗುರಲಿ ।
ಸರಸವಾಡಿದಿರಾ ಮೈಮುಟ್ಟಿ ಸರಸವಾಡಿದಿರಾ ।
ಸಿರಿಮುದ್ದು ನರಸಿಂಹ ಪುರಂದರವಿಠಲ ।
ಸರಸವಾಡಿದಿರಾ? ೫

ಜತೆ

ಸಿರಿಮುದ್ದು ನರಸಿಂಹ ಪುರಂದರವಿಠಲ ।
ಶರಣ ಪ್ರಹ್ಲಾದ ಸಂರಕ್ಷಕ ಜಯಜಯ ॥

೧೨೯

ಮಹಾತ್ಮ್ಯಸುಳಾದಿ

ಧ್ರುವತಾಳ

ಅಣುವಾಗಬಲ್ಲ ಮಹತ್ತಾಗಬಲ್ಲ ।
ಅಣುಮಹತ್ತೆರಡೊಂದಾಗ ಬಲ್ಲ
ರೂಪವಾಗಬಲ್ಲ ಅಪರೂಪವಾಗ ಬಲ್ಲ
ರೂಪ–ಅಪರೂಪವೆರಡೊಂದಾಗಬಲ್ಲ ।
ವ್ಯಕ್ತನಾಗಬಲ್ಲ ಅವ್ಯಕ್ತನಾಗಬಲ್ಲ
ವ್ಯಕ್ತ ಅವ್ಯಕ್ತ ಎರಡೊಂದಾಗ ಬಲ್ಲ ।
ಸುಗುಣನಾಗಬಲ್ಲ ನಿರ್ಗುಣನಾಗಬಲ್ಲ ।
ಸುಗುಣ ನಿರ್ಗುಣ ಎರಡೊಂದಾಗಬಲ್ಲ ।
ಅಘಟಿತ ಘಟಿತ ಅಚಿಂತ್ಯಾದ್ಭುತ ಮಹಿಮ ।
ಸ್ವಗತ ಭೇದವಿವರ್ಜಿತ ಪುರಂದರವಿಠಲ ೧

ಮಟ್ಟತಾಳ

ಕಣ್ಣಲಿ ಕೇಳ್ವ ಕಾಂಬ ಅರಿವ, ಆಘ್ರಾಣಿಸುವ ಆಸ್ವಾದಿಸುವ ।
ರಸನದಿ ಕೇಳ್ವ ಕಾಂಬ ಅರಿವ, ಆಘ್ರಾಣಿಸುವ ಆಸ್ವಾದಿಸುವ ।
ಸ್ಪರುಶದಿ ಕೇಳ್ವ ಕಾಂಬ ಅರಿವ, ಆಘ್ರಾಣಿಸುವ ಆಸ್ವಾದಿಸುವ ।
ಶ್ರವಣದಿ ಕೇಳ್ವ ಕಾಂಬ ಅರಿವ, ಆಘ್ರಾಣಿಸುವ ಆಸ್ವಾದಿಸುವ ।
ಘ್ರಾಣದಿ ಕೇಳ್ವ ಕಾಂಬ ಅರಿವ, ಆಘ್ರಾಣಿಸುವ ಆಸ್ವಾದಿಸುವ ।
ಲೋಕ ವಿಲಕ್ಷಣ ದಿವ್ಯ ಕರಣ ಲೋಕಕೆ
ಆಶ್ಚರ್ಯ ಪುರಂದರವಿಠಲ ೨

ತ್ರಿವಿಡಿತಾಳ

ಆವಾವ ಯುಗದಲ್ಲಿ ವಿಷ್ಣು ವ್ಯಾಪಕನಾಗಿ
ಆ ವಿಷ್ಣುವಿಂದಲೆ ವಿಷ್ಣುಲೋಕ ತಾನಿಪ್ಪುದಾಗಿ ।
ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯ ।

ಸಾರಿಷ್ಣ ಎಂಬುದು ವಿಷ್ಣುವಿನಲಿಪ್ಪುದಾಗಿ ।
ನಮ್ಮ ಪುರಂದರವಿಠಲ ಬೊಮ್ಮ ಭರಿತ ।
ಪಂಚವಿಧ ಮುಕುತಿದಾಯಕನು ೩

ಅಟತಾಳ

ಮೋದ ದಕ್ಷಿಣಪಕ್ಷ ಪ್ರಮೋದ ಉತ್ತರಪಕ್ಷ ।
ಆನಂದ ಆತುಮ ಆನಖ ಆಪಾದ ।
ಅಪ್ರಾಕೃತವಿಗ್ರಹ ನಮ್ಮ ಪುರಂದರವಿಠಲ ೪

ಏಕತಾಳ (ಆದಿತಾಳ)

ನಾರಾಯಣ ಪರಬ್ರಹ್ಮ ಶ್ವೇತತನೂರುಹ ಬಲಭದ್ರ ಗಡ ।
ಕೃಷ್ಣತನೂರುಹ ಕೃಷ್ಣ ಗಡ ।
ವಾಸುದೇವ ಸಂಕರ್ಷಣ ಪ್ರದ್ಯುಮ್ನ ಅನಿರದ್ಧ ನಾರಾಯಣ ಹರೇ
ಶ್ವೇತ ತನೂರುಹ ಪುರಂದರ ವಿಠಲ ೫

ಜತೆ

ನಮೋ ನಮೋ ವಾಗೀಶಾ ಈಶ ಸರ್ವೇಶ ।
ನಮೋ ನಮೋ ಪುರಂದರವಿಠಲ ಶೇಷಶಯ್ಯ ॥

೧೩೦

ಸುಳಾದಿ

ಧ್ರುವತಾಳ

ಅಚ್ಯುತಾನಂತಗೋವಿಂದ ಮುಕುಂದ ।
ವಾಮನ ವಾಸುದೇವ ನಾರಾಯಣ ಹರಿ ।
ಸಚ್ಚಿದಾನಂದ ಸ್ವರೂಪ ಗೋಪಾಲ ಪುರುಷೋತ್ತಮ ।
ಪರಂಧಾಮ ನಾರಾಯಣ ।
ಮತ್ಸ್ಯ ಕೂರ್ಮ ವರಾಹ ನಾರಸಿಂಹ ವಾಮನ ।

ಭಾರ್ಗವ ರಾಮ ಶ್ರೀಕೃಷ್ಣ ಬೌದ್ಧ ಕಲ್ಕಿ ।
ಅವತಾರ ಅನಂತಾವತಾರ ನಾರಾಯಣ ।
ಹರಿ ಅಚ್ಯುತಾನಂತ ಗೋವಿಂದ ।
ಅಪಾರ ಮಹಿಮ ಶ್ರೀ ನಾರಾಯಣ ಅಹೋ ।
ಸರ್ಪಶಯನನೆ ನಾರಾಯಣ ।
ಶ್ರೀ ಪುರಂದರವಿಠಲ ವಿಭುವೆ ತಿರುವೆಂಗಳಪ್ಪ ।
ಎನ್ನಪ್ಪ ನೀ ನಾರಾಯಣ ೧

ಮಟ್ಟತಾಳ

ಮಂಗಳಂಗ ನಿನ್ನಂಗವಟ್ಟದಲ್ಲಿ ಸಂಗಸಖಿಳಿಪ್ಪಳವ್ವೆ ನಿ– ।
ನ್ನಂಗನೆಯು ಲಚುಮವ್ವೆ ಕೆಂಬರಳಾಗಿಪ್ಪಳವ್ವೆ ।
ಬಂಗಾರವಾಗಿಪ್ಪಳವ್ವೆ ಶೃಂಗಾರವಾಗಿಪ್ಪಳವ್ವೆ ।
ರಂಗ ಶ್ರೀಪುರಂದರವಿಠಲ ನಿನ್ನೊಲಿದು ೨

ತ್ರಿವುಡೆ ತಾಳ

ಉಟ್ಟದಟ್ಟಿ ಕಟ್ಟಿದ ಕಠಾರಿ ತೊಟ್ಟಂಬು ತೋರಗದೆ ತೋಮರ ।
ಮೆಟ್ಟಿದ ತಡಿಕೆರವಿನ ಹೆಜ್ಜೆ ಕಟ್ಟಿದ ಕಾಲುಗೆಜ್ಜೆ ಶ್ರೀ ವತ್ಸ ।
ಸೃಷ್ಟಿರಕ್ಷಕ ಪುರಂದರವಿಠಲ ಬೆಟ್ಟದ ತಿರುವೆಂಗಳಪ್ಪಗೆ
ನಮೋ ನಮೋ ೩

ಅಟತಾಳ

ಇದೆ ದನುಜಮರ್ದನ ಚಕ್ರಹಸ್ತ – ಮ– ।
ತ್ತಿದೆ ವೇದನುತ ಶಂಖಹಸ್ತ ।
ಇದೆ ಈರೇಳು ಜಗವನೊಲಿದಿಂಬಿಟ್ಟು ಮೆರೆವ ಹಸ್ತ ।
ಇದೆ ಇದೆ ವೈಕುಂಠವೆಂದು ತೋರುವ ಹಸ್ತ ।
ಇದೆ ಪುರದರವಿಠಲನಿದ್ದಿರವು ಮತ್ತಿದೆ ।
ತಿರುವೆಂಗಳಪ್ಪನ ಮೂರುತಿ ಇದೆ ೪

ಆದಿತಾಳ

ಕಿರೀಟ ಕುಂಡಲಧರನ ಕಂಡೆ
ಹಾರಮಣಿ ಭೂಷಣನ ಕಂಡೆ ।
ಸಿರಿಯಿಪ್ಪ ವಕ್ಷಸ್ಥಳವ ನಾಕಂಡೆ ।
ವರಾಂಬರನ ಕಂಡೆ ವರದೇಶನ ಕಂಡೆ ।
ತಿರುಮಲಗಿರಿಯಲಿ ಸಿರಿ ಪುರಂದರವಿಠಲನ ।
ಇರುವ ನಾಕಂಡೆ ಚೆಲುವನ ನಾಕಂಡೆ ೫

ಜತೆ

ತಿರುವೆಂಗಳಪ್ಪ ಪುರಂದರವಿಠಲ ।
ನೆರೆ ನಂಬಿದೆನೊ ನಿನ್ನ ಚರಣಕಮಲವ ॥

೧೩೧

ಉಗಾಭೋಗ

ಇದೇ ಮುನಿಗಳ ಮನದ ಕೊನೆಯ ಠಾವು ।
ಇದೇ ಬ್ರಹ್ಮಾದಿಗಳ ಹೃತ್ಕಮಲಪೀಠ ।
ಇದೇ ದ್ವಾರಕೆ ಇದೇ ಕ್ಷೀರಾಂಬುಧಿ
ಇದೇ ಅರಿದ ಸುಜ್ಞಾನಿಗೆ ವೈಕುಂಠ
ಇದೇ ಪುರಂದರವಿಠಲನ ಮಂದಿರ.

೧೩೨

ಉಗಾಭೋಗ

ಕಮಲಜನು ನಿನ್ನ ಪಾದಕಮಲವನು ತೊಳೆದಿಹನು
ಉಮಾಪತಿಯು ನಿನ್ನ ಪಾದಜಲವ ಪೊತ್ತಿಹನು
ಯಮಜ ಮಾಡುವ ರಾಜಸೂಯಾಗದಲ್ಲಿ
ಮಮಕರಿಸಿದೆ ಎಂತೊ ಕಾಲ ತೊಳೆವ ಊಳಿಗವ ?

ಮಮಪ್ರಾಣಾ ಹಿ ಪಾಂಡವಾಃ ಎಂಬ ಬಿರುದಿಗಾಗಿ
ನಮೋ ನಮೋ ಎಂಬೆ ಪುರಂದರವಿಠಲ.

೧೩೩

ಉಗಾಭೋಗ

ಸ್ತ್ರೀಯರಿಗೆ ಪುರುಷರು ಮೋಹಿಸುವರಲ್ಲದೆ
ಪುರುಷರಿಗೆ ಪುರುಷರು ಮೋಹಿಸುವುದುಂಟೆ?
ಪುರುಷ ಬ್ರಹ್ಮಾದಿಗಳು ನಿನ್ನನು ಮೋಹಿಸುವರು
ತಿರುವೆಂಗಳಪ್ಪ ಶ್ರೀಪುರಂದರ ವಿಠಲ.

೧೩೪

ಉಗಾಭೋಗ

ಭಾರತಮಲ್ಲ ಭೀಮನೆಂತೆಂಬರು
ಭಾರತಮಲ್ಲ ಕರ್ಣನೆಂತೆಂಬರು
ಭಾರತ ಮಲ್ಲ ಅರ್ಜುನನೆಂತೆಂಬರು
ಭಾರತಮಲ್ಲರಲ್ಲ ಇವರೆಲ್ಲ
ಭಾರತಮಲ್ಲ ಪುರಂದರ ವಿಠಲನೊಬ್ಬ ಕಾಣಿರೊ.

೧೩೫

ಉಗಾಬೋಗ

ಶರಧಿ ಸಡ್ಡಿಯ ಮಾಡಿ ಧರೆಯ ಕೂರಿಗೆ ಮಾಡಿ
ಹರ ಬೊಮ್ಮರೆಂಬ ಎರಡೆತ್ತು ಹೂಡಿ
ನರಜೀವರಾಶಿಗಳೆಂಬ ಬೀಜವತಕ್ಕೊಂಡು
ಧರೆಯಲ್ಲಿ ಬಿತ್ತುವಾತ ಇಂದ್ರನು, ಬೆಳೆಸುವಾತ ಚಂದ್ರನು ।
ಕಳೆಯ ಕೀಳುವನು ಯಮರಾಜನಯ್ಯ
ಬಿತ್ತಿದಾತನೆ ಬೆಳೆಯನು ಒತ್ತಿಕೊಂಡು ಹೋಗುವಾಗ
ದುಃಖವೇತಕೆ ಸಿರಿಪುರಂದರವಿಠಲ.

೧೩೬

ಸುಳಾದಿ

ಮುಕ್ತಿಸಾಧನ ಸುಳಾದಿ

ಧ್ರುವತಾಳ

ಎಂಬತ್ತು ನಾಲ್ಕು ಲಕ್ಷ ಯೋನಿ ಮುಖಂಗಳಲ್ಲಿ ಪುಟ್ಟಿ ಪುಟ್ಟಿ ।
ಪೊಂದಿ ಪೊಂದಿ ಬಳಲಿದೆನಯ್ಯ ನಾನು ।
ಸುಕೃತ–ದುಷ್ಕೃತವೆಂಬ ಉಭಯ ಕರ್ಮಗಳಲ್ಲಿ ।
ತಾಪತ್ರಯದಲ್ಲಿ ಇರೆ ಉರೆ ಕಡು ನೊಂದೆನಯ್ಯ ನಾನು ।
ಇಪ್ಪತ್ತೊಂದು ಕೋಟಿ ನಾಯಕ ನರಕದಲ್ಲಿ ಕಾಲನವರಿಗೆ ಸಿಲುಕಿ ।
ಕಡುನೊಂದೆನಯ್ಯ ನಾನು ।
ಇನ್ನೇತಕೆ ಮಾನಿಸ ಜನ್ಮ ದೊರೆಕೊಂಬೆ ।
ಇನ್ನೇತಕೆ ನಿನ್ನವರಂಘ್ರಿ ದೊರೆಕೊಂಬೆ ।
ಇನ್ನು ನಿನ್ನ ಬಿಟ್ಟು ಬಾಳಲಾರೆನಯ್ಯ ನಾನು ।
ಮೊರೆ ಹೊಕ್ಕೆ ಪುರಂದರವಿಠಲ ಕಾಯ್ದುಕೊ ದಮ್ಮಯ್ಯ ೧

ಮಟ್ಟತಾಳ

ಅನಂತಾನಂತ ಜನ್ಮವೈದಾವೆ ।
ಅನಂತಾನಂತ ಕರ್ಮವೈದಾವೆ ।
ಅನಂತಾನಂತ ಪರಿಯಲಿ ಆಡಿಸಿ ನೋಡಬಾರದೆ
ಅನಂತಾನಂತ ಪರಿಯಲಿ ।
ಎನ್ನನೊಬ್ಬನ ಸಂಸಾರಿಯಮಾಡದಿದ್ದರೆ ।
ಇನ್ನು ನಿನಗೆ ಕಡಮೆಯೆ ಪುರಂದರವಿಠಲ? ೨

ಅಟತಾಳ

ಕಂಸಾರಿಗೆ ಮನಸೋತ ಮಾಧವಿಯರು ।
ಸಂಸಾರವ ಸಂತೈಸಿದರೆ ಹೇಳಿರಯ್ಯ ।
ಕಂಸಾರಿಗೆ ಮನಮೆಚ್ಚಾದ ಹೆಣ್ಣು ।

ಸಂಸಾರವ ದಂತವಿಟ್ಟಾಳೆ ಹೇಳಿರಯ್ಯ ।
ಹಂಸಮೂರುತಿ ಪುರಂದರವಿಠಲನಲ್ಲಿ ।
ಹಂಸಿ ಹತ್ತಿದ ಬಳಿಕ ಅನ್ಯವನರಿವಳೇನಯ್ಯ ೩

ಝಂಪೆ ತಾಳ

ಹರಿಭಕುತಿಯೆಂಬ ಸುಧೆಯ ಸಾಗರವಿರೆ ।
ಅರಿವರೆ ವಿಷವೆಂಬ ಎಳೆ ಕೊಳಚೆಯನೀರ? ।
ಎಲೆ ಎಲೆ ಮನವೆ ಜಲರುಹಾಕ್ಷನ ನೆನೆ ।
ಎಲೆ ಎಲೆ ಮನವೆ ಬಿಸರುಹಾಕ್ಷನ ನೆನೆ ಮರಳಿ ಮರಳಿ ।
ಸಂಸಾರವನ್ನೈದುವರೆ ಪುರಂದರವಿಠಲ ವಿಶ್ವೇಶ್ವರನೆಂದು
ನೆನೆ ಎಲೆ ಎಲೆ ಮನವೆ ೪

ಏಕತಾಳ

ದುಷ್ಟದೈವವೆಂಬವು ಸಾವಿರಮಂದಿ ಚಿರವಾದಿಗಳ ಕಾಲಪಿಡಿ।
ಇದರಿಂದೆ ವಿಠಲನೆಂಬುವನು ಕಾಣ ।
ಸೃಷ್ಟಿಸ್ಥಿತಿಲಯಕೆ ಪುರಂದರವಿಠಲನೊಬ್ಬನೆ ಕಾಣಿರೊ । ೫

ಜತೆ

ಅಹಂಕಾರ ಮಮಕಾರಗಳಳಿದು ।
ಧಿಂ ಧಿಧಿಂ ಪುರಂದರವಿಠಲ॥

೧೩೭

ಸುಳಾದಿ

ಹರಿಸ್ಮರಣ ಸುಳಾದಿ

ಧ್ರುವತಾಳ

ಎನ್ನ ಹೃದಯದಲ್ಲಿ ಎಲ್ಲಿ ಅನುವನೀಯಲೊ ಹರಿಯೆ? ।
ಎನ್ನಭಾವದಲ್ಲಿ ಎಲ್ಲಿ ಅನುವನೀಯಲೊ ಹರಿಯೆ? ।

ಬರಿದೆ ಸುಕೃತದ–ದುಷ್ಕೃತದ ಬನ್ನ ಬಡಿಸಿ ನೀ ನೋಡುತಿಹರೆ ! ।
ಎನ್ನ ಅವಗುಣಗಳೆಣಿಸುವರೆ ಕಡೆಯುಂಟೆ? ।
ನಿನ್ನ ಘನತೆಯ ನೋಡಿ ಪಾಲಿಸೆಲೊ ಹರಿಯೆ ।
ಎನಗನ್ಯಥಾ ಗತಿಯಿಲ್ಲ ಅನಾಥ ನಾನಯ್ಯ ।
ಅನಾಥ ಬಂಧು ಪುರುಂದರವಿಠಲರಾಯ
ನಿನ್ನ ಡಿಂಗರಿಗನೆನಿಸೊ ಕೃಪಾಂಬುಧಿಯೆ ೧

ಮಟ್ಟತಾಳ

ಮನವೇಕೇಳು ಮಾಮನೋಹರನ ।
ಮನಸಿಜಪಿತನ ನಾನನುದಿನದಲಿ ಅಗಲದಿಪ್ಪೆ ।
ಘನಮಹಿಮ ದೇವರನನು ನೆನೆವುದೇನು
ನೇಹಮಾಡಿದವನ ।
ಮನವನೀಯೆ ತನ್ನ ನೀವನು ಆ– ।
ದನುಜ ಮನುಜ ದಿವಿಜರೊಡೆಯಗೆ ।
ತನುವ ಪ್ರಾಣ ವೊಪ್ಪಸುವನನು ।
ಅನುದಿನದಲಿ ಪೊರೆವನು ಪುರಂದರವಿಠಲ।
ನೆನೆವುದೇನು ನೇಹ ಮಾಡಿದವನ ೨

ತ್ರಿವಿಡೆತಾಳ

ತಟ್ಟುವದೆ ಕೌರವ ಅನಂತವನು ।
ಮುಟ್ಟುವುದೆ ಗೂಗೆ ಭಾನುಮಂಡಲವನು ।
ಸೃಷ್ಟಿ ಸಂಹಾರ ಕಾರಣ ಮೂರುತಿಗಳನು ।
ಮೆಟ್ಟಿ ಆಳುವವ ಕೇಶವನೆಂದರಿಯದೆ ।
ಸೃಷ್ಟಿ ಸಂಹಾರ ಕಾರಣ ಮೂರುತಿಯನು ।
ಕಟ್ಟಿದಳೊ ಗೋಪಿದಾಮದಲಿ ಪುರಂದರ
ವಿಠಲರಾಯ ಯಮಳಾರ್ಜುನ ಭಂಜನ ೩

ಅಟತಾಳ

ಅಂತಿಂತೊಂದು ಕ್ಷಣ ಅನಂತನಿಲ್ಲದೆ ।
ಚಿಂತಿಸುತಿದೆ ಎನ್ನ ಮನ ಚಿಂತಿಸುತಿದೆ ।
ಕಂತು ಪಿತನ ಬರವ ಬಯಸಿ ।
ಚಿಂತಿಸುತಿದೆ ಎನ್ನ ಮನ ಚಿಂತಿಸುತಿದೆ ।
ಸಂತತ ಪುರಂದರವಿಠಲನ ನೆನೆವ ಭಾಗ್ಯವು ।
ದೊರಕಬೇಕೆಂದು ಚಿಂತಿಸುತಿದೆ ಎನ್ನ ಮನ ೪

ಆದಿತಾಳ

ರಂಗ ನಮೋ ರಘು ನಂದನ ನಮೋ ನಮೋ ।
ಕೃಷ್ಣ ನಮೋ ಕೃಪಾಳುವೆ ನಮೋ ನಮೋ ।
ದೇವ ನಮೋ ದೇವರಾಯ ನಮೋ ನಮೋ ।
ಈವ ನಮೋ ಕಾವಕರುಣಾಕರ ನಮೋ ನಮೋ ।
ಪುಂಡರೀಕ ಮನಃ ಪ್ರಿಯನೆ ನಮೋ ನಮೋ ।
ಪಂಢರಿರಾಯ ಪುರಂದರವಿಠಲದೇವ ನಮೋ ನಮೋ ೫

ಜತೆ

ಹರಿಯ ನೆನೆವೆ ನರಹರಿಯ ನೆನೆವೆ ಮುರ- ।
ಹರನ ನೆನೆವೆನೊ ಪುರಂದರವಿಠಲ ॥

೧೩೮

ಉಗಾಭೋಗ

ಬೇಡುವ ಕಷ್ಟಕ್ಕಿಂತ ಸಾವುದೆ ಕರಲೇಸು
ಬೇಡುವವರಿಗೆ ಒಬ್ಬರೊಡೆಯರುಂಟೆ ದೇವ
ಗೂಡ ಕಿರಿದು ಮಾಡಿ ಬಲಿಯ ದಾನವ ಬೇಡಿ
ನಾಡೊಳು ಸ್ಥೂಲ ಸೂಕ್ಷ್ಮ ರೂಪವಾದೆ
ಬೇಡುವ ಕಷ್ಟವನು ನೀನೆ ಬಲ್ಲೆಯೋ ಸ್ವಾಮಿ
ಎನ್ನ ಬೇಡದಂತೆ ಮಾಡಯ್ಯ ಪುರಂದರವಿಠಲ.

೧೩೯

ಉಗಾಭೋಗ

ಬೇಡುವ ಕಷ್ಟಕ್ಕಿಂತ ಸಾವುದೇ ವರಲೇಸು
ಬೇಡುವವರಿಗೆ ವೊಬ್ಬಿ ಉಳಯೋದುಂಟೇನೊ ದೇವ
ಧೊರೆಯುಂಟು ಗೂಡು ಕಿರಿದುಮಾಡಿ
ಬಲಿಯ ದಾನವ ಬೇಡಿ ನಾಡು ಅರಿಯಲು
ಸ್ಥೂಲ ಸೂಕ್ಷ್ಮ ನಿನ್ನದೆ
ಬೇಡುವ ಕಷ್ಟವನು ನೀನೆ ಬಲ್ಲೆಯೊ
ಸ್ವಾಮಿ ಎನ್ನ ಬೇಡದಂತೆ ಮಾಡಯ್ಯ ಪುರಂದರವಿಠಲ.

೧೪೦

ಉಗಾಭೋಗ

ಧರ್ಮಪಥವ ಮೆಟ್ಟಲು ಮನವೆರಗದು
ದುಷ್ಕರ್ಮಕಾದಡೆ ಚಿಗಿಚಿಗಿದಾಡುವುದು
ಯುಗಧರ್ಮವೋ (ಇದು) ಹರಿ(ಯೆ), ಜೀವನ ಕರ್ಮವೊ
ದುರ್ಮಾಯ ಯುಕ್ತಿಯಿಂದ ಚರಿಸುವ (ವರ) ಜನರ ಮೈಯ
ಚರ್ಮವ ಸುಲಿಸದೆ ಬಿಡನೊ ಪುರಂದರವಿಠಲ.

೧೪೧

ಉಗಾಭೋಗ

ಮುಟ್ಟದಿರಚ್ಚುತಗರ್ಪಿತವಲ್ಲದುದನು ಕಂ–
ಗೆಟ್ಟು ಸ್ತುತಿಸಬೇಡ ಹರಿಯಲ್ಲದನ್ಯತ್ರ
ಕಷ್ಟ ಬೇಡ ಭೂಸುರರೊಳಗೆ ನೀನು
ಕೊಟ್ಟ ಭಾಷೆ ತಪ್ಪಲು ಬೇಡ ಆರಿಗಾದರಾಗಲಿ
ಶ್ರೀಪುರಂದರವಿಠಲನಂಘ್ರಿ ನೆನೆಯದೆ ಬಿಟ್ಟರಬೇಡ.

೧೪೨

ಉಗಾಭೋಗ

ಕೆರೆಯ ನೀರನು ಕೆರೆಗೆ ಚೆಲ್ಲಿ
ವರವ ಪಡೆದವರಂತೆ ಕಾಣಿರೊ
ಹರಿಯ ಕರುಣದಲಾದ ಭಾಗ್ಯವ
ಹರಿ ಸಮರ್ಪಣೆ ಮಾಡಿರೊ
ಸಿರಿಪುರಂದರವಿಠಲರಾಯನ
ಚರಣಕಮಲವ ನಂಬಿ ಬದುಕಿರೊ.

೧೪೩

ಉಗಾಭೋಗ

ಎಲ್ಲಾ ಒಂದೇ ಎಂಬುವರ ಎರಡು ದಾಡಿಯಲಿದ್ದ
ಹಲ್ಲುದುರೆ ಬಡಿಯಬೇಕು ಹರಿಭಕ್ತರಾದವರು
ಸಲ್ಲದು ಸಲ್ಲದು ಈ ಮಾತು ಇದಕೆ ಸಂಶಯಬೇಡ
ಕಲ್ಲು (ಕಲ್ಲ) ನಾರಿಯ ಮಾಡಿದ ಪುರಂದರವಿಠಲನ ।
ಪಲ್ಲವಾಂಘ್ರಿಯ ನೆನೆದು ಪರಗತಿಯ ಪಡೆಯಿರೊ.

೧೪೪

ಉಗಾಭೋಗ

ಹೊಲೆಯ ಬಂದಾನೆಂದು ಒಳಗೆ ದೇವರಮಾಡಿ
ಗಣ ಗಣ ಗಂಟೆಯ ಬಾರಿಸುವದೇತಕಯ್ಯ
ತನುವಿನ ಕೋಪ ಹೊಲೆಯಲ್ಲವೆ?
ಹೊರಗಿದ್ದ ಹೊಲೆಯನ ಒಳಗೆ ಬಚ್ಚಿಟ್ಟುಕೊಂಡು
ಇದಕೇನು ಮದ್ದು ಶ್ರೀಪುರಂದರವಿಠಲ.

೧೪೫

ಉಗಾಭೋಗ

ನಾರದಮುನಿ ನಮ್ಮ ನೆನೆವನಲ್ಲದೆ
ನಾಡುಗಳೆಷ್ಟು ಕೊಟ್ಟನು ಹೇಳಯ್ಯ?
ಪ್ರಹ್ಲಾದನು ನಿನಗೆ ಏನು ಕೊಟ್ಟನು ಸ್ವಾಮಿ?
ನಾನೇನು ಕೊಡದೆ ಹೋದೆನು ಹೇಳಯ್ಯ?
ಅಂದಿನವರಿಗೆ ನೀನು ಏನಾದರೂ ಕೊಟ್ಟದ್ದು
ಇಂದೇನು ದೊರಕದೆ ಹೋಯಿತೆ ?
ಅಂದು ನೀ ಸಿರಿವಂತನೆ–ಇಂದು ನೀ ಬಡವನೆ?
ಇದು ಏನು ವಿಚಿತ್ರ ಪುರಂದರವಿಠಲ!

೧೪೬

ಉಗಾಭೋಗ

ಕಾವ ದೈವವು ನೀನೆ ಕೊಲುವ ದೈವವು ನೀನೆ
ಕೈವಲ್ಯ ಫಲದಾತ ಕೇಶವನು ನೀನೆ
ಆವ ದೈವಕ್ಕೂ ಈ ವೈಭವವನ್ನು ಕಾಣೆ
ರಾವಣಾಂತಕ ಸ್ವಾಮಿ ಪುರಂದರವಿಠಲ.

೧೪೭

ಉಗಾಭೋಗ

ಕಾವ ದೈವವು ನೀನೆ ಕೈಮಗಿವೆನು ನಾನು
ಕೈವಲ್ಯಫಲದಾತ ಕೇಶವನೆ ರಘುನಾಥ
ಯಾವ ದೈವಕಿನ್ನು ಈ ವೈಭವಗಳ ಕಾಣೆ
ರಾವಣಾಂತಕ ಶ್ರೀ ಪುರಂದರವಿಠಲ.

ಕೃಷ್ಣಲೀಲೆ

೧೪೮

ಸುಳಾದಿ

ಬಾಲಲೀಲಾಸುಳಾದಿ

ಧ್ರುವತಾಳ

ಎಲೆ ಎಲೆ ಸಿಡಿಲೆ ಮಿಂಚೆ ಗರ್ಜಿಸದಿರಿ ನೀವು ।
ಎಲೆ ಎಲೆ ಮೇಘರಾಜಾ, ಮಳೆಗರೆಯದಿರು ।
ಎಲೆ ಎಲೆ ಭೂದೇವಿ, ನವರತುನಗಳಿಂದ ।
ನೆಲೆ ಕಟ್ಟಿ ಕಟ್ಟಿಕೊಂಡು ಥಳಥಳಿಸುತಲಿರು ।
ಹುಲಿಯುಗುರ ಅರಳೆಲೆ ಮಾಗಾಯಿ ಕಂಕಣ ।
ಘಲು ಘಲು ಘಲುಕೆಂಬ ಕಾಲಪೆಂಡೆಯನಿಟ್ಟು ।
ಬಲರಾಮ ಪುರಂದರವಿಠಲ ಗೋಪಾಲಕೃಷ್ಣ ।
ನಲಿಯುತ ಅಂಬೆಗಾಲನಿಕ್ಕುತ ಬರುತಾರೆ ೧

ಮಟ್ಟತಾಳ

ಮಲ್ಲಿಗೆ ಮೊಗ್ಗೆಗಳಂತೆ ಹಲ್ಲು ಬಂದಿವೆ ಸಿರಿಕೃಷ್ಣಯ್ಯಗೆ ।
ಎಲ್ಲಿ ಎಲ್ಲಿ ಬಾಯ ತೆರೆಯೊ ಎನೆ ।
ಎಲ್ಲ ಬೊಮ್ಮಾಂಡವ ಕಂಡೆ ।
ಎಲ್ಲರಂಥ ಕಂದನಲ್ಲಿವ ।
ಬಲ್ಲವರಿಗೆ ಪುರಂದರವಿಠಲನು ।
ಜಗದ ಪಾಲಕನು,,,,,,,,ಹಲ್ಲು ಬಂದಿವೆ ೨

ತ್ರಿವಿಡೆತಾಳ

ಬೆಣ್ಣೆಯ ಬಟ್ಟಲವ ತೊಡಿಯಮೇಲಿಟ್ಟುಕೊಂಡು ।
ಅಣ್ಣ ಬಲರಾಮನ ಕೂಡಿಕೊಂಡು ।
ಚೆನ್ನಾಗಿ ಡೊಗ್ಗಾಲೂರಿ ಮೆಲ್ಲುವ ಕೃಷ್ಣ ।

ಕಣ್ಣು ಬಿಡುವನೇನೆ ಕೇಳೆ ಗೋಪಿದೇವಿ ।
ಸಣ್ಣವನೇನೆ ಪುರಂದುವಿಠಲ ೩

ಆದಿತಾಳ

ಇದೆ ಇದೆ ಕೈಬೆಣ್ಣೆ, ಇದೊ ಅಂಗೈ ಸಿಕ್ಕಿತು ।
ಇದೆ ಇದೆ ಕಟಬಾಯಿ ಇದೇ ಸುರಿಯು ಬೆಣ್ಣೆ ।
ಇದೆ ಇದೆ ಗೋಪೀದೇವಿ ನಿನ್ನ ಮಗನು ಕಳ್ಳ ।
ಇದೆ ಇದೆ ಹಿಡಿದು ತಂದೆವು ನೋಡೇ ।
ಹದುಳದಿಂದಿಡೆ ಲೇಸು ಇಲ್ಲದಿದ್ದರೆ ನಿನ್ನ ।
ತದುಕಿ ಬಿಡುವೆನಯ್ಯ ಪುರಂದರವಿಠಲ ೪

ರೂಪಕತಾಳ

ನೀಲಮೇಘಶ್ಯಾಮ ಕೋಮಲನೆ ।
ಹಾಲು ಕುಡಿಯ ಬಾರೊ ಹಸಿದೆಯಾ ರಂಗಯ್ಯ ।
ಹಾಲು ಮೊಸರು ಬೆಣ್ಣೆ ಹಾವಳಿಗಾರೆನೊ ।
ಶ್ರೀಲೋಲಪುರಂದರ ಗೋಪಲಕೃಷ್ಣ ೫

ಜತೆ

ಅನುದಿನ ಬಾಲಗೋಪಾಲಕೃಷ್ಣನೇ ನಿನ್ನ ।
ನೆನೆವಂತೆ ಮಾಡೆನ್ನ ಪುರಂದರವಿಠಲ ॥

೧೪೯

ಬಾಲಲೀಲಾಸುಳಾದಿ

ಧ್ರುವತಾಳ

ಎಲೆ ಎಲೆ ಸಿಡಿಲು ಮಿಂಚೆ ಗರ್ಜಿಸದಿರಿ ನೀವು
ಎಲೆ ಎಲೆ ಮೇಘರಾಜ ಮಳೆಗರೆಯದಿರು ।
ಎಲೆ ಎಲೆ ಭೂದೇವಿ ನವರತುನಗಳಿಂದ ।
ನೆಲೆ ಕಟ್ಟಿ ಕಟ್ಟಿಕೊಂಡು ಥಳಿಥಳಿಸುತಲಿರು ।

ಹುಲಿಯುಗುರು ಅರಳೆಲೆ ಮಾಗಾಯಿ ಕಂಕಣ ।
ಘಲು ಘಲು ಘುಲುಕೆಂಬೊ ಕಾಲಪೆಂಡೆಯನಿಟ್ಟು ।
ಬಲರಾಮ ಪುರಂದರವಿಠಲ ಗೋಪಾಲಕೃಷ್ಣ ।
ನಲಿಯುತ ಅಂಬೆಗಾಲನಿಕ್ಕಿ ಬರುತಾರೆ ೧

ಮಟ್ಟತಾಳ

ಬೆಣ್ಣೆ ಬಲದೊಡೆಯ ಮೇಲಿಟ್ಟುಕೊಂಡು ।
ಅಣ್ಣ ಬಲರಾಮನ ಕೂಡಿಕೊಂಡು ।
ಚಿನ್ನಾಗಿ ಡೊಗ್ಗಾಲೂರಿ ಮೆಲುವ ಕೃಷ್ಣ ।
ಅಣ್ಣನ ಒಡಗೂಡಿ ಬರುತಾನೆ ಹಸುಮಗನಂತೆ ।
ನಿನ್ನ ಮಗನೆ ಇವನು ಕೇಳಲೆ ಗೋಪಿದೇವಿ ।
ಸಣ್ಣವನಿವನೇನೆ ಕಣ್ಣು ಬಿಡುವನೆ ಪುರಂದರವಿಠಲ ೨

ತ್ರಿವಿಡೆ

ಇದೆ ಇದೆ ಕೈ ಬೆಣ್ಣೆ ಇದೆ ಅಂಗ ಸಿಲುಕಿತ್ತು ।
ಇದೆ ಇದೆ ಕಟಬಾಯಿಯಿಕ್ಕಿ ಸುರವ ಬೆಣ್ಣೆ ।
ಇದೆ ಇದೆ ಗೋಪಿದೇವಿ ನಿನ್ನ ಮಗ ಕಳ್ಳನೇ ।
ಇದೆ ಇದೆ ಹಿಡಿದು ತಂದೆವು ನೋಡೆ ನೋಡೆ ।
ಹದುಳದಿಂದಿಡೆ ಲೇಸು ಇಲ್ಲದಿದ್ದರೆ ನಿನ್ನ ।
ತದುವೆ ತದುವೆನಯ್ಯ ಪುರಂದರವಿಠಲ ೩

ಆದಿತಾಳ

ನೀಲ ಮೇಘಶ್ಯಾಮ ಕೋಮಲನೆ ।
ಹಾಲು ಕುಡಿಯಲು ಬಾರೊ ಹಸಿದೆಯೋ ರಂಗಯ್ಯ ।
ಹಾಲು ಮೊಸರು ಬೆಣ್ಣೆ ಹಾವಳಿಗಾರನೋ ಶ್ರೀ ।
ಲೋಲ ಪುರಂದರವಿಠಲ ಗೋಪಾಲಕೃಷ್ಣ ೪

ಅಟ್ಟತಾಳ

ಮಲ್ಲಿಗೆ ಮೊಗ್ಗುಗಳಂತೆ ।
ಹಲ್ಲು ಬಂದಿದೆ ರಂಗಯ್ಯಗೆ ।

ಹಲ್ಲು ಬಂದಿದೆ ಕೃಷ್ಣಯ್ಯಗೆ ।
ಎಲ್ಲೋ ಎಲ್ಲೋ ಬಾಯಿದೆರೆಯೆನೆ ।
ಎಲ್ಲ ಬೊಮ್ಮಾಂಡಗಳನೆ ತೋರಿದ ।
ಎಲ್ಲರಂತೆ ಕಂದನಲ್ಲಿವ ।
ಬಲ್ಲವರಿಗೆ ಪುರಂದರವಿಠಲನು ೫

ಜತೆ

ಅನವರತ ಭಕುತಯಲಿ ನಿನ್ನ ಬಾಲಲೀಲೆ ।
ನೆನೆವಂತೆ ಮಾಡೊ ಶ್ರೀಪುರಂದರವಿಠಲ ॥

೧೫೦

ಉಗಾಭೋಗ

ಕಾಲ ಮೇಲೆ ಮಲಗಿ ಸಿಂಪಿಯಲಿ ಹಾಲ ಕುಡಿದು ಬೆಳೆದ
ಮೂರುಲೋಕ ನಿನ್ನುದರದಲ್ಲಿರಲು
ಈರೇಳು ಲೋಕವ ನೀರಡಿ ಮಾಡಲು
ಮೂರು ಲೋಕದೊಡೆಯ ಶ್ರೀಪುರಂದರವಿಠಲ
ನಿನ್ನ ಬಾಲಕತನದ ಲೀಲೆಗೆ ನಮೋ ನಮೋ.

೧೫೧

ಸುಳಾದಿ

ಗೋಪಾಲಕೃಷ್ಣಸುಳಾದಿ

ಧ್ರುವತಾಳ

ಹೊಡೆಮರಳ ಕಲಿತ ಶ್ರೀಕೃಷ್ಣ ನಾಗರ ।
ಹೆಡೆಯಂತೆ ತಲೆಯೆತ್ತಲು ಕಲಿತ ಕೃಷ್ಣ ।
ನುಡಿಯ ಕಲಿತ ಉಗ್ಗು ಉಗ್ಗು ಎಂದು ಕೃಷ್ಣ ।
ಉಡಿಗಂಟೆ ಹುಲಿಯುಗುರರಳೆಲೆ ಮಾಗಾಯಿ ।

ಕಡಗ-ಕಂಕಣದಿಂದ ಮುದ್ದು ಮೆರೆವ ಕೃಷ್ಣ ।
ಮಡದಿಯರೆತ್ತಿ ಮುದ್ದಾಡಿಸಲವರ ಓ-।
ರುಡೆಯ ಮೇಲೆದ್ದು ಕುಣಿವನು ಕೃಷ್ಣ ।
ಹಿಡಿ ಹೊನ್ನು ಗುಬ್ಬಿ ತಾ ಹೊನ್ನ ಗುಬ್ಬಿಯ ನಾಡಿ ।
ಜಡಿದು ಚಪ್ಪಾಳೆಯಿಕ್ಕುವನು ಕೃಷ್ಣ ।
ಮೃಡಮುಖ್ಯ ಸುರರು ಅಂಬರದಲಿ ನೋಡಿ ನೋಡಿ ।
ಕಡುವೊಪ್ಪಿ ತುತಿಸಿ ಹಾರೈಸುತಿರೆ ।
ಕಡೆಗಣ್ಣಿನಿಂದವರ ನೋಡಿ ನಲಿವ ನಮ್ಮ ।
ಒಡನಾಡಿ ಪುರಂದರವಿಠಲ ಗೋಪಾಲಕೃಷ್ಣ ೧

ಮಟ್ಟತಾಳ

ಗಂಡಸ್ಥಳದಲ್ಲಿ ಮಣಿಯ ಕೆಚ್ಚಿದ ಮಕರ- ।
ಕುಂಡಲಗಳು ತೂಗೆ ಪ್ರತಿ ಬಿಂಬಿಸುತಿರಲು ।
ಪುಂಡರೀಕಾಕ್ಷನ ಉತ್ತಮಾಂಗದಲ್ಲಿ ರವಿ- ।
ಮಂಡಲಗಳ ಪ್ರಭೆಯ ಮಸಳಿಸುತಿರೆ ಮುಕುಟ ।
ಹಿಂಡು ಗೋಪಿಯರೊಡನೆ ಆಟವನಾಡುವ ಉ- ।
ದ್ದಂಡ ಬಾಲಕ ಪುರಂದರವಿಠಲ ಗೋಪಾಲಕೃಷ್ಣ ೨

ರೂಪಕತಾಳ

ಕನ್ನಡಿಯಂತೆ ಕೋರೈಸುತಿಹ ।
ರನ್ನದಾಕರದ ರಾಜಾಂಗಣದಲ್ಲಿ ।
ಘನ್ನ ಮಹಿಮ ಅಂಬೆಗಾಲಿಕ್ಕುತ ಬರುತ ।
ತನ್ನ ರೂಹನು ಕಂಡು ಸನ್ನೆ ಮಾಡುವ ನಗುವ
ಚೆನ್ನವಾಡಲು ನಗುತ ಜೋಯೆಂದಮ್ಮ ।
ಚಿನ್ನಾಟವಾಡುವ ಹೋಯೆಂದು ಪಾಡುವ ।
ಎನ್ನ ಮುದ್ದು ಪುರಂದರವಿಠಲರಾಯ ।
ಚೆನ್ನಿಗ ಚೆಲುವ ಗೋಪಾಲಕೃಷ್ಣ ೩

ಝಂಪೆತಾಳ

ಅಂಬೆಗಾಲಿಕ್ಕುತಲಿ ಬಂದ ಗೋವಿಂಧ ।
ತುಂಬಿಗುರುಳರಳೆಲೆಯ ನೊಸಲಲೊಲೊಯುತ ।
ರಂಭೆ ಗೋಪಿಯಿದ್ದೆಡೆಗೆ ಬಂದು ।
ಉಂಬೆನಾನಮ್ಮೆಯನು ಎನುತಚ್ಯುತ।
ತುಂಬಿದೊಳಗಣ್ಣ ಜಗಂಗಳ ಹೊಟ್ಟೆಯ ।
ತುಂಬುವನ ತಾತ ನಗುತ ನಲಿಯುತ ।
ನಂಬಿದವರ ಪೊರೆವ ಭಕುತರ ಕು ।
ಟುಂಬ ಪುರಂದರವಿಠಲ ಗೋಪಾಲಕೃಷ್ಣ ೪

ತ್ರಿವಿಡೆತಾಳ

ಬಲಗೈಯಿಂದಲಿ ತೆಗೆದು ಎಡಗೈ ಬೆಣ್ಣೆ ಮುದ್ದೆಯ ।
ಮೆಲುವ ಕೃಷ್ಣ ಗೆಳೆಯ ಗೋಪಾಲರಿಗೆಲ್ಲ ।
ಮೆಲಿಸುತ್ತ ಬಲಭದ್ರ ರಾಮಗೆ ಸಮೀಪದೊಳಿರುತ ।
ಇಳೆಯಯ್ಯನಯ್ಯ ಬಾಲಕನಾದ ಪುರಂದರವಿಠಲ ಗೋಪಾಲಕೃಷ್ಣ ೫

ಅಟತಾಳ

ವಟಪತ್ರದೊಳಡಗಿದ್ದು ಪ್ರಳಯದಲ್ಲಿ ।
ಪುಟ್ಟ ಪುಟ್ಟ ಕೈಯಲಿ ಪುಟ್ಟ ಪುಟ್ಟ ಪಾದ ದುಂ- ।
ಗುಟವ ಪಿಡಿದು ಪೀರುವ ಶಿಶುವೀತನು ।
ಪುಟ್ಟ ಪುಟ್ಟ ಸೃಷ್ಟೀಶ ಪುರಂದರವಿಠಲ ಗೋಪಾಲಕೃಷ್ಣ ೬

ಏಕತಾಳ

ಮಂದಗಿರಿಯ ಕಡೆದ ತೋಳೊ-ಕೃಷ್ಣ ।
ಸಿಂಧುವನಂಬಿನ ಮನೆಗೆ ತಂದ ತೋಳೊ-ಕೃಷ್ಣ ।
ಬಂದಿ ಬಾಹು ಬಳೆಯನಿಟ್ಟ ತೋಳೊ-ಕೃಷ್ಣ ।
ಇಂದ್ರಾದಿಗಳಾಶ್ರಯಿಸುವ ತೋಳೊ-ಕೃಷ್ಣ ।
ಚಂದನ ಕುಂಕುಮ ಕಸ್ತೂರಿ ಇಟ್ಟ ತೋಳೊ-ಕೃಷ್ಣ ।

ಇಂದಿರಾದೇವಿಯನಪ್ಪುವ ತೋಳು ತೋಳು ತೋಳು ।
ಕಂದ ಹರಿ ತೋಳನ್ನಾಡೈ ಇಂ- ।
ತೆಂದು ಗೋಪೀದೇವಿ ತೋಳನ್ನಾಡಿಸೆ ಪು- ।
ರಂದರವಿಠಲ ಗೋಪಾಲಕೃಷ್ಣ ಆಡಿದ ೭

ಜತೆ

ಬಾಲಕ ಲೀಲಾಲೋಲ ಗೋಪಾಲನು ।
ಮೂಲ ಪುರಂದರವಿಠಲ ಗೋಪಾಲಕೃಷ್ಣ ॥

೧೫೨

ಸುಳಾದಿ

ಗೋಪಾಲಕೃಷ್ಣಸುಳಾದಿ

ಧ್ರುವತಾಳ

ಹೊಡೆಮರಳಲು ಕಲಿತ ಶ್ರೀಕೃಷ್ಣನಾಗರ ।
ಹೆಡೆಯಂತೆ ತಲೆಯೆತ್ತಲು ಕಲಿತ ಕೃಷ್ಣ ।
ಕಡು ಮುದ್ದು ಸುರಿವಂತೆ ನಗಲು ಕಲಿತ ಕೃಷ್ಣ
ನುಡಿಯಲು ಕಲಿತ ಉಗ್ಗು ಉಗ್ಗು ಎಂದು ಕೃಷ್ಣ ।
ಉಡಿಘಂಟೆ ಹುಲಿಯುಗರಳೆಲೆ ಮಾಗಾಯಿ ।
ಕೊರಳ ಪದಕ ಮುದ್ರೆ ಮೆರೆವ ಕೃಷ್ಣ ।
ಕಡಗ ಕಂಕಣದಿಂದ ಮೆರೆವ ಕೃಷ್ಣ ।
ಮಡದಿಯರೆತ್ತಿ ಮುದ್ದಾಡಿಸಲವರ ಓ ।
ರುಡಿಯ ಮೇಲೆದ್ದು ಕುಣಿವನು ಕೃಷ್ಣ ।
ಹಿಡಿಹೊನ್ನು ತಾ ಹೊನ್ನು ಗುಬ್ಬಿಯಂದದಿ ಹೆ- ।
ಜ್ಜೆ ಹಿಡಿದು ಚಪ್ಪಳೆಯಿಕ್ಕುವನು ಕೃಷ್ಣ ।
ಮೃಡ ಮುಖ್ಯ ಸುರರು ಅಂಬರದಲಿ ನೋಡಿ ನೋಡಿ ।
ಕಡುವೊಪ್ಪಿ ತುತಿಸಿ ಹಾರೈಸುತಿರೆ

ಕಡೆಗಣ್ಣಿನಿಂದ ಅವರನು ನೋಡಿ ನಲಿವ ನಮ್ಮ ।
ಒಡನಾಡುವ ಪುರಂದರವಿಠಲ ಗೋಪಾಲಕೃಷ್ಣ ೧

ಮಟ್ಟತಾಳ

ಗಂಡಸ್ಥಳದಲ್ಲಿ ಮಣಿಮುಕುಟ ಮುತ್ತಿನ ಮಕರ ।
ಕುಂಡಲಗಳ ಪ್ರಭೆಯು ಪ್ರತಿಫಲಿಸುತ ತೂಗಿ ।
ಪುಂಡರಿಕಾಕ್ಷನ ಉತ್ತಮಾಂಗದ ರವಿ ।
ಮಂಡಲಗಳ ಪ್ರಭೆ ಮಸುಳಿಸುತಿರೆ ಮುಕುಟ ।
ಹಿಂಡು ಗೋಪಿಯರೊಡನೆ ಆಟವನಾಡುವ ಉ ।
ದ್ದಂಡ ಬಾಲಕ ಪುರಂದರವಿಠಲ ಗೋಪಾಲಕೃಷ್ಣ ೨

ರೂಪಕತಾಳ

ಕನ್ನಡಿಯಂತೆ ಕೋರೈಸುತಿಹ ।
ರನ್ನದಾಕಾರ ರಾಜಾಂಗಣದಲ್ಲಿ ।
ಘನ್ನ ಮಹಿಮ ಅಂಬೆಗಾಲನಿಕ್ಕುತ ಬರುವ ।
ತನ್ನರೂಹವ ಕಂಡು ಸನ್ನೆ ।
ಮಾಡುವ ಮತ್ತೆ ನಗುವ ।
ಚೆನ್ನವಾಡಲು ನಗತ ಜೋ ಎಂದಮ್ಮ ।
ಚೆನ್ನಾಟನಾಡುವ ಹೋಯೆಂದು ಪಾಡುವ ।
ಎನ್ನ ಮುದ್ದು ಪುರಂದರವಿಠಲರೇಯಾ
ಚೆನ್ನಿಗ ಚೆಲುವ ಗೋಪಾಲಕೃಸ್ಣ ೩

ಝಂಪೆತಾಳ

ಅಂಬೆಗಾಲಿಕ್ಕುತಲಿ ಬಂದ ಗೋವಿಂದ ।
ದುಂಬಿಗುರುಳರಳೆಲೆಯ ನೊಸಲೊಲಿವುತ ।
ಉಂಬೆ ಇನ್ನೊಮ್ಮೆ ಎಂದೆನುತಚ್ಯುತ ।
ತುಂಬಿದೊಳಗಿನ ಜಗಂಗಳುವೊಲಿವುತ ।
ನಕ್ಕರೆ ನಗುವ ನಂಬಿದವರ ಪೊರೆವ ।
ಭಕ್ತ ಕುಟುಂಬಿ ಪುರಂದರವಿಠಲ ಗೋಪಲಕೃಷ್ಣ ೪

ತ್ರಿವಿಡೆತಾಳ

ಬಲಗೈಯಿಂದಲಿ ತೆಗೆದು ಎಡಗೈ ಬೆಣ್ಣೆ ಮುದ್ದೆಯ ।
ಮೆಲುವ ಕೃಷ್ಣ ಗೆಳೆಯ ಗೋವಳಿರಿಗೆಲ್ಲ ।
ಮೆಲಿಸುತ್ತ ಬಲಭದ್ರರಾಮಗೆ ಸವಿದೋರುತ್ತ ।
ಜಗದಯ್ಯ ಪುರಂದರವಿಠಲ ಗೋಪಲಕೃಷ್ಣ ೫

ಅಟ್ಟತಾಳ

ವಟ ಪತ್ರದಲ್ಲೊರಗಿ ಪ್ರಳಯದಲ್ಲಿ ।
ಪುಟ್ಟ ಪುಟ್ಟ ಕೈಯಲಿ ಪುಟ್ಟ ಪುಟ್ಟ ಪಾದ ಅಂ– ।
ಗುಟ ಚಪ್ಪರಿಸುತ ಆಡುವ ಶಿಶುವೀತನ ।
ಸೃಷ್ಟೀಶ ಪುರಂದರವಿಠಲ ಗೋಪಾಲಕೃಷ್ಣ ೬

ಆದಿತಾಳ

ಮಂದರಗಿರಿಯನೆತ್ತಿದ ತೋಳನ್ನಾಡೈ ತೋಳು ತೋಳು ಕೃಷ್ಣ ।
ಕೃಷ್ಣ ಸಿಂಧುವಿನಂಬಿನ ಮನೆಗೆ ತಂದ ತೋಳು ಕೃಷ್ಣ ।
ಬಂದಿಬಾಹು ಬಳೆಯನಿಟ್ಟ ತೋಳು ತೋಳು ತೋಳು ಕೃಷ್ಣ ।
ಚಂದನ ಕುಂಕುಮ ಗಂಧವನಿಟ್ಟ ತೋಳು ಕೃಷ್ಣ ।
ಇಂದಿರೆ ದೇವಿಯನಪ್ಪುವ ತೋಳು ತೋಳು ಕೃಷ್ಣ ಇ– ।
ತ್ತೆಂದು ಮಗನ್ನ ತೋಳನಾಡಿಸೆ ।
ಪುರಂದರವಿಠಲ ನೀ ತೋಳನ್ನಾಡೈ ೭

ಜೊತೆ

ಬಾಲಕ ರೂಪಗೆ ಮೂಲ ರೂಪ ।
ಮೂಲ ರೂಪವೆ ಬಾಲ ಪುರಂದರವಿಠಲ ॥

ಜತೆ

ನಿನ್ನನೆ ನಂಬಿದೆ ಮನ್ನಿಸಯ್ಯ ।
ಪುರಂದರವಿಠಲರಾಯ ನಿನ್ನನೆ ನಂಬಿದೆ ॥

೧೫೪

ಉಗಾಭೋಗ

ಸಿಕ್ಕಿದಿಯೆಲೊ ಸಿರಿಕೃಷ್ಣ
ಸಿಕ್ಕಿದಿಯೆಲೊ ನೀ ಕಳರ ಗುರುವೆ
ಸಿಕ್ಕಿದಿಯೆಲೊ ಸಿರಿ ಕೃಷ್ಣ ।
ತಕ್ಕೆಯೊಳಪ್ಪದೆ ಬಿಡೆ ಪುಂದರವಿಠಲಯ್ಯ.

೧೫೫

ಗೋಪಿಗೀತ ಸುಳಾದಿ

ಧ್ರುವತಾಳ

ಹಸುಗಳ ಕರೆವ ಧ್ವನಿ ಕರುಗಳ ಪಿಡಿದು ಬಿಡುವ ಧ್ವನಿ ।
ರಶನೆ–ಕಂಕಣಗಳನಿಟ್ಟ ಯಶೋದೆ ಮೊಸರ ಕಡೆವ ಧ್ವನಿ ।
ಪಯೋಬ್ಧಿಶಯನನ [ಒಸೆದು] ಪಾಡುವ ಧ್ವನಿ ।
ಸೆಳೆಮಂಚದ ಮೇಲೆ ಯೋಗನಿದ್ರೆಯೊಳಿಪ್ಪ ।
ಕುಸುಮಾಕ್ಷನು ಉಪ್ಪವಡಿಸಲು ಮೈಮುರಿದೆದ್ದು ।
ಬಂದು ಗೋಪಿಯ ನಿರಿಯ ಪಿಡಿದುಕೊಂಡು ।
ಮೊಲೆಯ ಕೊಡು ಹಸಿದೆನೆಂದೆಂಬ ಹರಿಯನೆತ್ತಿಕೊಂಡು ।
ತೊಡೆಯ ಮೇಲಿಟ್ಟು ಹನಿವ ಮೊಲೆಯೂಡಲು ।
ಆಡುವ ಕೃಷ್ಣರಾಯ ಬಿಡದೆ ಭಕುತಜನರ ಸಲಹುವ ।
ಸುಕುಮಾರಕ ಪುರಂದರವಿಠಲ ೧

ಅಟ್ಟತಾಳ

ಪೊಂಬಣ್ಣ ದಂಬರವನುಟ್ಟು ಕಂಬಳಿಯ ಹೊದ್ದಿರೆ ।
ಅಂಬುಜ ಸಂಭವ ಆಗಮ ಉಚ್ಚರಿಸೆ ।
ಕೊಂಬು-ಕೊಳಲು ತುತ್ತೂರಿಗಳು ಊದುತಿರೆ ।
ಅಂಬುಜ ಸಂಭವ ಎಂಬವನರಿಯೆ ನೀನು ।
ಪುರಂದರವಿಠಲ ೨

ಅಟತಾಳ

ಕೋಗಿಲೆಯಂತೆ ಕೂಗುವೆಯೊಮ್ಮೆ ।
ಗಿಳಿಯಂತೆ ಮಾತನಾಡುವೆಯೊಮ್ಮೆ ।
ತುಂಬಿಯಂತೆ (ನಲಿದು), ಪಾಡುವೆಯೊಮ್ಮೆ ।
ನವಿಲಿನಂತೆ ನಲಿದಾಡುವೆಯೊಮ್ಮೆ ।
ಒಮ್ಮೆ ಕೊಕ್ಕರನಂತೆ ಕೊಕ್ಕಿ ಒಮ್ಮೆ ಗೂಳಿಯಂತೆ ಗುಟುರಿ ।
ಒಮ್ಮೆ ಗೋವಳನಂತೆ ಗೋಲಿಯಾಡುವೆ ।
ಆವ ಲೀಲೆಯೊ ಪುರಂದರವಿಠಲ ೩

ರೂಪಕತಾಳ

ಕಂಡೆವು ನಿನ್ನನೆಲೆ ಕೃಷ್ಣ ಮೊಸರ-ಬಿಸಳಿಗೆ ।
ಬೆಣ್ಣೆಯ ಗುಂಡಿಗೆವೆರಸಿ ಒಲುಮೆಯಿಂದ ।
ಕುಶಲವಾಡಿ ಮೀಸಲಳಿವೆ ಕಾಂಬಕಾಂಬವರಿಗೆ ಬೀರುವೆ ।
ಅಂಜುವೆವೆ ಪಾಂಡುರಂಗ ಪುರಂದರವಿಠಲ ।
ದೇವತೆಗಳ ಮಾನಿ ೪

ಝುಂಪೆತಾಳ

ವಿತ್ತದಹಂಕಾರ-ಮಮಕಾರ (ಗಳಿಂದ) ದಿಂದ ।
ಸುತ್ತಿಸುತ್ತಿ ಸುಣ್ಣವಾರೆ ಕಂಡು ।
ಇತ್ತ ಬಾ ಇತ್ತ ಬಾ ಎಂದು ।
ಉತ್ತರಿಸುವೆ ಸಂಸಾರ ಸಾಗರವ ।

ಭೃತ್ಯನಪ್ಪೆ ಪುರಂದರವಿಠಲ ।
ಇತ್ತ ಬಾ

ಆದಿತಾಳ

ಆವ ತೀರಥದಲಿ ಮುಳುಗಿದೆನೊ ನಾ– ।
ನಾವ ಕ್ಷೇತುರಗಳ ಮೆಟ್ಟಿದೆನೊ ನಾ–।
ನಾವ ಕ್ರತುವ ನೆರೆ ಮಾಡಿದೆನೊ ನಾ–।
ನಾವ ದೇವತೆಗಳ ಭಜಿಸಿದೆನೊ ।
ದೇವ ಪುರಂದರವಿಠಲನ ।
ಪಾವನ ಮೂರ್ತಿಯ ಕಂಡೆ ನಾನು ೬

ಏಕತಾಳ

ಉಪಾಧಿಯಿಂದ ನಿನ್ನ ಭಜಿಸುವೆ ನಿ–।
ರುಪಾಧಿ ನೀನು ಶಿವನ ನಾನರಿಯದ ಕಾರಣ ।
ಅಪಾರಮಹಿಮನೆ ಉಪಾಧಿಯಳಿದು ನಿ–।
ರುಪಾಧಿಸೆ ಶಿವನ ಭಜಿಪಂತೆ ಮಾಡಯ್ಯ ।
ಅಪವರ್ಗವಿಪದನೀಯೆ ಜಗದೇಕಪಾಲ
ಪುರಂದರವಿಠಲರಾಯ ೭

ಜತೆ

ಎನ್ನ ತನುಮನ ಧನವಿಂದು ಪಾವನವೈಯ (ಸಾರ್ಥಕವಯ್ಯಾ) ।
ನಿನ್ನ ಸಾರಿದೆ ಪುರಂದರವಿಠಲ ॥

೧೫೬

ಉಗಾಭೋಗ

ಕಾಳಿಂದಿಯ ಮಡುವಿನಲಿ ಧಮುಕಿ
ಕಾಳಿಂಗನ ಫಣಿ ಫೂತ್ಕಾರ ಮೇಲುಸುರದನ್ನ
ಭಾಮೆಯೆಳಸಿರಲು ತೋಂಧಿಗಿಧಿಗಿ ಧಾಂಧಾಂಮಿ–

ಗೊಳಿಸಿ ಅಜ ಮೃದಂಗವ ತಟ್ಟೆ ಇಂದುಧರ
ತಾಳ ಪಿಡಿದು ಘಟ್ಟಿಸಲು ತಥಂತನನವೆಂದು
ಸ್ವರವೆತ್ತಿ ನಾರದ ಪಾಡಲು ಕುಣಿ, ಎದೆಯಲ್ಲಿ ಕೃಷ್ಣ
ಎಂದವಗೆ ವರವಿತ್ತು ಮನ್ನಿಸಿ ಪೂಜೆಗೊಂಡು
ಗೋವಿಂದ ಗೋಪಾಲಕರನೊಲಿಸಿ
ಗೋವಳರಂಕದರ್ಪ ಕೇಳಿ ನಂದ ಗೋಪಿಯರಿ-
ಗಾನಂದ ಅಭಿನವ ಈತ ಪುರಂದರವಿಠಲ.

೧೫೭

ಸುಳಾದಿ

ಉಡುಪಿ ಕೃಷ್ಣ ಸುಳಾದಿ

ಧ್ರುವತಾಳ

ಅಂಗುಟ ಮಾತುರವೆಂಬ ಮೂರುತಿ ಪರೀಕ್ಷಿಸಿತು ।
ಕಂಡು ಕಂಡರಸಿಕೊಂಬ ಕಮನೀಯ ಮೂರುತಿಯು ।
ಆತುಮ ಮೂರುತಿ ಅಂತರಾತುಮ ಮೂರುತಿಯು ।
ಬಿಂಬ ಮೂರುತಿ ಜೀವದಾಕಾರ ಮೂರುತಿಯು ।
ಅಣುರೇಣುವೆಂಬ ಚಿನ್ಮಯ ಮೂರತಿಯು ।
ಮುನಿಗಳ ಹೃದಯದೊಳು ಮಿನುಗುವ ಮೂರುತಿಯು ।
ಬೊಮ್ಮಗಾದಾ ಮೂರುತಿಯು ತಾನೆಲ್ಲಿಂದೆಲ್ಲಿ ಬಂದಿತು ।
ಅಮರರಾಭರಣ ತಾನೆಲ್ಲಿಂದೆಲ್ಲಿಗೊದಗಿತೊ ।
ಎನಗೆ ಪ್ರಸನ್ನನಾದ ಉಡುಪಿಯ ಕೃಷ್ಣ ಮೂರುತಿ ।
ಪುರಂದರವಿಠಲನ ಒಲುಮೆಯೆಂತೊ । ೧

ಮಟ್ಟತಾಳ

ಮಂದಾರಮಲ್ಲಿಗೆ ತುರುಬಲಿ ದಿವ್ಯಾಂಬರವನ್ನುಟ್ಟು ಗೋ-।
ವಿಂದನಾಡಿದಾಟಗಳನು ಪ್ರಬಂಧಗೀತಗಳ ಮಾಡಿ ।
ಚೆಂದ ಚೆಂದದಲಿ ಪಾಡಿದಳು ಮೊಸರ ಮಥನದಲಿ ತನ್ನ ।

ಕಂದನ ಅದ್ವಿತೀಯ ಅಪ್ರಮೇಯಾಗಮ್ಯ ಗೋಚರನೆಂದು ।
ನಂದವ್ರಜವೆತ್ತ ಉಡುಪಿಯ ಕೃಷ್ಣನ ಮಹಿಮೆ ಯೆತ್ತಲೆಂದು ।
ವೃಂದಾರಕವಂದ್ಯ ಪುರಂದರವಿಠಲನೆ ಬಲ್ಲನೆನುತಿರೆ ೨

ತ್ರಿವಡೆ ತಾಳ

ಪೊಂಬಟ್ಟೆ ಪಾಲ್ಮೊಸರಿಂದಲಿ ತೋದಿದೆ ।
ಕಂಬು ಕಂಧರ ಕೆನೆ-ಬೆಣ್ಣೆಯ ಲೊರೆದಿದೆ ।
ಅಂಬುಜನಾಭ ನೀ ಎಲ್ಲೆಲ್ಲಿ ತುಡುತಿಂದೆ ।
ಎಂಬ ಗೋಪಿಗೆ ಕೃಷ್ಣ ಅಂಜುತಿದ್ದುದ ಕಂಡೆ ।
ಅಂಬುಜ ಭವ ಪಿತ ಈ ಉಡುಪಿಯ ಕೃಷ್ಣ ।
ತಾಂ ಬಾಲಕನಾದ ಪುರಂದರವಿಠಲ ೩

ಅಟತಾಳ

ದೇವತರುವು ನಮ್ಮ ದೇವ ಕೊಳಲನೂದೆ ।
ದೇವನಾರಿಯರುಟ್ಟ ದೇವಾಂಗದುಗುಲವ ।
ಆವ ಸುಸ್ವರವೊ ಆವ ಸುಜಾತಿಯೊ ।
ಆವ ಮೂರ್ಛನವೊ ಆವ ಸುನಾದವೊ ।
ದೇವ ಪುರಂದರವಿಠಲನಂಘ್ರಿಗಳಾಣೆ ।
ಈ ಉಡುಪಿಯ ಕೃಷ್ಣನಾದಿ ಮೂರುತಿ ತಪ್ಪಾ ೪

ಆದಿತಾಳ

ಒಂದು ಕೈಯಲಿ ಕಡೆಗೋಲು ಮ ।
ತ್ತೊಂದು ಕೈಯಲಿ ಕಡೆವ ನೇಣು ।
ನಿಂದು ತಾಯ ಮೊಗವಾ ನೋಡಿ ।
ಕಂದನ ಕಂದ ನಲಿದಾಡುತ ಧಿಂ ಧಿಂ ಧಿಂ ।
ಧಿಂ ಧಿತ ಮುದ್ದು ಪುರಂದರವಿಠಲ ।
ಉಡುಪಿಯ ಕೃಷ್ಣ ೫

ಜತೆ

ಉಡುಪಿಯ ಸಿರಿ ಕೃಷ್ಣ ಪುರಂದರವಿಠಲ ।
ಬಿಡೆನೊ ಬಿಡೆನೊ ನಿನ್ನ ಚರಣಕಮಲವ ॥

೧೫೮

ಸುಳಾದಿ

ಧ್ರುವತಾಳ

ಕಡಗ ಕಂಕಣ ಕಟಿಯ ತೊಡರ ಸಮಚರಣದ ।
ಹೇಮವರ್ಣಶ್ಯಾಮ ಕೋಮಲಾಂಗ ।
ಅಹೋ ಗೋಪಿಯರ ಮೋಹಿಸುತ್ತಿದೆ ।
ಅಹೋ ಜಗಜ್ಜನರ ಪಾಲಿಸುತ್ತಿದೆ ।
ಪುರಂದರವಿಠಲನ ಬಾಲಲೀಲೆ ೧

ಮಟ್ಟತಾಳ

ಪೊಂಬಟ್ಟೆಯ ಮೇಲೆ ಕಂಚಿಯ ದಾಮ ಗುಡಿಗಟ್ಟಿ ।
ಜಂಬು-ಚೂತದೆಳದಳಿರುಗಳ ಮುಕುಟ ವೇಲೆ ಕಟ್ಟಿ ।
ಕೊಂಬು ಕೊಳಲು ತುತ್ತೂರಿ ಮೌರ್‍ಯಗಳು ।
ಭುಂ ಭುಂ ಭುಂ ಭುಂ ಝುಂ ಝುಂ ಝುಂ ಝುಂ ॥
ಎಂಬ ರಾಮಕೃಷ್ಣ ಗೋಪರುಗಳ ।
ಸಂಭ್ರಮ ಸುರರ ಸೋಲಿಸಿತು ಜಂಭ ಭೇದಿ ಸ್ವ ।
ಯಂಭುವ ಮುಖ್ಯ ಸುರವಂದಿತ ತಿರು- ।
ವೆಂಗಳಪ್ಪ ಪುರಂದರವಿಠಲರಾಯ । ೨

ತ್ರಿವಿಡೆತಾಳ

ಜಯ ಜಯ ಸಿರಿನಾರಸಿಂಹ ದುರಿತಭಯ ನಿವಾರಣ ।
ಜಯ ಜಯ ಸಿರಿದಿವ್ಯ ಸಿಂಹ ಪುರಂದುರವಿಠಲರಾಯ ೩

ಅಟತಾಳ

ಅಹಂಕಾರ ಮಮಕಾರವಳಯದೆ ।
ವಿಹಂಗಗಮನ ಸಿಕ್ಕುವನೆ ಮರುಳೆ? ।
ಕಾಮಕ್ರೋಧವ ಬಿಡದನಕ ।
ಪುರಂದರವಿಠಲನು ಸುಲಭನೆ ಮರುಳೆ? । ೪

ಆದಿತಾಳ

ವಾಮನ ವಾಸುದೇವ ಪದುಮನಾಭ ಹರಿ ।
ದಾಮೋದರ ನರಹರಿ ಮಾಧವ ಸಿರಿಧರ ।
ನಾರಾಯಣ ಹರಿ ಸಿರಿ ವತ್ಸಾಂಕಿತ ।
ವಾರಿಜದಳಲೋಚನ ಭೂರಮಣ ।
ಅಚ್ಯುತಾನಂತ ಗೋವಿಂದ ಮುಕುಂದ ಪುರು ।
ಷೋತ್ತಮ ಶ್ರೀ ಹರಿ ನಾರಾಯಣ ।
ಪ್ರದ್ಯುಮ್ನ ಸಂಕುರಷಣದೇವ ಅನಿ–।
ರುದ್ಧ ಪುರಂದರವಿಠಲ ಸರ್ವೋತ್ತಮ ೫

ಜತೆ

ಕಾಯ ಕರಣಗಳಿಂದ ಜೀಯ ಕಾಯ ಬೇಕೆನ್ನ ।
ಕಾಯ್ದು ಕೊಳ್ಳೊ ಪುರಂದರವಿಠಲ ನೀಯೆನ್ನ
ಕಾಯ್ದು ಕೊಳ್ಳೆನ್ನ ॥

೧೫೯

ಸುಳಾದಿ

ಹರಿಸುಲಭಸುಳಾದಿ

ಧ್ರುವತಾಳ

ಕೆಲವರು ಕೆಂದಾವರೆ ಹಾಸಿ ಪವಡಿಸೆನೆ ಪವಡಿಸುವೆ ।
ಕೆಲವರುಪಬರ್ಹಣವ ಈಯಲು ನೀನಾನುವೆಯೊ ।

ಕೆಲವರು ಕೇತಕಿ ಚಾಮರ ಬೀಸಲು ನೀನಲಿವೆ ।
ಕೆಲವರು ಪಾದಪದುಮಗಳ ಒತ್ತಲು ನೀನೊಲಿವೆ ।
ಕೆಲವರು ತೋಳ್ದೊಡೆ ಮೈಮೊಗವೆರಸಿ ಅಪ್ಪಲು
ಮರಳಿ ಅಪ್ಪುವೆ ।
ಕೆಲವರು ಕೊಂಬು ಕೊಳಲು ತುತ್ತೂರಿ ಮೌರ್ಯಗಳ
ಬಾರಿಸೆ ನೀನೊಲಿವೆ ।
ಕೆಲವರು ಮಂದ್ರ ಮಧ್ಯಮ ತಾರದಿ ಅನೇಕ ರಾಗಗಳ ಪಾಡೆ ।
ಝುಣ ಝುಣ ಝುಣರೆಂದುಗ್ಗಡಿಸೆ ಕೆಲವರು ।
ಧಿಮ್ ಧಿಮ್ ಧಿಮ್ ಧಿಮಿಕೆನುತಲಿ ಕೆಲವರು
ನೃತ್ಯವಾಡೆ ಸುಖಿಸುವೆ ।
ಜಲಜಾಕ್ಷ ಏನಿನ್ನಿವರ ಪುಣ್ಯವೆಂತು ಬಣ್ಣಿಪೆ ।
ಹಲಧರನು ನಿನ್ನೊಡನೆ ನಿನ್ನೊಳಾಡುವ
ಗೋಪ ಗೋಪಿ ಗೋ-।
ಗೋಕುಲಿಕೆ ನಮೋ ಪುರಂದರವಿಠಲ ॥ ೧

ಮಟ್ಟತಾಳ

ನಖದ ಬೆರಳು ಚಂದ್ರ ಸೂರ್ಯರ ಸೋಲಿಸಿ
ಮೆರೆಯುತಿದೆ ನೋಡು ।
ಮುಖದಧಿಪತಿಯೆ ನಿನ್ನ ಸರ್ವಾಂಗದ ಕಾಂತಿ
ಲಾವಣ್ಯಗಳನೆ ಕಂಡು ।
ಸುಖಿಸಿದರಂತವರು ನಿನ್ನೊಡನೆ ಇದ ।
ನಿಖಿಳ ಜಗತ್ಕಾರಣ ನೀನೆ ಬಲ್ಲೆ ।
ಮಕರಕುಂಡಲಾಭರಣವೆಸೆಯೆ ।
ವಿಖನಸಾರ್ಚಿತ ಶ್ರೀ ಪುರಂದರವಿಠಲರಾಯ ೨

ತ್ರಿವಿಡೆತಾಳ

ರತ್ನಮುಕುಟವು ರತ್ನಮುಕುಟದಂತೆ ।
ರತ್ನಮುಕುಟಕ್ಕೆ ತುಂಬೆಯೆರಗಲು ।

ಕತ್ತಾವರೆ ವೀರೆಯ ದಂಡೆ ಮೆರೆಯೆ ।
ಪೀತಾಂಬರ ಕಾಂಚೀದಾಮಾದಿ ಶೋಭಿತ ।
ಚಿತ್ತವಲ್ಲಭ ಪುರಂದರವಿಠಲನೊಳು ।
ಉತ್ತರೋತ್ತರದ ಶೃಂಗಾರವವ್ವ । ೩

ಅಟತಾಳ

ಅನಂತವೇದ ಸಮೂಹಗಳಿಂದಲಿ ।
ಅಜಾದಿಸುರರು ಅರಸಲೇತಕ್ಕಿನ್ನು? ।
ಆನಂದ ಯಶೋದೆಯರ ಮನೆಯಲ್ಲಿ ।
ವೃಂದಾವನದಿ ಕಾಣಿಸಿಕೊಂಡನವ್ವ ।
ನಂದ-ನಂದನ ಕಂದ ಪುರಂದರವಿಠಲ ।
ಪರದೇವತೆ ಈತನಲ್ಲವೇನವ್ವ ೪

ಆದಿತಾಳ

ಬೆಣ್ಣೆಯ ಬಟ್ಟಲ ಕಂಡು ಒರಳ ಮೇಲೇರಿ ಕೊಂಡು ।
ಚಿಣ್ಣರಿಗೆ ತುತ್ತೀವ ಠಕ್ಕುತನವೇನೆಂದು ।
ಕಣ್ಣ ಝೇಂಕರಿಸುತ್ತ ಕಂಜಾಕ್ಷ ಎಂದು ಗೋಪಿ ।
ದೊಣ್ಣೆಯ ಕೊಂಡಟ್ಟಿದಳಪ್ರತಿಮ ಪ್ರಭಾವನ್ನ ।
ಹೆಣ್ಣೇನು ನೋಂತಳು ಪುರಂದರವಿಠಲನ ।
ಕಣ್ಣಿಯಲ್ಲಿ ಕಟ್ಟಿ ಆಳಿದಳು ವಿಶ್ವ ಕಾಯನ ೫

ಜತೆ

ನಂದ ದಾಮವ ಬಿಟ್ಟು ಕಂದನ ಬಿಗಿದಪ್ಪಿ ।
ಅಂದು ವಂದಿಸಿದನು ಪುರಂಧ್ರರವಿಠಲನ॥

೧೬೦

ಸುಳಾದಿ

ಕೃಷ್ಣ ಮಹಿಮಾಸುಳಾದಿ

ಧ್ರುವತಾಳ

ರತಿ ಪತಿ ಪಿತನೆಂತೆಂಬ ಚೆಲುವ ನೀನುಳಿದು ।
ಕ್ಷಿತಿಯಲಿ ವರಾಹರೂಪ ಧರಿಸುವರೇನೊ ಹರಿಯೆ ।
ಸಿರಿ–ಭೂದೇವಿಯರು ಸತಿಯರಾಗಿರಲು ।
ಅಡವಿಯೊಡಾಳುವ (ಅಡವಿಯೊಳಾಡುವ)
ಕರಡಿಯ ಮಗಳನು ಮೆಚ್ಚುವರೆ?।
ಪುರಾಣ ಪುರಷೋತ್ತಮನೆ ನೀನಮೃತಕೆ ।
ನಾರಾಯಣಿಯಾಗಿ ವೋಹಿಪರೆ? ।
ಜಗಕಾಶ್ಚರ್ಯ ಚಾರಿತ್ರ್ಯವುಂಟೆ, ಎಲೆ ದೇವ ।
ಪುರಂದರವಿಠಲ ದೇವರ ದೇವ ।
ಶರಣಾಭರಣವೆ ನಿನಗೆ ನಾನು ನಮೋ ಎಂಬೆ ೧

ಮಟ್ಟಿತಾಳ

ಜ್ಞಾನ ಭಕುತಿ ಏನು ಇಲ್ಲದ ಹೀನನಾದ ಕರಣ ।
ನಾನು ನನ್ನದೆಂಬ ಹಮ್ಮು ಮಮತೆಗಳು ।
ಏನ ಮಾಡಲು ಬೆನ್ನ ಬಿಡವು ॥
ನೀನೇ ಸ್ವತ್ವಂತ್ರನು ನಿನ್ನ ದಾಸನು ನಾನು ।
ಎನಿಸೆನು ಪುರಂದರವಿಠಲ ೨

ತ್ರಿವಿಡೆತಾಳ

(ಆ)ನಾನೊಬ್ಬನೆ ನಿನ್ನ ದಾಸನಾದೆನು ದೇವ ।
ನೀನೊಬ್ಬನೆ ಎನ್ನ ಸ್ವಾಮಿಯಾದೆಯೊ ದೇವ ।
ಏನೆಂದಾಡುವೆ ಅಳವಡುವೆ ಪಾಡುವೆ ।
ದೀನನೆನ್ನುತ ಕಾಯೊ ಹೊದ್ದಿದೆನು ನಿನ್ನ ।
ಮಾಣೊ ಛಲವ ಪುರಂದರವಿಠಲ ೩

ಅಟತಾಳ

ಬಿಲ್ಲು ಮುರಿಯೊ ದನುಜರ ಹೊಯ್ಯೊ, ಕೃಷ್ಣ ।
ಮಲ್ಲ ಬಂದನು ಕಾಣೊ ಮಧುರಿಗೆ ।
ಹುಲ್ಲ ಮಲ್ಲರ ತಿವಿಯೊ ।
ಖುಲ್ಲ ಮಾನವರ ಕೊಲ್ಲೊ, ರಂಗ ।
ಮಲ್ಲ ಬಂದನು ಕಾಣೊ ಮಧುರಿಗೆ ।
ಬಲ್ಲಿದ ನಮ್ಮ ಪುರಂದರವಿಠಲ ।
ಬಲ್ಲಿದ ಕಾಣೊ, ಊರ್ಜಿತ ಕಾಣೊ ಮಲ್ಲ ಕೃಷ್ಣ ೪

ಏಕತಾಳ

ಗಜವನಟ್ಟಿ ರಜಕರನ ಮುರಿದೊಟ್ಟಿ ।
ಮಾವನ ಮು(ಮ)ಡಿಯುಟ್ಟು ಕುಬುಜೆ ತಂದ ದಿವ್ಯ ।
ಗಂಧವ ಪೂಸಿ (ಮಾವನಮುಡಿ ಉಟ್ಟು) ದಾಮುಸುದಾಮರ
ಪೂಗಳ ಮುಡಿದು ।
ಮಾವನ ಮಡುಹಿದೆ ಪುರಂದರವಿಠಲ ।
ಬಿಡದೆ ಎನ್ನ ಮನದಲಿ ೫

ಜತೆ

ಜ್ಞಾನಂ ದೇಹಿ ಭಕುತೆ ವಿರಕುತಿ–ಅ– ।
ನ್ನ್ಯೂನಂ ದೇಹಿ ಪುರಂದರವಿಠಲ ॥

ಲೋಕನೀತಿ

೧೬೧

ಉಗಾಭೋಗ

ನೀರಡಿಸಿ ಜಾಹ್ನವಿಯ ತೀರದಲಿ ಬಂದು
ಬಾವಿಯ ನೀರ ಕುಡಿಯುವ ಮಾನವರುಂಟೆ?

ಹರಿಯ ಸಿರಿಚರಣವಿರಲು
ಬರಡು ದೈವಗಳನ್ನೇಕೆ ಭಜಿಸುವೆ ಮನವೆ?
ಸಿರಿರಮಣ ಬೇಲೂರು ಚೆನ್ನಿಗರಾಯ
ಪುರಂದರವಿಠಲನಿರಲು
ಬರಡು ದೈವಗಳನ್ನೇಕೆ ಭಜಿಸುವೆ.

೧೬೨

ಉಗಾಭೋಗ

ಸುಖಕೆ ತಾನಾರೊ ದುಃಖಕೆ ತಾನಾರೊ
ಸುಖ ದುಃಖವೆರಡೂ ಶ್ರೀಹರಿಯ ಅಧಿನವಲ್ಲದೆ
ಸಾಗರ ಸಡ್ಡೆಯ ಮಾಡಿ ಧರೆಯ ಕೂರಿಗೆ ಮಾಡಿ
ಶಿವ ಬ್ರಹ್ಮ ಎಂಬ ಎರಡೆತ್ತ ಹೂಡಿ
ಊಳುವಾತ ಇಂದ್ರನು ಬೆಳೆಸಿದ ಚಂದ್ರನು
ಕಳೆಯ ತೆಗೆಯುವವ ಯಮಧರ್ಮನು
ಬತ್ತಿದಾ ಬೆಳಸನು ಕೊಯ್ದು ತಾನೊಯ್ದನು
ದುಃಖವೇತಕೆ ಬಾರೊ ಪುರಂದರವಿಠಲ.

೧೬೩

ಉಗಾಭೋಗ

ಧ್ವಜ ವಜ್ರಾಂಕುಶ ರೇಖಾಂಕಿತ ಹರಿಪಾದಾಂ–
ಬುಜವ ಸೇವಿಸುವ ಅಜ–ಭವರ ಭಾಗ್ಯವ ನೋಡೊ
ತ್ರಿಜಗವಂದ್ಯನ ಪಾಡೊ ದುರ್ಜನರ ಸಂಗವ ಬಿಡೊ
ಕುಜನಮತವನು ಸುಡೊ
ಗಜೇಂದ್ರನ ಕಾಯ್ದ ಸಿರಿ ಕೃಷ್ಣನ ಧ್ಯಾನ ಮಾಡೊ
ಪುರಂದರವಿಠಲನ ಬಿಡದೆ ಕೊಂಡಾಡೊ.

೧೬೪

ಉಗಾಭೋಗ

ನೀರ ಮೇಲಣ ಗುಳ್ಳೆಯಂತೆ ಈ ದೇಹ
ನಿಮಿಷವೊ ನಿಮಿಷಾರ್ಧವೊ ಕಾಣಬಾರದು
ಹಾರಲೇಕೆ ಪರಧನಕೆ ಪರಸತಿಗೆ?
ಹಾರುವನ ಕಟ್ಟ ಬೇಕು ಹಾರುವನು (ನ) ಕುಟ್ಟಬೇಕು
ಹಾರುವರನ ಕಂಡರೆ ಕೆನ್ನೆಯ ಮೇಲೆ ಹಾಕಬೇಕು
ಹಾರಲೇಕೆ ಪರಧನಕೆ ಪರಸತಿಗೆ ।
ಊರೊಳಗೆ ಐದು ಮಂದಿ ಹಾರುವರೈದಾರೆ ।
ನೀನೆ ವಿಚಾರಿಸೊ ಪುರಂದರವಿಠಲ.

೧೬೫

ಉಗಾಭೋಗ

ಕಲಿಕಾಲಕೆ ಸಮಯುಗವು ಇಲ್ಲವಿಲ್ಲಯ್ಯ
ಕಲುಷಹರ ಕೈವಲ್ಯವು ಕರಸ್ಥವಯ್ಯ
ಜಲಜಲೋಚನ ನಮ್ಮ ಪುರಂದರವಿಠಲನ್ನ
ಬಲಗೊಂದು ಸುಖಿಸಿ ಬಾಳುವುದಕೆ.

೧೬೬

ಉಗಾಭೋಗ

ಕಲಿಯುಗಕೆ ಸಮಯುಗವು ಇಲ್ಲವಯ್ಯ
ಕಲುಷಹರ ಕೈವಲ್ಯವು ಕರಸ್ಥವಯ್ಯ
ಜಲಜಲೋಚನ ನಮ್ಮ ಪುರಂದರವಿಠಲನ್ನ
ಬಲಗೊಂಡು ಸುಖಿಸಿ ಬಾಳುವುದಕೆ.

೧೬೭

ಉಗಾಭೋಗ

ಹರೇ ಗೋವಿಂದಾ ಎಂದೇಳು ಹತ್ತವತಾರವ ಪೇಳು
ಮಾಡಲದೆನಗೆ ನಡೆ
ಗೋ–ವಿಪ್ರ–ತುಳಸಿಗೆ ಎರಗಿ ಬಂದು
ನೈಋತ್ಯ ದಲ್ಲಿ ತೃಣವನಿಟ್ಟು
ಮಲ ಮೂತ್ರಂಗಳ ಬಿಟ್ಟು (ಶೌಚಮಾಡು)
ಗುರುಪರಂಪರೆಯೆಂದು ಪುರಂದರವಿಠಲನೆನ್ನು.

೧೬೮

ಉಗಾಭೋಗ

ಹತ್ತೈದು ಗಳಿಗೆಯ ಮೇಲೆ ಮತ್ತೈದು ಬರಲೆದ್ದು
ಚಿತ್ತಜನೈಯ್ಯನ ಚಿತ್ತದಿ ಧೇನಿಸಿ (ಧ್ಯಾನಿಸಿ)
ಅತ್ತಲುದಯಕ್ಕೆ ಗಳಿಗೆ ಎರಡರಲ್ಲಿ ಎದ್ದು
ನಿತ್ಯ ಸ್ನಾನವ ಮಾಡಿ ಆದಿತ್ಯಗರ್ಘ್ಯವನೀಯೆ
ಉತ್ತಮ ಜನಕೆಲ್ಲ ಮೆತ್ತಿದ ಪಾಪಗಳನ್ನು
ಉತ್ತರಿಸುವೆನೆಂದ ಪುರಂದರವಿಠಲ.

೧೬೯

ಉಗಾಭೋಗ

ಪ್ರಾತಃಕಾಲದ ನಿದ್ರೆ ಪರಿಹರಿಸಿ ಹರಿಯ (ಅರ್ತಿಯಿಂದಲಿ) ಸ್ಮರಿಸಿ
ನಾಥ ಗೋವಿಂದನಿಗೆ ಪ್ರದಕ್ಷಿಣೆ (ಮಾಡಿ)
ಪ್ರೀತಿಯೊಳತಿಥಿಯ ಪೂಜಿಸಿ ಪುರಾಣ–ಶಾಸ್ತ್ರವ ಕೇಳಿ
ನಾಥ ಶ್ರೀಪುರಂದರವಿಠಲನೆ ನಮೋ ಎನ್ನಿ.

೧೭೦

ಉಗಾಭೋಗ

ಮಲ ಮೂತ್ರ ಮಾಡುವಾಗ ಕರದಲ್ಲಿ ಜಲವಿರೆ
ಮಲಕೆ ಸಮಾನ ಅದು ಶುದ್ಧವಲ್ಲ
ವಿಲಸಿತ ಕರ್ಮವಾಚರಿಸಿ ಹರಿಯ ನೆನೆಯೆ
ಒಲಿವ ಪುರಂದರವಿಠಲ.

೧೭೧

ಉಗಾಭೋಗ

ನುಡಿವೆ ಲಿಂಗಶೌಚಕ್ಕೊಮ್ಮೆ ಗುದಕ್ಕೆ ಮೂರು
ನೆಲ್ಲಿ ಕಾಯಿಯಷ್ಟು ಮಣ್ಣ ಪಚ್ಚಿ
ನೀರೊಳು ತೊಳೆದು ಬಲದ ಕೈಗೆ ಐದು ಮಣ್ಣು
ಎಡದ ಕೈಗೆ ಏಳು ಮಣ್ಣು ।
ಐದು ಕಡೆಯಲಿಟ್ಟು ಪುರಂದರವಿಠಲ ಎನ್ನು.

೧೭೨

ಉಗಾಭೋಗ

ಹಲ್ಲು ಬೆಳಗುವಲ್ಲಿ ಜಂಬು–ಪ್ಲಕ್ಷಪತ್ರೆ
ನೆಲ್ಲ ನಿಲ್ಲು(?) ಮಹಾಲಯ ಪುಣ್ಯ ದಿವಸದಿ
ಬಲ್ಲಿದ ಏಕಾದಶಿ ಪರ್ವಣಿ ಅಮವಾಸ್ಯೆಯಲಿ
ರವಿ–ಶಶಿ ಗ್ರಹಣದಲಿ
ಸಲ್ಲದಯ್ಯ ದಂತಕಾಷ್ಠ ಮಲಿನಗಳಿಗೆ
ಗಲ್ಲಿಸಿ ನೀರಮುಕ್ಕುಳಿಸೆ ಹನ್ನೆರಡು
ಬಲ್ಲ ಬುಧರಿಗೆ ಪುರಂದರವಿಠಲ ಒಲಿವ
ಇದನಾಚರಿಸೆ.

೧೭೩

ಉಗಾಭೋಗ

ಹಲ್ಲು ಬೆಳಗುಮಲ್ಲಿ ಬಿಂಬ
ಪ್ಲಕ್ಷಪತ್ರೆ ನೆಲ್ಲು ನಿಲ್ಲು
ಮಹಾಲಯ ಪುಣ್ಯದಿವಸದಿ
ಬಲ್ಲಿದೇಕಾದಶಿ ಪಾರ್ವಣ
ಅಮವಾಸ್ಯೆ ಇಟ್ಟ ಶಶಿ ರವಿ ಗ್ರಹಣದಲ್ಲಿ
ಅಲ್ಲದೆಯ್ಯ ದಂತ ಕಾಷ್ಠ ಮಲಿನಗಳಿಗೆ
ಝಲ್ಲಿಸಿ ನೀರು ಮುಕ್ಕಳಿಸಿ ಹನ್ನೆರಡು
ಬಲ್ಲ ಬುಧರಿಗೆ ಪುರಂದರವಿಠಲ
ಇಲ್ಲಿ ಒಲಿವ ಇದ ಚರಿಸೆ.

೧೭೪

ಉಗಾಭೋಗ

ಎರಡು ಗಳಿಗೆ ಬೆಳಗು ಇರಲು ಗ್ರಹಸ್ಥಗೆ ಸ್ನಾನ
ಕರವ ಮುಗಿದು ಮಾಡು ಸಂಕಲ್ಪವೇದ
ಪರಮ ಪುಣ್ಯ ಬ್ರಾಹ್ಮಣ ಧರ್ಮವೆಂದು
ಪುರಂದರವಿಠಲನು ಮೆಚ್ಚಿ ಪಾಲಿಸುವ.

೧೭೫

ಉಗಾಭೋಗ

ಕೂಪದಲ್ಲಿಯಾದರೂ ಕೊಳದಲ್ಲಿಯಾದರೂ
ವಾಪಿಯಲ್ಲಿಯಾದರೂ
ಆ ಪತ್ನಿಯ ನೆರೆದಿದ್ದರೂ ಗೋಪೀಚಂದನದ
ಸಂಪರ್ಕವಿದ್ದರೆ ಅದೆ ಸಂಧ್ಯಾಕಾಲವೆಂದು
ಪುರಂದರವಿಠಲ ಪೇಳ್ದ.

೧೭೬

ಉಗಾಭೋಗ

ಕೂಪದಲ್ಲಾದರು ಕೊಳದಿ ಮುಳುಗಿಯಾದರು
ವಾಪಿಯಲ್ಲಾದರು ಅಶುಚಿಯಲ್ಲಾದರು
ಗೋಪಿ ಚಂದನದ ಸಂಪರ್ಕವಿದ್ದರೆ ತಾ ಪುನೀತ
ಸಂಧ್ಯಾಕ್ಕೆ ಕಾಲವೆ ಮುಖ್ಯವೆಂದು
ಶ್ರೀಪತಿ ಪುರಂದರವಿಠಲ ಪೇಳ್ದ.

೧೭೭

ಉಗಾಭೋಗ

ಹೃದಯದ ಮಲವನ್ನು ತೊಳೆಯಲರಿಯದೆ ತಾವು
ಉದಯದಲೆದ್ದು ಮಿಂದು ಗಡಗಡ ನಡಗುವರು
ಅವರಿಂದೇನು ಫಲ? ಅದಕ್ಕಿಂತ
ಉದಯಾಸ್ತಮಾನ ನೀರೊಳಗಿದ್ದ ಮುದಿಕಪ್ಪೆ ಮಾಡಿದ
ತಪ್ಪೇನಯ್ಯ?
ಪುರಂದರವಿಠಲನ ನಾಮವ ನೆನೆಯದೆ
ದಿನಕೆ ಇನ್ನಾರುಬಾರಿ ಮುಳುಗಿದರೇನಯ್ಯ‌ಫಲವು.

೧೭೮

ಉಗಾಭೋಗ

ನೀಲವಸ್ತ್ರವಾಗದು ನಾರಿಯರ ಶಾಲೆಯಾಗದು
ಕಾಲ ಮೂರು ಕರ್ಮದಲ್ಲಿ ಕಾಲವಸ್ತ್ರವಾಗದು
ಆರ್ದ್ರ ವಸ್ತ್ರವಾಗದು ಆಜ್ಞೆ ಶ್ರೀ ಪುರಂದರವಿಠಲನ.

೧೭೯

ಉಗಾಭೋಗ

ಅಂದವಿಲ್ಲದ ಅಶಕ್ತನಿಗೆ ಒಂದೇ ಅರಿವೆಯಿಂದ
ಮೈದೊಳೆದು ಮಡಿಯುಟ್ಟು ನಾಮಗಳಿಟ್ಟು
ಚೆಂದದಲಿ ಸಂಧ್ಯಾವಂದನೆ ಮಾಡೆ ಫಲವಹುದು
ನಿಂದೆ ಹಿಂಗಲೆಂದು ಮಾಡಿದ ಮನುಜಂಗೆ
ಇಂದ್ರ ಹದಿನಾಲ್ಕು ಮನುನರಕವೆಂದು
ಅಂದು ಪುರಂದರವಿಠಲ ಪೇಳಿದನೆಂದು ಸಿದ್ಧ.

೧೮೦

ಉಗಾಭೋಗ

ನಕ್ಷತ್ರಗಳ ಕಂಡ ನರನಿಗೆ ಉತ್ತಮ ಸಂಧ್ಯೆ
ನಕ್ಷತ್ರ ಒಂದೆರಡು ಕಂಡ ನರನಿಗೆ ಮಧ್ಯಮ ಸಂಧ್ಯೆ
ನಕ್ಷತ್ರ ಒಂದನೂ ಕಾಣದ ನರನಿಗೆ ಅಧಮ ಸಂಧ್ಯೆ
ನಕ್ಷತ್ರ ಬಿಟ್ಟ ನರನನು ನಾರಾಯಣ–
ಪುರಂದರವಿಠಲ ಬಿಡುವ.

೧೮೧

ಉಗಾಭೋಗ

ಕಂಡ ಸೂರ್ಯಗೆ ಸಂಧ್ಯೆ ಕಾಣದ ಸೂರ್ಯಗೆ ಸಂಧ್ಯೆ ಭೂ–
ಮಂಡಲದಿ ಮಾಡದಿರಲು ಮಾ–
ರ್ತಂಡ ನೂರ ಹತ್ಯಾ ಮಾಡಿದ ಪಾಪ –ಶ್ರುತಿ ಸಾರುತಿದೆ
ಪುಂಡಗಾರ ನಗರೆ
ನರಕ ತಪ್ಪದು ಎಂದು
ಅಂಡಜಪತಿ ಪುರಂದರವಿಠಲ ಪೇಳ್ದ.

೧೮೨

ಉಗಾಭೋಗ

ಆಕಳ ಕಿವಿಗೆ ಎಣ್ಣೆ ಅಂಗೈ ಹಳ್ಳವಾಗಿರಬೇಕು
ಉದ್ದು ಮುಣಗುವಂತೆ ಇರಬೇಕು
ನೀರ ಸಾಕಾಗದೆ ಹೆಚ್ಚು ಕಡಮೆ ಸಾಕೆಂಬಷ್ಟು ಕುಡಿದರೆ
ಸಾಕಾರ ಪುರಂದರವಿಠಲ ಮದ್ಯಸಮ ಮಾಡುವ.

೧೮೩

ಉಗಾಭೋಗ

ಹಲವು ಕರ್ಮಗಳಿಗೆ ಹವಣು ಎರಡಾಚಮನ
ಮಲ–ಮೂತ್ರ ವಿಸರ್ಜನಕ್ಕ ಮಾಡು ಮೂರು
ನಲಿದು ಉಂಡ ಮೇಲೆ ನಾಲ್ಕು
ಲಲನೆಯ ಸಂಗಕ್ಕೆ ಹನ್ನೆರಡು
ಅಲ್ಲಿಂದೊಲಿವನು ಪುರಂದರವಿಠಲ ಆಚಮನವನು ಮಾಡೆ.

೧೮೪

ಉಗಾಭೋಗ

ಆಪೋಶನ ಅಭ್ಯಂಜನ ಆಚಮನ ಮಾಡಲು
ತನ್ನೆಡಗೈಯಿಂದ ತಾನೆ ವರ್ತಿಸಲು
ಆ ಪುರುಷಂಗೆ ಆದ ಪುತ್ರರು ಮಡಿವರು
ಆಪತ್ತು ತಂದು ಬಿಡುವ ಪುರಂದರವಿಠಲ.

೧೮೫

ಉಗಾಭೋಗ

ರಮ್ಮೆ ರಮಣ ತಾನು ಬೊಮ್ಮಾದಿಗಳಿಗೆಲ್ಲ
ಸುಮ್ಮನಸದೊಳು ಸೂರ್ಯಗರ್ಘ್ಯವನಿತ್ತು
ನಿಮ್ಮ ಪಾಪಗಳೆಲ್ಲ ಚಿಮ್ಮಿ ಕಳೆಯಿರೆಂದು
ಬೊಮ್ಮ ಮೂರುತಿ ತಾನು ಗಮ್ಮನೆ ಪೇಳಲು
ಸುಮ್ಮನೆ ಕೆಡದಿರಿ ನಿಮ್ಮ ಅಜ್ಞಾನಕೆ ಸಿಲುಕಿ
ನಿಮ್ಮನು ಶಿಕ್ಷಿಸುವ ಪುರಂದರವಿಠಲ.

೧೮೬

ಉಗಾಭೋಗ

ರಮೆಯ ರಮಣನು ತಾನು ಬೊಮ್ಮಾದಿಗಳೆನೆಲ್ಲ
ಸುಮನಸರೊಳು ಸೂರ್ಯಗರ್ಘ್ಯವನಿತ್ತು
ನಿಮ್ಮ ಪಾಪಗಳನೆಲ್ಲ ಚಿಮ್ಮಿ ಕಳೆಯಿರೆಂದು
ಬೊಮ್ಮ ಮೂರುತಿ ತಾ ಗಮ್ಮನೆ ಪೇಳಿರೆ
ನಿಮ್ಮ ಜ್ಞಾನದಿ ಸಿಲುಕಿ ಸುಮ್ಮನೆ ಕೆಡದಿರಿ
ನಿಮ್ಮ ಶಿಕ್ಷಿಪನು ಪುರಂದರವಿಠಲ.

೧೮೭

ಉಗಾಭೋಗ

ಬಿಡು ಮನುಜಾ ಈ ಜಪವು ಸಿದ್ಧಿಗೆ ಬಾರದು
ತೊಡೆಯ ಕೆಳಗೆ ಕೈ ಹಿಂದೆ ಮುಂದೆ ಕೈ ಚಾಚಿ
ಬಿಡುತ ಮಂತ್ರಾರ್ಥ ನೋಡದಲೆ
ಅಡಿಗಡಿಗೆ ಜಪವ ಮಾಡೆ
ದೈತ್ಯರಿಗೆ ಅಹುದಯ್ಯ
ಒಡೆಯ ಪುರಂದರವಿಠಲನನೊಲಿಸ ಬೇಕಾದರೆ
ಹಿಡಿಯೊ ಈ ಪರಿ ಹೇಳಿದ ವಚನ ತತ್ತ್ವಗಳ.

೧೮೮

ಉಗಾಭೋಗ

ಅನಾಮಿಕಾ ಮಧ್ಯದ ಎರಡನೆಯ ಗೆರೆ ಆದಿ
ಇನಿತು ಮಧ್ಯಾಂಗುಲಿ ಕೊನೆಗೆರೆ ಕೂಡಿಸಿ
ಮನುಮೂರ್ತಿ ಪರಿಮಾಣ ಅಂಗುಷ್ಠದಿಂದಲಿ
ಎಣಿಸು ತರ್ಜನಿ ಮೂಲ ಪರಿಯಂತ(ರ)
ಘನ ಹತ್ತು ಗೆರೆ ಜಪ ಪುರಂದರವಿಠಲಗೆ
ಮನದಿ ಅರ್ಪಿಸುತ ಗಾಯತ್ರಿ ಜಪವ.

೧೮೯

ಉಗಾಭೋಗ

ಮಧ್ಯಾಂಗುಲಿಯ ಮೇಲೆ ಮಣಿಸರವಿಟ್ಟು
ಬದ್ಧ ಅಂಗುಟವೆಣಿಸಬೇಕು
ತಿದ್ದಿ ಅಂಗುಲಿ ಪಂಚ ಬೊಗ್ಗಿಸಿ ಇರಬೇಕು
ಭದ್ರವಾಗಿ ನಿಲಿಸಿ ನೀರ ಸೋರದೆ ಗಾಯತ್ರಿಯ
ಭದ್ರವಾಗಿ ನಿಲಿಸಿ ನೀರು ಸೋರದೆ ಗಾಯತ್ರಿಯ
ಬುದ್ಧಿ ಪೂರ್ವಕದಿಂದ ಗೆಯ್ಯುತಲಿರಬೇಕು
ಮುದ್ದು ಮೂರುತಿ ನಮ್ಮ ಪುರಂದರವಿಠಲನ್ನ
ಎದ್ದೆದ್ದು ನೋಡುವ ಬಗೆ ಕಾಣಲುಬೇಕು

೧೯೦

ಉಗಾಭೋಗ

ಅಪರಾಧ ಹತ್ತಕೆ ಅಭಿಷೇಕ ಉದಕ
ಅಪರಾಧ ನೂರಕೆ ಕ್ಷೀರ ಹರಿಗೆ
ಅಪರಾಧ ಸಹಸ್ರಕೆ ಹಾಲು –ಮೊಸರು ಕಾಣೊ
ಅಪರಾಧ ಲಕ್ಷಕೆ ಜೇನು–ಘೃತ

ಅಪರಾಧ ಹತ್ತು ಲಕ್ಷಕೆ ಬಲುಪರಿ ಕ್ಷೀರ
ಅಪರಾಧ ಹೆಚ್ಚಿಗೆಗೆ ಹತ್ತು ತೆಂಗಿನಹಾಲು
ಅಪರಾಧ ಕೋಟಿಗೆ ಅಚ್ಚ ಜಲ
ಅಪರಾಧ ಅನಂತ ಕ್ಷಮೆಗೆ ಗಂಧೋದಕ
ಉಪಮೆರಹಿತ ನಮ್ಮ ಪುರಂದರವಿಠಲಗೆ
ತಾಪಸೋತ್ತಮನ ಒಲುಮೆ ವಾಕ್ಯ.

೧೯೧

ಉಗಾಭೋಗ

ಒಂದಕ್ಷರವ ಪೇಳಿದವರ
ಉರ್ವಿಯೊಳಗೆ ಬಹುಮಾನ ಮಾಡಬೇಕು
ಒಂದು ಬಾರಿಯಾದರೂ ಒಂದಿಷ್ಟು ಅವಮಾನ ಮಾಡಿದರೆ
ಕುಂದದೆ ನೂರು ಶ್ವಾನ ಜನ್ಮ ಕೋಟಿ ಹೊಲೆ ಜನ್ಮ ।
ಪುರಂದರವಿಠಲನ ಆಜ್ಞೆಯಿದು.

೧೯೨

ಉಗಾಭೋಗ

ಒಂದಕ್ಷರವ ಪೇಳಿದವರ ಉರ್ವಿಯೊಳು ಅವರೆ ಗುರು
ಎಂದು ಇಳೆಯೊಳು ಬಹುಮಾನ ಮಾಡಬೇಕು ಕುಂದದೆ
ಒಂದಿಷ್ಟು ಅವಮಾನ ಮಾಡಿದರೆ ತಪ್ಪದೆ
ಒಂದು ನೂರು ಶ್ವಾನ ಜನ್ಮ ಕೋಟಿ ಹೊಲೆ ಜನ್ಮ
ತಂದೀವನು ಪುರಂದರವಿಠಲ.

೧೯೩

ಉಗಾಭೋಗ

ಸಹಸ್ರ ಕಾಷ್ಠದ ಭಾರ ಸದ್ಯೋಘೃತ ಕುಂಭ ನೂರು
ಮಹಾಮಂತ್ರದಿಂದ ಹೋಮ ಮಾಡದಿದ್ದರೆ ನಿರರ್ಥಕ

ವಾಸುದೇವಗರ್ಪಿತ ಅನ್ನವ ಅತಿಥಿಗೀಯದಿದ್ದರೆ
ವೈರದಿ ಪುರಂದರವಿಠಲ ಮುನಿವ.

೧೯೪

ಉಗಾಭೋಗ

ಅನ್ನ ಪಾನಾದಿಗಳೀಯೊ ಅಭ್ಯಾಗತ ಬ್ರಾಹ್ಮಣರಿಗೆ
ಅನ್ನ ಪಾನಾದಿಗಳೀಯೊ ಆ ಚಂಡಾಲಸಪ್ತರಿಗೆ
ಅನ್ನ ಪಾನಾದಿಗಳೀಯೊ ಅಂಧ ದೀನ ಕೃಪಣರಿಗೆ
ಹಸಿವೆಗೆ ಹಾಗವನ್ನರ್ಪಿಸೊ ಪುರಂದರವಿಠಲಗೆ.

೧೯೫

ಉಗಾಭೋಗ

ಚೋರನಾದರೂ ಚಂಡಾಲನಾದರೂ
ಬ್ರಹ್ಮಘ್ನ-ಘಾತ್ಯ ಘತಕನಾದರು
ಆವನಾದರೂ ಮಧ್ಯಾಹ್ನಕಾಲಕೆ
ಅತಿಥಿಯಾಗಿ ಮನೆಗೆ ಬಂದರೆ
ತುತಿಸಿ ಅನ್ನವನಿಟ್ಟು ಸ್ವಾಮಿ
ಪುರಂದರವಿಠಲಗರ್ಪಿಸಬೇಕು.

೧೯೬

ಉಗಾಭೋಗ

ಶತ್ರುವಾಗಲಿ ಚೋರ -ಚಾಂಡಾಲನಾಗಲಿ
ಪಿತೃ ಘಾತಕಿಯಾಗಲಿ ಪ್ರೀತಿಮಾಡಲು ಬೇಕು
ಅತಿಥಿಯಾಗಿ ಮಧ್ಯಾಹ್ನ ಕಾಲದಿ ಅವ ಬಂದು ಉಂಡರೆ
ಸ್ವರ್ಗವೀವ ಪುರಂದರವಿಠಲ
ವೈಕುಂಠವನೀವ.

೧೯೭

ಉಗಾಭೋಗ

ಪರರನ್ನ ಉಂಡ ಬ್ರಾಹ್ಮಣರಿಗೆ
ಇರದು ಮಾಡಿದ ಶುಭಕರ್ಮ
ಎರಡು ಮೂರು ಭಾಗ ಅನ್ನವಿತ್ತವನಿಗಯ್ಯ
ಉದರದಲಿ ಉಂಡ ಅನ್ನದೊಂದು ಭಾಗವುಳಿವುದು
ಪೊಡವಿಯಲ್ಲಿ ಪುರಂದರವಿಠಲನು ಬಲ್ಲ

೧೯೮

ಉಗಾಭೋಗ

ಎಡದ ಕೈಯಿಂದ ನೀರ ಎತ್ತಿ ಬಲದ ಕೈಯಲ್ಲಿಟ್ಟು
ಕುಡಿದರೆ ಆರಾದರಾಪೋಶನಕೆ ಮತ್ತದು ಮದ್ಯ
ಎಡೆಯನ್ನ ಗೋಮಾಂಸವೆಂದು ಶ್ರುತಿ ಸಾರುತಿದೆ
ಪೊಡವಿಯಲ್ಲಿ ಪುರಂದರವಿಠಲನಾಜ್ಞೆ.

೧೯೯

ಉಗಾಭೋಗ

ಕುಂದದ ದೀಪವ ನಂದಿಪನಿಗೆ
ಕೂಷ್ಮಾಂಡ ಒಡೆವಳಿಗೆ
ಎಂದೂ ಆಪೋಶನವ ತನ್ನ ಕೈ-
ಯಿಂದ ತಾನೆ ಎರೆದುಕೊಂಡು ಕುಡಿವಂಗೆ
ಇವರು ಮೂವರಿಗೆ ಕುಲನಾಶನವೆಂದು
ಅಂದೆ ಪುರಂದರವಿಠಲ ನಿರೂಪಿಸಿದನರಿಯ.

೨೦೦

ಉಗಾಭೋಗ

ಮನೆಯಲ್ಲಿ ವಿಪ್ರ ಪಾದೋದಕದ ಹೆಸರಿಲ್ಲದ್ದರೆ
ಮನೆಯಲ್ಲಿ ವೇದ-ಶಾಸ್ತ್ರಧ್ವನಿ ಗರ್ಜಿಸದಿದ್ದರೆ ಮತ್ತೆ
ಮನೆಯಲ್ಲಿ ಸ್ವಾಹಾಕಾರ ಸ್ವಧಾಕಾರ ಮಾಡುವದಿಲ್ಲದಿದ್ದರೆ
ಆ ಮನೆ ಸ್ಮಶಾನಕೆ ಸಮವೆಂಬ ಪುರಂದರವಿಠಲ.

೨೦೧

ಉಗಾಭೋಗ

ಹತ್ತು ಗೋದಾನ ಸಮವು ಹರವಾಹನ ವೃಷೋತ್ಸರ್ಜನ
ಹತ್ತು ವೃಷಗಳಿಗೆ ಸಮ ಹಾರುವ ಕುದುರೆಯ ದಾನ ಕಾಣಿರೊ
ಹತ್ತು ಕುದುರೆಗಳಿಗೆ ಸಮ ಹಸ್ತಿಯದಾನ ಕಾಣಿರೊ
ಹತ್ತಾನೆಯ ಸಮ ಕ್ರತು
ಹತ್ತು ಕ್ರತುವಿಗೆ ಸಮ ಹರಿಭಕ್ತಗೆ ಕನ್ಯಾದಾನ
ಹತ್ತು ಕನ್ಯಾದಾನ ಸಮವು ಹಲವು ಜನಕೆ ಉದಕ ದಾನ
ಹತ್ತು ಉದಕ ದಾನಕೆ ಸಮ ಹಸಿದವಗೆ ಅನ್ನದಾನ
ನಿತ್ಯ ಪುರಂದರವಿಠಲನ ನೆನೆಯುತ ಪುಣ್ಯಕೆಣೆಯಿಲವಯ್ಯ.

೨೦೨

ಉಗಾಭೋಗ

ಎದೆಯ ನಾಡಿನಲೊಂದು ಸೋಜಿಗ ಹುಟ್ಟಿ
ಮಿದಿದು ಮಾಡಿದಂಥ ಕಣಕದ ರೊಟ್ಟಿ
ಅದಕೆ ಸಾಧನ ತೊವ್ವೆ-ತುಪ್ಪವನೊಟ್ಟಿ
ಅದರ ಮೇಲೆ ಸಕ್ಕರೆಯನು ಒಟ್ಟಿ
ಆವನು ಮೆಲಬಲ್ಲ ಅವ ಜಗಜಟ್ಟಿ ।
ಪುರಂದರವಿಠಲ ಸುಲಭವು ಗಟ್ಟಿ.

೨೦೩

ಉಗಾಭೋಗ

ಹಿರಿಯರ ದಿನದಲ್ಲಿ ಹೆಸರ ತೊವ್ವೆ ಅತ್ತೈಲ ಭಕ್ಷ್ಯ
ಗೋದಿ ಉದ್ದಿನಲ್ಲಿ ಮಾಡದಿರಲು
ಸಿರಿಯು ಕಾಗೆಯ ಮಾಂಸಕ್ಕೆಂದು ಶ್ರುತಿಸಾರುತಿದೆ ಜಗದೊಳು
ಪುರಂದರವಿಠಲನ ಆರಾರು ಎಲ್ಲ ಕೇಳಿ.

೨೦೪

ಉಗಾಭೋಗ

ಕುಟುಂಬ ಭರಣ ಎರಡಷ್ಟು ಬ್ರಾಹ್ಮಣರಿಗೆ
ವಿಧಿ ಗಡಗಡಿಸಿತು ಮೂರು ವಾನಸ್ಥರಿಗೆ ವಿಧಿಸಿತು
ಜಡಮತಿಯ ಬಿಟ್ಟು ಯತಿಗಳಿಗೆ ನಾಲ್ಕರಷ್ಟು
ಕುಂಡಲೀಶಯನ ಪುರಂದರವಿಠಲ ಈಪರಿ
ಪೊಡವಿ ಜನರಿಗೆ ವಿಧಿಕರ್ಮ ನಿರ್ಮಿಸಿದ.

೨೦೫

ಉಗಾಭೋಗ

ಮಾನವರು ಕೃತಯುಗದಿ ಮಾಡಬೇಕು ತಪವನು
ಜ್ಞಾನಸಾಧನ ಬೇಕು ತ್ರೇತಾಯುಗದಿ
ಏನೆಂಬ ದ್ವಾಪರದಿ ಯಜ್ಞಸಾಧನ ಬೇಕು
ಗಾನ ದಾನ ಬೇಕು ಕಲಿಯುಗದಿ ಪುರಂದರವಿಠಲ.

೨೦೬

ಉಗಭೋಗ

ಮಾನವರು ಕೃತಯುಗದಿ ತಪವ ಮಾಡಲಿಬೇಕು
ಜ್ಞಾನಸಾಧನವಿರಲಿಬೇಕು ತ್ರೇತಾಯುಗದಲಿ
ಏನೆಂಬೆ ದ್ವಾಪರದಲಿ ಯಜ್ಞವೇ ಸಾಧನವು
ಗಾನದಾನಗಳು ಕಲಿಯುಗದಿ ಪುರಂದರವಿಠಲ.

೨೦೭

ಉಗಾಭೋಗ

ಆಯುಸ್ಸು ಇದ್ದರೆ ಅನ್ನಕ್ಕೆ ಕೊರತೆಯಿಲ್ಲ
ಜೀವಕ್ಕೆ ಎಂದೆಂದಿಗೂ ತನುಗಳ ಕೊರತೆಯಿಲ್ಲ
ಸಾವು–ಹುಟ್ಟು ಸಹಜವೆಂಬ ಲೋಕದೊಳಗೆ
ಕಾಲ ಕಾಲದಿ ಹರಿಯ ಕಲ್ಯಾಣ ಗುಣಗಳ
ಕೇಳದವನ ಜನ್ಮ ವ್ಯರ್ಥ ಪುರಂದರವಿಠಲ.

೨೦೮

ಉಗಾಭೋಗ

ಹಸಿವಾಯಿತೇಳು ದೇವರ ತೊಳೆ ಎಂಬರು
ಹಸನಾಗಿ ಮನಮುಟ್ಟಿ ಪೂಜೆಯ ಮಾಡರು
ಹಾಸಿ ಹಾವಿನ ಬುಟ್ಟಿಯಂತೆ ಮುಂದಿಟ್ಟುಕೊಂಡು
ವಸುಧೆಯೊಳಗೆ ಉರಗಗಾರನ ಆಟವಾಡುವರಯ್ಯ
ಪರಧನ ಪರಸತಿ ಪರದ್ರವ್ಯಕ್ಕೆರಗುವರು
ತೊರೆಯದಿದ್ದರೆ ದುರಿತ ಪೋಗುವುದೆ?
ಸರುವವೆಲ್ಲವ ತೊರೆದು ಹರಿಯ ಧ್ಯಾನವ ಮಾಡಿದರೆ
ವರವ ಕೊಡುವ ನಮ್ಮ ಪುರಂದರವಿಠಲ.

೨೦೯

ಉಗಾಭೋಗ

ಗಂಡಮಾಡಿದ ಪಾಪ ಹೆಂಡತಿಗಿಲ್ಲ
ಹೆಂಡತಿ ಮಾಡಿದ ಪಾಪ ಗಂಡಗುಂಟು
ಹೆಂಡತಿ ಮಾಡಿದ ಪುಣ್ಯ ಗಂಡಗಿಲ್ಲ
ಗಂಡ ಮಾಡಿದ ಪುಣ್ಯ ಹೆಂಡತಿಗುಂಟು
ಜೀವ ಜೀವರ ಭೇದ ನೀನೆ ಉದ್ಧರಿಸಯ್ಯ
ಪುರಂದರವಿಠಲ.

೨೧೦

ಉಗಾಭೋಗ

ಕೀರ್ತಿ ಕಿಂಕರಗೆ ಅಪಕೀರ್ತಿ ಮಂಕುಗಳಿಗೆ
ನಷ್ಟ ಕಷ್ಟರಿಗೆ ಲಾಭ ಮಹಾತ್ಮರಿಗೆ
ದಾರಿದ್ರ್ಯ ದ್ರೋಹಿಗಳಿಗೆ ವಚನಭ್ರಷ್ಟರಿಗೆ ಅಂಧಂತಮಸ್ಸು
ಸಂದೇಹವಿಲ್ಲವಿದಕೆ ಪುರಂದರವಿಠಲ.

೨೧೧

ಉಗಾಭೋಗ

ಕುಡಿಯ ಕೊಟ್ಟ ಅಮೃತದಂತಹ ನೊರೆಹಾಲನೊಲ್ಲದೆ
ಬಟ್ಟಲೊಳಗೆ ತಿರಿತಿಂಬರು ಕೆಲರು
ಪಟ್ಟವಾಳಿಯ ಮುಂದೆ ಅರಿವೆಯನೆ ಬಯಸುವರು
ಈ ಭ್ರಷ್ಟರಿಗೇನೆಂಬೆ(ನೊ) ಪುರಂದರವಿಠಲ.

ರೂಪಕತಾಳ

ಖಳರ ಕಷ್ಟ–ನಿಷ್ಠುರಂಗಳ ತಾಳಿದರಲಾ ಮನುಗಳು ।
ತಾಳಿದರಲಾ ಮುನಿಗಳು ।
ತಾಳಿದರಲಾ ಸಕಲ ದೇವತೆಗಳು? ।
ತಾಳಿದರಲಾ ಪುರಂದುರವಿಠಲ ಒಲಿವನ್ನಕ್ಕ । ೩

ಅಟತಾಳ

ಪಾಷಂಡರ ಕೂಡೆ ಕಾಳೆಗ ।
ವಿಷ್ಣು ದ್ವೇಷಿಗಳ ಕೂಡೆ ಕಾಳೆಗ ।
ಕಾಳೆಗ ಕಾಳೆಗ ನಾಸ್ತಿಕರ ಕೂಡೆ ।
ಕಾಳೆಗ ಹರಿಡಂಭಕರ ಕೂಡೆ ।
ಪುರಂದರವಿಠಲನ ಮೆಚ್ಚಿ ಕಾದಿಸಿ ಕಾದಿಸಿ ನಮ್ಮನೆ ಗೆಲಿಸುವ ೪

ಏಕತಾಳ

ಅಸುರರ ಬದುಕಾ ಬಿಸಿಯರಿಸಿನವವ್ವ ।
ಸುರರ ಬದಕು ಸುಸ್ಥಿರ ಕಾಣಿರೊ।
ಆವಾವ ಜಗ–ಜಗಂಗಳೊಳಗೆ ಸುರರ ಬದುಕು– ।
ಪುರಂದರವಿಠಲನ ಕೋಪಪ್ರಸಾದದಿಂದ ।
ಸುರರ ಬದುಕು ಸುಸ್ಥಿರ ಕಾಣಿರೋ ೬

ಜತೆ

ಖಳಕುಲತಿಮಿರ ದಿವಾಕರನರ್ತಿಯು ।
ಖಳಕಮಲೇಂದು ಪುರಂದರ ವಿಠಲ ॥

೨೧೭

ಉಗಾಭೋಗ

ಬೆಲ್ಲದ ಕಟ್ಟೆಯ ಬೇವಿನ ಬೀಜವ ಬಿತ್ತಿ
ಜೇನು ಮಳೆಗರೆದರೆ ವಿಷ ಹೋಹುದೇನಯ್ಯ?
ಏನ ಓದಿದರೇನು ಏನ ಕೇಳಿದರೇನು
ಮನದೊಳಗಿನ ತಾಮಸ ಮಾಣದನಕ
ಏನ ಓದಿದರೇನು ಏನ ಕೇಳಿದರೇನು
ಕೊಳಲಧ್ವನಿಗೆ ಸರ್ಪ ತಲೆದೂಗುವಂದದಿ
ಎನ್ನೊಡೆಯ ಕೇಳಯ್ಯ ಶ್ರೀಪತಿ ಪುರಂದರ ವಿಠಲ.

ಸಂಕೀರ್ಣ

೨೧೮

ಸುಳಾದಿ:
ಸೃಷ್ಟಿ ಸುಳಾದಿ
ಧ್ರುವತಾಳ

ನಿನ್ನ ಬೊಮ್ಮ ಮೂರುತಿಗೆ ನಮೋ ನಮೋ ।
ನಿನ್ನ ರುದ್ರ ಮೂರುತಿಗೆ ನಮೋ ನಮೋ ।
ನಿನ್ನ ಇಂದ್ರ ಮೂರುತಿಗೆ ನಮೋ ನಮೋ ।
ನಿನ್ನ ಚಂದ್ರ ಮೂರುತಿಗೆ ನಮೋ ನಮೋ ।
ನಿನ್ನ ಸ್ಥಾವರ ಮೂರುತಿಗೆ ನಮೋ ನಮೋ ।
ನಿನ್ನ ಜಂಗಮ ಮೂರುತಿಗೆ ನಮೋ ನಮೋ ।
ನಿನ್ನ ಶ್ರೀ ಮೂರ್ತಿಗೆ ನಮೋ ಪುರಂದರ ವಿಠಲ ೧

ಮಟ್ಟತಾಳ

ಬ್ರಹ್ಮಾಂಡವೇ ಮಂಟಪ ಜ್ಯೋತಿಶ್ಚಕ್ರವೇ ದೀಪ ।
ಮಹಾಮೇರು ಸಿಂಹಾಸನ ಮಂದಾಕಿನಿ ಮಜ್ಜನ ।

ಮಹಾಲಕುಮಿ ಅಂಬರಾಭರಣ ಮಂದಾರ
ಪಾರಿಜಾತ ಮಾಲೆ ।
ಮಹಾಮೇರು ಸಿಂಹಾಸನ ಶ್ರೀ ಪುರಂದರ ವಿಠಲಗೆ ೨

ತ್ರಿವಿಡೆತಾಳ

ಆಲಯವೆಂಬೊ ರಾಶಿಯಲ್ಲಿ ಆಲದೆಲೆ ಪೊಂದೊಟ್ಟಿಲು ।
ಅಲಾ ಜೋಯೆಂದು ಪಾಡುವ ವೇದಾಂತ ದೇವಿಯರು ।
ಆಲದೆಲೆಯ ಬಾಲಕ ಪುರಂದರ ವಿಠಲ ೩

ಅಟತಾಳ

ಜಗದುದರನಾಗಿದ್ದು ಜಗದೊಳಗಿಪ್ಪೆ ।
ಜಗದ್ವ್ಯಾಪಿಯಾಗಿ ನೀ ಜಗವ ಪಾಲಿಸುವೇ ।
ಜಗವ ನಲಿದಾಡಿಸುತಲಿಪ್ಪೆ ದೇವಾ ।
ಜಗದನ್ಯ ಜಗನ್ನಾಥ ಪುರಂದರ
ವಿಠಲ ಮೋಹನ ಜಗದ್ವಂದ್ಯ ೪

ಏಕತಾಳ

ಬ್ರಹ್ಮಾಂಡ ಕಟಾಹವೇ ಪುಟಚೆಂಡು ।
ಬ್ರಹ್ಮನ ಪ್ರಳಯವೆ ಎವೆನೋಟ ।
ನಮ್ಮ ಪುರಂದರ ವಿಠಲರಾಯನಾಡುವ ಪುಟಚೆಂಡು । ೫

ಜತೆ

ಜಯಜಯ ಜನಾರ್ದನ ಜಯನಾಥ ।
ಪುರಂದರ ವಿಠಲ ಮೋಹನ ಜಯಜಯ ॥

೨೧೯

ಸುಳಾದಿ:

ಸೃಷ್ಟಿ ಸುಳಾದಿ

ಧ್ರುವತಾಳ

ನಿನ್ನ ಬೊಮ್ಮ ಮೂರುತಿಗೆ ನಮೋ ನಮೋ ।
ನಿನ್ನ ರುದ್ರ ಮೂರುತಿಗೆ ನಮೋ ನಮೋ ।
ನಿನ್ನ ಇಂದ್ರ ಮೂರುತಿಗೆ ನಮೋ ನಮೋ ।
ನಿನ್ನ ಚಂದ್ರ ಮೂರುತಿಗೆ ನಮೋ ನಮೋ ।
ನಿನ್ನ ಸೂರ್ಯ ಮೂರುತಿಗೆ ನಮೋ ನಮೋ ।
ನಿನ್ನ ಅಗ್ನಿ ಮೂರುತಿಗೆ ನಮೋ ನಮೋ ।
ನಿನ್ನ ಸ್ಥಾವರ ಮೂರುತಿಗೆ ನಮೋ ನಮೋ ।
ನಿನ್ನ ಜಂಗಮ ಮೂರುತಿಗೆ ನಮೋ
ನಮೋ ಪುರಂದರ ವಿಠಲ ।
ನಿನ್ನ ವಿಶ್ವ ಮೂರುತಿಗೆ ನಮೋ ನಮೋ ೧

ಮಟ್ಟತಾಳ

ಬೊಮ್ಮಾಂಡವೆ ಮಂಟಪ ಜ್ಯೋತಿಶ್ಚಕ್ರವೆ ದೀಪ ।
ಮಹಾಮೇರು ಸಿಂಹಾಸನ ಮಂದಾಕಿನಿ ಮಜ್ಜನ ।
ಮಂದರ ಪಾರಿಜಾತ ಮಾಲೆ ।
ಪುರಂದರ ವಿಠಲಗೆ ಅಮೃತವೇ ನೈವೇದ್ಯ ೨

ತ್ರಿವಿಡೆತಾಳ

ಆಲಯವೆಂಬುವಾರಾಸಿಯಲ್ಲಿ ಆಲದೆಲೆ ಪೊಂದೊಟ್ಟಿಲು ।
ಅಂಗುಟವೆ ಜೋಕಾಯಿ ಬಾಲ ಮುಕುಂದ ।
ಶ್ರೀ ಪುರಂದರ ವಿಠಲಗೆ ೩

ಅಟ್ಟತಾಳ

ಜಗವ ಪುಟ್ಟಿಸಿ ನೀನು ಜಗದೊಳಗಿರುವೆ ।
ಜಗದೊಳ ಹೊರಗೆ ನೀನೆ ಪೂರ್ಣ ।
ಜಗದನ್ಯನಾಗಿ ಜಗವ ಸಂಹರಿಸುವಿ ।
ಜಗದೊಳ ಹೊರಗೆ ನೀನೆ ಸ್ವಾತಂತ್ರ ।
ಜಗದೇಕ ವಸ್ತು ಪುರಂದರ ವಿಠಲ ೪

[ಜಗದುದ್ಧಾರಕನೆಂದು ಜಗವ ಮೋಹಿಸುವೆ
ಜಗದನ್ಯನಾಗಿದ್ದು ಜಗವ ಪುಟ್ಟಿಸುವೆ
ಜಗದೊಳು ಹೊರಗಿದ್ದು ಜಗವ ಪಾಲಿಸುವೆ
ಜಗನ್ನಾಥ ಪುರಂದರ ವಿಠಲ ಮೋಹನ್ನ]
ಪಾಠಾಂತರ ;

ಆದಿತಾಳ

ಬೊಮ್ಮಾಂಡಕಟಹ ಪುಟಚೆಂಡೊ ಪುಟಚೆಂಡೊ ।
ಪುರಂದರ ವಿಠಲಗೆ ಬೊಮ್ಮಾಡಕಟಹ ॥ ೫

ಜೊತೆ

ಜಯಜಯ ಜನಾರ್ದನ ಪುರಂದರ ವಿಠಲ
ಜಯ ಜಯ ಜಯ ಬಾಢ ಮೋಹನ್ನ

೨೨೦

ಸುಳಾದಿ

ಹರಿಕರ್ತೃತ್ವ ಸುಳಾದಿ

ಧ್ರುವತಾಳ

ಹರಿ ನಡೆಯದಿರಲು ನಡೆಯಲಿಲ್ಲೀ ಜಗವು ।
ಹರಿ ನುಡಿಯದಿರಲು ನುಡಿಯಲಿಲ್ಲೀ ಜಗವು ।
ಹರಿ ನೋಡದಿರಲು ನೋಡಲಿಲ್ಲೀ ಜಗವು ।

ಹರಿ ಮಾಡದಿರಲು ಮಾಡಲಿಲ್ಲೀ ಜಗವು ।
ಹರಿ ಎವಯಿಕ್ಕದಿರಲು ಎವೆಯಿಕ್ಕದೀ ಜಗವು ।
ಹರಿ ಉಸಿರಿಕ್ಕದಿರೆ ಉಸಿರಿಕ್ಕದೀ ಜಗವು ।
ಹರಿ ಸರ್ವಚೇಷ್ಟಕ ಹರಿ ಪುರಂದರ ವಿಠಲ ।
ಹರಿ ಆಡಿಸಿದಂತೆ ಆಡಿಸುತಿಪ್ಪುದೀ ಜಗವು ೧

ಮಟ್ಟತಾಳ

ಸಿರಿವತ್ಸ ಸಿರಿಧರ ಸುರಗಣ ಮುಕುಟ ಮಂಡಿತ ।
ಚರಣಾರವಿಂದ ಪುರುಷೋತ್ತಮ ವಾಮನ ವಾಸುದೇವ ।
ಹರಿದೇವೋತ್ತಮ ದೇವಕೀ ನಂದನ
ಭೂವಲ್ಲಭ ಗೋವರ್ಧನೋದ್ಧಾರ ।
ಪುರುಷೋತ್ತಮ ವಾಮನ ವಾಸುದೇವ ಪರಮೇಶ್ವರ ।
ಪರಂತಪ ಪುರಂದರ ವಿಠಲರಾಯ ಪುಂಡಲೀಕ– ।
ವರದ ಪುರುಷೋತ್ತಮ ವಾಮನ ವಾಸುದೇವ ೨

ತ್ರಿವಿಡೆತಾಳ

ಮುಂದೆ ನೃಕಂಠೀರವ ಕಂಬಿಕಾರನಾಗಿ ।
ನಂದಗೋಪನಂದನನಹನು ಹಿಂದಿನ ಕಾಲಾಳು ।
ಅಂಜದಿರೆಲೆ ಜೀವ ರಾಮ–ಲಕ್ಷ್ಮಣರು
ಧನುರ್ಧರರಾಗಿ ಎಡಬಲದಲ್ಲಿ ॥
ತಂದೆ ತಾಯಿ ಶಿಶುವ ನೋಡುವ ಅಂದದಲಯ್ದಾರು ।
ಅಂಜದಿರೆಲೊ ಜೀವ ಅನಿಮಿತ್ತ ಬಂಧು ಕಾಣೋ ತನುಸಂ– ।
ಬಂಧಿಯಂತಲ್ಲ ಅನವರತ ಪುರಂದರ
ವಿಠಲನ ಕಾಪು ಘನವೊ ೩

ಝಂಪೆತಾಳ

ನೀನನಂತ ಮಹಿಮನೆಂದರಿತರಿತು ಮ ।
ತ್ತೇನ ಶಂಕೆ ಆತಂಕವಿಲ್ಲದೆಯೆ ನಡೆಗೊಮ್ಮೆ ಕರೆವೆ ।
ನಿನ್ನನಯ್ಯ ನಾನಿನ್ನನಯ್ಯ ಆನು ನುಡಿಗೊಮ್ಮೆ ಕರೆವೆ ।

ಅಡಿಗಡಿಗೆ ಕರೆವೆ ನಿನ್ನನಯ್ಯಾ ನುಡಿಗೊಮ್ಮೆ ಕರೆವೆ ।
ಈ ಅಪರಾಧಕ್ಕೆ ನನ್ನ ತೊತ್ತ ತೊಂಡರವನಾಗಿ ।
ತೋರುತಿಹೆನ್ನೈ ಪುರಂದರ ವಿಠಲ ೪

ರೂಪಕ ತಾಳ

ನಿನ್ನಂಥವನು ನಾನಾಗಬೇಕು ಎಂದು ಎಂದೂ ಕಾಮಿಸೆ ।
ನಿನ್ನಂಥವರಿಲ್ಲವಾಗಿ ನೀನೇ ಅವತರಿಸಿ ।
ಮುನ್ನಿಹನ ಮುನಿಗಳಿಗೆ ಮನುಗಳಿಗೆ ಮತ್ತವರುಗಳಿಗೆ ।
ನಿನ್ನಂಥವರಿಲ್ಲವಾಗಿ ನೀನೇ ಸಿರಿ ಪುರಂದರ ವಿಠಲ ೫

ಆಟತಾಳ

ಆಂಜನೇಯನ ಕೂಡಿಕೊಂಡು ।
ಭುಂಜಿಸಬೇಕೆಂದು ರಾಮ ಕರೆಯಲು ।
ಎಂಜಲ ಹರಿವಾಣವನ್ನೆತ್ತಿಕೊಂಡು ಬಂದು ।
ಎಂಜಲವುಂಡುಣ್ಣ ಕಲಿಸಿದ ಹನುಮಂತ ।
ಕಂಜಾಕ್ಷ ಪುರಂದರ ವಿಠಲನ ।
ಎಂಜಲನುಂಡರು ಸಕಲ ದೇವತೆಗಳು । ೬

ಏಕತಾಳ

ಅಂದು ಇಂದು ಹರಿ ಹರಿ ।
ಎಂದೆಂದು ನೀನೇ ಗತಿ ಮತಿ ಇ–।
ನ್ನಿಂದಿರೇಶ ಹರಿ ನಂದ ನಂದನನೇ ರಾಗದಿ ।
ಇಂದಿರೇಶ ಒಂದೇ ಮಾತು ಪುರಂದರ ವಿಠಲ ತಪ್ಪದು । ೭

ಜತೆ

ನಿತ್ಯಾನಿತ್ಯ ವಸ್ತುಗಳೊಳಗೆ ।
ನಿತ್ಯತೃಪ್ತ ಪುರಂದರ ವಿಠಲ ॥

೨೨೧

ಉಗಾಭೋಗ

ಶ್ರೀದೇವಿಯ ಮೂರತಿಯಲ್ಲಿ ಭೂದೇವ
ಪರಿಪೂರ್ಣ ನೀನೆಯೇ
ಅವ್ಯಕ್ತಾಕಾಶದಲಿ ಸ್ವಾಮಿ ಅವ್ಯಕ್ತ ಪರಿಪೂರ್ಣ ನೀನೇಯೆ ।
ಅನಂತಾನಂತದಲಿ ಸ್ವಾಮಿ ಅನಂತ ಪರಿಪೂರ್ಣ ನೀನೆಯೇ
ಜಗನ್ನಾಯಕ ಪುರಂದರ ವಿಠಲ ಸರ್ವ ಜಗಕೆ
ಪರಿಪೂರ್ಣ ನೀನೆಯೇ.

೨೨೨

ಉಗಾಭೋಗ

ನಿನಗೆ ನೀನೇ ಮೋಹ ನಿನಗೆ ನೀನೇ ಪ್ರೀತಿ
ನಿನಗೆ ನೀನೇ ಭಕ್ತ ನಿನಗೆ ನೀನೇ ದ್ವೇಷಿ
ನಿನಗೆ ನೀನೇ ಜ್ಞಾನಿ ನಿನಗೆ ನೀನೇ ಮಾಳ್ಪೆ
(ನಿನಗೆ ನೀನೆ) ಪುರಂದರ ವಿಠಲ.

೨೨೩

ಉಗಾಭೋಗ

ಆರು ಅಕ್ಷರವುಳ್ಳ ವ್ಯಾಹೃತಿಯಿಂದ ಓಂಕಾರವಾಗುವುದು ಕೇಳಿ
ಈ ರೀತಿ ಇಪ್ಪತ್ತು ನಾಲ್ಕು ಅಕ್ಷರಗಳಿಂದ
ತೋರುತಲಿ ಗಾಯತ್ರಿಯ ರಚಿಸಿದ ಹರಿಯು
ಮೆರಿವುವ್ಯೆ ಪುರುಷ ಸೂಕ್ತಾದಿ ಅನಂತವೇದರಾಶಿ
ದೊರೆ ಎಂದು ಪೊಗಳುವ ಓಂಕಾರ ಶ್ರೀಕಾರ
ಮೆರೆವುವ್ಯೆ ಅಯ್ವತ್ತೊಂದು ಅಕ್ಷರಗಳು
ಈ ರೀತಿ ಅಶೇಷ ಗುಣಾಧಾರಯೆಂದು

ನಾರಾಯಣೋಥ ಪೂರ್ಣ ಗುಣಯುತ
ಭರದಿ ಜ್ಞಾನ ರೂಪ ಶಬ್ದನೊ
ಮೆರೆವ ದೇವೇಶ ಶತರ್ದನ ಧರಿಸಿದೆ
ಪುರಂದರ ವಿಠಲ.

೨೨೪

ಉಗಾಭೋಗ

ಅಲ್ಲಿ ವನಗಳುಂಟು ಆ ಪ್ರಾಕೃತವಾದ
ಫಲ ಪುಷ್ಪಗಳಿಂದೊಪ್ಪುತ್ತಲಿಹುದು
ಪಕ್ಷಿಜಾತಿಗಳುಂಟು ಅತಿವಿಲಕ್ಷಣವಾದ
ಕಿಲಕಿಲ ಶಬ್ದವು ರಂಜಿಸುವ ನುಡಿಗಳು
ಮುಕುತರು ಬಂದು ಜಲಕ್ರೀಡೆಗಳ ಮಾಡಿ (ಕುಳಿತು) ಸುಖಿಪರು
ಇಂಥ ಸುಖ ಬೇಕಾದರೆ ನೀಚವೃತ್ತಿಯ ಬಿಟ್ಟು
ಪರಲೋಕ ಸುಖವೀವ ಪುರಂದರ ವಿಠಲನ
ಭಜಿಸು ಜೀವ.

೨೨೫

ಉಗಾಭೋಗ

ಶ್ವೇತ ದ್ವೀಪದಿ ಆಯುಕ್ತ ಸ್ಥಳದಲ್ಲಿ
ಚತುರ್ಮುಖ – ಭವೇಂದ್ರಾದಿ ಸುರರು
ಭೂಭಾರವ ನಿಳುಹಬೇಕೆಂದು
ನಿನ್ನ ಸ್ತುತಿಸೆ ಸ್ತುತಿಸೆ ಬಹುಕಾಲ
ಮತ್ಸ್ಯ–ಕೂರ್ಮ ವರಾಹನಾಗಿ
ಕಾಲಕಾಲದಲಿ ಶಿಷ್ಟರ ಪಾಲಿಪನೆಂದು
ಬಿರುದು ಸಲ್ಲುವುದು (ನಿನಗೆ) ಶರಣಾಗತ ವಜ್ರ ಪಂಜರ
ಸಿರಿ ಪುರಂದರ ವಿಠಲ.

೨೨೬

ಸುಳಾದಿ

ಧ್ರುವತಾಳ

ಶ್ರೀನಾರಾಯಣದೇವ ನೀನು
ಶ್ರೀ ಲಕುಮಿಯ ಕೂಡ ಸುಖಿಸುತಿದ್ದು ।
ಶ್ರೀ ವಾಸುದೇವ ನೀ
ಮಾಯಾದೇವಿಯಲ್ಲಿ ಆ ಬೊಮ್ಮಕುವರನ ಪಡೆದೆಯಲ್ಲ ।
ಶ್ರೀಪ್ರದ್ಯುಮ್ನ ನೀ
ಕೃತಿಯಲ್ಲಿ ವಾಣಿ–ಭಾರತಿಯರ ಪಡೆದೆಯಲ್ಲ ।
ಶ್ರೀ ಸಂಕರ್ಷಣ ದೇವ ನೀ
ಜಯಾ ದೇವಿಯಲ್ಲಿ ವಾಯುಕುಮಾರನ ಪಡೆದೆಯಲ್ಲ ।
ಆ ಕುವರರಿಗೆ ಆ ಕುವರಿಯರನು
ಮದುವೆ ಮಾಡಿದೆಯಲ್ಲ ಪುರಂದರ ವಿಠಲ ೧

ಮಟ್ಟತಾಳ

ವಸುದೇವ ಮಾಯಾದೇವಿ
ಪ್ರದ್ಯುಮ್ನ ದೇವ ಕೃತಿ ದೇವಿ ।
ಸಂಕರ್ಷಣದೇವ ಜಯಾದೇವಿ
ನಿಮ್ಮೊಳು ನೀವೇ ಕೊಡು–ಕೊಳೆಯುಳ್ಳವರು ।
ನಿಮ್ಮೊಳು ನೀವೇ ದಿಬ್ಬಣಿಗರು
ನಿಮ್ಮೊಳು ನೀವೇ ಬೀಗರಾದಿರಿ ।
ಬಿದ್ದಿನವರಾದಿರಿ ಪುರಂದರ ವಿಠಲ ೨

ರೂಪಕ ತಾಳ

ಬೊಮ್ಮ– ಸರಸ್ವತಿ ಪಡೆದರಯ್ಯ ಶೇಷದೇವನ ।
ಉಮ್ಮೇಶ ದೇವನ ವಾಯು ಭಾರತಿಯರು ಪಡೆದರಯ್ಯ ।

ಶೇಷ–ಸುವರ್ಣ–ಗಿರೀಶ_ಮಹೇಂದ್ರರ ।
ಪುತ್ರ ಪೌತ್ರ ಪರಂಪರೆಯಾಗಿ ಇಪ್ಪರು ಪುರಂದರ ವಿಠಲಾ ೩

ಝಂಪೆತಾಳ

ಆದಿಸೃಷ್ಟೀಯೊಳು ಆರಾರು ಮೊದಲುದಿಸಿದರು ।
ಅವರ ನೆರೆ ಅಧಿಕ ಅವರ ನೋಡಯ್ಯ ।
ಅವರನಂತರದಲ್ಲಿ ಕಾಲ –ಜಯಾದಿಗಳು ಉದಿಸಿದರು ।
ಏನು ಆ ಮಹಂತರಾದವರ ಅಳವ ನೋಡಯ್ಯ ।
ಅವರನಂತರ ತಾರತಮ್ಯ ಅನಾದಿಸಿದ್ಧವಾಗೆ ।
ಪುರಂದರವಿಠಲನ ಸಂತತಿಯ ನೋಡಯ್ಯ ೪

ತ್ರಿವಿಡೆತಾಳ

ಸಿರಿ ಚತುರ್ಮುಖ ಪಂಚಮುಖಾದಿ ।
ಸುರರು ಮನು ಮುನಿ ಮನುಜೋತ್ತಮ –
ಮರು ತಾರತಮ್ಯತಾಯುಕ್ತರು ।
ಹರಿ ಭಕ್ತಿ ಹರಿ ಜ್ಞಾನದಿಂದ ತಾರತಮ್ಯದಿ ।
ಸಿರಿ ಪುರಂದರ ವಿಠಲರಾಯನ ।
ಚರಣ ಶರಣದೆ ಸದ್ದೈವಂಗಳು ೫

ಅಟತಾಳ

ನಿತ್ಯ ಪತ್ನೀಭಾವದೊಳಿಹ ಲಕುಮಿಗೆ ।
ನಿತ್ಯ ಪುತ್ರ ಭಾವ ಬೊಮ್ಮ ಪ್ರಾಣರಿಗೆ ।
ನಿತ್ಯ ಪೌತ್ರ ಭಾವ ವೈನತೇಯ ಶೇಷ ಗಿರೀಶ ದೇವರಿಗೆ ।
ನಿತ್ಯ ನಪ್ತೃ ಭಾವ ಇಂದ್ರ ಕಾಮರಿಗೆ ।
ನಿತ್ಯ ಭೃತ್ಯಭಾವ ಸುರಾದಿಗಳಿಗೆ ।
ನಿತ್ಯ ಜಾರ ಭಾವ ಅಪ್ಸರಸರಿಗೆ ।
ನಿತ್ಯ ಪುರಂದರ ವಿಠಲರಾಯ ೬

ಏಕತಾಳ

ಸತ್ಯ ಸ್ವರೂಪನೆ ಸತ್ಯ ಕರ್ಮಸಂಕಲ್ಪನೆ ।
ಸತ್ಯ ಕಾಮನೆ ಸತ್ಯ ವರದನೆ ।
ಸತ್ಯ ಜಗಜ್ಜನ್ಮಾದಿಕಾರಣನೆ ।
ಸತ್ಯ ಭಾಷಣನೆ ಸತ್ಯ ಭೂಷಣನೆ ।
ಸತ್ಯ ಜನೇಡ್ಯನೆ ಸತ್ಯ ಮಹಿಮನೆ ।
ಸತ್ಯ ಪುರಂದರ ವಿಠಲರಾಯ ೭

ಜತೆ

ಮನ-ವಚನಗಳಲ್ಲಿ ಕಾಯ-ಕರಣಗಳಲ್ಲಿ ।
ನೀನೆ ನೀನೇ ಪುರಂದರ ವಿಠಲಾ ೮

೨೨೭

ಸುಳಾದಿ

ಹರಿಸ್ವಾತಂತ್ರ್ಯ ಸುಳಾದಿ

ಧ್ರುವತಾಳ

ನೀನೇ ಕಾರಣ ಅಕಾರಣರು ಬೊಮ್ಮಾದಿಗಳು ।
ನೀನೇ ಕರ್ತೃ ಅಕರ್ತೃಗಳವರು ।
ಸರ್ವತಂತ್ರ ಸ್ವತಂತ್ರ ನೀನು ಅಸ್ವತಂತ್ರರವರು ।
ಮೂಲ ನೀನು ಮಧ್ಯಮರವರು ।
ನಿತ್ಯ ಎಂದೆನಿಪೆ ಲಯಕ್ಕಾಗುವರವರು ।
ಭೋಕ್ತೃ ಎಂದೆನಿಪೆ ಸರ್ವಾಂತರಾತ್ಮಕನಾಗಿ ।
ಸ್ವೀಕರಿಸುವ ಶಕ್ತಿ ನಿನ್ನಧೀನವಯ್ಯ ।
ಅನಾದಿಕಾಲ-ಕರ್ಮ ಗುಣಗಳನನುಸರಿಸಿ ।
ಫಲಗಳನುಣಿಸುವೆ ಪುರಂದರ ವಿಠಲ ೧

ಮಟ್ಟತಾಳ

ತನ್ನಿಂದೊಂದೆರಡು ಜ್ಞಾನಗುಣಾಧಿಕರ
ಮೊದಲು ಮಾಡಿಕೊಂಡು ।
ಬೊಮ್ಮನ ಪರಿಯಂತ ತಾರತಮ್ಯ
ಪಂಚಭೇದ ಮಾರ್ಗವರಿತು ।
ನವವಿಧ ಸದ್ಭಕ್ತಿ ಯುಕ್ತನಾಗಿ ।
ನಿತ್ಯ ಜನನ-ಮರಣ ದೂರ ಪುರಂದರ ವಿಠಲನ್ನ
ಗುಣ ರೂಪ ಕ್ರಿಯೆಯನ್ನು ತಿಳಿಯಬೇಕು ೨

ತ್ರಿವಿಡೆ ತಾಳ

ಪುರುಷ ಸೂಕ್ತವೇ ಮೊದಲಾದ ವೇದಗಳಿಂದ ।
ಮತ್ತೆ ಕೆಲವು ಉಪನಿಷದ್ ವೇದ್ಯನು ನೀನು ।
ಮಹಾಭಾರತ ಪುರಾಣಗಳಲಿದ್ದ ರೂಪ ಗುಣಕ್ರಿಯೆಗಳನ್ನು ।
ಸಾರ್ವಭೌಮ ಬೊಮ್ಮ ಬಲ್ಲ ।
ಆತ ನಿಂದಲಿ ವಾಣಿ - ಭಾರತಿಯರು ಬಲ್ಲರು ।
ವಾಣಿಯಿಂದಲಿ ಮಹಾದೇವ ತಾ-ಬಲ್ಲನು ।
ರುದ್ರನಿಂದಲಿ ಉಮಾದೇವಿಯು ಬಲ್ಲಳು ।
ಉಮೆಯಿಂದ ಇಂದ್ರ-ಕಾಮರು ಬಲ್ಲರು ।
ಸಕಲ ದೇವತೆಗಳು ಪುರಂದರ ವಿಠಲನ ।
ಬಲ್ಲರು ಅರಿಯರು ಸಾಕಲ್ಯದಿಂದ ೩

ಅಟತಾಳ

ಓಂಕಾರ ಪ್ರತಿಪಾದ್ಯ ವ್ಯಾಹೃತಿ ಯೊಳಗಿದ್ದು ।
ಗಾಯತ್ರಿಯೆನಿಸುವೆ ಪುರುಷಸೂಕ್ತಮೇಯ ।
ಏಕೋತ್ತರ ಪಂಚಾಶದ್ವರ್ಣಗಳಲ್ಲಿ ।
ವರ್ಣಾಭಿಮಾನಿಗಳಿಂದ ವರಣೀಯನಾಗಿಪ್ಪೆ ।
ವರಕಲ್ಪ ಕಲ್ಪಕ್ಕೂ ವರದೇಶ ವರದ ಪುರಂದರ ವಿಠಲ ।
ವ್ಯಾಹೃತಿಯೊಳಗಿದ್ದು ಗಾಯತ್ರಿಯೆನಿಸುವೆ ೪

ಆದಿತಾಳ

ಓಂ ಅಶೇಷ ಗುಣಾಧಾರ ಇತಿ ನಾರಾಯಣೋಪ್ಯಸೌ।
ಪೂರ್ಣೋ ಭೂತಿವರೋऽನಂತ ಗುಣೋ ।
ಸುಖೋ ಯದ್ ವ್ಯಾಹೃತೀರಿತಃ ।
ಗುಣೈಸ್ತತಃ ಪ್ರಸವಿತಾ ವರಣೀಯಾನ್ ಗುಣೋನ್ನತೇ ।
ಭಾರತೀ ಜ್ಞಾನ ರೂಪ ತ್ವಾತ್ ಭರ್ಗೋಧೇಯೋऽಖಿಲೈರ್ಜನೈಃ ।
ಪ್ರೇರಕಃ ಶೇಷ ಬುದ್ಧೀನಾಂ ಸ ಗಾಯಯತ್ರ್ಯರ್ಥ ಈರಿತಃ ।
ಪುರಂದರ ವಿಠಲ ಸರ್ವೋತ್ತಮ ಕಾಣಿರೊ ೫

ಜತೆ

ನಿನ್ನ ಮಹಿಮೆಗಳ ನೀ ಬಲ್ಲೆಯಲ್ಲದೆ ।
ಅನ್ಯರು ಬಲ್ಲರೆ ಪುರಂದರ ವಿಠಲ ॥

೨೨೮

ಸುಳಾದಿ

ಧ್ರುವತಾಳ

ಈ ಮರ್ತ್ಯದೊಳಗಿಲ್ಲ ಅರಸಿ ನೋಡಲು ದೇವ ।
ಅರಸು ಮೆಚ್ಚಲು ಪ್ರಜೆ ದ್ವೇಷಿಸುವರು ।
ಆಳುಗಳು ಒಲಿದಲ್ಲಿ ಅರಸು ಮೆಚ್ಚನು ಒಮ್ಮೆ ।
ಈ ಮರ್ತ್ಯ ಜನರ ಚರಿತವು ಎಲೊ ರಂಗ ।
ಮೂಲೋಕದರಸು ನೀ ನಿನ್ನಯ ಭಕ್ತ ಜನರುಗಳು ।
ನೀ ಕರುಣಿಸಲು ತಾವು ಕರುಣಿಸುವರು ।
ನೀನೊಲಿಯದಿರೆ ಒಮ್ಮೆಯೂ ತಿರುಗಿ ನೋಡರು ಹರಿಯೆ ।
ಈ ಪರಿಯ ನಿನ್ನ ಆಜ್ಞೆಯಲಿ ಈ ಮಹಾವಿಭವದೊಳು ।
ಆರು ಮೊರೆಯಾಗುವರು ಆರು ರಕ್ಷಿಪರೆನ್ನ ।
ಆರಂಜದಿರೆಂದು ಅಭಯವನೀವರ ಕಾಣೆ ।
ಶ್ರೀನಾಥ ಅನಿಮಿತ್ತ ದಯಾಸಿಂಧೂ ।
ನಿನ್ನ ದಾಸರ ಒಲುಮೆಯ ಪಾಲಿಸೊ ಗುಣನಿಧೆ ।

ನಿನ್ನ ಚರಿತಾಮೃತವ ತೋರಿ ಸಲಹಯ್ಯ ।
ಪ್ರಸನ್ನ ಮೂರುತಿ ಅಹೋಬಲ ನಿಲಯ
ಪುರಂದರ ವಿಠಲರಾಯ ೧

ಮಟ್ಟತಾಳ

ಜಯ ಜಯ ಬದರಿಕಾಶ್ರಮ ನಾರಾಯಣ ।
ಜಯ ಜಯ ಬಾದರಾಯಣ ಪ್ರವೀಣ ।
ಜಯ ಜಯ ಪ್ರಯಾಗದಲಿಪ್ಪ ನಾರಾಯಣ ।
ಜಯ ಜಯ ಕಾಶೀ ಬಿಂದು ಮಾಧವನೇ ।
ಜಯ ಜಯ ಜಗನ್ನಾಥ ಸಿಂಹಾದ್ರಿ ।
ಜಯ ಜಯ ಅಹೋಬಲ ನಾರಸಿಂಹ ।
ಜಯ ಜಯ ತಿರುಮಲರಾಯ ಜಯ ಕಂಚೀವರದ ।
ಜಯ ಜಯ ರಂಗನಾಥ ಶ್ರುತಿ ಗೀತ ।
ಜಯ ಸೇತುರಾಮ ಜಯ ಪದ್ಮನಾಭ ।
ಜಯ ಜಯ ಜಯಾ ಮುದ್ದು ಉಡುಪಿ ಕೃಷ್ಣ ।
ಜಯ ಜಯ ಪುಂಡರೀಕ ಮುನಿವರದ ಪುರಂದರ ವಿಠಲ ೨

ತ್ರಿವಿಡೆ ತಾಳ

ಜಯ ಗದಾಧರ ಜಯ ಜಯ ಜಗದೀಶ ।
ಜಯ ಸೇತುವಿನಲಿ ರಾಮ ।
ಜಯ ಸೋದೆಯಲಿ ನೆಲಸಿ ಮೆರೆವ ತ್ರಿವಿಕ್ರಮರಾಯ ।
ದ್ವಾರಾವತಿಯ ಗೋವಿಂದ ಜಯ
ವಾದಿರಾಜ ಪ್ರಿಯ ಹಯವದನ
ಜಗದ್ದೇವನೇ ಜಯಮಧ್ವ ಗುರುವರದನೇ ।
ಜಯ ಜಯ ಕರುಣಾಕರ ಜಯ ಜಯ ಕಮಲನಾಭ ।
ಜಯ ಜಯ ಕಂಬುಕಂಠ ಕೌಸ್ತುಭಧರನೇ ।
ಜಯ ಜಯ ಮರಕತ ಮಕರ ಕುಂಡಲಧರನೆ ।
ಅನಂತಾನಂತ ಗುಣ ನಿಲಯ ಅನಂತಾನಂತ ರವಿಶತತೇಜ ।
ಅನಂತಾನಂತ ಪುರಂದರ ವಿಠಲ ನಮೋ ನಮೋ ೩

ಅಟ್ಟತಾಳ

ಕ್ಷೀರ ಸಾಗರಕೆ ಶ್ರೀ ಹರಿಯು ಬಂದಂತೆ ।
ಪ್ರಹ್ಲಾದನಲ್ಲಿಗೆ ನರಸಿಂಹ ಬಂದಂತೆ ।
ಬಲಿಯ ಮನೆಗೆ ವಾಮನ ಬಂದಂತೆ ।
ಅಕ್ರೂರನ ಮನಗೆ ಶ್ರೀ ಅಚ್ಯುತ ಬಂದಂತೆ ।
ವಿದುರನ ಮನೆಗೆ ಶ್ರೀ ಕೃಷ್ಣ ಬಂದಂತೆ ।
ಗೋಪಿಯರ ಮನೆಗೆ ಗೋಪಾಲ ಬಂದಂತೆ ।
ಲಕ್ಷ್ಮೀಪತಿ ಪುರಂದರ ವಿಠಲ ದಿವ್ಯನಾಮವು ।
ಎನ್ನ ನಾಲಗೆಗೆ ಬಂದು ನೆರೆದಿತು ೪

ಏಕತಾಳ

ಕೃಷ್ಣಾ ಕೃಷ್ಣಾ ಎಂಬುದಕೆ ।
ಅಂತ್ಯ ಕಾಲದಿ ಮೊದಲಾ ಶಬ್ದಕೆ ।
ನಾಮವು ಮುದದಿ ಮುಕ್ತಿಯ ತೋರಿತು ।
ಇದು ಎನ್ನ ಮನಸಿನ ಮಾಯೆಯೇನೂ ಇಲ್ಲದೆ ।
ನಾಚಿಕೆ ಎನ್ನ ಪ್ರತೀಕ್ಷಿಸದಯ್ಯಾ ಪುರಂದರ ವಿಠಲ ।
ನಿಮ್ಮ ತ್ರಾಣಿಯಾದವನ ೫

ಜತೆ

ಹೊಕ್ಕುಳಲಿ ಗಂಡು ಪೆತ್ತವರುಂಟೆ ।
ಉಂಗುಷ್ಟದಲಿ ಪೆಣ್ಣ ಪೆತ್ತವರುಂಟೆ ।
ಮಿಕ್ಕಲಾದ ದೇವರಿಗೆ ಈ ಸೌಭಾಗ್ಯವುಂಟೆ ।
ಮೊರೆ ಹೊಕ್ಕೆ ಮೊರೆ ಹೊಕ್ಕೆ ಪುರಂದರ ವಿಠಲ ॥

೨೨೯

ಸುಳಾದಿ

ರೂಪಕ ತಾಳ

ಆಳುಗಳ ಪರಿಯ ಆಳಿದನೆ ಬಲ್ಲ ।
ಆಳಿದನ ಪರಿಯ ಆಳುಗಳೆ ಬಲ್ಲರು ।
ಆಳುಗಳ ಪರಿಯ ಆಳಿದನೆ ಪರಿಯ ।
ಆರೇನನೆಂದರೂ ಆರೇನ ಮಾಡುವರಯ್ಯ ।
ಆರ ಕೊಂಡೆಮಗೆ ಏನ ಮಾಡುವುದಯ್ಯ ।
ಆರುಮುನಿದೆಮ್ಮನು ಏನು ಮಾಡುವರಯ್ಯ ।
ಸಿರಿ ಪುರಂದರ ವಿಠಲಗೆ ನಮಗೆ ।
ಇಂದೆ ಬಂದಿತೆ ಸ್ವಾಮಿ-ಭೃತ್ಯ ಸಂಬಂಧ? ೧

ಮಟ್ಟತಾಳ

ಮಧುರೆಯೊಳಗೆ ನಿನ್ನ ತುಂಟಾಟಿಕೆಗಳ ನೋಡ ।
ಉದ್ಧವನೆತ್ತ, ಕುಬುಜೆಯ ಮನೆಯೆತ್ತ ।
ನೀ ಮಾಡಿದ ಮರ್ಯಾದೆ ಪುರಂದರ ವಿಠಲ ।
ಉದ್ಧವನೆತ್ತ ॥ ೨

ಧ್ರುವತಾಳ

ಉಳ್ಳವರುಂಡಾರು ಮರೆಯ ಮರೆಯ ।
ಬಲ್ಲಿರ್ದನಾಳುಗಳು ತಲೆಯಲಿ ನುಡಿದರೇನೆಂಬೆ ।
ಬಲ್ಲಿರ್ದನಾಳುಗಳು ದಟ್ಟಿಯಲಿ ನಡೆದರೇನೆಂಬೆ ।
ಬಲ್ಲಿರ್ದ ಪುರಂದರ ವಿಠಲನಾಳುಗಳು ೩

ಅಟ್ಟತಾಳ

ಬೆಟ್ಟತಂದಾ ದೈವವು ಹೊಂದಿದ್ದ ।
ಕಟ್ಟಾ ಸಮುದ್ರದ ನಂಟನಾಗಿ ಉಪ್ಪಿನ ಬರ ಕಂಡ ।

ಅರಸಿನ ಮಗ ತಿರುತಿನುತಿಹದ ಕಂಡ ।
ನಿನ್ನ ತೊಂಡನು ನಿನ್ನ ತೊಂಡನು ನಿನ್ನ ತೊಂಡನಾಳುವ ।
ನೀನಾಳುವೆ ನಿನ್ನ ತೊಂಡ ನಾನು ಬರಿಯ ಮಾತಲ್ಲ ।
ವಿಠಲ ನಿನ್ನಾಣೆ ನಿನ್ನ ತೊಂಡ ನಾನು ಪುರಂದರ ವಿಠಲ ೪

ಜತೆ

ನಿತ್ಯಾನಿತ್ಯ ಸುವಸ್ತುಗಳೊಳಗೆ ।
ನಿತ್ಯ ಸುನಿತ್ಯ ಪುರಂದರ ವಿಠಲ ॥

೨೩೦

ಉಗಾಭೋಗ

ಅಣು-ರೇಣು-ತೃಣದಲ್ಲಿ ಪರಿಪೂರ್ಣನಾಗಿರುವ
ಗುಣವಂತನೇ ನಿನ್ನ ಮಹಿಮೆ ಗಣನೆ ಮಾಡುವರಾರು?
ಎಣಿಸಿ ನೋಡುವಳಿನ್ನು ಏಣಾಕ್ಷಿ ಸಿರಿದೇವಿ
ಜ್ಞಾನ ಸುಗುಣತತ್ವ ವೇಣುಗೋಪಾಲ ಹರೆ
ಕಾಣಿಸೊ ನಿನ್ನ ಮಹಿಮೆ ಪುರಂದರ ವಿಠಲ.

೨೩೧

ಉಗಾಭೋಗ

ಅಣುವಿಗೆ ಅಣುವಾಗಿ ಘನಕೆ ಘನವಾಗಿ
ಗುಣತ್ರಯ ತತ್ವಕ್ಕೆ ಮೀರಿದ ದೊರೆಯಾಗಿ
ತೃಣ ಮೊದಲಾಗಿ ಮೇರು ಪರಿಯಂತ ಇರುವವ ನೀನಾಗಿ
ಗುಣನಿಧಿ ಪುರಂದರ ವಿಠಲ ನಿನ್ನ ಮಹಿಮೆ
ಎಣಿಕೆ ಮಾಡುವರಾರು ಎನ್ನಪ್ಪನೆ.

೨೩೨

ಉಗಾಭೋಗ

ನಿನ್ನಡಿ ಇಳೆಯ ನೀರಡಿಯಾಡಿತು ।
ನಿನ್ನ ಉಂಗುಟವು ಬ್ರಹ್ಮಾಂಡ ನುಂಗಿತು ।
ನಿನ್ನ ನಖ ಸುರನದಿಯ ತಂದಿತು ।
ನಿನ್ನ ಕರ ಮಧುಕೈಟಭರನೊರಸಿತು ।
ನಿನ್ನೆರಡು ತೋಳು ಸಿರಿ ಲಕುಮಿಯನಪ್ಪಿತು ।
ನಿನ್ನ ಪಾದದ ನೆನಹೇ ಸಕಲ ಸಂಪದ
(ವೋ) ಪುರಂದರ ವಿಠಲ.

೨೩೩

ಉಗಾಭೋಗ

ಬ್ರಹ್ಮಾಂಡವದೆಲ್ಲ ರೋಮ ಕೂಪದೊಳಿರಲು
ಅಮ್ಮಾ ಅಮ್ಮಾ ಎನುತ ಅಮ್ಮೆಯ ಬೇಡುತ್ತಿಹೆ
ಹೆಮ್ಮಕ್ಕಳು ನಗರೆ ಬ್ರಹ್ಮಾದಿಗಳು
ಮೊಮ್ಮಕ್ಕಳು ನಗರೆ ರುದ್ರಾದಿಗಳು
ಮರಿ ಮಕ್ಕಳು ನಗರೆ ಮಿಕ್ಕ ಸುರರೆಲ್ಲ
ರಮ್ಮೆಯರಸ ಸಿರಿ ಪುರಂದರ ವಿಠಲ.

೨೩೪

ಉಗಾಭೋಗ

ಸಕಲ ಶ್ರುತಿ ಪುರಾಣಗಳೆಲ್ಲ ಅದಾವನ ಮಹಿಮೆ
ಸುಖ ಪೂರ್ಣ ಸುರವರಾರ್ಚಿತ ಪಾದ
ಶಕಟಮರ್ದನ ಶಾರದೇಂದು ವಕ್ತ್ರ
ರುಚಿಕರವರ ಕಲ್ಯಾಣ ರಂಗ
ರುಕ್ಮಿಣೀರಮಣ ಪರಿಪೂರ್ಣ ನಮ್ಮ ಪುರಂದರ ವಿಠಲ.

೨೩೫

ಉಗಾಭೋಗ

ಸಿವಿರಿಂಚ್ಯಾದಿಗಳು ಅರಿಯದಂತಹ ಮಹಿಮೆ
ಅರಿತು ಪಾಡಲು ಜಗದಿ ಅರುಹಕಾರಯ್ಯ
ಅರವಿಂದದಳ ನಯನ ಶರಣೇಂಧವರ ಕಾವ
ಕರುಣಾಸಾಗರ ನಮ್ಮ ಪುರಂದರ ವಿಠಲ.

೨೩೬

ಉಗಾಭೋಗ

ಹರಿಯೆಂಬುದೇ ಲಗ್ನ ಬಲವು
ಹರಿಯಂಬುದೇ ತಾರಾಬಲವು
ಹರಿಯಂಬುದೇ ದೈವ ಬಲವು
ಹರಿ ಶ್ರೀ ಲಕುಮಿ ಪತಿ ಪುರಂದರ ವಿಠಲನ
ಬಲವಯ್ಯ ನರರಿಗೆ.

೨೩೭

ಉಗಾಭೋಗ

ಹರಿಯೆಂಬೋದು ಲಗ್ನ ಬಲವು
ಹರಿಯೆಂಬೋದೆ ಸುದಿನ ಬಲವು
ಹರಿಯೆಂಬೋದೆ ತಾರಾ ಬಲವು
ಹರಿಯೆಂಬೋದೆ ಚಂದ್ರ ಬಲವು
ಹರಿಯೆಂಬೋದೆ ವಿದ್ಯಾ ಬಲವು
ಹರಿಯೆಂಬೋದೆ ದ್ರವ್ಯ ಬಲವು
ಹರಿಲಕ್ಷ್ಮೀಪತಿ ಪುರಂದರ ವಿಠಲನೆ
ಬಲವಯ್ಯ ಸರ್ವ ಸುಜನರಿಗೆ.

೨೩೮

ಉಗಾಭೋಗ

ಹರಿಸರ್ವೋತ್ತಮನೆಂಬ ಹಿರಿಯ ಪುತ್ರನಿರಲಿಕ್ಕೆ
ನರಪುತ್ರನಿಂದಾಗುವ ಗತಿ ಯಾವುದಯ್ಯ
ಸೃಷ್ಟಿಕರ್ತನೆಂಬ ಶ್ರೇಷ್ಠ ಪುತ್ರನಿರಲಿಕ್ಕೆ
ದುಷ್ಟ ಪುತ್ರನಿಂದ ಆಗುವ ಗತಿ ಯಾವುದಯ್ಯ
ನಾರಾಯಣನೆಂಬ ನಾಮ ಪುತ್ರನಿರಲಿಕ್ಕೆ
ಕಾಮಪುತ್ರನಿಂದ ಆಗುವ ಗತಿ ಯಾವುದಯ್ಯ
ಪುರಂದರ ವಿಠಲನೆಂಬ ಪುಣ್ಯ ಪುತ್ರ ನಿರಲಿಕ್ಕೆ
ಅನ್ಯ ಪುತ್ರರಿಂದ ಆಗುವ ಗತಿ ಯಾವುದಯ್ಯ.

೨೩೯

ಉಗಾಭೋಗ

ಹರಿಸರ್ವೋತ್ತಮನೆಂಬ ಹಿರಿಯ ಪುತ್ರನಿರಲಾಗಿ ಈ
ನರಪುತ್ರರಿಂದ ಆಹೋದೇನಯ್ಯ
ಪದ್ಮನಾಭನೆಂಬ ದೊಡ್ಡ ಪುತ್ರನಿರಲಾಗಿ
ಈ ದಡ್ಡ ಪುತ್ರರಿಂದಲಿ ಆಗುವ ಗತಿಯೇನಯ್ಯ
ಶ್ರೀ ಕೇಶವನೆಂಬ ಜ್ಯೇಷ್ಠ ಪುತ್ರ ನಿರಲಾಗಿ
ಈ ನಷ್ಟ ಪುತ್ರರಿಂದಾಗುವ ಸ್ಥಿತಿಯೇನಯ್ಯ
ಪುರಂದರ ವಿಠಲನೆಂಬ ಪುಣ್ಯ ಪುತ್ರನಿರಲಾಗಿ
ಈ ಅನ್ಯ ಪುತ್ರರಿಂದಲಿ ಆಗುವ ಮತಿಯೇನಯ್ಯ.

೨೪೦

ಉಗಾಭೋಗ

ಗುರಿಯ ನೆಚ್ಚವನೆ ಬಿಲ್ಲಾಳು
ಹರಿಯ ಭಜಿಸಲು ಅರಿಯದವ ಮಾಸಾಳು

ಹರಿಯೆಂದು ಓದದ ಓದೆಲ್ಲ ಹಾಳು
ಪುರಂದರ ವಿಠಲ ಪಾರ್ಥನ ಮನೆಯೊಳು.

೨೪೧

ಉಗಾಭೋಗ

ಗುರಿಯನೆಚ್ಚವನೆ ಬಿಲ್ಲಾಳು
ಹರಿಯ ಭಜಿಸಲರಿಯದವನೆ ಮಾಸಾಳು
ಹರಿಯೆಂದು ಓದದೆಲ್ಲವು ಹಾಳು
ಪುರಂದರವಿಠಲ ಪಾರ್ಥನ ಮನೆಯೊಳು.

೨೪೨

ಉಗಾಭೋಗ

ಹರಿಹರಿಯೆಂದು ಕರೆಯುವುದೇ ತಡ
ಕರೆದಲ್ಲಿಗೆ ಬರುವ ನರಹರಿಯೆಂದು
ಕರೆಯುವುದೆ ತಡ ಕರೆದಲ್ಲಿಗೆ ಬರುವ
ಸುರನರ ಲೋಕದಲ್ಲೆಲ್ಲಿದ್ದರೂ ಕರೆದಲ್ಲಿಗೆ ಬರುವ
ಪುರಂದರ ವಿಠಲನೆಂದು ಕರೆಯುವುದೆ ತಡ
ಕರೆದಲ್ಲಿಗೆ ಬರುವ.

೨೪೩

ಉಗಾಭೋಗ

ಹಾ ಕೃಷ್ಣ! ಹಾ ದ್ವಾರಕಾವಾಸಿ ! ಎಂದೆನಲು
ಶ್ರೀಪತಿ ಅಕ್ಷಯವಸ್ತ್ರವನಿತ್ತು
ದ್ರೌಪತಿಯ ಅಭಿಮಾನವ ಕಾಯ್ದ ನಮ್ಮ
ಆಪತ್ತಿಗೆ ಆಪನೆಂಬ ಶ್ರೀಪತಿ ಪುರಂದರ ವಿಠಲ
ಆ ಪಾರ್ಥನ ರಮಣಿಗೆ ಅಕ್ಷಯ ವಸ್ತ್ರವನಿತ್ತು ಕಾಯ್ದ.

೨೪೪

ಉಗಾಭೋಗ

ಸಕಲ ಸಾಧನಕೆಲ್ಲ ಸಿದ್ಧಿ ಗೊಳಿಸುವುದು
ಭಕುತಿ ಸಾಧನವಲ್ಲದ ಬೇರೆ ಸಾಧನವುಂಟೆ?
ಭಕುತಿಗೆ ಅಭಿಮಾನಿ ಭಾರತೀ ದೇವಿಯರ ಕರುಣ
ಮುಕುತಿ ಸಾಧನವೆಂದು ಮನದಲ್ಲಿ ಸ್ತುತಿಸಿರೊ
ಮುಕುತೀಶ ನಮ್ಮ ಪುರಂದರ ವಿಠಲನ
ಕರುಣಕ್ಕೆ ಭಕುತಿ ಕಾರಣವಲ್ಲದೆ ಬೇರೆ ಸಾಧನವುಂಟೆ?.

೨೪೫

ಉಗಾಭೋಗ

ಅರ್ಭಕನ ತೊದಲ್ನುಡಿ (ಗೆ) ತಾಯ್ತಂದೆ (ಯರು) ಕೇಳಿ ಮನ ।
ಉಬ್ಬಿ ನಲಿವಂದದಲಿ ಉರಗಶಯನ (ನೆ)
ಕೊಬ್ಬಿ ನಾನಾಡಿದರೆ ತಾಳಿ ರಕ್ಷಿಸುವ ಎನ್ನ ।
ಕಬ್ಬು ಬಿಲ್ಲನಯ್ಯ ಪುರಂದರ ವಿಠಲ.

೨೪೬

ಉಗಾಭೋಗ

ಮಲಗಿ ಪಾಡಿದರೆ ಕುಳಿತು ಕೇಳುವನು
ಕುಳಿತು ಪಾಡಿದರೆ ನಿಂತು ಕೇಳುವನು
ನಿಂತು ಪಾಡಿದರೆ ನಲಿದು ಕೇಳುವನು
ನಲಿದು ಪಾಡಿದರೆ ಸ್ವರ್ಗ ಸೂರೆ ಬಿಟ್ಟನೆಂಬ ಪುರಂದರ ವಿಠಲ.

೨೪೭

ಉಗಾಭೋಗ

ಗಜ-ತುರಗ ಸಹಸ್ರ ದಾನ
ಗೋಕುಲ ಕೋಟಿ ದಾನ
ಭೂದಾನ ಸಮುದ್ರ ಪರ್ಯಂತರ
ಧನಿ ಪುರಂದರ ವಿಠಲನ ಧ್ಯಾನಕ್ಕ ಸಮವಿಲ್ಲ.

೨೪೮

ಉಗಾಭೋಗ

ಜೀವ ಜೀವಕೆ ಭೇದ ಜಡ ಜಡಕೆ ಭೇದ
ಜೀವ ಜಡ ಪರಮಾತ್ಮನಿಗೆ ಭೇದ
ಜೀವಾ ಜೀವ ಮುಕ್ತಾ ಮುಕ್ತರ ಭೇದ
ಸಂಸಾರದೊಳು ಭೇದ ಮುಕ್ತರೊಡೆಯ ಹರಿ
ಭಕ್ತರಾಧೀನ ಜಗತ್‌ಕರ್ತು ನೀ ಸಲಹಯ್ಯ
ಪುರಂದರ ವಿಠಲ.

೨೪೯

ಉಗಾಭೋಗ

ಗುರು ಕರುಣ ವಾಹೋದು ಪರಮ ದುರ್ಲಭವಯ್ಯ
ಪರಿಪರಿ ವ್ರತಗಳಾಚರಿಸಿ ಫಲವೇನು?
ಗುರು ಕರುಣವೊಂದಲ್ಲದೆ ಗತಿ ಬೇರೆಯುಂಟೆ?
ಶರೀರದ ಪುತ್ರ ಮಿತ್ರ ಕಳತ್ರ ಬಾಂಧವರು
ನೆರೆ ಸಲಿಸುವರೆ ಸದ್ಗತಿಗೆ ಸಾಧನವ?
ನಿರುತದಿ ಗುರುಪಾದವ ನಿಜವಾಗಿ ಮನದಲ್ಲಿ
ಅರಿತು ಭಜಿಸಲು ಅಖಿಳ ಸಂಪದವಿತ್ತು
ಪರಿಪಾಲಿಸುವ ನಮ್ಮ ಪುರಂದರ ವಿಠಲ.

೨೫೦

ಉಗಾಭೋಗ

ಗುರು ಕರುಣ ಹೊಂದುವುದು ಪರಮ ದುರ್ಲಭವಯ್ಯ
ಪರಿ ಪರಿ ವ್ರತಗಳನ್ನಾಚರಿಸಲು ಫಲವೇನು
ಶರೀರಾದಿ ಪುತ್ರಮಿತ್ರ ಕಳತ್ರ ಬಾಂಧವರು
ಇರಿಸುವರೆ ಸದ್ಗತಿಗೆ ಸಾಧನದಿ
ನಿರುತವು ಗುರುಪಾದ ನಿಜವಾಗಿ ಮನದಲ್ಲರಿತು ಭಜಿಸಲು
ಅಖಿಲ ಸಂಪದವಕ್ಕು ಪುರಂದರ ವಿಠಲ.

೨೫೧

ಉಗಾಭೋಗ

ಮನದಭಿಮಾನಿ ಮಹಾರುದ್ರನ ಭಜಿಸಲು ।
ಅನವರತ ಶ್ರೀಹರಿಯ ಆರಾಧಿಸುವುದಕ್ಕೆ ।
ಮನಸುದ್ಧಿಯನೀವ ಮತಿ ಕೊಡುವ ।
ಮನುಜೋತ್ತಮರು ಕೇಳಿ ಮನಕೆ ಪ್ರೇರಕನವನು ।
ವನಜಾಕ್ಷ ಪುರಂದರ ವಿಠಲನ ಒಲುಮೆಗೆ ।
ಮನಸು ಕಾರಣವಲ್ಲದೆ ಮಿಗಿಲಾವುದು.

೨೫೨

ಸುಳಾದಿ

ಕಲಿಕಾಲ ಸುಳಾದಿ

ಧ್ರುವತಾಳ

ಅತಿ ಮೀರಿತು ಶ್ರೀಹರಿ ಹರಿ ಅನ್ಯಾಯ ।
ಕಲಿಕಾಲ ದುಷ್ಕಾಲ ಅತಿ ಅತಿ ಮೀರಿತು ।
ಅಕರ್ಮ ಕುಕರ್ಮ ಅತಿ ಅತಿ ಮೀರಿತು ।
ಪತಿಕರಿಸೆನ್ನ ಪುರಂದರ ವಿಠಲರಾಯ ೧

ಮಟ್ಟತಾಳ

ಇನ್ನೆಂತೀ ಕಲಿಕಾಲವ ಕಳೆವೆ ।
ಎನ್ನೆಂತೀ ಪರಸುಖ ಗತಿ ಪಡೆವೆ ।
ಆನೆಂತು ನಿನ್ನ ಕಾಂಬುವೆ ಪುರಂದರ ವಿಠಲ? ೨

ರೂಪಕ ತಾಳ

ಈ ಕಲಿಯುಗದಲಿ ಒಂದಡಕಲಗಡಿಗೆ ।
ದೇಹ ಬಂಧನ ಬಿಟ್ಟು ಕಾಯುತಹರೆ ।
ತನು-ಪ್ರಾಣಂಗಳ ಬಿಟ್ಟು ಕಾಯುತಹರೆ ।
ತನ್ನವರೆಲ್ಲ ಮರೆದು ಕಾಯುತಹರೆ ।
ಆನೆಂತು ಜೀವಿಪೆ ಪುರಂದರ ವಿಠಲ । ೩

ಆದಿತಾಳ

ಎಂತೀ ಪಾಪವ ಕಳೆವೆ ಆಗಲಿ ।
ಎಂತು ಆ ಕರ್ಮವ ಕಳೆವೆ ಆಗಲಿ ।
ಎಂತಹ ನಾಯಕ ನರಕವೆ ಆಗಲಿ ।
ಎಂತಹನಾಢ್ಯ ಪುರಂದರ ವಿಠಲ? ೪

ಏಕತಾಳ

ಶ್ರೀಮನ್ನಾರಾಯಣ ಹರಿಪಾರಾಯಣರು ।
ಅಂಜುವರೆ ಭಯಕೆ ಅಂಜುವರೆ ಭಯಕೆ? ।
ಪುರಂದರ ವಿಠಲ ಹರಿ ಪಾರಾಯಣರು? । ೫

ಜತೆ

ಒಂದೆ ನಾಮವೆ ಸಾಕು ಮುಕುತಿಗೆ ।
ಪುರಂದರ ವಿಠಲರಾಯ ಮಿಕ್ಕ ನಾಮಕೆ ಋಣಿ ॥

೨೫೩

ಸುಳಾದಿ

ಖಳ ಕೋಪ ಸುಳಾದಿ

ಧ್ರುವತಾಳ

ಖಳರ ನೋಟವೇ ಹಾವಲ್ಲದೆ ಹಾವ ಬೇರೆ ಇನ್ನರಸಲೇತಕೆ? ।
ಖಳರ ನೋಟವೇ ಹುಲಿಯಲ್ಲದೆ ಹುಲಿಯ
ಬೇರೆ ಇನ್ನರಸಲೇತಕೆ? ।
ಖಳರಕೂಟವೇ ವಿಷವಲ್ಲದೆ ವಿಷವ ಬೇರೆ ಇನ್ನರಸಲೇತಕಯ್ಯ? ।
ಖಳರೊಳಗೆನ್ನ ಪುಟ್ಟಿಸಿದೆ ಖಳರಿಗೊಪ್ಪಿಸಿ ಕೊಟ್ಟೆಯಯ್ಯ ।
ಖಳರ ಖಂಡದಿಂಡವ ಮುರಿವನೊ ।
ಖಳರ ನಿವಾರಣ ಪುರಂದರ ವಿಠಲ ೧

ಮಟ್ಟತಾಳ

ಖಳರ ಐಶ್ವರ್ಯ ಖಳರ ವಿಭೂತಿ ಖಳರ ದೌತ್ಯ ।
ಖಳರ ವಿದ್ಯೆಗಳು ಖಳರ ತ್ಯಾಗ ಖಳರ ಕರ್ಮ ।
ಖಳರ ಕಷ್ಟ-ನಿಷ್ಠುರಗಳು ಪುರಂದರ ವಿಠಲನ ।
ಪರಮಪ್ರಿಯರ ಅವಮನ್ನಣೆ ಇವು ।
ಸದಾ ಸರ್ವದಾ ನೋಡಾ ೨

ರೂಪಕ ತಾಳ

ಖಳರ ಕಷ್ಟ-ನಿಷ್ಠುರಗಳ ತಾಳಿದರಲಾ ಮನುಗಳು ।
ತಾಳಿದರಲಾ ಮುನಿಗಳು ತಾಳಿದರಲಾ ಸಕಲ ದೇವತೆಗಳು ।
ತಾಳಿದರಲಾ ಪುರಂದರ ವಿಠಲವೊಲಿವನ್ನಕ ? ೩

ಆಟತಾಳ

ಪಾಷಂಡರ ಕೂಡೆ ಕಾಳಗ ವಿಷ್ಣುದ್ವೇಷಿಗಳ ಕೂಡೆ ಕಾಳಗ ।
ನಾಸ್ತಿಕರ ಕೂಡೆ ಕಾಳಗ ಹರಿಡಂಬಕರ ಕೂಡೆ ಕಾಳಗೆ ।

ಪುರಂದರ ವಿಠಲ ಮೆಚ್ಚಿ ಕಾದಿಸಿ ಕಾದಿಸಿ ।
ನಮ್ಮನೇ ಗೆಲಿಸುವ ೪

ಏಕತಾಳ

ಅಸುರರ ಬದುಕು ಆ ಬಿಸಿಯ ಅರಗಿನ ವೊಟ್ಟ (?) ।
ಸುರರ ಬದುಕು ಸುಸ್ಥಿರ ಕಾಣಿರೊ ।
ಅದಾವ ಜಗ-ಜಗಂಗಳೊಳಗೆ ಸುರರ
ಬದುಕು ಸುಸ್ಥಿರ ಕಾಣಿರೊ ।
ಪುರಂದರ ವಿಠಲನ ಕೋಪ ಪ್ರಸಾದದಿಂದೆ ೫

ಜತೆ

ಖಳ ಕುಲತಿಮಿರ ದಿವಾಕರನರ್ಥಿಯು ।
ಖಳಕಮೇಲೇಂದು ಪುರಂದರ ವಿಠಲ ॥

೨೫೪

ಉಗಾಭೋಗ

ಅನ್ಯರೊಬ್ಬರ ಕಾಣೆ ಮನ್ನಿಸುವರೆನ್ನ ಆ-
ಪನ್ನರಕ್ಷಕನೆ ಪರಿಪಾಲಿಸೊ ಇನ್ನು ।
ಪನ್ನಂಗಶಯನ ಶ್ರೀ ಪುರಂದರ ವಿಠಲನೆ.

೨೫೫

ಉಗಾಭೋಗ

ಅಪಾಯ (ಕೋಟಿ) ಕೋಟಿಗಳಿಗೆ ಉಪಾಯ ಒಂದೇ
ಹರಿ ಭಕ್ತರು ತೋರಿಕೊಟ್ಟ ಉಪಾಯ ಒಂದೇ
ಪುರಂದರ ವಿಠಲನೆಂದು ಭೋರಿಟ್ಟು
ಕರೆವ ಉಪಾಯವೊಂದೇ.

೨೫೬

ಉಗಾಭೋಗ

ಎಡಕೆ ಬಾವಿಯುಂಟು ಬಲಕೆ ಕೆರೆಯು ನೋಡು
ಮುಂದೆ ಕಾಳ್ಗಿಚ್ಚು ಹಬ್ಬಿದೆಯೊ ಎಲೊ ದೇವ
ಹಿಂದೆ ಹುಲಿ ಬೆನ್ನಟ್ಟಿ ಬರುತಲಿದೆ
ಆರಿಗೆ ಆರೋ ಪುರಂದರ ವಿಠಲ.

೨೫೭

ಉಗಾಭೋಗ

ಎಂದಿಗಾದರೂ ನಿನ್ನ ಪಾದಾರವಿಂದವೆ ಗತಿ
ಯೆಂದು ನಬಿದೆನೊ ಬಂಧು ಬಳಗವ ಬಿಟ್ಟು
ಬಂದೆ, ನಿನ್ನ ಮನೆಗಿಂದು ಮಂದರಧರ ಗೋ–
ವಿಂದ ಪುರಂದರ ವಿಠಲನೆ ನೀ ಬಂಧು.

೨೫೮

ಉಗಾಭೋಗ

ಎರಗಿ ಭಜಿಪೆನು ನಿನ್ನ ಚರಣ ಸನ್ನಿಧಿಗೆ
ಕರುಣದಿಂದಲಿ ಎನ್ನ ಸ್ಮರಣೆಯ ಎನಗಿತ್ತು
ಮರೆಯದೆ ಸಲಹೊ ಶ್ರೀ ಪುರಂದರ ವಿಠಲ.

೨೫೯

ಉಗಾಭೋಗ

ಏನ ಓದಿದರೇನು ಏನ ಕೇಳಿದರೇನು
ಹೀನ ಗುಣಂಗಳ ಹಿಂಗದ ಜನರು

ಮಾನಾಭಿಮಾನವ ನಿನಗೊಪ್ಪಿಸಿದ ಮೇಲೆ
ನೀನೆ ಸಲಹಬೇಕೊ ಪುರಂದರ ವಿಠಲ.

೨೬೦

ಉಗಾಭೋಗ

ಏಳುತ್ತ ಗೋವಿಂದಗೆ ಕೈಮುಗಿಯುವೆ
(ಕಣ್ಣಿವೆ) ಕಣ್ಣನು (ತೆಗೆದು) ತೆರೆದು ನೋಡುವೆ ಶ್ರೀಹರಿಯೆ
ನಾಲಗೆಯಲಿ ನಾರಾಯಣಾ ನರಹರಿ
ಸೋಳ ಸಾಸಿರ ಗೋಪಿಯರರಸಾ ಎಂಬೆ ಎ-
ನ್ನಾಳುವ ದೊರೆ ಪುರಂದರ ವಿಠಲ.

೨೬೧

ಉಗಾಭೋಗ

ಒಬ್ಬರ ಬಂಟನಾಗಿ ಕಾಲ ಕಳೆವುದಕ್ಕಿಂತ
ನಿರ್ಬಂಧವಿಲ್ಲದೆ ತನ್ನಿಚ್ಛೆಯೊಳಿದ್ದು
ಲಭ್ಯವಾದೊಂದು ತಾರಕ ಸಾಕು ಸಾಕು ಎನಗೆ
ಅಬ್ಬರ ಒಲ್ಲೆನಯ್ಯ ಅಷ್ಟರಲ್ಲೆ ಸಂತುಷ್ಟನಹೆನು
ಅ(ಕ)ರುಣಾಕರ ಪುರಂದರ ವಿಠಲ (ಲಭ್ಯ)
ಒಂದು ತಾರಕ ಸಾಕು ಸಾಕು.

೨೬೨

ಉಗಾಭೋಗ

ದಿನ ದಿನ ದಿನ ದಿನಾ ನೆನೆದು ನೆನೆದು ತೋದುತೋದು
ಜನುಮವು ವ್ಯರ್ಥವಾಯಿತು
ತೋದ ಹರಗೋಲು ವೈಕುಂಠಕ್ಕೆ ಒಯ್ದೀತೆ
ತೋದು ತೋದು ನಿನ್ನವಧಾನವು ಕಂಡುದಿಲ್ಲವೆಂದು

ಆದಿ ಮೂರುತಿ ನಮ್ಮ ಪುರಂದರ ವಿಠಲನ
ಪಾದತೀರಥದಲಿ ನಾದಲಿ ಎನ್ನ ಮನ.

೨೬೩

ಉಗಾಭೋಗ

ನಿನ್ನನೆ ಪಾಡುವೆ ನಿನ್ನನೆ ಪೊಗಳುವೆ
ನಿನ್ನನೆ ಬೇಡಿ ಬೇಸರಿಸುವೆನಯ್ಯ
ನಿನ್ನ ಕಾಲನು ಪಿಡಿವೆ ನಿನ್ನ ಹಾರಯಿಸುವೆ
ನಿನ್ನ ತೊಂಡರಿಗೆ ಕೈ ಗೊಡುವೆ
ನಿನ್ನಂತೆ ಸಾಕಬಲ್ಲವನು ಇನ್ನುಂಟೆ
ಘನ್ನ ಪುರಂದರ ವಿಠಲ ದೇವರ ದೇವ.

೨೬೪

ಉಗಾಭೋಗ

ಮನೆಯಿಂದ ಸಂತೋಷ ಕೆಲವರಿಗೆ ಲೋಕದಲ್ಲಿ
ಧನದಿಂದ ಸಂತೋಷ ಕೆಲವರಿಗೆ ಲೋಕದಲ್ಲಿ
ಸತಿಯಿಂದ ಸಂತೋಷ ಕೆಲವರಿಗೆ ಲೋಕದಲ್ಲಿ
ರತಿಯಿಂದ ಸಂತೋಷ ಕೆಲವರಿಗೆ ಲೋಕದಲ್ಲಿ
ಇನಿತು ಸಂತೋಷ ಅವರವರಿಗಾಗಲಿ
ಎನಗೆ ಸಂತೋಷ ನಿನ್ನ ರತಿಯೊಳಗೆ
ಪುರಂದರ ವಿಠಲ.

೨೬೫

ಉಗಾಭೋಗ

ಹರಿ ನಿನ್ನ ನಾಮವ ಸ್ಮರಿಸಲು
ದುರಿತ ಪೀಡಿಪುದುಂಟೆ ।

ಅರಿತು ಭಜಿಪರಿಗೆಲ್ಲ ಕೈವಲ್ಯ ನಿನ್ನಯ
ಕರುಣವರಿತು ತನ್ನ ಮಗನ ಕೂಗಿದವಗೆ
ಮರಣ ಕಾಲದಿ ಒದಗಿದೆ ಶ್ರೀ ಪುರಂದರ ವಿಠಲ.

೨೬೬

ಉಗಾಭೋಗ

ಹೀನ ಮಾನವನ ಯೋನಿಯಲಿ ಜನಿಸದೆನೊ ನಾನು
ಏನಾದರೇನು ದೀನದಯಾಸಾಗರನೆ ಕು-
ಯೋನಿಯಲಿ ಎನ್ನ ದೇಹವೆನ್ನದಂತೆ ಮಾಡು
ಜ್ಞಾನವನು ಬೋಧಿಸಿ ಸಾನುರಾಗದಿ ಕಾಯೋ
ವೇಣುಧರ ವೇದಾಂತ ವೇದ್ಯ ನರಹರಿಯೆ
ಕಾನನದೊಳು ಕಣ್ಣು ಕಾಣದವ ಬಿದ್ದಂತೆ
ನಾನು ಬಿದ್ದಿಹೆ (ನೀ) ಕಾಯೊ ಪುರಂದರವಿಠಲ.

೨೬೭

ಉಗಾಭೋಗ

ಹೃದಯ ಕಮಲದಲ್ಲಿ ನಾನಿನ್ನ
ಪದ ಪದುಮನ ನೆನೆವಂತೆ ಮಾಡು
ಯದುರಾಜಾಧಿರಾಜ
ಸುದರುಶನಧರ ಯದುರಾಜಾಧಿರಾಜ
ಇದನೆ ಕೃಪೆ ಮಾಡೆನಗೆ ಮದನ ಪಿತ
ಪುರಂದರ ವಿಠಲ ಯದು ರಾಜಾಧಿರಾಜ.

ಎನ್ನ ವಸ್ತು–ವಾಹನ ನಿನ್ನಾಧೀನ ।
ಎನ್ನ ಪುತ್ರ–ಮಿತ್ರ–ಕಳತ್ರರು ನಿನ್ನಾಧೀನ ।
ಎನ್ನ ಅನ್ನೋದಕ ನಿನ್ನಾಧೀನ ।
ಎನ್ನ ಆಧೀನ ಆವುದುಂಟು ನೀನೆ ನೋಡಾ ।
ಎನ್ನ ಇಚ್ಛೆಯೆ ಪುರಂದರ ವಿಠಲ ೧

ಮಟ್ಟತಾಳ

ತೇನವಿನಾ ತೃಣಮಪಿ ನ ಚಲತಿ ಎಂದು ಪ್ರಮಾಣ ।
ಅಣೋರಣೀಯಾನ್ ಮಹತೋಮಹಿಯಾನ್ ।
ಮಣಿಗಣಕಾಧಾರ ಗುಣವು ಇದ್ದಂತೆ ।
ಗುಣಗಣಭರಿತ ಶ್ರೀ ಪುರಂದರ ವಿಠಲ ।
ಅನೋರಣೀಯಾನ್ ಜಗಕೆ ನಿನ್ನಾಧಾರ । ೨

ರೂಪಕ ತಾಳ

ನಿನ್ನವನೆಂದೆನ್ನ ಕೈಯ ಪಿಡಿಯಲು ।
ನಿನ್ನ ಸೇವೆಯ ಸಾಧನಕೆ ಯತ್ನವ ಮಾಳ್ಪೆ ।
ಎನ್ನ ಯತ್ನಕ್ಕೆ ನಿನ್ನ ಸಹಾಯವು ।
ನಿನ್ನ ಯತ್ನವು ನಿನ್ನ ಸ್ವಾಧೀನ ।
ನಿನ್ನ ಯತ್ನಕೆ ನಿನ್ನ ಸಹಾಯವು ।
ನಿನ್ನಾಧೀನ ಸರ್ವವು ಪುರಂದರ ವಿಠಲ ೩

ಝಂಪೆತಾಳ

ಸ್ಮೃತಿಯೇ ಪಥಗತಿಯೇ ನಿನ್ನ ತಿಳಿಸುವ ।
ಮತಿಹೀನ ಕರ್ಮಠರು ಬಲ್ಲರೆ ಜಗದ ।
ಪತಿಯೇ ನಿನ್ನಯ ಸ್ಥಿತಿಯ ಜಗದ ।
ಉತುಪತ್ತಿ ಸ್ಥಿತಿಗಳಿಗೆ ನೀನೆ ಕಾರಣನೆಂದು ।
ಮತಿವಂತರೆಲ್ಲ ಬಲ್ಲರಯ್ಯ ಪುರಂದರ ವಿಠಲ ೪

ತ್ರಿವಿಡೆತಾಳ

ಶ್ರುತಿ ಉಪನಿಷತ್ತುಗಳಲ್ಲಿ ।
ಸ್ಮೃತಿ ಪುರಾಣಗಳಲ್ಲಿ ।
ಇತಿಹಾಸ ಪಂಚರಾತ್ರಾಗಮಗಳಲ್ಲಿ ।
ಪ್ರತಿಪಾದ್ಯನು ನೀನೆ ಅತಿಶಯರಿಗತಿಶಯ ।
ಚತುರ್ಮುಖ ಪಂಚಮುಖ ದೇವತೆಗಳಿಗೆಲ್ಲ ।
ಗತಿ ನೀನೆ ಪುರಂದರವಿಠಲ ದೇವ । ೫

ಅಟ್ಟತಾಳ

ವೇದಗಳೆಂಬ ದಾವಣಿಗಳಲ್ಲಿ ।
ನಾಮಗಳೆಂಬ ಮೂಗುನೇಣುಗಳಿಂದ ।
ಜೀವರುಗಳೆಂಬ ಎತ್ತುಗಳನೆ ಕಟ್ಟಿ ।
ಭಕುತಿರಸವೆಂಬ ಮುಟ್ಟುಗಳನೆ ಹಾಕಿ ।
ಕರ್ಮವೆಂಬ ಭಾರವನು ಹೇರಿ ।
ಆಡವನೊಬ್ಬ ಪುರಂದರ ವಿಠಲನೆಂಬ ।
ದೊಡ್ಡ ಬೇಹಾರಿಗ ಕಾಣಿರೊ । ೬

ಆದಿತಾಳ

ಸಚರಾಚರ ಪ್ರೇರಿಸುವವರ ಆರಯ್ಯ ।
ಸ್ವತಂತ್ರರಾರಯ್ಯ ಯಂತ್ರ ವಾಹಕನಾರೊ ।
ಪುರಂದರವಿಠಲರಾಯ ನೀನಲ್ಲದೆ ಇನ್ನಾರಯ್ಯ । ೭

ಜತೆ

ನಿನ್ನನೆ ನಿನ್ನನೆ ನಿನ್ನನೆ ಮೊರೆ ಹೊಕ್ಕೆ ।
ಮನ್ನಿಸಿ ಕಾಯಯ್ಯ ಪುರಂದರ ವಿಠಲಯ್ಯ ॥

೨೭೩

ಉಗಾಭೋಗ

ಶ್ರವಣದಿಂದ ಹೋಯಿತು ಬ್ರಹ್ಮಹತ್ಯಾ ಪಾಪ
ಸ್ಮರಣೆಯಿಂದ ಹೋಯಿತು ಸೇರಿದ್ದ ಪಾಪವು
ಎಲ್ಲಿದ್ದ ಅಜಮಿಳ ಎಲ್ಲಿತ್ತು ವೈಕುಂಠ
ಕೊಟ್ಟಾತನೆ ಬಲ್ಲ ಪುರಂದರ ವಿಠಲ.

೨೭೪

ಉಗಾಭೋಗ

ಹರಿ ನೀ ಮುನಿದರೆ ಆರು ಬಂದೇನು ಮಾಡುವರು
ಹರಿ ನೀ ಒಲಿದರೆ ಆರು ಮುನಿದೇನ ಮಾಡುವರು
ಪುರಂದರ ವಿಠಲ.

೨೭೫

ಉಗಾಭೋಗ

ಅಚ್ಯುತನ ಭಕುತರಿಗೆ ಮನ
ಮೆಚ್ಚದವನು ಪಾಪಿ
ಆನರನೊಳ್ ಆಡಿ ನೋಡಿ ನುಡಿಯೆ
ಮನುಜವೇಷದ ರಕ್ಕಸನೋಳ್ ಆಡಿನುಡಿದಂತೆ
ಸಚ್ಚಿದಾನಂದಾತ್ಮ ಪುರಂದರವಿಠಲನು
ಮೆಚ್ಚನು ಮೆಚ್ಚನು ಕಾಣೊ ಎಂದೆಂದಿಗೂ.

೨೭೬

ಉಗಾಭೋಗ

ಅಣುಕದಿಂದಾಗಲಿ ಡಂಭದಿಂದಾಗಲಿ
ಎಡಹಿದಡಾಗಲಿ ಬಿದ್ದಡಾಗಲಿ

ತಾಗಿದಡಾಗಲಿ ತಾಕಿಲ್ಲದಡಾಗಲಿ
ಮರೆದು ಮತ್ತೊಮ್ಮೆ ಆಗಲಿ
ಹರಿ ಹರಿ ಎಂದವರಿಗೆ ನರಕದ ಭಯವೇಕೆ ?
ಯಮ ಪಟ್ಟಣ ಕಟ್ಟಿದರೇನು
ಯಮ ಪಟ್ಟಣ ಬಟ್ಟ ಬಯಲಾದರೇನು?
ಹರಿದಾಸರಿಗೆ ಪುರಂದರವಿಠಲ.

೨೭೭

ಉಗಾಭೋಗ

ಒಡಲೊಳು ಪೊಗದನಕ ಅರೆ ಬಿಡರು ನಾಮ ಸುಧೆಯ
ಕೊಡುವರೊ ಮುಕುತಿಯ ತಡೆವರೊ ಭವಸಿಂಧುವ
ಮೃಡಸಖ ಪುರಂದರವಿಠಲನ ದಾಸರು
ಕೊಡುವರೊ ಮುಕುತಿಯ.

೨೭೮

ಉಗಾಭೋಗ

ಕಣ್ಣಲ್ಲಿ ನೀರಿಲ್ಲ ಮನದಲ್ಲಿ ಕರಗಿಲ್ಲ
ಅತ್ತೆ ಸತ್ತರೆ ಸೊಸೆ ಅಳುವಂತೆ
ಅತ್ತೆ ಅತ್ತೆ ಎಂತೆಂದು ನಾನತ್ತೆ
ಅತ್ತೆ ಸತ್ತರೆ ಎದೆ ಎರಡು ಪರಿಮಾಯಿತೆಂದು
ಅತ್ತೆ ಅತ್ತೆ ಎಂದು ಅತ್ತೆ ಪುರಂದರ ವಿಠಲನ
ದಾಸರೆಲ್ಲರ ಮುಂದೆ ಹಾಡಿ ಹಾಡಿ ನಾನತ್ತೆ.

೨೭೯

ಉಗಾಭೋಗ

ತನುವೆಂಬ ದೊಡ್ಡ ದೋಣಿಯಲಿ
ಹರಿನಾಮವೆಂಬ ಬಂಡವ ತುಂಬಿ

ವ್ಯವಹಾರವನು ಮಾಡುವೆನಯ್ಯ
ಇಂದ್ರಿಯಗಳೆಂಬ ಸುಂಕಿಗರು ಅಡ್ಡಾದರೆ
ಮುಕುಂದನ ಮುದ್ರೆಯನೇ ತೋರಿ ಹೊಳೆಯ ದಾಟುವೆನಯ್ಯ
ಪುರಂದರವಿಠಲನಲ್ಲಿಗೆ ಪೋಗೆ
ಮುಕುತಿ ಸುಖದ ಲಾಭವ ಪಡೆವೆ.

೨೮೦

ಉಗಾಭೋಗ

ದರಿದ್ರರೆನಬಹುದೆ ಹರಿದಾಸರ
ಸಿರಿವಂತರೆನಬಹುದೆ ಹರಿದ್ರೋಹಿಗಳ
ಹರಿದಾಸರ ಮೇಲಿದ್ದ ಕರುಣವು ಸಿರಿದೇವಿಯ ಮೇಲಿಲ್ಲ
ಪುರಂದರ ವಿಠಲನ ಆಳುಗಳಿಗೆ
ಎಲ್ಲಿಹುದ್ಕೆ ಮಾನ ಅಭಿಮಾನ ಜಗದಿ.

೨೮೧

ಉಗಾಭೋಗ

ದಾಸನಾಗುವುದಕ್ಕೆ ಏಸು ಜನ್ಮದ ಸುಕೃತ
ಭಾಸುರ ರವಿಕೋಟಿ ಶ್ರೀಶ ಸುಗುಣವಂತ
ನಾಶರಹಿತ ನಿನ್ನ ದಾಸರ ದಾಸ್ಯವ
ಬೇಸಾಗಿ ಕೊಡು ಕಂಡೆಯ ಪುರಂದರ ವಿಠಲ.

೨೮೨

ಉಗಾಭೋಗ

ನಿನ್ನ ಕಾಲ ಹೆಜ್ಜೆಯ ಪಿಡಿದು ನಾನಿಲುವೆ
ನಿನ್ನ ಪಂಜು ಹಿಡಿದು ಒಡ್ಡಿ ಬೊಬ್ಬಿಡುವೆ
ನಿನ್ನ ಛಕ್ರಚಾಮನ (ಛತ್ರಚಾಮರ) ಪಿಡಿದೇಳುವೆ

ನೀರ ನೀವಳಿಸಿಕೊಂಡು ಕೊಬ್ಬುವೆನು
ಬಿಡೆನು ಬಿಡೆನು ನಿನ್ನ ಚರಣಕಮಲವ
ಪುರಂದರ ವಿಠಲ ನಿನ್ನ ಪಾದವ ಬಿಡೆನು.

೨೮೩

ಉಗಾಭೋಗ

ನಿನ್ನ ದಾಸನಾಗಿ ನಿನ್ನೆಂಜಲವನುಂಡು
ನೀನುದಾಸೀನ ಮಾಡಿದರೆ ಲೋಕರು ನಗರೆ
ನಿನ್ನ ಚರಣ ಕಮಲವನ್ನು ಕೊರಳಲಿ ಕಟ್ಟುವೆ
ಪುರಂದರ ವಿಠಲ.

೨೮೪

ಉಗಾಭೋಗ

ನಿನ್ನಾಳೆಂದಡೆ ಹರಿಯೆ ಇನ್ನೇನಿನ್ನೇನು
ಎನ್ನೊಳಿದ್ದವ ನೀನಾದೆ ನಿನ್ನ ದಾಸ ನಾನಾದೆ
ಇನ್ನು ನೀನು ಸಾಕದಿರಲು ನಿನ್ನ ದಾಸರು ನಗರೆ
ಘನ್ನ ಮಹಿಮೆ ಪುರಂದರ ವಿಠಲ ರಾಯ.

೨೮೫

ಉಗಾಭೋಗ

ಯದು ಕೃಷ್ಣ ಯಾದವ ಕೃಷ್ಣ ಎಂದವರಿಗೆ ಅಂತ್ಯ ಕಾಲದಲಿ
ಮೊದಲಿನ ಶಬ್ದ ಕೇಳಿದ ಮಾತ್ರದಿಂದ
ಮುದದಿ ಮುಕ್ತಿಯನಿತ್ತಂತೆ
ಸದಾ ಭಕುತಿಯ ತನ್ನ ಪಾದದಲ್ಲಿ ಕೊಟ್ಟು
ಎರಡನೆಯ ನಾಮ ಕೇಳಿದ್ದಕ್ಕೆ ಏನ ಕೊಡಲೆಂದು ನಾಚಿ
ನಮ್ರ ಸದಯ ಶ್ರೀ ಪುರಂದರವಿಠಲ ಸ್ವಾಮಿ
ಮುದದಿ ನಾಮ ಸ್ಮರಣೆಯ ಕೊಟ್ಟು ಕಾಯ್ವ.

೨೮೬

ಉಗಾಭೋಗ

ಲೇಸು ದಾಸರಿಗೆ ಕ್ಲೇಶ ದುಷ್ಟರಿಗೆ
ಸಿರಿ ಭಾಗವತರಿಗೆ ಪಾಪ ಪಾಷಂಡಿಗಳಿಗೆ
ಕೀರ್ತಿ ಕಿಂಕರರಿಗೆ ಅಪಕೀರ್ತಿ ಮಂಕುಗಳಿಗೆಲ್ಲ
ಸುಖ ಮಹಾತ್ಮರಿಗೆ ಕಷ್ಟ ನಷ್ಟರಿಗೆ
ಪುರದರ ವಿಠಲನ ಆಳುಗಳಿಗೆ ಮುಕುತಿ
ಇತರರಿಗೆ ಅಂಧಂತಮಸ್ಸು ಸಂದೇಹವಿಲ್ಲವೊ.

೨೮೭

ಉಗಾಭೋಗ

ಲೇಸುದಾಸರಿಗೆ ಸಿರಿಭಾಗವತರಿಗೆ
ದಾರಿದ್ರ್ಯ ದ್ರೋಹಿಗಳಿಗೆ ಕೀರ್ತಿ ಕಿಂಕರಿಗೆ
ಅಪಕೀರ್ತಿ ಕ್ರೂರರಿಗೆ ಜಯದೇವರಿಗೆ
ಅಪಜಯ ಮಂಕುಗಳಿಗೆ ನಷ್ಟ ಕಪಟರಿಗೆ
ಲಾಭ ಮಹಾತ್ಮರಿಗೆ ಪುರಂದರ ವಿಠಲನ ಆಳುಗಳಿಗೆ ಮುಕ್ತಿ
ದೈತ್ಯರಿಗೆ ಅಂಧಂತಮಸ್ಸು ಸಂದೇಹವಿಲ್ಲ.

೨೮೮

ಉಗಾಭೋಗ

ಸಂತತಿಯಪ್ಪುದು ರಾಮಾಯಣವ ಕೇಳಲು
ಸಕಲ ಪಾಪಹರವು ಭಾರತ ಕೇಳಲು
ತಂತು ಮಾತ್ರವೆ ವಿಷ್ಣು ಪುರಾಣವ ಕೇಳಲು
ತತ್ವ ವಿವೇಕವು ಬಾಹೋದು
ಅಂತರವರಿತು ಭಾಗವತ ಕೇಳಲು
ಆಹೋದೈ ಜ್ಞಾನ ಭಕ್ತಿ ವೈರಾಗ್ಯವು

ಸಂತತ ಪುರಂದರ ವಿಠಲನ ಸಂಕೀರ್ತನೆ ಮಾಡಲು
ಸಕಲವು ಬಾಹೋದು ಸಾಯುಜ್ಯ (ವು).

೨೮೯

ಸುಳಾದಿ

ಧ್ರುವ ತಾಳ

ಶಿವನೆ ದುರ್ವಾಸ ಕಾಣಿರೊ ಶಿವನೆ ಶುಕಯೋಗಿ ಕಾಣಿರೊ ।
ಶಿವನೆ ಅಶ್ವತ್ಥಾಮ ಕಾಣಿರೊ ।
ಶಿವಗುತ್ಪತ್ತಿಯಿಲ್ಲ ಎಂಬರನೆ ನೆಂಬೆನಯ್ಯ ।
ಶಿವನಾದಿಯಲ್ಲಿ ಬೊಮ್ಮನ ಸುತ ।
ಬೊಮ್ಮನಾದಿಯಲಿ ಅಚ್ಚ್ಯುತನ ಸುತ ।
ಪುರಂದರವಿಠಲನೊಬ್ಬನೆ ಅಜಾತನಾಗಿಯೂ
ಜಾತನಾಗಿ ಇರುತಿಪ್ಪ ೧

ಮಟ್ಟತಾಳ

ಹರಿಶಂಕರರೊಳಗೆ ಉತ್ತಮರಾರೆಂದು ।
ಪರೀಕ್ಷಿಸಬೇಕೆಂದು ಆದಿಯ ಯುಗದಲ್ಲಿ ।
ಸರಸಿಜ ಸಂಭವ ಸುರಪತಿಯಾದಿ ಸುರರು ।
ಸಾರಂಗ ಪಿನಾಕಿಗಳಿಂದೆಚ್ಚಾಡಿರೆನಲು ।
ಹರಿ ಸಾರಂಗವನೆತ್ತಿದ ಏರಿಸಿದ ಶಂ-
ಕರ ನಿಶ್ಚೇಷ್ಟಿತನಾಗಿದ್ದ ಕಾಣಿರೂ ।
ಹರಿಯಾಡಿಸಲಾಡುವರಜ ಭವಾದಿಗಳು
ಸಿರಿ ಪುರಂದರ ವಿಠಲನೆ ಸರ್ವೋತ್ತಮ ಕಾಣಿರೋ ೨

ರೂಪಕತಾಳ

ಜನಕನ ಮನೆಯಲ್ಲಿ ಮುರಿಸಿಕೊಂಡ ಬಿಲ್ಲು ।
ಶಿವನ ಬಿಲ್ಲೆಂದರಿಯಿರೊ ಹರನ ಬಿಲ್ಲೆಂದರಿಯಿರೊ ।
ಸುರಾಸುರರ ಭಂಗ ಬಡಿಸಿ ಬಿದ್ದ ಬಿಲ್ಲು ।
ಸಿರಿ ಪುರಂದರ ವಿಠಲ ಶ್ರೀರಾಮ ಮುರಿದ ಬಿಲ್ಲು । ೩

ಅಟ್ಟತಾಳ

ಬಾಣಾಸುರನ ಭಕುತಿಗೊಲಿದು ಬಂದು ।
ಅವನ ಬಾಗಿಲ ಕಾಯ್ದುದಿಲ್ಲವೆ ಶಿವನು ।
ಬಾಹು ಸಹಸ್ರವ ಕಡಿಯುವಾಗ ।
ಬೇಕು ಬೇಡೊಂದೊಮ್ಮೆ ಎಂದನೆ ಶಿವನು ।
ಪುರಂದರವಿಠಲ ಪರದೈವವೆಂದರಿತ ಕಾರಣ ।
ಒಪ್ಪಿಸಿಯೇ ಕೊಟ್ಟಾ ಶಿವನು ೪

ತ್ರಿವುಡೆತಾಳ

ವಿಷ್ಣು ಸಹಸ್ರ ನಾಮಗಳ ಶಿವ ಜಪಿಸಿ ಉಪದೇಶಿಸುವ ಗೌರಿಗೆ ।
ವಿಷ್ಣು ಸಹಸ್ರನಾಮಗಳ ಸಮ ರಾಮರಾಮೆಂದು ಭಕ್ತಿ ಭರದಲಿ ।
ವಿಷ್ಣು ಪುರಂದರವಿಠಲ ರಾಯನ
ಅತ್ಯಧಿಕ ಪ್ರಿಯನು ಉಮೇಶನು ೫

ಝುಂಪೆತಾಳ

ರಾಮ ವಿಶ್ವರೂಪವ ಕಂಡು ಶಂಕರ ।
ರಾಮನೇ ಪರದೈವ ರಾಮನೇ ಪರದೈವ ।
ರಾಮನೆ ಎಂದು ಸ್ತುತಿಸಿದ ಕಾರಣ ।
ರಾಮನೇ ಪರದೈವ ರಾಮಚಂದ್ರ ಸಿರಿ ಪುರಂದರವಿಠಲ ೬

ಏಕತಾಳ

ಮಣಿಕರ್ಣಿಕೆ ತೀರಥದಲ್ಲಿ ಮುಮುಕ್ಷುಗಳಿಗೆ ಉಪದೇಶಿಸುವ ।
ತಾರಕ ಬ್ರಹ್ಮ ಸ್ವರೂಪ ಆ ರಾಮನೆ ಕಾಣಿರೊ ।
ರಾಮನಾಮ ಮಂತ್ರವ ಪುರಂದರ ವಿಠಲರಾಯಗೆ ।
ಬಲ್ಲರಿಯ ಸದಾಶಿವ ೭

ಜತೆ

ಜಗಕೆ ಶ್ರೀ ಅಜಭವಾದಿಗಳು ಗುರುಗಳು ।
ಜಗಕೆ ಶ್ರೀ ಪುರಂದರ ವಿಠಲನೆ ದೈವ ॥

೨೯೦

ಸುಳಾದಿ

ಧ್ರುವತಾಳ

ಸಂತತ ಹನ್ನೆರಡು ಕೋಟಿ ಸುವರ್ಣ ಪುಷ್ಪ ಸಮರ್ಪಿಸಲು ।
ಅಂತಾಫಲದಿ ಕೋಟಿ ಕೋಟಿ ಗುಣಿತ ತುಳಸೀ ದಳಕೆ ।
ತಂತು ಮಾತ್ರ ಭಕ್ತಿಯಲಿ ತವಕದಿ ಪೂಜಿಸು ಶ್ರೀ–
ಮಂತ ಶ್ರೀ ಪುರಂದರ ವಿಠಲ ವೈಕುಂಠವ ನೀವ ೧

ಮಟ್ಟತಾಳ

ಆದಿವಾರದಿ ಸಂಜೆಯಲಿ ರಾತ್ರಿಯಲಿ ।
ಅಂಗಾರಕ ಶುಕ್ರವಾರದಲ್ಲಿ ।
ಆದಿತ್ಯ ಸೋಮಗ್ರಹಣ ಅಮವಾಸ್ಯೆ ಹುಣ್ಣಿವೆ ।
ದ್ವಾದಶಿಯಲಿ ಸಾದರಾರ್ಚಿತ ಜಯಂತಿಗಳಲಿ ।
ವೈಧೃತಿ ವ್ಯತಿಪಾತ ಸಂಕ್ರಾಂತಿಗಳಲಿ ಶ್ರೀ ಪು–
ರಂದರವಿಠಲ ಮುನಿವ ಶ್ರೀ ತುಲಸಿಯ ತೆಗೆದರೆ ೨

ತ್ರಿಪುಟಿ ತಾಳ

ಸಾರಂಗಧರನಿಗೆ ಸಂವತ್ಸರದ ತುಳಸಿ ।
ಆರು ತಿಂಗಳ ಬಿಲ್ವ ಆಹೋದು ಅಚ್ಯುತನರ್ಚನೆಗೆ ।
ಕಾರುಣ್ಯ ಮೂರುತಿಗೆ ಕಮಲ ಏಳು ದಿನವಹುದು ।
ಪುರಂದರ ವಿಠಲನಿಗೆ ದಿನ ದಿನದಿ ಕಣಗಿಲ ಆಹೋದು ಸತತ ೩

ಅಟ್ಟತಾಳ

ಇಲ್ಲದಿದ್ದರೆ ಚಿಗುರು ತುಳಸಿ ಅದು ।
ಇಲ್ಲದಿದ್ದರೆ ಮುಗುಳು ತೆನೆಯು ಅದು ।
ಇಲ್ಲದಿದ್ದರೆ ತುಳಸಿ ಎಲೆಯು ಅದು ।

ಇಲ್ಲದಿದ್ದರೆ ಒಣಗಿದ ಕಾಷ್ಟ ಅದು ।
ಇಲ್ಲದಿದ್ದರೆ ತುಳಸಿಯ ಬುಡದ ಮಣ್ಣು ಅದು ।
ಇಲ್ಲದಿದ್ದರೆ ತುಳಸಿ ತುಳಸಿ ಎಂದು ಕೂಗಿದರೆ ।
ನಮ್ಮ ಪುರಂದರ ವಿಠಲ ಒಲಿವ ಕಾಣಿರೊ ೪

ಝಂಪೆತಾಳ

ಶ್ರೀರಮಣನು ತನ್ನ ಶ್ರೀಯನ್ನೆ ಕೂಡಿ ।
ಶ್ರೀವತ್ಸ ಕೌಸ್ತುಭ ಮಾಲೆ ವೈಜಯಂತಿಹಾರ–ಏ–
ಕಾವಳಿಯನು ಒಲ್ಲೆ ತುಳಸಿ ಎನ್ನವಳೆಂದ ಪುರಂದರವಿಠಲ ೫

ಆದಿತಾಳ

ಒಂದೇ ಒಂದು ಬೆರಳ ಜಪ ಒಂದೇ ಐದು ಗೆರೆಯ ಜಪ ।
ಒಂದೇ ಹತ್ತು ಪುತ್ರ ಜೀವಿಮಣಿಯ ಜಪ ।
ಒಂದೇ ನೂರು ಶಂಖಮಣಿಯ ಜಪ ।
ಒಂದೇ ಸಾವಿರ ಹವಳದ ಜಪ ।
ಒಂದೇ ಹತ್ತು ಸಾವಿರ ಮುತ್ತಿನ ಮಣಿಯ ಜಪ ।
ಒಂದೇ ಹತ್ತು ಲಕ್ಷ ಸುವರ್ಣ ಮಣಿಯ ಜಪ ।
ಒಂದು ಕೋಟಿ ದರ್ಭೆ ಬೆಟ್ಟಿನ ಜಪ ।
ಒಂದೇ ಅನಂತ ಶ್ರೀ ತುಲಸೀ ಮಣಿಯ ಜಪ– ।
ವೆಂದು ಪುರಂದರ ವಿಠಲ ಪೇಳ್ದ । ೬

ಜತೆ

ಸ್ನಾನದಾನಕೆ ತುಳಸಿ ಪ್ರಯೋಜನ ತುಳಸಿ ।
ಪುರಂದರವಿಠಲಗೆ ಅತಿ ಪ್ರಿಯೆ ತುಳಸಿ ॥

೨೯೧

ಸುಳಾದಿ

ಧ್ರುವ ತಾಳ

ಹೆಜ್ಜೆಗೆ ಹೆಜ್ಜೆಗೆ ಸಾವಿರ ಸಾವಿರ ಹೊನ್ನೀವರಾಯ
ರಾವುತ ರಾಯ ।
ಹೆಜ್ಜೆಗೆ ಹೆಜ್ಜೆಗೆ ಪರಸಮಯವ ಮೆಟ್ಟಿ ನಡೆವ ರಾವುತ ರಾಯ ।
ಹೆಜ್ಜೆಗೆ ಹೆಜ್ಜೆಗೆ ಸೂಳೆಯರುಡಿ ಮುಡಿ ಮೊಲೆ ನೋಡಿ ।
ನಲಿದೋಡುವ ಹಾರುವರ ಪರಿಹಾಸಕ್ಕೆ ನಗುವ
ವಿನೋದಿರಾಯ ರಾವುತ ರಾಯ ।
ಹೆಜ್ಜೆಗೆ ಹೆಜ್ಜೆಗೆ ಕಡೆಯಾ ಹೆಣ್ಣ ಗಂಡ ಮಾಡುವ
ರಾಯ ರಾವುತರಾಯ ।
ಹೆಜ್ಜೆಗೆ ಹೆಜ್ಜೆಗೆ ತಾಳಮೇಳಕೆ ತಲೆ ದೂಗುವ
ರಾಯ ರಾವುತ ರಾಯ ।
ಹೆಜ್ಜೆಗೆ ಹೆಜ್ಜೆಗೆ ಮಾಲಕುಮಿಯ ಕುರುಳ ಅಳಿಕುಂತಳ
ಮಾತಿದ್ದುವ ಕಂಚಿಯ ವರದರಾಜ ।
ಪುರಂದರವಿಠಲರಾಯ ರಾವುತರಾಯ ೧

ಮಟ್ಟತಾಳ

ರಾಯರಾವುತನೆಂಬೀಬಿರುದ ತಡೆಯಬಂದ ।
ರಾಯಜೀಯಗಳನೆಲ್ಲ ಬೀಳುಕೊಳ್ಳುತ್ತಿರೆ ।
ರಾಜಜೀಯರು ಎಲ್ಲ ಜಯ ಜಯವೆನ್ನುತಿರೆ ।
ರಾಯ ರಾಯನೆ ಹಯರೇವಂತ ರಾಯ ।
ಹಯವೇರಿ ಬೀದಿ ಬೀದಿಯಲಿ ರಾಯ ರಾಯನರ
ನೂಕಿ ಹಾಕಿ ಮೆರೆದೆ ರಾಯ ।
ರಾಯ ವರದ ರಾಜ ಪುರಂದರವಿಠಲರಾಯ
ರಾವುತನೆಂಬ ಬಿರುದು ಸಲ್ಲಿಸಿದೆ । ೨

(ಜಾವಡಿತಾಳ)–ರೂಪಕತಾಳ

ನಾನಾದೇವತೆಗಳೆಲ್ಲರು ನಾನಾ ನಾಮಗಳಿಂದ ।
ನೀನೇ ಕೃತುಮಯನೆಂದು ನೀನೇ ಕರ್ತೃಭೋಕ್ತೃಯೆಂದು ।
ವಾಣೀಪತಿ–ಪಿತ ಏನು ಘನವೊ ವರದರಾಜ ।
ನೀನೆ ಪುರಂದರ ವಿಠಲ ೩

ಅಟ್ಟತಾಳ

ಪುಣ್ಯ ಕೋಟಿ ಆವ ಕ್ಷೇತುರ ಅದಾವುದು ।
ಪುಣ್ಯಕೋಟಿ ಆವತೀರಥ ಅದಾವುದು ।
ಪುಣ್ಯಕೋಟಿ ನಮ್ಮ ಹರಿಯಲ್ಲದೆ ।
ಪುಣ್ಯಕೋಟಿ ಆವ ದೇವರು ಅದಾರು ।
ಪುಣ್ಯಕೋಟಿ ಕಂಚಿ ವರದ ರಾಜ ।
ಪುಣ್ಯಕೋಟಿ ನಮ್ಮ ಪುರಂದರವಿಠಲ । ೪

ಏಕ ತಾಳ

ಹಸ್ತಿ ಗಿರೀಶನೆ ಶಂಖ ಚಕ್ರ ।
ಹಸ್ತನೆ ಗದೆಯ ಭಯ ।
ಹಸ್ತ ಉತ್ತರದೇರಿಯ ಆವರಿಸಿದವನೆ ।
ಚಿತ್ತಜಾನಂದದ ಪುತ್ಥಳಿಯೆ ।
ರತ್ನ ಮುಕುಟ ಕುಂಡಲಧರ ।
ಕೌಸ್ತುಭ ಪೀತಾಂಬರಧರನೆ ।
ವಸ್ತು ವರದ ರಾಜ ಪುರಂದರ ವಿಠಲ ।
ಈತನ ನಂಬಿ ಬದುಕಿರೊ । ೫

ಜತೆ

ಆರನಾಸರಿಸ ಆರನಾವರಿಸ ಕಂಚಿಯ ।
ವರದರಾಜ ಪುರಂದರ ವಿಠಲ ॥

೨೯೨

ಸುಳಾದಿ

ಸುಂದರ ಕಾಂಡ ಸುಳಾದಿ

ಧ್ರುವ ತಾಳ

ಅಯ್ಯಯ್ಯ! ಕೈಕೆ ಮುನಿದರೆ ಏನವ್ವ ! ।
ದೀವೌಕಸರನಾಳುವ ನಿನ್ನ ಅದ್ವೈತತನವು ।
ಅಚಿಂತ್ಯ ಶಕ್ತಿ ಹೋಹುದೆ ಪ್ರಭುವೆ ।
ಅಯ್ಯ ಮಂಥರೆ ಜರಿದರೆ ಪಂತಿದೇರ ನಾಳುವ ।
ನಿನ್ನ ಲೋಕತಿಂತಿಣಿಯ ಗೆಲುವ ಶೀಲ ಬಹುದೆ ।
ವಿಭುವೆ ಅಯ್ಯ ತಂದೆಯಿಲ್ಲದಿರೆ ।
ತರುಲತೆಗೆ ಪಶು ಪಕ್ಷಿಗೆ ಚೇತನ ವೃಂದಕೆ ।
ಮುಕುತಿಯನಿತ್ತ ಮಹಿಮೆ ಹೋಹುದೆ ಅಯ್ಯ ।
ಆರುಮುನಿದರೆ ಆರು ಜರೆದರೆ ಆರೊಲ್ಲದಿದ್ದರೆ ।
ಹೀನವುಂಟೆ? ತಾರಕ ಬ್ರಹ್ಮದ್ವಿರೂಪನೆ ನಿನಗೆ ಅಯ್ಯ ।
ಜಾನಕಿ ವಲ್ಲಭ ಲಕ್ಷಣಾಗ್ರಜ ಹನುಮನನಾಳ್ದ ।
ರಾಮ ರಾಯ ಪುರಂದರ ವಿಠಲ ಅಯ್ಯ ೧

ಮುಟ್ಟತಾಳ

ತುಂಗ ವಕ್ಷ ತುರೀಯ ಮೂರುತಿಯ ।
ರಥಾಂಗ ಪಾಣಿಯ ತಂಗಿ, ತಾರೆ ।
ಪರಮ ಪುರುಷ ಹರಿಯ ತರಣಿ ತೇಜನ ।
ಅಂಗನೆಯರ ಮನವ ಸೂರೆಗೊಂಬನ ತಂಗಿ, ತಾರೆ ।
ತರಣಿತೇಜನ ತಂಗಲೇಕೆ ತಗರಲೇಕೆ ।
ಸಾರಂಗದಾಮನೊಲೆದಿರನದೇಕೆ ತಂಗಿ, ತಾರೆ, ತರಣಿತೇಜನ ।
ರಂಗೇಶ ಪುರಂದರ ವಿಠಲನ ಮಂಗಳಾಂಗ ।
ಒಲೆದಿರನದೇಕೆ ತಂಗಿ, ತಾರೆ, ತರಣಿತೇಜನ ೨

ರೂಪಕ ತಾಳ

ಅರಿದನೊಬ್ಬ ನಾಸಿಕವ ನಿನ್ನನುಜೆಯ ।
ಪುರವನುರುಪಿ ದಾನವರ ಗೆದ್ದನೊಬ್ಬ ।
ಶರನಿಧಿಯ ದಾಂಟಿದನೊಬ್ಬ ।
ಸಿರಿ ಮುಡಿಯ ಮುಕುಟವ ಕಿತ್ತಿಟ್ಟನೊಬ್ಬ ।
ಪುರಂದರವಿಠಲರಾಯನ ತೋಟಿ ಬೇಡ ।
ಶರಣು ಪೊಕ್ಕು ಬದುಕುವ ಬಾರೆಲೊ ಅಣ್ಣಣ್ಣ । ೩

ಆದಿ ತಾಳ (ಅಟ್ಟತಾಳ?)

ರಾಮರಾಮ ಎನುತ ಅಂಬುಧಿಯ ದಾಂಟಿದೆ ।
ರಾಮ ರಾಮೆನುತ ಅಸುರರ ಗೆಲಿದೆ ।
ರಾಮ ರಾಮ ಎನುತ ಭೂಮಿ ಸುತೆಯ ಪಾದವ ಕಂಡು ।
ರಾಮ ರಾಮ ಎನುತ ರಾಮ ಪುರಂದರವಿಠಲನ ।
ಉಂಗುರವಿತ್ತ ರಾಮನರ್ಧಾಂಗಿ ದೇವಿ ಚಿತ್ತೈಸು ಎನುತ ೪

ಏಕತಾಳ

ರಾಮನೊಳು ಹನುಮನು ಸೇರುವನೆಂದರಿಯಿರೊ ।
ರಾಮನಿಂದ ಹತವಾಯ್ತು ರಾವಣನ ಕಟಕವೆಂದರಿಯರೊ ।
ರಾಮನ ಪ್ರಸಾದದ ದೊರೆಗಳ ಕೆಣಕದಿರಿರೊ ।
ರಾಮಬಾಣಕಿದಿರಾಗದಿರಿರೊ, ದನುಜರೆಲ್ಲ ।
ರಾಮ ನಿಮ್ಮ ರಾವಣನ ಶಿರವ ಚೆಂಡಾಡುವನು ।
ರಾಮ ಪುರಂದರವಿಠಲನ ಪೊಂದಿ ಬದುಕಿರೊ ೫

ಜತೆ

ಸಹಸ್ರ ನಾಮ ಸಮ ರಾಮನಾಮ ।
ಮಹಾ ಮಹಿಮೆಯ ಪುರಂದರ ವಿಠಲ ರಾಮ ॥

೨೯೩

ಸುಳಾದಿ

ಧ್ರುವತಾಳ

ಒಬ್ಬ ಆಚಾರ್ಯನು ದೈವವೇ ಇಲ್ಲವೆಂಬ ।
ಒಬ್ಬ ಆಚಾರ್ಯನು ದೈವಕೆ ಎಂಟು ಗುಣವೆಂಬ ।
ಒಬ್ಬ ಆಚಾರ್ಯನು ನಿರ್ಗುಣ ನಿರಾಕಾರ ನಿರೂಹನೆಂದು–
ತಾನೆ ದೈವವೆಂಬ ।
ಇವರೊಬ್ಬರೂ ವೇದಾರ್ಥವರಿತೂ ಅರಿಯರು ।
ಇವರೊಬ್ಬರೂ ಶಾಸ್ತ್ರಾರ್ಥವರಿತೂ ಅರಿಯರು ।
ಒಬ್ಬ ಮಧ್ವಾಚಾರ್ಯರೆ ಪುರಂದರ ವಿಠಲನೊಬ್ಬನೆ
ಎಂದು ತೋರಿ ಕೊಟ್ಟವರಾಗಿ ೧

ಮಟ್ಟ ತಾಳ

ಹರಿಪರ ದೇವತೆ ಎಂಬ ಜ್ಞಾನವೇ ಜ್ಞಾನ ।
ಹರಿಯಡಿಗಳನೈದುವ ಮುಕುತಿಯೇ ಮುಕುತಿ ।
ಹರಿ ವಿರಹಿತ ಜ್ಞಾನ ಮಿಥ್ಯಾ ಜ್ಞಾನ ।
ಹರಿ ವಿರಹಿತ ಮುಕುತಿ ಮಾತಿನ ಮುಕುತಿ ।
ಹರಿಪರ ಸಿರಿ ಮಧ್ವಾಚಾರ್ಯರೇ ಗುರುಗಳು ।
ತ್ರೈಲೋಕ್ಯಕೆ ಪುರಂದರ ವಿಠಲನೇ ದೈವವು ೨

ರೂಪಕತಾಳ

ಸುರತರುವಿರುತಿರೆ ಎಲವದಫಲ ಗಿಳಿ ಬಯಸಿಪ್ಪಂತೆ ।
ಹಿರಯರಾದರು ನೋಡ ಹರಿಪರದೈವೆಂದರಿಯದೆ ।
ಗುರುಗಳಾದರು ನೋಡ ಹರಿ ಪರದೈವೆಂದರಿಯದೆ ।
ಸಿರಿವಿರಿಂಚಿ ಭವಾದಿಗಳೆಲ್ಲ ಹರಿಯ ಡಿಂಗರಿಗರೆಂದರಿಯದೆ ।
ಹಿರಿಯರಾದರು ನೋಡು ಗುರುಗಳಾದರು ನೋಡ ।

ಸಿರಿ ಪುರಂದರ ವಿಠಲನ ತೋರಿದ
ಸಿರಿ ಮಧ್ವಾಚಾರ್ಯರಿರುತಿರೆ
ಗುರುಗಳಾದರು ನೋಡ । ३

ತ್ರಿವುಡೆ ತಾಳ

ಸೋಹಂ ಎಂದು ಲೋಕವ ಮೋಹಿಸುವರ ।
ನಿರಾಕರಿಸಿ ದಾಸೋಹಂ ರಹಸ್ಯವನರುಹಿದ ।
ಸೋಹಂ ಎಂಬ ಸಿರಿ ಪುರಂದರ ವಿಠಲ ನಾಳು ।
ಮಧ್ವ ಮುನಿ ದಾಸೋಹಂ ಎಂಬ ४

ಆದಿತಾಳ

ವೈದಿಕ ಮತದಲಿ ನಡೆದೆವೆಂದು ತಾವು
ವೈಷ್ಣವವಂಬಿಟ್ಟು ಕೊಟ್ಟರು ಕೆಲವರು ।
ವೈಷ್ಣವ ಮತದಲ್ಲಿ ನಡದೆವೆಂದು
ವೈದಿಕವಂ ಬಿಟ್ಟುಕೊಟ್ಟರು ಕೆಲವರು ।
ವೈದಿಕ ವೈಷ್ಣವ ಒಂದೇ ಎಂದು ಮಧ್ವಮತ ಮುನಿ
ಪ್ರತಿಪಾದಿಸಿದ ಪುರಂದರ ವಿಠಲ ಮೆಚ್ಚ ೫

ಝಂಪೆತಾಳ

ಏಕ ವಿಂಶತಿ ಕುಭಾಷ್ಯ ದೂಷಕನೆಂಬ
ಬಿರುದು ನಮ್ಮಯ ಗುರುರಾಯಗಲ್ಲದುಂಟೆ ।
ಪುರಂದರವಿಠಲ ಸರ್ವೋತ್ತಮನೆಂಬ
ಸಿದ್ಧಾಂತವು ನಮ್ಮ ಗುರು ರಾಯರಗಲ್ಲದುಂಟೆ ? । ೬

ಅಟ್ಟತಾಳ

ಹರಿಯೆ ಪರಮ ಗುರು ಪರಮೇಷ್ಠಿ ಗುರು ಸುರ ।
ಗುರಮಧ್ವಾಚಾರ್ಯ ಚಕ್ರವರ್ತಿ ಎಂ–
ದರಿತಿರೆ ಭಕುತಿ ಮುಕುತಿಯುಂಟು ।
ಪುರಂದರ ವಿಠಲನೆ ದೈವಾಧಿ ದೈವ ।
ಸುರ ಗುರು ಮಧ್ವಾಚಾರ್ಯರೆ ಚಕ್ರವರ್ತಿ ೭

ಜತೆ

ಶರಣು ಗಿರಿ ಮಧ್ವಾಚಾರ್ಯರಿಗೆ ಪುರಂದರ ವಿಠಲಗೆ ।
ಶರಣು ಶರಣೆಂಬೆ ನಾನನವರತ ॥

೨೯೪

ಸುಳಾದಿ

ತಿರುವೆಂಗಳ ಸುಳಾದಿ

ಧ್ರುವ ತಾಳ

ವರಮಣಿಗಳ ಕೆತ್ತಿಸಿದ ಮುಕುಟದ ಚಾರು ।
ತಿರುಮಲಗಿರಿಯ ತಿಮ್ಮರಾಯನ ಕಂಡೆನಾ ।
ಪರೆಯ ನೊಸಲ ತಿಲಕದ ದಿವ್ಯ ಮಧುಕರ ।
ಕರುಳು ಭ್ರೂಲತೆಯ ಶ್ರೀಕಾರದ ಕರ್ಣಯುಗಳ ।
ಅರಳಿದ ಅರುಣ ಕಮಲದ ಅರಳನಯನದ ।
ವರದಂತ ಪಂಕ್ತಿಯೆಸೆವ ಅಧರ ಚುಬುಕಾಗ್ರ ।
ಸ್ಫುರಿತ ಕಂಬು ಕಂಠ ತ್ರಿರೇಖೆ ಚತುರ್ಭುಜ ।
ಅರಶಂಖಕಟಿ ಶೋಭಾಭಯ ಹಸ್ತವ ಕಂಡೆ ।
ತರಣಿಯನಂತ ಕಿರಣ ಜಾನುಜಂಘೆಯ ।
ಕಿರುಗೆಜ್ಜೆ ಎರಡು ಪಾದಾಂಗುಳಿಯ ನಖದ ।
ವರ ವಜ್ರಾಂಕುಶ ಧ್ವಜರೇಖೆಯಿಂದೊಪ್ಪುವ ।
ಚರಣ ಮಾಂದಳಿರ ಕಂಡೆ ಒಲವಿಂದ ।
ಪರಮ ಪುರುಷ ಗುಣಾತ್ಮ ನೀಲಮೇಘ ಶ್ಯಾಮ ।
ಸಿರಿಯರಸು ಪುರಂದರ ವಿಠಲ ರಾಯನ ಕಂಡೆ । ೧

ಮಟ್ಟತಾಳ

ಅಂದುಗೆ ಕಡೆಯ ಪೆಂಡೆಯವು ಮೆರೆವ ।
ಹೊಂದಿದ ಕಾಂಚೀಧಾಮವ ಕಂಡೆ ನಾ ।
ಕಂಡು ಪೇಳಲೇನು ಜಾಂಬುನದ ಸಟ ।
ಪೊಂದಿದ ಚಿನ್ನದ ಸೂತ್ರವ ಕಂಡೆ ನಾ ।

ಕುಂದದೆ ಹೊಳೆವ ಕೌಸ್ತುಭ ವೈಜಯಂತಿಯನ್ನು ಕಂಡೆ ನಾ ।
ಇಂದು ವಿನಂದದಿ ಮೆರೆವ ಕುಂಡಲ ।
ಬಂಧುರ ಮಹಿಮ ಭಾವುರಿ ಕೀರ್ತಿಯಾ-।
ನಂದದಿ ನಿರುಪಮ ತಿರುವೆಂಗಳಪ್ಪ ಪು-
ರಂದರ ವಿಠಲ ರಾಯನ ಕಂಡೆ ನಾ ೨

ತ್ರಿವಿಡೆತಾಳ

ತಮನ ಕೊಂದವನೀತ ಮಂದರೋದ್ಧರನೀತ ।
ಭೂಮಿಯ ನೆಗಹಿ ತಂದವನೀತ ।
ಕುಮತಿ ರಕ್ಕಸರನು ಸೀಳೆ ಬಲಿಯ ಬೇಡಿದ ನೀತ ।
ಜಮದಗ್ನಿ ಭವ ಪರಶುನಾಥನೀತ ।
ಸುಮನಸೇಂದ್ರನ ತನೂಭವ ಸಖನೀತ ।
ಚಮತ್ಕೃತಿಯಿಂದ ಮೂರೂರು ಗೆಲಿದನೀತ ।
ಅಮಲ ಕಲ್ಕಿ ಮೊದಲಾದ ಅನಂತಾವತಾರ ನೀತ ।
ಕಮಲೇಶ ಪುರಂದರ ವಿಠಲ ನೀತ । ೩

ಅಟ್ಟತಾಳ

ಮಡುವಿನೊಳಗೆ ಗಜರಾಜ ಕಾಯ್ದನೀತ ।
ಮಡದಿ ದ್ರೌಪದಿಯಭಿಮಾನ ರಕ್ಷಕನೀತ ।
ಮಿಡುಕುವಜಾಮಿಳನ ಪಾಶ ಪರಿಹರಿಸಿ ।
ಕಡು ಮೆಚ್ಚಿ ಧ್ರುವಗೆ ಉನ್ನತ ಪದವಿತ್ತನೀತ ।
ಕಡಲಶಯನ ನೀತ ಕರುಣಾಂಬುಧಿಯೀತ ।
ಸಡಗರದ ಪುರಂದರ ವಿಠಲ ನೀತ । ೪

ಆದಿತಾಳ

ಶರಣು ಸಕಲ ಜಗತ್ಪಾಲಕ ದೇವ ।
ಶರಣು ವಿರಿಂಚ್ಯಾದಿ ವಂದಿತ ಪಾದ ।
ಶರಣು ಮುನಿ ಹೃತ್ಕುಮುದ ಚಂದ್ರ ।
ಪರಿಪೂರ್ಣ ಗುಣ ನಿಧಿ ಪರಮಾನಂದ ।
ಪುರಂದರ ವಿಠಲ ಪೂರ್ಣಕಾಮ ೫

ಜತೆ

ಸಿರಿಗಿದೆ ವೈಕುಂಠವೆಂದು ತೋರುವ ಹಸ್ತ ।
ತಿರುವೆಂಗಳಪ್ಪ ಶ್ರೀ ಪುರಂದರ ವಿಠಲ ॥

ಹೆಚ್ಚಿನ ಉಗಾಭೋಗಗಳು–ಸುಳಾದಿಗಳು

೨೯೫

ಉಗಾಭೋಗ

ಉರುಗಂಜೆ ಸೆರೆಗಂಜೆ ಶರೀರದ ಭಯಕಂಜೆ
ಹಾವಿಗಂಜೆ ಚೇಳಿಗಂಜೆ ಕತ್ತಿಯ ಧಾರೆಗಂಜೆ
ಇನ್ನೊಂದಕ್ಕಂಜುವೆ ಇನ್ನೊಂದಕ್ಕಳುಕುವೆ
ಪರಧನ ಪರಸತಿಗೆರಡಕ್ಕಂಜುವೆನಯ್ಯ
ಹಿಂದೆ ಕೌರವ ರಾವಣರೇನಾಗಿ ಪೋದರು
ಮುಂದೆ ಸಲಹೊ ಪುರಂದರ ವಿಠಲ.

೨೯೬

ಉಗಾಭೋಗ

ಮನಶುದ್ಧಿಯಿಲ್ಲದವಗೆ ಮಂತ್ರದ ಫಲವೇನು
ತನು ಶುದ್ದಿಯಿಲ್ಲದವಗೆ ತೀರ್ಥದ ಫಲವೇನು
ಮಿಂದಲ್ಲಿ ಫಲವೇನು ಮೀನು ಮೊಸಳೆಯಂತೆ
ನಿಂದಲ್ಲಿ ಫಲವೇನು ಶ್ರೀಶೈಲದ ಕಾಗೆಯಂತೆ
ಹೊರಗೆ ಮಿಂದು ಒಳಗೆ ಮೀಯಿದವರ ಕಂಡು
ಬೆರಗಾಗಿ ನಗುತಿದ್ದ ಪುರಂದರ ವಿಠಲ.

೨೯೭

ಉಗಾಭೋಗ

ಶ್ರೀಪತಿಯ ಕಟಾಕ್ಷವೀಕ್ಷಣವು ತಪ್ಪುವಾಗ
ಅನೇಕ ಬಂಧುಗಳು ಲಕ್ಷ ವೈದ್ಯರುಗಳು
ಇರಲಾಗಿ ಕಣ್ಣಕಣ್ಣ ಬಿಡುವರು
ತಾಪಸಿಯರಣ್ಯದೊಳಗೆ ಒಬ್ಬ ಒಂಟಿಯಾಗಿರಲು
ಅಂಜಬೇಡೆಂದು ನಮ್ಮ ಕಂಜನಾಭನೆ ಬಂದು
ಆಪತ್ತುಗಳ ಪರಿಹರಿಸುವ ನಮ್ಮ ಪುರಂದರ ವಿಠಲ.

೨೯೮

ಉಗಾಭೋಗ

ಹರಿ ಸಿರಿ ಚರಣವಿರಲು ಮಿಕ್ಕ
ಭೂರಿ ದೈವಗಳೇಕೆ ಭಜಿಸುವೆ ಮರುಳೆ
ನೀರಡಿಸಿ ಜಾಹ್ನವಿಯ ತೀರದಲ್ಲಿದೆ
ಕೆರೆಯನೀರ ಕುಡಿವ ಮಾನವರುಂಟೆ
ತಾರುಣ್ಯವಿರಲು ವೈಕುಂಠ ವಿಠಲರೇಯನ
ತಿರುವೇಂಗಳಪ್ಪ ಸಿರಿ ಪುರಂದರ ವಿಠಲನ.

೨೯೯

ಉಗಾಭೋಗ

ಸತ್ಯಜ ನಾಭನೆ
ಸತ್ಯ ಮಹಿಮನೆ
ಸತ್ಯ ಕಾವನೆ
ಸತ್ಯ ಪೂರ್ಣನೆ
ಸತ್ಯ ಭೂಷಣ
ನಿತ್ಯ ಪುರಂದರವಿಠಲರೇಯ.

೩೦೦

ಉಗಾಭೋಗ

ನಿತ್ಯ ಪತಿಭಾವ ಶ್ರೀ ಲಕುಮಿದೇವಿಗಯ್ಯ
ನಿತ್ಯ ಪುತ್ರ ಭಾವ ಬೊಮ್ಮ ಪ್ರಾಣರಿಗೆ
ನಿತ್ಯ ಪೌತ್ರಭಾವ ಗರುಡ ಶೇಷ ರುದ್ರರಿಗೆ
ನಿತ್ಯ ಭೃತ್ಯಭಾವ ಇಂದ್ರ ಕಾಮ ಆತ್ಮ ಜೀವರಿಗೆ
ಇಂತೆಂದ ಪುರಂದರ ವಿಠಲ.

೩೦೧

ಉಗಾಭೋಗ

ಮನೋ ವಚನಗಳಲ್ಲಿ ಕಾಯ ಕರ್ಮಗಳಲ್ಲಿ
ನೀನೆ ನೀನೆ ನೀನೆ ಪುರಂದರ ವಿಠಲ.

೩೦೨

ಉಗಾಭೋಗ

ಆದಿ ಸೃಷ್ಟಿಯಲಾರು ಮೊದಲೆ ಉದಿಸಿದರೇನು
ಅವರವರೆ ಅಧಿಕರಧಿಕರಯ್ಯ
ಕಾಲಾಜಯಾದಿಗಳು ಮೊದಲೆ ಉದಿಸಿದರೇನು
ಅವರವರೆ ಅಧಿಕರಧಿಕರಯ್ಯ
ಅವರಂತರಂತರ ಅವರ ನೋಡಯ್ಯ
ಅವರವರೆ ಅಧಿಕರಧಿಕರಯ್ಯ
ಪುರಂದರ ವಿಠಲನ ಸಂತತಿ ನೋಡಯ್ಯ
ಅವರವರೆ ಅಧಿಕರಧಿಕರಯ್ಯ.

೩೦೩

ಉಗಾಭೋಗ

ಸಿರಿ ಚತುರ್ಮುಖ ಸುರರು
ಮನು ಮುನಿಗಳು
ಮನುಜೋತ್ತಮರು
ತಾರತಮ್ಯಯುಕ್ತರು
ಪುರಂದರ ವಿಠಲನ ಸದಾ ಶರಣರು.

೩೦೪

ಉಗಾಭೋಗ

ನಿನ್ನಂಗುಟವು ಬೊಮ್ಮಾಂಡವನೊಡೆಯಿತು
ನಿನ್ನ ನಡೆ ಜಗವ ಈರಡಿ ಮಾಡಿತು
ನಿನ್ನ ಪೊಕ್ಕಳು ಸರಸಿಜನಾಭನ ಪಡೆಯಿತು
ನಿನ್ನ ವಕ್ಷಃಸ್ಥಳ ಸಿರಿ ಲಕುಮಿಗೆಡೆಯಾಯಿತು
ನಿನ್ನ ನಳಿದೋಳು ಸಿರಿ ಲಕುಮಿಯ ಬಿಗಿದಪ್ಪಿತು
ನಿನ್ನ ಕುಡಿನೋಟ ಸಕಲ ಜೀವರ ಪೊರೆಯಿತು
ನಿನ್ನ ತೊದಲ ನುಡಿ ಸಕಲ ವೇದವ ಸವಿಯಿತು
ನಿನ್ನ ಅವಯವಂಗಳ ಮಹಿಮೆಯನು ಒಂದೊಂದು
ಪೊಗಳಲಳವಲ್ಲ ಸಿರಿ ಪುರಂದರವಿಠಲರೇಯ
ನಿನ್ನ ಅಪಾರ ಮಹಿಮೆಗೆ ನಮೋ ನಮೋ ಎಂಬೆ.

೩೦೫

ಉಗಾಭೋಗ

ಇದರಿಂಬಿಟ್ಟಿನ್ನಿಲ್ಲೆಂಬ ಮಹಾವ್ಯಾಧಿ ಬರಲಿ ಮ
ತ್ತಿದರಿಂಬಿಟ್ಟಿನ್ನಿಲ್ಲೆಂಬ ಮಹಾಭೀತಿ ಬರಲಿ ಮ
ತ್ತಿದರಿಂಬಿಟ್ಟಿನ್ನಿಲ್ಲೆಂಬ ಮಹಾಬಾಧೆ ಬರಲಿ ಮ

ತ್ತಿದರಿಂಬಿಟ್ಟಿನ್ನಿಲ್ಲೆಂಬ ಮಹಾ ಆಪತ್ತು ಬರಲಿ ಮ
ತ್ತಿದರಿಂಬಿಟ್ಟಿನ್ನಿಲ್ಲೆಂಬ ಅದಕೊಂದಿದ
ಕೊಂದು ಯೋಚಿಸಬೇಡಿ ಕಾಣಿರೊ ಮ
ತ್ತದ ಕೊಂದಿದ ಕೊಂದು ಯೋಚಿಸಬೇಡಿ ಕಾಣಿರೊ
ಪುರಂದರ ವಿಠಲ ತನ್ನ ನಂಬಿದವರ
ಹಿಂದ್ವಾಕಿಕೊಂಬ ಕಾಣಿರೋ.

೩೦೬

ಉಗಾಭೋಗ

ಶ್ರೀರಾಮ ಎಂದರೆ ಭಾಗ್ಯಕ್ಕೆ ಕಾರಣ
ಶ್ರೀ ಕೃಷ್ಣ ಎಂದರೆ ದುರಿತ ನಿವಾರಣ
ಎಚ್ಚತ್ತಿರು ಎಲೆ ಮನವೆ ಎಚ್ಚತ್ತಿರಲೆ ಮನವೆ
ಏಕೆ ಬಯಲನು ನೆನೆವೆ ಅಚ್ಯುತಾನಂತ
ಗೋವಿಂದನೆಂಬ ನಾಮದಲಿ ಎಚ್ಚತ್ತಿರಲೆ ಮನವೆ
ಏಕೆ ಬಯಲ ನೆನೆವೆ ಅಚ್ಯುತನೆ ಆದಿ ಕೇಶವನೆ
ಅನಾಥ ಬಂಧೋ ಸಲಹೆಂದು
ಅಚ್ಯುತನ ಪಾದವನು ನಂಬು ಗತಿಯೆಂದು
ಅನಂತಾನಂತ ದೇವರ ದೇವ ರಂಗೇಶ
ಅನಂತನೆಂದರೆ ಬಲು ಭಯ ವಿನಾಶ
ಅನಂತನೆಂದರೆ ತಡೆವ ಯಮಪಾಶ
ಗೋವಿಂದನೆಂದರೆ ಸಕಲ ತೀರ್ಥಸ್ನಾನ
ಗೋವಿಂದನೆಂದರೆ ಸಕಲ ಮೂರ್ತಿ ಧ್ಯಾನ
ಗೋವಿಂದನೆಂದರೆ ಪುರಂದರ ವಿಠಲ
ಕೊಡುವ ಸಕಲ ಸುಜ್ಞಾನ.

೩೦೭

ಉಗಾಭೋಗ

ತಾಯಿ ಗೋಪಿಯಂತೆ ನಿನ್ನ ಒರಳನೆಳಸಲಿಲ್ಲ
ವಾಲಿಯಂತೆ ಎದುರು ವಾದಿಸುತಿರಲಿಲ್ಲ

ಭೃಗುಮುನಿಯಂತೆ ನಿನ್ನ ಎದೆಯ ತುಳಿಯಲಿಲ್ಲ
ಭೀಷ್ಮನಂತೆ ನಿನ್ನ ಹಣೆ ಒಡೆಯಲಿಲ್ಲ
ಕೊಂಕಣದ ಎಮ್ಮೆಗೆ ಕೊಡತಿಯೇ ಮದ್ದೆಂದು
ಅವರೆ ಮದ್ದು ನಿನಗೆ ಪುರಂದರ ವಿಠಲ.

೩೦೮

ಉಗಾಭೋಗ

ಇಕ್ಕೊ ನಮ್ಮ ಸ್ವಾಮಿ
ಸರ್ವರಂತರ್ಯಾಮಿ
ಪ್ರಕಟ ಸಹಸ್ರನೇಮಿ
ಭಕ್ತಜನ ಪ್ರೇಮಿ
ಒಳನೋಡಿ ನಮ್ಮ ಹೊಳೆವ ಪರಬ್ರಹ್ಮ
ನರಿಯಬೇಕು ಮರ್ಮ
ವಸ್ತುವಿನ ನೋಡಿ ಸ
ಮಸ್ತ ಮನ ಮಾಡಿ
ಅಸ್ತ ವಸ್ತು ಬೇಡಿ ಸ
ಮಸ್ತ ನಿಚ ಗೂಡಿ
ಮಾಡು ಗುರುಧ್ಯಾನ
ಮುದ್ದು ಪುರಂದರ ವಿಠಲನ ಚರಣವ.

೩೦೯

ಉಗಾಭೋಗ

ಪರಮಾನಂದವು ಹರಿಗೆ ಪರಮಾನಂದವು ಸಿರಿಗೆ
ಪರಮಾನಂದವು ನಮ್ಮ ಪುರಂದರವಿಠಲ ರಾಯಗೆ.

೩೧೦

ಉಗಾಭೋಗ

ದೇವ ದೇವರ ದೇವ
ಜಗತ್ರಯಂಗಳ ಕಾವ
ಭಾವಜಪಿತ ನಮ್ಮ ಪುರಂದರ ವಿಠಲ.

೩೧೧

ಉಗಾಭೋಗ

ಶುಭವಿದು ಶೋಭನ ಹರಿಗೆ
ಶುಭವಿದು ಶೋಭನ ಸಿರಿಗೆ
ಶುಭವಿದು ಪುರಂದರವಿಠಲರಾಯಗೆ
ಶುಭವಿದು ಶೋಭನ ಹರಿಗೆ.

೩೧೨

ಉಗಾಭೋಗ

ಹಂಗಿಸಿ ಹಂಗಿಸಿ ಎನಗೆ ಹರಿನಾಮ ನಿಲಿಸಿದರು
ಭಂಗಿಸಿ ಭಂಗಿಸಿ ಎನಗೆ ಬಯಲಾಸೆ ಕೆಡಸಿದರು
ಕಂಗೆಡಿಸಿ ಕಂಗೆಡಿಸಿ ಕಾಮಕ್ರೋಧವ ಬಿಡಿಸಿದರು
ಹಿದೆ ನಿಂದಿಸಿದವರೆ ಎನ್ನ ಬಂಧುಗಳು
ಬಾಯ ಬಡುಕರಿಂದ ನಾನು ಬದುಕಿದೆನು ಹರಿಯೆ
ಕಾಡಿ ಕಾಡಿ ಕೈವಲ್ಯಕ್ಕೆ ಪಥವಿತ್ತರು
ಕಾಸು ಹುಟ್ಟದಂತೆ ಪ್ರಾಯಶ್ಚಿತ್ತ ಮಾಡಿದರು
ಮೀಸಲು ಮಾಡಿದರು ಹರಿಯ ಒಡವೆಯೆಂದು
ಲೇಸು ಕೊಡೊ ನಮ್ಮಪ್ಪ ಪುರಂದರ ವಿಠಲ ನಿನ್ನ
ದಾಸರ ದಾಸರ ದಾಸನೆಂದೆನಿಸಯ್ಯ.

೩೧೩

ಉಗಾಭೋಗ

ಎನ್ನ ಕಡೆ ಹಾಯಿಸುವುದು ನಿನ್ನ ಭಾರ
ನಿನ್ನ ನೆನೆಯುತಲಿಹುದು ಎನ್ನ ವ್ಯಾಪಾರ
ಎನ್ನ ಸತಿ ಸುತರಿಗೆ ನೀನೆ ಗತಿ
ನಿನ್ನನೊಪ್ಪಿಸುವುದು ನನ್ನ ನೀತಿ
ಎನ್ನ ಪಡಿಯಿಕ್ಕಿ ಸಲಹುವುದು ನಿನ್ನ ಧರ್ಮ
ನಿನ್ನ ಅಡಿಗೆರಗುವುದು ಎನ್ನ ಕರ್ಮ
ಎನ್ನ ತಪ್ಪುಗಳನೆಣಿಸುವುದು ನಿನ್ನದಲ್ಲ
ನಿನ್ನ ಮರೆತು ಬದುಕುವುದು ಎನ್ನದಲ್ಲ
ನೀನಲ್ಲದಿನ್ನಾರಿಗೆ ಮೊರೆಯಿಡುವೆ ಪುರಂದರ ವಿಠಲ.

೩೧೪

ಉಗಾಭೋಗ

ಧ್ಯಾನವು ಕೃತಯುಗದಲ್ಲಿ ಯಜ್ಞಯಾಗವು ತ್ರೇತಾಯುಗದಲ್ಲಿ
ಅರ್ಚನೆ ದ್ವಾಪರದಲ್ಲಿ
ಕೀರ್ತನೆ ಮಾತ್ರದಿ ಕಲಿಯುಗದಲ್ಲಿ
ಮುಕುತಿಯನೀವ ಪುರಂದರ ವಿಠಲ.

೩೧೫

ಉಗಾಭೋಗ

ಮಾರಿಯ ಕೈಯಿಂದ ನೀರ ತರಿಸುವರು
ಮಸಣಿಯ ಕೈಯಿಂದ ಕಸವ ಬಳಿಸುವರು
ಮೃತ್ಯುವಿನ ಕೈಯಿಂದ ಬತ್ತವ ಕುಟ್ಟಿಸುವರು
ಜವನವರ ಕೈಯಿಂದ ಜಂಗಲಿಯ ಕಾಯಿಸುವರು
ಪುರಂದರ ವಿಠಲನ ದಾಸರು ಸರಿ ಬಂದಹಾಗಿಹರು ಭೂಮಿಯ ಮೇಲೆ.

೩೧೬

ಉಗಾಭೋಗ

ಕಂಡಾನಿಶದಲ್ಲಿ ಅರ್ಘ್ಯವನು
ಪ್ರಾತರದಿ ಮಂಡಲಾಕಾರ
ಮಧ್ಯಾಹ್ನದಲ್ಲಿ ಪುಂಡಗಾರನಾಗಿ
ಚರಿಸಲದೆ ಇದ್ದರೆ ಅವಗೆ
ಪಂಡಿತ ಪುರಂದರ ವಿಠಲ ಒಲಿಯ.

೩೧೭

ಉಗಾಭೋಗ

ಉದಯ ಕಾಲದ ಜಪ ನಾಭಿಗೆ ಸರಿಯಾಗಿ
ಹೃದಯಕ್ಕೆ ಸರಿಯಾಗಿ ಮಧ್ಯಾಹ್ನದಿ
ವದನಕ್ಕೆ ಸಮನಾಗಿ ಸಾಯಂಕಾಲಕೆ ನಿತ್ಯ
ಪದುಮನಾಭ ತಂದೆ ಪುರಂದರ ವಿಠಲಗೆ
ಇದೆ ಗಾಯಿತ್ರಿಯಿದ ಜಪಿಸಬೇಕೊ.

೩೧೮

ಉಗಾಭೋಗ

ಒಂದೇ ಒಂದು ಬೆರಳ ಜಪ
ಒಂದೇ ಹತ್ತು ಪುತ್ರಂಜೀವಿ ಮಣಿಯ ಜಪ
ಒಂದೇ ನೂರು ಶಂಖದ ಮಣಿಯ ಜಪ
ಒಂದೇ ಸಹಸ್ರ ಹವಳದ ಜಪ
ಒಂದೇ ಹತ್ತು ಸಾಹಸ್ರ ಮುತ್ತಿನ ಮಣಿಯ ಜಪ
ಒಂದೇ ಲಕ್ಷ ಸ್ವರ್ಣ ಮಣಿಯ ಜಪ
ಒಂದೇ ಕೋಟಿ ದರ್ಭೆ ಗಂಟಿನ ಜಪ

ಒಂದು ಭಯವು ಎರಡು ಅಜ್ಞಾನವು ।
ನಿನ್ನ ವಿಷಯದಲ್ಲಿ ಉಂಟಾದಡಾಗಲಿ ।
ಕಂತು ಜನಕ ನೀನೆ ತಪತಪವೆನಲಾಗ ।
ತಪವನು ಮಾಡಿದ ಪುರಂದರ ವಿಠಲನ್ನ ।
ಒಲಿಸಿ ಸೃಷ್ಟಿಯ ಮಾಡಿದ ಸರಸಿಜ ಸಂಭವನು ೨

ರೂಪಕತಾಳ

ಸೂಕ್ಷ್ಮ ರೂಪವಾದ ಇಪ್ಪತ್ತುನಾಲ್ಕು ತತ್ವಗಳ ಹೊರಗೆ ।
ಪಂಚಭೂತಗಳಿಗಭಿಮನಿಯಾದ ।
ಗಣೇಶ ಮೊದಲಾದ ಪಂಚಭೂತಗಳ ಸೃಜಿಸಿದನಾಗ ।
ಒಂದೊಂದಾವರಣದ ಅಭಿಮಾನಿಗಳಿಂದ ।
ಮಹತ್ತತ್ವಕೇಶ–ಅಹಂಕಾರಾಧೀಶನೆಂದು ।
ಬೊಮ್ಮಾಂಡವ ನಿರ್ಮಾಣವ ಮಾಡಿ ।
ಪೂರ್ವದಂತೆ ಆ ದೇವತೆಗಳ ಸೃಜಿಸಿ ।
ಬೊಮ್ಮಂಡವಾಧಾರವಾಗಿ ತನ್ನಾದೇಹವ ।
ಬೆಳಸಿದ ಚತುರ್ಮುಖನಾಗ ।
ಮೂಲ ರೂಪದಿಂದ ಪುರಂದರವಿಠಲ ।
ವಿರಾಟದಲ್ಲಿ ವಾಸವಾಗಿ ನಿಂದ ಜಗದಾಧಾರ ೩

ಝಂಪೆತಾಳ

ಹಳೆಯ ಬೊಮ್ಮಗೆ ಅಂದು ಅವ್ಯಾಕೃತದಲ್ಲಿ ।
ವಿರಜೆಯಲಿ ಮುಳಿಗಿಸಿ ಉದುರದಲಿ ಪ್ರವೇಶ ।
ಬೊಮ್ಮಾದಿಗಳು ಇರಲು ಕೆಲವು ಲೋಕಂಗಳು ಸೃಷ್ಟಿಯಾದ ।
ಬಳಿಕ ಶ್ವೇತ ದೀಪದಲ್ಲಿದ್ದ ಮೂರುತಿಯ ।
ದರುಶನದಿ ಮುಕುತರೆನಿಸಿಕೊಂಡು ।
ಐದಿದರು ಪುರಂದರವಿಠಲನ ಚರಣ ಕಮಲವ ೪

ತ್ರಿವಿಡೆತಾಳ

ಗಣನೆ ಇಲ್ಲದ ಅಪಾರ ರೂಪಂಗಳಲ್ಲಿ ।
ಒಂದು ರೂಪದಿ ಚತುರ್ಮುಖನಿಗೆ ।

ಸರ್ವಾಂಗ ಸಾಯುಜ್ಯವಿತ್ತ ।
ಮಂಗಳಾಂಗನು ಸಾಯುಜ್ಯವಿತ್ತ ।
ಪುರಂದರ ವಿಠಲ ಭಕುತರೊಡೆಯ ನೀನು ।
ಭಕುತರಧಿಪ ನೀನು ಸಾಯುಜ್ಯವಿತ್ತ ೫

ಅಟ್ಟತಾಳ

ಶ್ವೇತ ದ್ವೀಪವು ಸುತ್ತಿದ ಉದಕವು ।
ಬಯಲಾದ ಮೇಲೆ ಅಂಧಂ ತಮಸು ।
ಏಳುಕೋಟೆ ಪರಿಮಿತವಾದ ನರಕವು ।
ಶುಕ್ಲ ಶೋಣಿತ ಮೂತ್ರ ಅಶುದ್ಧದಿಂದ ।
ಮಿಶ್ರವಾದ ತಮಸಿನೊಳು ಪೂರ್ಣ ಸಾಧನವನು ।
ಮಾಡಿದ ಜನರಿಗೆ ಹರಿದ್ವೇಷ ಭಕ್ತರಲ್ಲಿ ।
ಅನಾದಿ ಕಾಲದಿ ಮಾಡಿ ದುಃಖಭಾಜನರಾದ ।
ಪಾಪಿ ಜೀವರನು ವಾಯುಭೃತ್ಯರಿಂದ ಪ್ರೇರಿಸಲಾಗಿ ।
ಲಿಂಗ ಶರೀರವ ಹೋಳು ಮಾಡಿ ।
ಕೆಡಹಿತು ಅಂಧಂ ತಮಸಿನೊಳು ।
ಕ್ರಿಮಿ ಪಕ್ಷಿಗಳಿಂದ ಬಾಧೆಯಲ್ಲದೆ ಮೇಲೆ ।
ಪರ್ವತಂಗಳ ತಂದು ಬಿಸುಡುವರು ।
ಭೀಮನ ದೂತರಿಂದ ನೊಂದು ।
ದುಃಖಭಾಜನರಾದ ಪಾಪಿ ಜೀವರಿಗೆ ।
ಎಂತು ಮಾಡಿದರೆ ಅದರಂತೆ ಫಲವೀವ ।
ಕಂತು ಜನಕ ಪುರಂದರವಿಠಲರೇಯ ೬

ಆದಿತಾಳ

ಇಂತು ಪ್ರಕೃತಿ ಸಂಬಂಧವಾದಡೆ ।
ಬೊಮ್ಮರುದ್ರ ಇಂದ್ರ ದಿಕ್ಪಾಲಕರು ಮತ್ತೆ ।
ದೇವತೆಗಳು ಮನು ಮುನಿಗಳು ।
ಶರೀರದಲಿ ವಾಸವಾಗಿ ಪುರಂದರವಿಠಲ ।
ಸೃಷ್ಟಿ ಸ್ಥಿತಿ ಲಯಕೆ ಕಾರಣ ೭

ಜತೆ

ಕರ್ಮಜಾಂಡಗಳ ಮರ್ಮಗಳ ತಿಳಿದು ಫಲವೀವ ।
ನಿರ್ಮಲ ಚರಿತ್ರ ಪುರಂದರ ವಿಠಲ ॥

೩೨೮

ಸುಳಾದಿ

ವೇಂಕಟೇಶ ಸುಳಾದಿ

ಧ್ರುವತಾಳ

ಮಂಗಳಾಂಗ ನಿನ್ನಂಗವಟ್ಟದಲ್ಲಿ ಸಂಗ ಸುಖ ವಿತ್ತಳವ್ವೆ ।
ಅಂಗನೆ ಲಕುಮೆವ್ವ ಕೆಂಬರಳಾಗಿಪ್ಪಳೆವ್ವೆ ।
ಶೃಂಗಾರವಾದಳವ್ವೆ ಬಂಗಾರವಾದಳವ್ವೆ ।
ರಂಗ ಶ್ರೀ ಪುರಂದರವಿಠಲ ನಿನ್ನನೊಲಿದು ೧

ಮಟ್ಟತಾಳ

ಉಟ್ಟ ದಟ್ಟಿ ಕಟ್ಟಿದ ಕಠಾರಿ ।
ತೊಟ್ಟಂಬು ತೊಡರು ತೋಮರ ।
ಮೆಟ್ಟಿದ ತಡಿಕೆರವಿನ ಹೆಜ್ಜೆ ಹೊನ್ನ ಗಜ್ಜೆ ।
ಸೃಷ್ಟಿ ರಕ್ಷಕ ಪುರಂದರವಿಠಲ ತಿರುವೆಂಗಳಪ್ಪಗೆ ನಮೋ ೨

ಅಟ್ಟತಾಳ

ಅಚ್ಯುತಾನಂತ ಗೋವಿಂದ ಮುಕುಂದ ।
ವಾಮನ ವಾಸುದೇವ ನಾರಾಯಣ ಹರಿ ।
ಸಚ್ಚಿದಾನಂದ ಸ್ವರೂಪ ಗೋಪಾಲ ಪುರುಷೋತ್ತಮ ।
ಪರಂಧಾಮ ನಾರಾಯಣ ।
ಮತ್ಸ್ಯ ಕೂರ್ಮ ವರಾಹ ನಾರಸಿಂಹ ವಾಮನ ।
ಭಾರ್ಗವ ರಾಘವ ಕೃಷ್ಣ ಬುದ್ಧ ಕಲ್ಕಿ-।
ಯವತಾರ ಅನಂತಾವತಾರ ನಾರಾಯಣ ।

ಅಪಾರ ಮಹಿಮ ಶ್ರೀ ನಾರಾಯಣ ಸರ್ಪಶಯನ ।
ಶ್ರೀ ಪುರಂದರ ವಿಠಲ ವಿಬುಧೇಶ ತಿರುವೇಂಗಳಪ್ಪ ।
ಎನ್ನಪ್ಪನೆ ನಾರಾಯಣ ೩

ಝಂಪೆತಾಳ

ಇದೆ ದನುಜಮರ್ದನ ಚಕ್ರ ಹಸ್ತ ಮ ।
ತ್ತಿದೆ ವೇದಮಯ ಶಂಖ ಹಸ್ತ ।
ಇದೆ ಈರೇಳು ಜಗವನೊಲಿದಿಂಬಿಟ್ಟು ಮೆರೆವ ಹಸ್ತ ।
ಇದೆ ಇದೆ ವೈಕುಂಠವೆಂದು ತೋರುವ ಹಸ್ತ ।
ಇದೇ ಪುರಂದರ ವಿಠ್ಠಲನ್ನ ಮೂರುತಿ ।
ಇದೇ ತಿರುವೇಂಗಳಪ್ಪನ ಇರವು ೪

ಏಕತಾಳ

ಕರೀಠ ಕುಂಡಲಧರನ ಕಂಡೆ ।
ಹಾರಮಣಿ ಭೂಷಣನ ಕಂಡೆ ।
ಸಿರಿಯಿಪ್ಪ ವಕ್ಷಸ್ಥಳವ ನಾ ಕಂಡೆ ।
ವರಾಂಬರನ ಕಂಡೆ ವರದೇಶನ ಕಂಡೆ ।
ತಿರುಮಲ ಗಿರಿಯಲಿ ಸಿರಿ ಪುರಂದರವಿಠಲನ ।
ಇರವ ನಾ ಕಂಡೆ ಚೆಲುವನ ನಾ ಕಂಡೆ ೫

ಜತೆ

ತಿರುವೇಂಗಳಪ್ಪ ಪುರಂದರ ವಿಠಲ ।
ನೆರೆ ನಂಬಿದೆನೊ ನಿನ್ನ ಚರಣ ಕಮಲವ ॥

ಅಭಿಮುಖಿ – ಭಕ್ತ; ಸೇವಕ

ಅರ್ಭಕ – ಬಾಲಕ

ಅಮರಾಂಘ್ರಿಪ – ಕಲ್ಪವೃಕ್ಷ

ಅಮ್ಮದೆ – ಸಾಧ್ಯವಾಗದೆ

ಅರತ – ಆಸಕ್ತ; ಅರ್ಥಿ; ಅರ್ಥ; ಅನಾಸಕ್ತ

ಅರಸು – ಹುಡುಕು

ಅರಳು – ಹೂವು

ಅರವತ್ತುಗಳಿಗೆ – ಒಂದು ದಿವಸ

ಅರಜಾಣ – ಜಾಣರಲ್ಲಿ ಅರಸು; ಶ್ರೇಷ್ಠಜ್ಞಾನಿ;

ಅರಳಿಮರನೆರಕ್ಕಸ – ಬ್ರಹ್ಮರಾಕ್ಷಸ

ಅರಿವೆ – ತುಂಡುಬಟ್ಟೆ

ಅರುಹ – ಅರ್ಹ

ಅರೋಹಣ (ಆರೋಗಣೆ) – ಊಟ

ಅರೆ – ಅರ್ಧಕ್ಕೆ

ಅಲಗು – ಕತ್ತಿ

ಅಲ್ಲದ – ನಿಷಿದ್ಧವಾದ

ಅವತಾರ – ದೇವತೆಗಳೆಲ್ಲರೂ ಅಂಶದಿಂದ ಬೇರೆ ರೂಪ ಹೊಂದಿರುವುದೇ ಅವತಾರ

ಅವಧಾನ – ನಿನ್ನ ವಿಷಯಕವಾದ ಮನಸ್ಸು

ಅವ್ವೆ – ರಮಾದೇವಿ

ಅವ್ಯಾಕೃತ ಆಕಾಶ – ಮೂಲ ಆಕಾಶ ಅನಾದ್ಯನಂತವಾದುದು

ಅಷ್ಟಾಂಗ – ನಮಸ್ಕಾರ

ಅಷ್ಟ ಮಹಿಷಿಯರು – ರುಕ್ಮಿಣಿ, ಸತ್ಯಭಾಮೆ, ನೀಲೆ (ಸತ್ಯೆ) ಭದ್ರೆ, ಮಿತ್ರವಿಂದೆ, ಕಾಳಿಂದಿ, ಲಕ್ಷಣ, ಜಾಂಬವತಿ;

ಅಸಿ – ಖಡ್ಗ;

ಅಸಿಚಕ್ರ – ಹದನಾದ ಚಕ್ರ; ಅಂಬರೀಷ;

ಅಹೋದು – ಅಪ್ಪುದು; ಆಗುವುದು;

ಅಂಕದರ್ಪ – ಹೆಚ್ಚಿನ ಅಭಿಮಾನ

ಅಂಗವಟ್ಟ – ದೇಹ; ಶರೀರ

ಅಂಗಾರಕ – ಮಂಗಳವಾರ

ಅಂಗುಲಿ – ಬೆರಳು

ಅಂಗುಟಾಗ್ರ – ಹೆಬ್ಬೆರಳಿನ ಮೇಲೆ

ಅಂಗಡಿಯಿಟ್ಟು ತೋರ – ಬಯಲು ಮಾಡುವುದಿಲ್ಲ

ಅಂತರ – ಗುಟ್ಟು

ಅಂದವಿಲ್ಲದ – ಮೈಯಲ್ಲಿ ನೆಟ್ಟಗಿಲ್ಲದ

ಅಂಬುವಾರಾಸಿ – ಸಮುದ್ರ

ಅಂಬುಜಾನಾಥ – ರಮಾಪತಿ

ಅಂಕಿತ – ತಪ್ತ ಮುದ್ರಾಂಕಿತ; ಗುರುಗಳಿಂದ ಕೊಡಲಾದ ಹೆಸರು

ಅಂಧಂ ತಮಸು – ನರಕದಲ್ಲಿಯ ಅತಿಕತ್ತಲೆಯ ಭಾಗ

ಆ

ಆಗಾಮಿಕ ಕರ್ಮ – ಮುಂದಿನ ಜನ್ಮದಲ್ಲಿ ಸಂಚಿತವಾಗುವ ಕರ್ಮ

ಆಟೋಪ – ಆವೇಶ

ಆನಂದ – ಲಕ್ಷ್ಮೀ

ಆನಂದವರ್ಧಾಂಗಿ– ಲಕ್ಷ್ಮಿಯು; ಹೆಂಡತಿ

ಆಪನ್ನ – ಕಷ್ಟದಲ್ಲಿ ಸಿಕ್ಕವ

ಆರತ – ಸಂತೋಷದಿಂದ

ಆರಿ – ಚಕ್ರ

ಆರೆನು – ಅಸಮರ್ಥಳು

ಆಲುಮೇಲು ಮಂಗ –ತಿರುಚ್ಚಾನೂರು

ಆವಿನ – ಹಸುವಿನ

ಆಸರಿಸು – ಆಶ್ರಯಿಸು

ಆಳಿದ – ಆಳ್ದ, ಒಡೆಯ, ಯಜಮಾನ

ಇ

ಇನಿತು – ಈ ಬಗೆಯಾಗಿ; ಇಷ್ಟು

ಇರವು – ಸ್ಥಿತಿ

ಇಳಿ – ಇಡಿಯಾಗಿ

ಇಳೆಯ + ಅಯ್ಯನ +ಅಯ್ಯನ – ಬ್ರಹ್ಮನ ತಂದೆ; ಕೃಷ್ಣ (ವಿಷ್ಣು);

ಇಂಗಡಲು – ಕ್ಷೀರ ಸಮುದ್ರ

ಇಂದ್ರ ಚಾಪ – ಕಾಮನ ಬಿಲ್ಲು

ಇಂದ್ರ ಹದಿನಾಲ್ಕು ಮನು ನರಕ – ೧೪ ಮನುಗಳೂ ಇಂದ್ರರೂ ಇರುವವರೆಗೆ ನರಕ

ಇಂಬಿಟ್ಟು – ಒಳಗೊಂಡು

ಇಂಬು – ನೆಲೆ; ತಾಣ;

ಈ

ಈಡ್ಯ – ಸ್ತುತ್ಯ

ಈರೇಳು ಲೋಕವ ಮೂರಡಿ ಮಾಡಲು –ವಾಮನಾವತಾರ

ಉ

ಉಕುತಿ – ಉಕ್ತಿ; ಮಾತು;

ಉಗುರು ಬಿದ್ದಲ್ಲಿ – ಹೆಜ್ಜೆ ಇಟ್ಟಲ್ಲಿ

ಉಗ್ಗು – ತೊದಲುನುಡಿ

ಉಗ್ಗು ಉಗ್ಗು – ಮಗುವಿನ ಮಾತಿನ ಆರಂಭದ ಸ್ಥಿತಿ

ಉಗ್ಗಡಿಸು – ಸಾರು; ಘೋಷಿಸು:

ಉಡಿಘಂಟೆ – ಬಾಲ ತೊಡಿಗೆಗಳಲ್ಲಿ ಒಂದು;

ಉಡುಪಾಲಯ – ಆಕಾಶ (ನೀಲವರ್ಣ); ಚಂದ್ರನ ನೆಲೆಮನೆ;

ಉಡುಪಿನ – ಉಡುಪಿಯ

ಉಡೆ – ಉಡಿಗೆ

ಉತ್ತಮಾಂಗ – ತಲೆ;

ಉತ್ತರವೇರಿ – ಹಸ್ತಗಿರಿಯ ಉತ್ತರ ಭಾಗ;

ಉತ್ತರಿಸು – ದಾಟಿಸು; ದೂರಮಾಡು;

ಉದರ – ಹೊಟ್ಟೆ

ಉನ್ನಾಹ – ಬಂಧನ; ಉನ್ನತಿ: ಸಂಭ್ರಮ;

ಉಪಸ್ಥ – ಜನನೇಂದ್ರಿಯ

ಉಪಸಾಧನ – ಬೇರೆ ಸಾಧನ

ಉಪಬರ್ಹಣ – ದಿಂಬು

ಉಪಾಧಿ – ಅಜ್ಞಾನದ ಆವರಣ

ಉಮ್ಮತ್ತೂರು – ಗುಂತಕಲ್ ರೇಣೀಗುಂಟಾದ ಮಧ್ಯದಲ್ಲಿ ಕೊಂಡಾಪುರಮ್ ದಿಂದ ೧೨ ಮೈಲು ದೂರದಲ್ಲಿರುವ ಊರು.

ಉರಗನ ಉಪವಾಸ – ಉದ್ದೇಶ ರಹಿತವಾದ ಕ್ರಿಯೆ; ಅಭಾವ ವೈರಾಗ್ಯ;

ಉರ – ಎದೆ

ಉರಗಗಾರ – ಹಾವುಗಾರ

ಉರು – ಶ್ರೇಷ್ಠ

ಉರುಪಾಪಾಟವಿಗೆ – ದಟ್ಟ ಪಾಪದ ಕಾಡಿಗೆ;

ಉರುಪಿ – ಸುಟ್ಟು

ಉಲುಹು – ಶಬ್ದ

ಉರ್ವಿ – ಭೂಮಿ

ಊ

ಊರು – ತೊಡೆ

ಊಳು – ಸಾಗುಮಾಡು

ಎ

ಎಡೆಗೊಡು – ಅವಕಾಶ ಕಲ್ಪಿಸಿ ಕೊಡು

ಎಣೆ – ಸರಿ, ಸಮಾನ

ಎದೆಯನಾಡು – ಹೃದಯ

ಎರಗು – ಮೆಚ್ಚು

ಎಲವ – ಬೂರಲಮರ

ಎವೆನೋಟ – ಒಂದು ನಿಮಿಷ

ಎಳಸು – ಅಪೇಕ್ಷಿಸು

ಎಳೆ – ಚಿಕ್ಕ

ಏ

ಏಕಾದಶ ಹೃಷೀಕ – ಹನ್ನೊಂದನೆಯ ಇಂದ್ರಿಯ ಮನಸ್ಸು (ಹೃಷೀಕ)

ಏಕಾನೇಕ – ಸ್ವರೂಪದಿಂದ ಸ್ವಗತ ಭೇದ ವಿವರ್ಜಿತ

ಏಕಾವಳಿ – ಒಂದು ಮುತ್ತಿನಸರ

ಏಕೋತ್ತರ ಪಂಚಾಶದ್ವರ್ಣ – ಐವತ್ತೊಂದು ವರ್ಣಗಳು

ಏಕೋವಿಷ್ಣು – ವಿಷ್ಣು ಒಬ್ಬನೇ ಸರ್ವೋತ್ತಮ

ಏಣಾಕ್ಷಿ – ಚಿಗುರೆಗಣ್ಣಿನವಳು; ಸುಂದರಿ;

ಏಸು – ಎಷ್ಟು;

ಐ

ಐದಾವೆ – ಇರುತ್ತಿವೆ

ಐದುಮಂದಿ ಹಾರುವರು – ಪಂಚೇಂದ್ರೆಯಗಳು

ಐದೇನೆ	– ಇದ್ದೇನೆ
ಐಸೂ	– ಎಲ್ಲ

ಒ

ಒಡಲು	– ಹೃದಯ; ಶರೀರ;
ಒಮ್ಮನ	– ಒಂದು ಅಳತೆ; ಒಂದೇಮನ;
ಒರೆ	– ತುಂಬು
ಒರತೆ	– ಚಿಲುಮೆ; ಉಕ್ಕಿ ಹರಿಯುವ ಹಳ್ಳ;
ಒರೆವ	– ಮಾತನಾಡುವ; ಹೇಳುವ
ಒಲ್ಲಿ	– ಧೋತರ
ಒಸರು	– ನೀರು ಬಿಡು;
ಒಸೆದು	– ಸಂತೋಷದಿಂದ
